ಸಂವಾದ

ನವೆಂಬರ್ ೨೦೦೭ ರೂ. ೨೦

ಆರಕ್ಕೆ ಕಾಲಿಟ್ಟ ಸಂವಾದ

ಬ್ರಾಹ್ಮಣ್ಯಕ್ಕೆ ಜೋತು ಬಿದ್ದಿರುವ

ಲಿಂಗಾಯತರು

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೧
ನವೆಂಬರ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಡಾ|| ಕೆ. ಪುಟ್ಟಸ್ವಾಮಿ
ಡಾ|| ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ|| ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೦೮೦-೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಬ್ರಾಹ್ಮಣ್ಯಕ್ಕೆ ಜೋತುಬಿದ್ದಿರುವ ಲಿಂಗಾಯತ ಮಠಾಧಿಪತಿಗಳು ೦೬
○ ವಿಶ್ವಾರಾಧ್ಯ ಸತ್ಯಂಪೇಟೆ
❑ ಹಿಂದೂ! ಹಾಗಂದರೇನು? ೦೯
○ ಸಂತೋಷ್‌ಕುಮಾರ್ ಪಿ.ಕೆ.
❑ ನಮ್ಮೊಳಗೊಬ್ಬ ಚೋಮ್‌ಸ್ಕಿ ಇದ್ದಿದ್ದರೆ... ೧೨
○ ಮೇಟಿ ಮಲ್ಲಿಕಾರ್ಜುನ್
❑ ಪೂರ್ವ ವಿದರ್ಭ ಪ್ರಾಂತ್ಯದ ಝೂಡಿ ಪಟ್ಟಿ ರಂಗ ಭೂಮಿ ೧೪
○ ಪಿ. ಸಾಯಿನಾಥ್





❑ ಗಾಂಧೀಜಿ ದೃಷ್ಟಿಯಲ್ಲಿ ಮಹಿಳೆ ೧೬
○ ಮ. ಶ್ರೀ. ಮುರಳಿ ಕೃಷ್ಣ
❑ ಮಹಾತ್ಮ ಗಾಂಧಿ ಮತ್ತು ಕ್ರಾಂತಿ ೧೮
○ ಎಂ. ಕಿರಣ್
❑ ಹೂನ ಒಪ್ಪಂದ ೨೦
○ ರವಿಂದ್ರನಾಥ ಎಸ್. ಹೊಸ್ಮನಿ
❑ ಅವಳು ಅವನು ಮತ್ತು ಗಾಂಧಿ (ಕಥೆ) ೨೨
○ ಜೈ ಕುಮಾರ್ ಎಚ್.ಎಸ್
❑ ಭಯೋತ್ಪಾದನೆ ಚರ್ಚೆ ೨೬
○ ಡಾ|| ಕೆ. ಮರುಳಸಿದಪ್ಪ
○ ಡಾ|| ಸಿದ್ದನಗೌಪಾಟೀಲ
○ ಜಿ.ಎನ್. ನಾಗರಾಜ್
○ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರು
❑ ಬುದ್ಧ, ಬಸವ, ಅಂಬೇಡ್ಕರರ ಅನನ್ಯತೆ ೩೦
○ ಡಾ|| ಎಚ್.ಟಿ. ಪೋತೆ
❑ ಮನುಷ್ಯರು ಆಯುಧವಾಗುವುದು ೩೪
○ ರಹಮತ್ ತರೀಕೆರೆ
❑ ರಾಮ ಸೇತು-ಕೋಮುವಾದದ... ೩೬
○ ನಾಡಿ ಬಂಗಾರಪೇಟೆ
❑ ೧೨೩ ಪರಮಾಣು ಒಪ್ಪಂದ ೪೦
○ ನಾ. ದಿವಾಕರ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್

ಕವನಗಳು : ❑ ನನ್ನ ಕವನ ೮ ಝೂನ್ ಗಜಲುಗಳು ೪೫

ಮುಖಪುಟ: ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ನೆಮ್ಮದಿ, ಸುಭದ್ರತೆ ಸಾಧ್ಯವೇ?

ಮಾನ್ಯರೆ,

ಮೊನ್ನಿನ ಸೆಪ್ಟೆಂಬರ್ ಸಂಚಿಕೆಯಲ್ಲಿನ ಅಜಯ್ ಕುಮಾರ್ ಸಿಂಗರ AIIMSನ ಅನುಭವ ನಿಜವಾಗಲೂ ದಲಿತರಿಗೆ ಆಗುತ್ತಿರುವ ದೌರ್ಭಾಗ್ಯ ಪೂರ್ಣ ಅನುಭವ.

ಕೋರ್ಟ್‌ಗಳೂ ಸಹ ದಲಿತರಿಗೆ ಅನ್ಯಾಯ ಆಗುವಂಥಹ ತೀರ್ಪುಗಳನ್ನೆ ನೀಡುತ್ತಿವೆ. ಸರ್ವೋಚ್ಚ ನ್ಯಾಯಾಲಯವೂ ಇದಕ್ಕೆ ಹೊರತಲ್ಲ. ಕೇವಲ ನವ ದೆಹಲಿಯ ಅಖಿಲ ಭಾರತೀಯ ವೈದ್ಯಕೀಯ ಸಂಸ್ಥೆಯಷ್ಟೇ ಅಲ್ಲದೆ, ಚಂಡೀಗಢ ಪಿ.ಜಿ.ಐ., ಪಾಂಡೀಚೇರಿಯ ಜಿಪ್‌ಮೆರ್ ಮತ್ತು ಇತರೆ ಎಲ್ಲಾ ವೈದ್ಯಕೀಯ ಸಂಸ್ಥೆಗಳು ದಲಿತ ವಿರೋಧಿ ಮನೋಭಾವವನ್ನೇ ಅಂತರ್ಗತ ಮಾಡಿಕೊಂಡು ದಲಿತರನ್ನು ಮಟ್ಟ ಹಾಕುವ, ಪಂಗನಾಮ ಹಾಕುವ ಕುಂಚೇಷ್ಟೆ ನಡೆಸುತ್ತಿವೆ.

ಬುದ್ಧಿವಂತಿಕೆ, ಮೆರಿಟ್ ಇತ್ಯಾದಿ ಬೊಬ್ಬೆ ಹೊಡೆಯುವ ಈ ಸಂಸ್ಥೆಗಳಲ್ಲಿನ ಮೇಲ್ವರ್ಗಕ್ಕೆ ಸೇರಿದ ಆಡಳಿತ ಮಂಡಳಿಯವರು ದಲಿತ ವರ್ಗದವರಲ್ಲಿನ ಪ್ರತಿಭೆಗೆ ಕವಡೆ ಕಿಮ್ಮತ್ತು ನೀಡುವುದಿಲ್ಲ. ಕರುಬುವುದನ್ನೆ ಕಾಯಕ ಮಾಡಿಕೊಂಡಿರುವ ಇವರು ಮನು ಸಂಸ್ಕೃತಿಯ ಪಾಲಕರಾಗಿ, ಸಾಧ್ಯವಾದರೆ ಭೌತಿಕವಾಗಿ, ಇಲ್ಲವೆ ಮಾನಸಿಕವಾಗಿ ಸತತ ತುಳಿತಕ್ಕೀಡು ಮಾಡುತ್ತಾರೆ. ಅದರಲ್ಲೂ ತಿರುಗಿ ಪ್ರತಿಭಟಿಸಲು ನಿಂತವರನ್ನಂತೂ ಜರ್ಝರಿತರನ್ನಾಗಿಸಲು ದಿನದ ೨೪ ಗಂಟೆಯೂ ಸಾಲದು.

–ಸಂವಾದದಲ್ಲಿ ನೀಡಿರುವ ಮಾಹಿತಿಯಂತೆ ಉನ್ನತ ಶಿಕ್ಷಣ (ಐ.ಐ.ಟಿ, ಐ.ಐ.ಎಂ. ಅಲ್ಲದೆ ನ್ಯಾಷನಲ್ ಲಾ ಸ್ಕೂಲ್ ಎ.ಪಿ.ಐ. ಎಂ.ಸಿ, ಪಿ.ಜಿ.ಐ. ಮತ್ತು ಜಿಪ್‌ಮೆರ್ ಇತ್ಯಾದಿ)ದಲ್ಲಿ ಬೋಧನಾ ಸಿಬ್ಬಂದಿ, ಅಧಿಕಾರಿ ವರ್ಗದಲ್ಲಿ ದಲಿತರ ಸಂಖ್ಯೆ ತೀರಾ ವಿರಳ.

ಇನ್ನು, ಐ.ಎ.ಎಸ್., ಎಪಿಎಸ್‌ಗಳಲ್ಲೂ ಮೇಲ್ಜಾತಿಯವರದೇ ಮೇಲುಗೈ, ಅಷ್ಟೇ ಏಕೆ ಕೋರ್ಟಿನಲ್ಲಿರುವ–ನ್ಯಾಯಾಧೀಶರ, ಅಧಿಕಾರಿಗಳ ಸಂಖ್ಯೆಯಲ್ಲೂ ದಲಿತರ ಸಂಖ್ಯೆ ತೀರಾ ವಿರಳ.

ದಲಿತರ ಮೇಲೆ ದೌರ್ಜನ್ಯ, ಶೋಷಣೆ ನಡೆಯುತ್ತಿದ್ದರೆ ಇತರೆ ಜಾತಿ, ಧರ್ಮೀಯರ ಒಡನೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಷಾಮೀಲಾಗಿರುತ್ತಾರೆ. (ದಲಿತ ಕ್ರಿಶ್ಚಿಯನ್ನರನ್ನು ಹೊರತುಪಡಿಸಿ.)

ದಲಿತ ವಿದ್ಯಾರ್ಥಿಗಳನ್ನು, ಬೋಧಕ ಸಿಬ್ಬಂದಿಯನ್ನು, ಪಳಗಿಸುವ (ಅಂದರೆ ಕೀಳರಿಮೆ ಬೆಳೆಸುವ ಹುನ್ನಾರ,–ಅವಮಾನಿಸುವುದು, ತಾತ್ಸಾರ ಮಾಡುವುದು, ಪ್ರತ್ಯೇಕಿಸುವುದು, ಜಾತಿಯ ಹೆಸರು ಹಿಡಿದು, ಆಯಾ ಜಾತಿಗಳವರ –ಕಸುಬನ್ನು ಆಡಿಕೊಳ್ಳುವುದು ಅನ್ಯಜಾತಿಯ ಮಕ್ಕಳನ್ನು ದಲಿತ ಮಕ್ಕಳು/ವಿದ್ಯಾರ್ಥಿಗಳ ಮೇಲೆ ಎತ್ತಿ ಕಟ್ಟುವುದು,) ನಡೆದೇ ಇರುತ್ತದೆ.

–ದಲಿತ ಮಕ್ಕಳ ಹೆಸರನ್ನು ಹಾಜರಿ ಮತ್ತು ಶಾಲೆಯ ದಾಖಲೆಗಳಲ್ಲಿ –ಎದ್ದು ಕಾಣುವಂತೆ ಕೆಂಪುಶಾಯಿಯಲ್ಲೆ ನಮೂದಿಸಿರುತ್ತಾರಾದ್ದರಿಂದ ಅವರ ನೈತಿಕ ಮತ್ತು ಮಾನಸಿಕ ಸ್ಥೈರ್ಯ ಕುಗ್ಗಿಸುವ ಕಾರ್ಯ ಮೇಲ್ಜಾತಿಯ ಜಾತಿವಾದಿ ಉಪಾಧ್ಯಾಯರಿಗೆ ಅತಿ ಸುಲಭ. –ಈ ತೆರನಾದ ವರ್ತನೆಯಿಂದ ದಲಿತ ಸಿಬ್ಬಂದಿಗಳೂ ತಪ್ಪಿಸಿಕೊಳ್ಳುವಂತಿಲ್ಲ.

–ಈ ಮೇಲಿನ ರೀತಿಯ ದಲಿತ ವಿರೋಧಿ ಧೋರಣೆಗಳು ಸರ್ಕಾರಿ ವಿದ್ಯಾಸಂಸ್ಥೆಗಳಲ್ಲೇ ಅಧಿಕ ಅದರಲ್ಲೂ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯದಡಿ ಬರುವ ಕೇಂದ್ರೀಯ ವಿದ್ಯಾಲಯಗಳಲ್ಲೇ ಅಧಿಕ.

ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರವಿದ್ದಾಗ ಕೇಂದ್ರೀಯ ವಿದ್ಯಾಲಯಗಳಲ್ಲಿನ –ಪ್ರಿನ್ಸಿಪಾಲ್ ಹುದ್ದೆಗಳಲ್ಲಿ ಕೆಲವು ಓ.ಬಿ.ಸಿ. ಮತ್ತು ಪರಿಶಿಷ್ಟ ಜಾತಿ/ವರ್ಗಕ್ಕೆ ಮೀಸಲಾಗಿದ್ದು ಭರ್ತಿಯಾಗದೆ ಉಳಿದಿದ್ದ ಕಾರಣ–ಇತರೆ ವರ್ಗಕ್ಕೆ ಸೇರಿದ ಹಿರಿಯ ಅಧ್ಯಾಪಕರಿಗೆ ಇನ್‌ಛಾರ್ಜ್ (ಪ್ರಭಾರ) ನೀಡಿತ್ತು. ಆದರೆ ಆ ಅಧ್ಯಾಪಕರುಗಳು ತಾವೆಲ್ಲ ಒಂದುಗೂಡಿ ಸಂಬಂಧಪಟ್ಟ ಅಧಿಕಾರಿ!? ಮಂತ್ರಿಗಳನ್ನು ಬುಟ್ಟಿಗೆ ಹಾಕಿಕೊಂಡು (ವಾಮಮಾರ್ಗದಿಂದ ಇನ್‌ಛಾರ್ಜ್ (ಪ್ರಭಾರ) ಪ್ರಿನ್ಸಿಪಾಲ್ ಹುದ್ದೆಯನ್ನೇ ಖಾಯಂ (ರೆಗ್ಯುಲರೈಸ್) ಮಾಡಿಕೊಂಡು ಬಿಟ್ಟು ಕುಳಿತರು.

ಇದಾದ ನಂತರ ಕೇಂದ್ರದಲ್ಲಿ –ಕಾಂಗ್ರೆಸ್ ಸರ್ಕಾರ ಬಂದು ಶ್ರೀ ಅರ್ಜುನ ಸಿಂಗರು HRD (ಎಚ್.ಆರ್.ಡಿ.) ಮಂತ್ರಿಯಾದ ಕೂಡಲೇ ಮೇಲ್ಕಂಡ ಅಕ್ರಮ ಪತ್ತೆ ಹಚ್ಚಿ –ಮೀಸಲು ಹುದ್ದೆಗಳಿಗೆ ನಾಮ ಹಚ್ಚಿದ್ದ ಪ್ರಿನ್ಸಿಪಾಲರುಗಳನ್ನೆಲ್ಲ, ಅಧ್ಯಾಪಕರನ್ನಾಗಿ ಹಿಂಬಡ್ತಿ ಮಾಡಲಾಯಿತು. ಆದರೆ ಹಲವರು ಇದರ ಸುಳಿವು ಹಿಡಿದು–ಕೋರ್ಟ್‌ನಿಂದ–ತಡೆಯಾಜ್ಞೆ ತಂದು ಪ್ರಿನ್ಸಿಪಾಲರಾಗಿ ಇಂದಿಗೂ ಅವ್ಯಾಹತರಾಗಿ ಮುಂದುವರಿದೇ ಇದ್ದಾರೆ.

ಇಂಥಹ ವಂಚಕ, ಧೂರ್ತ ಪ್ರಿನ್ಸಿಪಾಲರುಗಳಿಂದ, ಇವರುಗಳ –ಕೈ ಕೆಳಗೆ ಕೆಲಸ ನಿರ್ವಹಿಸಬೇಕಾದ ದಲಿತ ಸಿಬ್ಬಂದಿಗಳು, ಓದಬೇಕಾದ ದಲಿತ ವಿದ್ಯಾರ್ಥಿಗಳು ಏನೇನು ಕಿರುಕುಳ ಅನುಭವಿಸಬಹುದೋ?

ದಲಿತರಿಗೆ ಆಗುತ್ತಿರುವ ವಂಚನೆ, ಅನ್ಯಾಯ, ಶೋಷಣೆ ಹಾಗೂ ದೈಹಿಕ, ಮಾನಸಿಕ ಹಿಂಸೆಗಳು ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ನಿರಂತರವಾಗಿ, ಹೊಸ ಹೊಸ ರೂಪಗಳಲ್ಲಿ ಮುಂದುವರಿದೇ ಇದೆ.

–ದಲಿತರಿಗಾಗಿ–ಸಂವಿಧಾನವಿದೆ, ಕಾನೂನುಗಳಿವೆ, ಮಂತ್ರಾಲಯವಿದೆ, ದಲಿತರೇ ಆದ ಮಂತ್ರಿಗಳಿದ್ದಾರೆ. ಸಂಸದರಿದ್ದಾರೆ, ಶಾಸಕರಿದ್ದಾರೆ, ಸಂಸ್ಥೆಗಳಿವೆ, ಸಂಘಟನೆಗಳಿವೆ, ಪಕ್ಷಗಳೂ ಇವೆ ಅಲ್ಲದೆ ಹೋರಾಟಗಾರರಿದ್ದಾರೆ, ಆದರೆ ಏನು ಪ್ರಯೋಜನ? ಯೋಜನೆಗಳಿವೆ ತಲುಪುವುದೇ ಇಲ್ಲ. ಎಲ್ಲಿ ಇವೆಲ್ಲ ಸೋರಿ, ಸೋತು ಹೋಗುತ್ತವೆ? ಏನಿರಬಹುದು ಚಿದಂಬರ ರಹಸ್ಯ?

–ಒಂದು ಸಮಗ್ರ, ಸಂಪೂರ್ಣ (Fool Proof) ಯೋಜನೆ ಯಾ ವಿಧಾನ ಚಿಂತಿಸಿ ಅನುಷ್ಠಾನ ಸಾಧ್ಯವಿಲ್ಲವೆ? ಪರಿಹಾರ ಇದೆಯೆ?

–ಯಾವನೇ ಒಬ್ಬ ಈ ದೇಶದ ಸಾಮಾನ್ಯ ದಲಿತ ನೆಮ್ಮದಿಯಿಂದ, ಸುಭದ್ರತೆಯಿಂದ ಉಸಿರಾಡಲು ಸಾಧ್ಯವಾದೀತೆ? ಅದು ಎಂದಿಗೆ?

ಡಾ॥ ನಿತ್ಯಾನಂದ ಸುಂಡವಾಳು,
ಬೆಂಗಳೂರು



ಸದಾ ಕಾಯ್ದುಕೊಳ್ಳಲಿ

ಗೆಳೆಯ ಇಂದೂಧರ ಹೊನ್ನಾಪುರ

ಪತ್ರಿಕೆ ತುಂಬಾ ಚನ್ನಾಗಿ ಬರುತ್ತಿದೆ. ರಾಠೋಡ್ ಅವರ ಚಿತ್ರ ಮತ್ತು ಮುಖಪುಟ ವಿನ್ಯಾಸ ಪತ್ರಿಕೆಗೆ ಮೆರಗನ್ನು ಕೊಡುತ್ತಿವೆ. ಚಂದ್ರಭಾನ್ ಪ್ರಸಾದರ ಲೇಖನಗಳು ಇಂದು ಅತ್ಯಂತ ಪ್ರಸ್ತುತ ಎನಿಸುತ್ತಿದೆ.

ಜಾಗತೀಕರಣದ ಗೊಂದಲದಿಂದ ದಿಕ್ಕು ತಪ್ಪುತ್ತಿರುವ ದಲಿತ ಚಿಂತಕರಿಗೆ ಸರಿದಾರಿಯತ್ತ ಹೋಗಲು ಬೆಳಕು ನೀಡುತ್ತಿದೆ. ಬೌದ್ಧಧರ್ಮಕ್ಕೆ ಸಂಬಂಧಿಸಿದ ವಿಚಾರಗಳ ಚರ್ಚೆ. ದಲಿತ ಚಳವಳಿಗಳನ್ನು ಕುರಿತ ಚರ್ಚೆ. ಪತ್ರಿಕೆಗೆ ಗಂಭೀರತೆಯನ್ನು ತಂದುಕೊಡುತ್ತಿದೆ. ದಿನದಿಂದ ದಿನಕ್ಕೆ ಪತ್ರಿಕೆ ಗಂಭೀರ ಚಿಂತನೆಯ ನೆಲೆಯನ್ನು ಕಂಡುಕೊಳ್ಳುತ್ತಿರುವುದು ಸಂತೋಷದ ಸಂಗತಿ. ವ್ಯವಸ್ಥೆಯೊಂದಿಗೆ ರಾಜಿಯಿಲ್ಲದೆ, ನಂಬಿಕೊಂಡು ಬಂದ ಮೌಲ್ಯಗಳು ಪ್ರತಿಪಾದಿಸುವುದು, ಪ್ರಕಟಿಸುವುದು ಇಂದಿನ ದಿನಗಳಲ್ಲಿ ತುಂಬಾ ಕಷ್ಟ. ಅಂತಹ ಕಷ್ಟದ ದಾರಿಯಲ್ಲಿ ಪತ್ರಿಕೆ ಕೆಚ್ಚೆದೆಯಿಂದ ಮುನ್ನಡೆಯುತ್ತಿರುವುದು ಶ್ಲಾಘನೀಯ.

ಇದೇ ಎತ್ತರವನ್ನು ಪತ್ರಿಕೆ ಸದಾ ಕಾಯ್ದುಕೊಳ್ಳಲೆಂಬುದದೆ ನನ್ನ ಆಶಯ.

ವಂದನೆಗಳು

ಡಾ॥ ಸಣ್ಣರಾಮ,
ಶಂಕರಘಟ್ಟ, ಶಿವಮೊಗ್ಗ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಪತ್ರಗಳು

ಹೊಸ ಪುಸ್ತಕ

ಸೆರೆಹಕ್ಕಿ ಹಾಡುವುದು ಏಕೆಂದು ಬಲ್ಲೆ

(ಮಾಯಾ ಏಂಜೆಲೊ ಆತ್ಮಕತೆ)

ಲೇ: ಎಂ. ಆರ್. ಕಮಲ

ಬೆಲೆ: ರೂ. ೮೦/-

ಆಧುನಿಕ ವಿಶ್ವ ಕಾವ್ಯದಲ್ಲಿ ಖ್ಯಾತರಾದ ಕಪ್ಪು ಜನಾಂಗದ ಕವಯತ್ರಿ ಮಾಯಾ ಏಂಜೆಲೊ ಅವರ ಆತ್ಮಕತೆಯ ಅನುವಾದಿತ ಕೃತಿ ಇದು. ತನ್ನ ಕಾವ್ಯದ ಮಾಂತ್ರಿಕತೆಯಿಂದ ಸಾಹಿತ್ಯಪ್ರಿಯರನ್ನು ಮಾಯಾ ಆಕರ್ಷಿಸಿದ್ದಲ್ಲದೆ ಕಾವ್ಯ ಕ್ಷೇತ್ರದಲ್ಲಿ ಬಹುಮುಖ್ಯ ಸ್ಥಾನ ಗಳಿಸಿದಾರೆ. ಮಾಯಾರ ಆತ್ಮಕಥೆ, ಅವರ ಕಾವ್ಯ, ಸಂದರ್ಶನ ಇಲ್ಲಿದೆ. ಕಮಲ ಅವರು ಸರಳ ಭಾಷೆಯಲ್ಲಿ ಅನುವಾದಿಸಿದ್ದಾರೆ.

ಪ್ರಕಾಶಕರು: ಕಥನ ಪ್ರಕಾಶನ, ಬೆಂಗಳೂರು-೭೨



ದಲಿತ ಲೋಕ (ಕಿರು ನಾಟಕ)

ಲೇ: ಎಸ್. ಮಾಲತಿ

ಬೆಲೆ: ರೂ. ೧೦/-

ಲೇಖಕಿ, ನಟಿ, ನಿರ್ದೇಶಕಿ, ವಿನ್ಯಾಸಕಿ, ಸಂಘಟಕಿಯಾಗಿ ಕೆಲಸ ಮಾಡುತ್ತಿರುವ ಹಲವಾರು ಮಹಿಳಾ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿರುವ ಮಾಲತಿ ಅವರು ರಚಿಸಿರುವ ನಾಟಕ ಇದು.

ರಂಗ ಭೂಮಿ, ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಲೇಖಕಿ, ಸಾಗರದ ದಲಿತರೊಂದಿಗೆ ಸಂವಾದ ಸಾಧಿಸುವ ಯತ್ನವಾಗಿ ಈ ನಾಟಕ ರಚಿಸಿದ್ದಾರೆ. ಸಾವಿರಾರು ವರ್ಷಗಳಿಂದ ದಲಿತರು ಬ್ರಾಹ್ಮಣರಿಂದ ಶೋಷಣೆಗೊಳಗಾದುದನ್ನು ಇಲ್ಲಿ ನಿರೂಪಿಸಿದ್ದಾರೆ.

ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು

ಕುಮಾರವ್ಯಾಸ- ಪುನರ್ ಪರಿಶೀಲನೆ

ಲೇ: ಚನ್ನಬಸವಪ್ಪ ಬೆಟ್ಟದೂರು

ಬೆಲೆ: ರೂ. ೬೦/-

ಹಲವು ಸಂಶೋಧಕರ ಸಂಶೋಧನೆಯ ಆಧಾರದಲ್ಲಿ ಕುಮಾರವ್ಯಾಸನು ಲಿಂಗವಂತ ಕವಿಯೆಂದು ಲೇಖಕರು ಇಲ್ಲಿ ಪ್ರತಿಪಾದಿಸಿದ್ದಾರೆ. ವಿಮರ್ಶೆ, ಸಂಶೋಧನೆ, ತೌಲನಿಕ ಅಧ್ಯಯನದಿಂದ ಕೂಡಿರುವ ವೈಚಾರಿಕ ಕೃತಿ ಇದಾಗಿದೆ. ಕುಮಾರವ್ಯಾಸನ ಕುರಿತು ಅಧ್ಯಯನಾಸಕ್ತರಿಗೆ ಒಂದು ಉತ್ತಮ ಕೃತಿ. ಮಹಾಭಾರತವು ಕೃಷ್ಣನ ಕಥೆಯಾದುದರಿಂದ ಅದನ್ನು ಬರೆದ ಕುಮಾರವ್ಯಾಸನು ಬ್ರಾಹ್ಮಣನಿರಬೇಕೆಂಬ ಸ್ಥಾಪಿತ ವಿಚಾರವನ್ನು ಇಲ್ಲಿ ಸಮರ್ಥವಾಗಿ ಪ್ರಶ್ನಿಸಲಾಗಿದೆ.

ಪ್ರಕಾಶಕರು: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ

ನಾಗಾರ್ಜುನನ ಮೂಲಮಾಧ್ಯಮಕಕಾರಿಕ

ಲೇ: ಎಸ್. ನಟರಾಜ ಬೂದಾಳು

ಬೆಲೆ: ರೂ. ೧೫೦/-

ಬುದ್ಧನ ಜೀವನ ಮೀಮಾಂಸೆಯನ್ನು ವಿವರಿಸುವ ಕೃತಿ ಇದು. ಬುದ್ಧನ ಕರುಣೆ, ಪ್ರೇಮ, ಅಹಿಂಸೆ, ವಿಚಾರಗಳು, ಸೇರಿದಂತೆ ವಿವಿಧ ಮಗ್ಗುಲನ್ನು ತಿಳಿದುಕೊಳ್ಳಲು ಈ ಕೃತಿ ನೆರವಾಗುತ್ತದೆ. ಇದರಲ್ಲಿ ೪೪೮ ಕಾರಿಕೆಗಳು, ೨೭ ಅಧ್ಯಾಯಗಳೂ ಇವೆ. ಟಿಬೆಟನ್ ಭಾಷೆಯಲ್ಲಿ ದೊರಕುವ ಕಾರಿಕಾ ಅಧಿಕೃತ ಎಂಬ ಭಾವನೆಯಿದೆ. ಜಗತ್ತಿನ ಪ್ರಮುಖ ಭಾಷೆಗಳಿಗೆ ಈ ಕೃತಿ ಅನುವಾದಗೊಂಡಿದೆ. ನಟರಾಜ್ ಇದನ್ನು ಅನುವಾದಿಸಲು ಸಾಕಷ್ಟು ಶ್ರಮ ಪಟ್ಟಿದ್ದಾರೆ.

ಪ್ರಕಾಶಕರು: ಅಭಿನವ ಪ್ರಕಾಶನ ಬೆಂಗಳೂರು



ಚೌಕಬಾರ (ಕವನ ಸಂಕಲನ)

ಲೇ: ವಿಶ್ವನಾಥ್ ಜೆ.ಎಸ್.

ಬೆಲೆ: ರೂ. ೪೦/-

ಉದಯೋನ್ಮುಖ ಕವಿ ವಿಶ್ವನಾಥ್ ಅವರ ಮೊದಲ ಕವನ ಸಂಕಲನ ಇದು. ಸಂಕಲನದಲ್ಲಿ ೨೮ ಕವಿತೆಗಳಿವೆ. ಇಲ್ಲಿನ ಕವಿತೆಗಳು, ಸರಳವಾಗಿ ಸುಂದರವಾಗಿ. ಬದುಕಿನ ವಿಷಾದ ಹಾಗೂ ಸಂಭ್ರಮವನ್ನು ಕಾವ್ಯದಲ್ಲಿ ಕವಿ ಹಿಡಿಯ ಹೊರಟಿದ್ದಾರೆ. ಆಳವಾದ ವಿಷಾದವನ್ನು ಅರಗಿಸಿಕೊಂಡ ಇಲ್ಲಿನ ಕವಿತೆಗಳು ಗದ್ದಲದ ಸಂತೆಯಲ್ಲಿ ತಬ್ಬಿಬ್ಬಾದ ದಾರಿಹೋಕನಂತೆ ದಿಗ್ಭ್ರಮೆಗೆ ಒಳಗಾಗಿವೆ. ಬದುಕಿನ ವಿಷಾದ ಹಾಗೂ ಸಂಭ್ರಮವನ್ನು ಹಿಡಿಯ ಹೊರಟ ಇಲ್ಲಿನ ಕಾವ್ಯ, ಅಂತರಂಗದ ಲಯಗಳನ್ನು ಹುಡುಕುತ್ತದೆ

ಪ್ರಕಾಶಕರು: ವಾಗ್ವಿಲಾಸ್ ಪ್ರಕಾಶನ ಬೆಂಗಳೂರು

ಕನ್ನಡ ಸಾಹಿತ್ಯವೆಂಬ ಸ್ವಾತಂತ್ರ್ಯ ಹೋರಾಟ

ಲೇ: ಬರಗೂರು ರಾಮಚಂದ್ರಪ್ಪ

ಬೆಲೆ: ರೂ. ೧೫೦/-

ವಿವಿಧ ಸಂದರ್ಭಗಳಲ್ಲಿ ಬರಗೂರರು ಮಾಡಿದ ಭಾಷಣ ಹಾಗೂ ವಿವಿಧ ಪತ್ರಿಕೆಗಳಲ್ಲಿ ಬರೆದ ಲೇಖನಗಳ ಸಂಗ್ರಹವಿದು. ಭಾಗ ೧ರಲ್ಲಿ ಭಾಷೆ ಮತ್ತು ತಂತ್ರಜ್ಞಾನ, ಪ್ರಾಥಮಿಕ ಶಿಕ್ಷಣದಲ್ಲಿ ಭಾಷೆ ಮತ್ತು ಮಾಧ್ಯಮ, ಆಡಳಿತದಲ್ಲಿ ಕನ್ನಡ ಕುರಿತಂತೆ ೨೧ ಲೇಖನಗಳು ಇವೆ. ಎರಡನೆ ಭಾಗದಲ್ಲಿ ಹತ್ತು ಕೃತಿಗಳ ವಿಶ್ಲೇಷಣೆಗಳಿವೆ. ಈಗಾಗಲೇ ಜನ ಪರ ಚಿಂತಕರೆಂದು ಖ್ಯಾಯತರಾಗಿರುವ ಬರಗೂರರ ಈ ಕೃತಿ ಯುವಪೀಳಿಗೆಗೆ ತುಂಬಾ ಉಪಯುಕ್ತವಾಗಿದೆ. ವಿಚಾರಗಳ ಪ್ರಖರತೆ ಮತ್ತು ಬದ್ಧತೆಗೆ ಈ ಕೃತಿ ಉತ್ತಮ ಉದಾಹರಣೆ.

ಪ್ರಕಾಶಕರು: ಅಂಕಿತ ಪುಸ್ತಕ, ಬೆಂಗಳೂರು

ಸಂಪಾದಕೀಯ



ಅಂತರಂಗ

ವಚನ ಭಂಗವೇ ರಾಜಧರ್ಮ!

ತಲೆ ಬರಹ ನೋಡಿ ಆಶ್ಚರ್ಯವಾಗುತ್ತಿದೆಯೆ? ನಿಮಗೆ ಆಶ್ಚರ್ಯ ಅಥವಾ ವಿಷಾದವಾಗುತ್ತಿದ್ದರೆ ನಿಮ್ಮನ್ನು ಓಬಿರಾಯನ ಕಾಲದವರೆಂದು ನಿಸ್ಸಂಶಯವಾಗಿ ಹೀಗೆಳೆಯಬಹುದು. ಅಥವಾ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಅಯ್ಯೋಪಾಪ! ಎಂದು ಹುಸಿ ಕರುಣೆ ತೋರಬಹುದು. ಅಷ್ಟು ಕೆಟ್ಟು ಹೋಗಿದೆ ನಮ್ಮ ಸಾಮಾಜಿಕ ಬದುಕು!

ರಾಜ ಧರ್ಮ, ರಾಜನೀತಿ, ವಚನ ಪಾಲನೆ ಹಾಗೂ ಭ್ರಷ್ಟತೆ ಕಳೆದ ಇಪ್ಪತ್ತು ತಿಂಗಳಿನಲ್ಲಿ ಚರ್ಚೆಗೊಳಗಾದಷ್ಟು ಹಿಂದೆಂದೂ ಆಗಿರಲಿಲ್ಲ. ಭ್ರಷ್ಟಚಾರ, ಸ್ವಾರ್ಥ, ಸ್ವಜನ ಪಕ್ಷಪಾತ, ಅನೈತಿಕತೆ, ಕುಟುಂಬ ವ್ಯಾಮೋಹ ಇವುಗಳಿಗೆಲ್ಲ ಸಾರ್ವಜನಿಕ ಜೀವನ ದಲ್ಲಿರುವವರು ಹೇಳುತ್ತಿರುವುದು 'ರಾಜಧರ್ಮ' ಎಂದು. ಈ ರಾಜಧರ್ಮ ಪಾಲನೆಗಾಗಿಯೇ ಕೋಮುವಾದಿ ಬಿಜೆಪಿ ಮತ್ತು ಕುಟುಂಬವಾದಿ ಜೆಡಿ(ಎಸ್) ನಡುವೆ ಪೈಪೋಟಿ!

ಈ ಎರಡು ರಾಜಕೀಯ ಪಕ್ಷಗಳೂ ನಿಜವಾದ ಅರ್ಥದಲ್ಲಿ ಭಾರತದ ಜನ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವ ರಾಜಕೀಯ ಪಕ್ಷಗಳಾಗಿ ಉಳಿದಿಲ್ಲ. ಕೆಲವೇ ಕೆಲವು ವ್ಯಕ್ತಿಗಳ ಹಿತಾಸಕ್ತಿಗಳನ್ನು ಪಾಲಿಸುವ ಸ್ವಹಿತಾಸಕ್ತ ಗುಂಪುಗಳಾಗಿ ನಿಂತಿವೆ. ಹಾಗಾಗಿಯೇ ಈ ಎರಡೂ ಪಕ್ಷಗಳು ರಾಜಧರ್ಮದ ಹೆಸರಿನಲ್ಲಿ ಅನೈತಿಕ ಜೂಜಾಟವನ್ನು ಪ್ರಜಾಸತ್ತೆಯ ಹೆಸರಿನಲ್ಲಿ ನಡೆಸುತ್ತಿವೆ.

ಕಳೆದ ವಿಧಾನಸಭಾ ಚುನಾವಣಾ ಫಲಿತಾಂಶವೇ ಹಾಗಿತ್ತು. ಮತದಾರರ ಮನಸ್ಸು ಕೂಡ ಪ್ರಸಕ್ತ ರಾಜಕೀಯ ದೊಂಬರಾಟದಿಂದ ಕಲುಷಿತಗೊಂಡಿರುವುದರಿಂದ ಅವರಿಗೂ ನಮ್ಮನ್ನು ಯಾರು ಪ್ರತಿನಿಧಿಸಬೇಕೆಂಬುದೇ ದೊಡ್ಡ ಪ್ರಶ್ನೆಯಾದಂತಿದೆ. ಕಾಂಗ್ರೆಸ್ ತನ್ನ ಶಿಲಾಯುಗದ ನೀತಿ ಮತ್ತು ಜಡತ್ವಗಳಿಂದ ಜನರಿಗೆ ವಂಚನೆ ಮಾಡಿದ್ದರೆ, ಬಿಜೆಪಿ ತನ್ನ ಹುಸಿ ಧಾರ್ಮಿಕ ಭಯೋತ್ಪಾದನೆಯಿಂದ ಜನರನ್ನು ವಿನಾಶದತ್ತ ತಳ್ಳಿದೆ. ಜೆ.ಡಿ(ಎಸ್) ತನ್ನ ಮಧ್ಯಯುಗೀನ ದಬ್ಬಾಳಿಕೆಯಿಂಧ ಮತದಾರರನ್ನು ಹತಾಷೆಯತ್ತ ದೂಡಿದೆ. ಇನ್ನು ಉಳಿದ ಪಕ್ಷಗಳಂತೂ ಜನರನ್ನು ಮುಟ್ಟುವಲ್ಲಿಯೇ ಸಂಪೂರ್ಣ ವಿಫಲವಾಗಿವೆ. ಇಂಥ ಸ್ಥಿತಿಯಲ್ಲಿ ಮತದಾರ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು?

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್-ಜೆಡಿ(ಎಸ್) ಸೇರಿ ಸರ್ಕಾರ ಮಾಡಿದ್ದು ಸ್ವಲ್ಪ ಮಟ್ಟಿನ ಸಮಾಧಾನ ತಂದಿತ್ತು. ಈ ಎರಡೂ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ತಾವು ಕೋಮುವಾದದ ವಿರುದ್ಧವಿರುವುದಾಗಿ ಪ್ರಕಟಿಸಿದ್ದವು. ಈ ಎರಡು ಪಕ್ಷಗಳ ನಡುವೆ ಇದ್ದ ಕನಿಷ್ಟ ಹೊಂದಾಣಿಕೆ ಕೂಡ ಇದೇ ಆಗಿತ್ತು. ಬಿಜೆಪಿಯಂತೂ ತನ್ನ ಯಾವುದೇ ಕಾರ್ಯಕ್ರಮಗಳಲ್ಲಿ ಈ ಎರಡೂ ಪಕ್ಷಗಳೊಂದಿಗೆ ಹೊಂದುವಂತಿರಲಿಲ್ಲ. ಆದರೆ ಈ ಮೂರು ಪಕ್ಷಗಳ ಬಹುದೊಡ್ಡ ಹೊಂದಾಣಿಕೆ ಇದ್ದದ್ದು ಅಧಿಕಾರದಾಹ ಮತ್ತು ಭ್ರಷ್ಟಾಚಾರದಲ್ಲಿ ಮಾತ್ರ!

ಕಾಂಗ್ರೆಸ್ ಜತೆಗಿನ ಅನೈತಿಕ ಹಂಚಿಕೆ ವ್ಯವಹಾರದಲ್ಲಿ ಅಸಂತೃಪ್ತಗೊಂಡ ಜೆಡಿ(ಎಸ್) ಬಿಜೆಪಿ ಜತೆ ಕೈ ಜೋಡಿಸಿದ್ದಕ್ಕೂ ಇದೇ ಹೊಂದಾಣಿಕೆ ಮೂಲ ಮಂತ್ರವಾಯಿತು. ಇಡೀ ಪಕ್ಷ ಪ್ರಜ್ಞೆ - ವಿವೇಕ ಕಳೆದುಕೊಂಡು ಹುಂಬುತನದಿಂದ ನಡೆದು ಕೊಂಡಿತು. ಯಾವ ಶಾಸಕರೂ ಸಾರ್ವಜನಿಕ ಬದುಕಿನ ಒಳಿತು ಕೆಡಕುಗಳನ್ನು ಬುದ್ಧಿ ಪೂರ್ವಕವಾಗಿ ಚಿಂತಿಸಲು ಪ್ರಯತ್ನಿಸಲಿಲ್ಲ. ಅಧಿಕಾರವೇ ಎಲ್ಲದಿಕ್ಕಿಂತ ದೊಡ್ಡದೆಂದು ತಿಳಿದು ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿ ಬಿಜೆಪಿ ಜತೆ ಕೈ ಜೋಡಿಸಿದರು. ಕೋಮುವಾದಿಗಳೊಂದಿಗೆ ಕೈಜೋಡಿಸುವುದಿಲ್ಲ ಎಂದಿದ್ದ ದೇವೇಗೌಡರು ಮನೆಯಲ್ಲೇ ಕುಳಿತು ಮುಸುಗುಡತೊಡಗಿದರು. ಆರಂಭದ ಅವರ ಅಸಮಾಧಾನ ಬರಬರುತ್ತಾ ಮಗನನ್ನು ವೈಭವೀಕರಿಸುವ ಹಂತ ಮುಟ್ಟಿದ್ದರಿಂದ ಅವರ ಬಗ್ಗೆ ಕೆಲವರಿಗಿದ್ದ ಅನುಕಂಪವನ್ನು ಕೂಡ ಕಳೆದುಕೊಳ್ಳಬೇಕಾಯಿತು.

ಕಡೆಗೂ 'ರಾಜಧರ್ಮ' ಜಾರಿಯಾಗಿತ್ತು!

ಬಿಜೆಪಿ ಜೆಡಿ(ಎಸ್) ಪಕ್ಷಗಳೆರಡೂ ಹಣದೋಚುವ ಸ್ಪರ್ಧೆಗೆ ನಿಂತವು. ಎಲ್ಲ ಮಂತ್ರಿಗಳೂ ತಮ್ಮ ಇಲಾಖೆಗಳನ್ನು ನುಂಗಿ ನೀರುಕುಡಿಯಲು ನಾ ಮೇಲು-ತಾ ಮೇಲು ಎಂದು ಸ್ಪರ್ಧೆಗಿಳಿದರು. ಬಹುಷಃ ಕರ್ನಾಟಕ ಹಿಂದೆಂದೂ ಕಂಡರಿಯದಷ್ಟು ಭ್ರಷ್ಟಚಾರ ಸಾರ್ವಜನಿಕ ಬದುಕಿನಲ್ಲಿ ತುಂಬಿ ಹೋಯಿತು. ಹೊಸದಾಗಿ ಅಧಿಕಾರ ರುಚಿ ನೋಡಿದ ಬಿಜೆಪಿ ಮಂತ್ರಿಗಳಂತೂ ಬಾಚಿ ಬಾಚಿ ತೋಡಿ ಕೊಂಡರು. ನನ್ನ ಪರಿಚಯದ ಕೆಲವು ಅಧಿಕಾರಿಗಳ ಮಾತಿನಲ್ಲಿ ಹೇಳುವುದಾದರೆ ಯಾವುದಕ್ಕೆ ಎಷ್ಟು ಹಣ ಪಡೆಯಬೇಕೆಂಬ ತಿಳಿವಳಿಯೂ ಇಲ್ಲದ ಕೆಲವು ಮಂತ್ರಿಗಳು ಹತ್ತು ಸಾವಿರದ ಕೆಲಸಕ್ಕೆ ಹತ್ತು ಲಕ್ಷ ಕೇಳಿ ನಗೆಪಾಟಲಿಗೆ ಗುರಿಯಾಗುತ್ತಿದ್ದದ್ದೂ ಉಂಟು!

ಈಗ ಮೂಲಭೂತ ಪ್ರಶ್ನೆಗೆ ಬರಬೇಕು. ರಾಜಧರ್ಮ ಎಂದರೆ ಏನು? ಕಳೆದ ನಲವತ್ತು ತಿಂಗಳ ಕಾಂಗ್ರೆಸ್-ಜೆಡಿ(ಎಸ್)-ಬಿಜೆಪಿ ಕಲಬೆರಕೆ ಸರ್ಕಾರಗಳಲ್ಲಿ ರಾಜನೀತಿ-ರಾಜಧರ್ಮ ಪಾಲನೆಯಾಗಿದೆಯೆ? ವಚನ ಪಾಲನೆ ಮತ್ತು ವಚನ ಭ್ರಷ್ಟತೆ ಯಾವ ಯಾವ ಪ್ರಮಾಣದಲ್ಲಿ ನಡೆದಿದೆ? ಅಭಿವೃದ್ಧಿ ಕೆಲಸಗಳು ಎಲ್ಲಿಗೆ ಬಂದು ನಿಂತಿವೆ? ಯಾವ ಯಾವ ಪಕ್ಷಗಳು ತಮ್ಮ ಗೌಪ್ಯ ಅಜೆಂಡಾಗಳನ್ನು ಎಷ್ಟರ ಮಟ್ಟಿಗೆ ಜಾರಿಗೆ ತಂದಿವೆ?

ವಿಷಾದದ ಸಂಗತಿ ಎಂದರೆ ಎಡಬಿಡಂಗಿಯಾಗಿರುವ ಕಾಂಗ್ರೆಸ್ ಬಿಟ್ಟಿದೆ ಉಳಿದೆರೆಡು ಪಕ್ಷಗಳೂ ತಮ್ಮ ಗೌಪ್ಯ ಅಜೆಂಡಾವನ್ನು ಚೆನ್ನಾಗಿಯೇ ಜಾರಿಗೆ ತಂದಿವೆ. ದೇವೇಗೌಡ ಮತ್ತು ಅವರ ಕುಟುಂಬದ ಜೆಡಿ(ಎಸ್) ಕನಿಷ್ಟ ಎರಡು ಮೂರು ತಲೆಮಾರು ಯಾವ ದುಡಿಮೆಯೂ ಇಲ್ಲದೆ ರಾಜಕೀಯ ಮಾಡಬಹುದಾದಷ್ಟು ಹಣ ಸಂಗ್ರಹಿಸಿದೆ. ಪಕ್ಷದ ಚುಕ್ಕಾಣಿ ಎಲ್ಲಿ ತನ್ನ ವಂಶಸ್ಥರ ಕೈ ತಪ್ಪಿ ಹೋಗುತ್ತದೋ ಎಂಬ ಆಂತಕದಲ್ಲಿದ್ದ ದೇವೇಗೌಡರು ಈ ಕುಮಾರಸ್ವಾಮಿಯನ್ನು ಪ್ರಶ್ನಾತೀತ ನಾಯಕನನ್ನಾಗಿ ರೂಪಿಸುವ ಮೂಲಕ ನೆಮ್ಮದಿಯಿಂದಿದ್ದಾರೆ. ಬಿಜೆಪಿ ಕನಿಷ್ಟ ಮುಂಬರುವ ಚುನಾವಣೆಗೆ ಎಷ್ಟಾದರೂ ಹಣ ಸುರಿಯವಷ್ಟರ ಮಟ್ಟಿಗೆ ತನ್ನ ಥೈಲಿಯನ್ನು ತುಂಬಿಸಿಕೊಂಡಿದೆ. ಅಧಿಕಾರ ದುರುಪಯೋಗ ಪಡಿಸಿಕೊಂಡು ತನ್ನ ಕೋಮುವಾದದ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವಲ್ಲಿಯೂ ಸಫಲವಾಗಿದೆ. ನಗರ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದ ಬಿಜೆಪಿ ಈಗ ಹಳ್ಳಿ ಹಳ್ಳಿಗಳಿಗೂ ಹಬ್ಬಿ ಅಲ್ಲಿಯೂ ಕೋಮು ವಿಷ ಬೀಜವನ್ನು ಬಿತ್ತುವಲ್ಲಿ ಯಶಸ್ವಿಯಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮತರಾರರಿಗೆ ನೀಡಿದ ವಚನವನ್ನು ಉಲ್ಲಂಘಿಸುವಲ್ಲಿ ಈ ಎಲ್ಲಾ ಪಕ್ಷಗಳು ಯಶಸ್ವಿಯಾಗಿವೆ.

ಈಗಿನ ಸಾಧನೆ ಎಂದರೆ; ಕುಮಾರಸ್ವಾಮಿ ಅವರನ್ನು ವಚನ ಭ್ರಷ್ಟರೆಂದು ದೂಷಿಸುವ ಬಿಜೆಪಿ, ಬಿಜೆಪಿಯನ್ನು ವಚನ ಭ್ರಷ್ಟವೆಂದೂ ದೂಷಿಸುವ ಕಾಂಗ್ರೆಸ್, ಈ ಮೂರು ಪಕ್ಷಗಳೂ ವಚನ ಭ್ರಷ್ಟವೆಂದು ದೂಷಿಸುವ ಮತದಾರ ಪ್ರಭು ಮಾತ್ರ! ಅಂದರೆ ವಚನ ಭ್ರಷ್ಟತೆ ಎಂದರೆ ರಾಜ ಧರ್ಮ! ರಾಜಧರ್ಮ ಎಂದರೆ ಅನೈತಿಕತೆ!

ನೈತಿಕ ಅಧಃಪತನಕ್ಕೆ ಬಿದ್ದಿರುವ ರಾಜ್ಯರಾಜಕಾರಣವನ್ನು ಉಳಿಸುವುದು ಹೇಗೆ? ಹತಾಶ ಮತದಾರರನ್ನು ಜಾಗೃತಗೊಳಿಸುವುದು ಹೇಗೆ? ರಾಜಕಾರಣದ ಹೆಸರಿನಲ್ಲಿ ಇಡೀ ಸಮಾಜವನ್ನು ವಿನಾಶದತ್ತ ಕೊಂಡೊಯ್ಯುತ್ತಿರುವ ಈ ದುಷ್ಟರಿಗೆ ಬುದ್ಧಿ ಕಲಿಸುವುದು ಹೇಗೆ?

ಇನ್ನೂ ಸಜ್ಜನರಾಗಿ ಉಳಿದಿರುವ ಮತದಾರರೇ ಯೋಚಿಸಿ!

○ ಇಂದೂಧರ ಹೊನ್ನಾಪುರ

ಬ್ರಾಹ್ಮಣ್ಯಕ್ಕೆ ಜೋತುಬಿದ್ದಿರುವ ಲಿಂಗಾಯತ ಮಠಾಧಿಪತಿಗಳು

ಕರ್ನಾಟಕದ ಕೆಲವು ಬೆರಳೆಣಿಕೆಯ ಸ್ವಾಮಿಗಳನ್ನು ಹೊರತು ಪಡಿಸಿದರೆ ಬಹುತೇಕರು ಈಗಾಗಲೇ ಚಡ್ಡಿ ತೊಟ್ಟಿದ್ದಾರೆ. ಕೆಲವರಂತೂ ತಮ್ಮ ಮಠದ ಅಂಗಳದಲ್ಲಿ ಆರ್.ಎಸ್.ಎಸ್. ಕುಣಿತಕ್ಕೆ ಅವಕಾಶ ನೀಡಿದ್ದಾರೆ. ರಾಮನ ಗುಡಿ ಕಟ್ಟಲು ಇಟ್ಟಂಗಿಗಳನ್ನು ಸಂಗ್ರಹಿಸಿ ತಾವು ಬಹುದೊಡ್ಡ ಘನಂದಾರಿ ಕೆಲಸ ಮಾಡಿದ್ದೇವೆ ಎಂಬ ಹಮ್ಮಿನಲ್ಲಿ ಬೀಗಿದ್ದಾರೆ. ನಾಲ್ಕೈದು ಜನ ಸ್ವಾಮಿಗಳಂತೂ ಚಡ್ಡಿಗಳ ಅಂಗಳದಲ್ಲಿ ಚೆಡ್ಡಿಯನ್ನೂ ಕಳಚಿಕೊಂಡು ಕವಾಯತು ಮಾಡಿದ್ದಾರೆ. ಇದು ಲಿಂಗಾಯತರ ಧಾರ್ಮಿಕ ಗುರುಗಳೆಂದು ಕರೆಸಿಕೊಳ್ಳುವ ಜಂಗಮರು ತಲುಪಿರುವ ಅಧಃಪತನದ ಸ್ಪಷ್ಟ ಸೂಚನೆ. ಸರಿಯಾಗಿ ಗ್ರಹಿಸಿದರೆ ಬ್ರಾಹ್ಮಣಿಕೆಯನ್ನು ಮೈಗೂಡಿಸಿಕೊಂಡಿರುವ ಬಿ.ಜೆ.ಪಿ. ಹಾಗೂ ಇತರ ಸಂಘಟನೆಗಳಿಗೂ ಲಿಂಗಾಯತರ ಮಠಾಧಿಪತಿಗಳಿಗೂ ಏನೇನು ಫರಕು ಇಲ್ಲ.

ವಿಶ್ವಾರಾಧ್ಯ ಸತ್ಯಂಪೇಟೆ

ಚೆಡ್ಡಿ ತೊಟ್ಟುಕೊಂಡು ತನ್ನ ಮೂಲ ಲಿಂಗಾಯತ ತತ್ವಗಳಿಗೆ ತಿಲಾಂಜಲಿ ಇಟ್ಟಿರುವ ಯಡ್ಡಿಗೆ ಮುಖ್ಯಮಂತ್ರಿ ಖುರ್ಚಿ ಇನ್ನು ಕನಸೆಂದೇ ಹೇಳಬೇಕು. ಆದರೆ ಲಿಂಗಾಯತರ ಗುರುಗಳೆಂದೆ ಕರೆಸಿಕೊಳ್ಳುತ್ತಿರುವ ಮಠಾಧೀಶರು ಹಾಗೂ ಕೆಲವು ಲಿಂಗಾಯತ ಸಂಘಟನೆಗಳು ಯಡ್ಡಿಗೆ ಖುರ್ಚಿ ದೊರೆಯದೇ ಇರುವುದು ಲಿಂಗಾಯತ ಜನಾಂಗಕ್ಕಾದ ಅನ್ಯಾಯ ಎಂಬಂತೆ ಬಿಂಬಿಸುತ್ತಿದ್ದಾರೆ. ಈ ಕಾರಣಕ್ಕಾಗಿ ಹಲವಾರು ಕಡೆ ಪ್ರತಿಭಟನೆ ನಡೆಸಿದ್ದಾರೆ. ದೇವೇಗೌಡ, ಕುಮಾರಸ್ವಾಮಿಯ ಪ್ರತಿಕೃತಿ ದಹಿಸುವ ಮಟ್ಟಕ್ಕೂ ಇವರ ಆಕ್ರೋಶ ಮುಂದುವರೆದಿದೆ. ಅಂದಂತೆ ಕರ್ನಾಟಕದ ಬಹುತೇಕ ಜನ ಲಿಂಗಾಯತರು ತಮ್ಮನ್ನು ಬಿ.ಜೆ.ಪಿ. ಪಕ್ಷದ ಜೊತೆ ಗುರುತಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಯಡ್ಡಿಗೆ ಮಾತುಕೊಟ್ಟು ಮುಖ್ಯಮಂತ್ರಿ ಖುರ್ಚಿಯನ್ನು ಬಿಟ್ಟು ಕೊಡದೇ ಇರುವ ಗೌಡರ ಧೂರ್ತ ರಾಜಕೀಯ ಸರಿ-ತಪ್ಪೆಂದು ವಾದಿಸಲು ನಾನಿಲ್ಲಿ ಬಯಸಿಲ್ಲ. ಆದರೆ ಬಿ.ಜೆ.ಪಿಯೊಂದಿಗೆ ಗುರುತಿಸಿಕೊಂಡದ್ದೇ ಆದರೆ ಲಿಂಗಾಯತರು ಎಷ್ಟರ ಮಟ್ಟಿಗೆ ಲಿಂಗಾಯತರಾಗಿ ಉಳಿಯಬಲ್ಲರು?

ಹಾಗೆ ನೋಡಿದರೆ ತಾತ್ವಿಕವಾಗಿ ಲಿಂಗಾಯತರಿಗೂ- ಬಿ.ಜೆ.ಪಿ, ವಿಶ್ವಹಿಂದೂ ಪರಿಷತ್, ಬಜರಂಗದಳ, ಕಿಸಾನಸಂಘ, ಆರ್.ಎಸ್.ಎಸ್, ಎ.ಬಿ.ವಿ.ಪಿ. ಮುಂತಾದ ಸಂಘಟನೆಗಳಿಗೆ ಒಂಚೂರು ಸಂಬಂಧವೇ ಇಲ್ಲ. ಒಂದು ಉತ್ತರದ ತುದಿಯಾದರೆ ಮತ್ತೊಂದು ದಕ್ಷಿಣದ ತುದಿ. ಒಂದು ಬೆಳ್ಳಂಬೆಳಕಾದರೆ. ಮತ್ತೊಂದು ಕಾರ್ಗತ್ತಲು. ಒಂದು ಬಟ್ಟಾಬಯಲಾದರೆ, ಮತ್ತೊಂದು ನಿಗೂಢವಾದ ದಟ್ಟ ಕಾಡು. ಒಂದು ವೈಜ್ಞಾನಿಕವಾದರೆ ಇನ್ನೊಂದು ತೀರಾ ಅವೈಜ್ಞಾನಿಕ. ಒಂದು ಸ್ಪಷ್ಟವಾದರೆ ಇನ್ನೊಂದು ಅಸ್ಪಷ್ಟ. ಸತ್ಯ ಹೀಗಿರುವಾಗ ಕೆಲವರು ಮಾತ್ರ ಎರಡೂ ಒಂದೇ ಎಂದು ನಂಬಿಸಲು ಹೊರಟಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣರು ಲಿಂಗಾಯತರ ಗುರುಗಳೆಂದು ಕರೆಸಿಕೊಳ್ಳಲಾಗುತ್ತಿರುವ ಸ್ವಾಮಿಗಳು ಎಂದು ಇಲ್ಲಿ ನೇರವಾಗಿ ಹೇಳಲು ಇಚ್ಛಿಸುತ್ತೇನೆ.

ಕರ್ನಾಟಕದ ಕೆಲವು ಬೆರಳೆಣಿಕೆಯ ಸ್ವಾಮಿಗಳನ್ನು ಹೊರತು ಪಡಿಸಿದರೆ ಬಹುತೇಕರು ಈಗಾಗಲೇ ಚಡ್ಡಿ ತೊಟ್ಟಿದ್ದಾರೆ. ಕೆಲವರಂತೂ ತಮ್ಮ ಮಠದ ಅಂಗಳದಲ್ಲಿ ಆರ್.ಎಸ್.ಎಸ್. ಕುಣಿತಕ್ಕೆ ಅವಕಾಶ ನೀಡಿದ್ದಾರೆ. ರಾಮನ ಗುಡಿ ಕಟ್ಟಲು ಇಟ್ಟಿಗೆಗಳನ್ನು ಸಂಗ್ರಹಿಸಿ ತಾವು ಬಹುದೊಡ್ಡ ಘನಂದಾರಿ ಕೆಲಸ ಮಾಡಿದ್ದೇವೆ ಎಂಬ ಹಮ್ಮಿನಲ್ಲಿ ಬೀಗಿದ್ದಾರೆ. ನಾಲ್ಕೈದು ಜನ ಸ್ವಾಮಿಗಳಂತೂ ಚಡ್ಡಿಗಳ ಅಂಗಳದಲ್ಲಿ ಚೆಡ್ಡಿಯನ್ನೂ ಕಳಚಿಕೊಂಡು ಕವಾಯತ್ತು ಮಾಡಿದ್ದಾರೆ. ಇದು ಲಿಂಗಾಯತರ ಧಾರ್ಮಿಕ ಗುರುಗಳೆಂದು ಕರೆಸಿಕೊಳ್ಳುವ ಜಂಗಮರು ತಲುಪಿರುವ ಅಧಃಪತನದ ಸ್ಪಷ್ಟ ಸೂಚನೆ.

ಸರಿಯಾಗಿ ಗ್ರಹಿಸಿದರೆ: ಬ್ರಾಹ್ಮಣಿಕೆಯನ್ನು ಮೈಗೂಡಿಸಿಕೊಂಡಿರುವ ಬಿ.ಜೆ.ಪಿ. ಹಾಗೂ ಇತರ ಸಂಘಟನೆಗಳಿಗೂ ಲಿಂಗಾಯತರ ಮಠಾಧಿಪತಿಗಳಿಗೂ ಏನೇನು ಫರಕು ಇಲ್ಲ. ಯಾವುದನ್ನು ಬಸವಾದಿ ಪ್ರಮಥರು ಬೇರು ಸಹಿತ ಕಿತ್ತೆಸೆದು ಹೊಸ ಕನಸುಗಳನ್ನು ಈ ನೆಲದಲ್ಲಿ ಉತ್ತಿ-ಬಿತ್ತಿ ಬೆಳೆದಿದ್ದರೋ ಆ ಎಲ್ಲವನ್ನು ಸಾರಾಸಗಟಾಗಿ ಅರಗಿ ದಿಂಡು ಹೊಡೆದವರು ಈ ಗುರುಗಳು. "ಅಡ್ಡ ದೊಡ್ಡ ನಾನಲ್ಲವಯ್ಯ ದೊಡ್ಡ ಬಸುರು ಎನಗಿಲ್ಲವಯ್ಯ" ಎಂದ ಬಸವಣ್ಣನವರೆಲ್ಲಿ 'ಜಂಗಮ' ಜಾತಿ ಲಿಂಗಾಯತರಲ್ಲೇ ಮೇಲ್ ಜಾತಿ ಎಂದು ತಿಳಿದುಕೊಂಡಿರುವ ಈ ಜಂಗಮ ಗುರುಗಳೆಲ್ಲಿ? ಜಂಗಮ ಜಾತಿಯಲ್ಲಿ ಹುಟ್ಟಿದ್ದೆ ತಮ್ಮ ಬಹುದೊಡ್ಡ ಸಾಧನೆ ಎಂದು ತಿಳಿದುಕೊಂಡಿರುವ ಕರ್ನಾಟಕದ ಮಠಾಧೀಶರು ತಮ್ಮಲ್ಲಿ ಯಾವುದೇ ಯೋಗ್ಯತೆ ಇಲ್ಲದೆಯೂ ಮಠಗಳಲ್ಲಿ ಅಮರಿಕೊಂಡಿದ್ದಾರೆ. ಅವರು ದಿನ ನಿತ್ಯ ತಾವು ಕುಳಿತ ಮಠಗಳ ಮೂಲಕ ಬಸವಾದಿ ಪ್ರಮಥರ ವಿಚಾರಗಳನ್ನು ತೊತ್ತಲ ತುಳಿಯುತ್ತ ಮುನ್ನಡೆದಿದ್ದಾರೆ.

"ಗೋತ್ರನಾಮವ ಬೆಸಗೊಂಡರೆ ಮಾತನಾಡದೆ ಸುಮ್ಮನಿದ್ದಿರ

ವೀರಶೈವ ವೈದಿಕ ಜಗದ್ಗುರು ಬಾಳೇಹೊನ್ನೂರು ಶ್ರೀ ರಂಭಾಪುರಿ ಸ್ವಾಮಿಗಳ ಪಾದಕ್ಕೆರಗಿರುವ ಮಾಜಿ ಉಪ ಮುಖ್ಯಮಂತ್ರಿ ಯಡಿಯೂರಪ್ಪ

ದೇಕೆ ? ಮಾದಾರ ಚೆನ್ನಯ್ಯನ ಗೋತ್ರವೆಂದು ಹೇಳಿ. ಕಕ್ಕಯ್ಯನ ಗೋತ್ರವೆಂದು” ಹೇಳಿ ಎಂಬ ಮೂಲಕ ಅವರಲ್ಲಿ ಆತ್ಮಸ್ಥೈರ್ಯ ತುಂಬಿದ್ದ ಬಸವಣ್ಣನವರ ವಚನದ ಸಾಲುಗಳನ್ನು ಮರೆತು ಬಿಟ್ಟಿದ್ದಾರೆ.ತಮ್ಮ ಮಠದ ಅಂಗಳ ದಲ್ಲಿ ಇಂದಿಗೂ ಕೆಲವು ಜನಾಂಗದವರನ್ನು ಬಿಟ್ಟುಕೊಳ್ಳು ವುದಕ್ಕೆ ರೆಡಿ ಇಲ್ಲ. ಅಪ್ಪಿಕೊಳ್ಳುವುದಂತೂ ದೂರದಮಾತು. ಗುಡಿ ಗುಂಡಾರಗಳು ನಡೆಸುವ ಶೋಷಣೆಗಳನ್ನು ಗಮನಿ ಸಿದ, ಧಾರ್ಮಿಕ ಗುತ್ತೇದಾರಿಕೆಯನ್ನು ಖಂಡಿಸಿ ತನ್ನಾಶ್ರ ಯದ ರತಿಸುಖವನ್ನು ತಾನುಂಬ ಊಟವನು ತಾ ಮಾಡ ಬೇಕಲ್ಲದೆ ಅನ್ಯರ ಕೈಲಿ ಮಾಡಿಸಬಹುದೆ? ಎಂದು ಮರ್ಮಘಾತಕವಾದ ನುಡಿಗಳಿಂದ ಪ್ರಜ್ಞೆಯುಂಟು ಮಾಡಿದ್ದ ಬಸವಾದಿ ಶರಣರ ಮಾತು ಇಂದು ಯಾವ ಮಠದ ಸ್ವಾಮಿ ಪಾಲಿಸುತ್ತಿದ್ದಾನೆ? ಎಲ್ಲರೂ ತಮ್ಮ ಗಮನ ಭಕ್ತರಿಗೆ ಕೊಡುವುದಕ್ಕಿಂತ ತಾವಿರುವ ಮಠದ ಜಡ ಕಟ್ಟ ಡಕ್ಕೆ (ಗುಡಿಗೆ) ಹೆಚ್ಚು ಪ್ರಾಧಾನ್ಯತೆ ಕೊಡುತ್ತಿದ್ದಾರೆ. “ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ” ಎಂಬ ಮಾತನ್ನು ಮುದ್ದಾಂ ಮರೆತಿದ್ದಾರೆ.

ಅತ್ಯಂತ ವೈಭವೋ ಪೇತವಾಗಿ ಗುಡಿಯಲ್ಲಿ ಕಲ್ಲಾಗಿರುವ ದೇವರಿಗೆ ಹಾಲು, ಮೊಸರು, ತುಪ್ಪ, ಜೇನುತುಪ್ಪದ ಅಭಿಷೇಕ ಮಾಡುವುದೇ ಪೂಜೆ ಎಂಬಂತಾಗಿದೆ. “ಉಳ್ಳವರು ಶಿವಾಲಯ ಮಾಡು ವರು ನಾನೇನ ಮಾಡಲಿ ಬಡವನಯ್ಯ?” ಎಂಬ ವಚನದ ಸಾಲು ಇವರಿಗೆ ಮನಸ್ಸಿನಲ್ಲಾದರೂ ಕಾಡಲಾರದೆ? “ತಾಳ ಮಾನ ಸರಸವನರಿಯೆ. ಓಜೆ ಬಜಾವಣೆಯ ಲೆಕ್ಕವನರಿಯೆ. ಅಮೃತಗಣ ದೇವಗಣವನರಿಯೆ. ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ” - ಎಂಬ ಮಾತುಗಳನ್ನು ಹೊಸಕಿ ಹಾಕಿ ತಮ್ಮ ಗುಡಿಯಲ್ಲಿ ಪ್ರತಿಷ್ಠಾಪಿಸಿದ ದೇವರಿಗೆ ಮತ್ತದೇ ಹಿಂದಿನ ಸಂಸ್ಕೃತ ಭಾಷೆಯ ಮಂತ್ರಗಳನ್ನ ಹೇಳುತ್ತ ಮುನ್ನಡೆದಿದ್ದಾರೆ. ಯಾವುದು ಜನಭಾಷೆಯಾಗಿಲ್ಲವೋ ಅದು ಮೋಸದ ಭಾಷೆಯೆಂದೇ ಅರ್ಥ. ಆದರೆ ಮಠಾಧೀಶರೆಂಬ ‘ಜಂಗಮ’ ಪುಂಗವರು ಈ ಮಾತನ್ನು ಒಪ್ಪಿಕೊಳ್ಳುವುದೇ ಇಲ್ಲ. ಯಾಕೆಂದರೆ ಜನಭಾಷೆಯ ಕನ್ನಡದಲ್ಲಿ ಎಲ್ಲವನ್ನು ಹೇಳಿದರೆ ತಮ್ಮ ಆಷಾಢಭೂತಿತನ ಬಯಲಾಗುತ್ತದೆ ಎಂಬ ಭಯ.

“ನಾಳೆ ಬರುವುದು ನಮಗಿಂದೇ ಬರಲಿ. ಇಂದು ಬರುವುದು ನಮಗೀಗಲೇ ಬರಲಿ”- ಎಂಬ ವಿಚಾರವನ್ನು ಮರೆತು ತಮ್ಮ ಭಕ್ತರಲ್ಲಿ ‘ಭುಗಿಲು’ ಹುಟ್ಟಿಸುತ್ತ, ಆ ಭಯವನ್ನು ತಮ್ಮ ಪಾದಕ್ಕೆ ಎರಗಿದರೆ, ದಕ್ಷಿಣೆ ಕೊಟ್ಟರೆ ಕಡಿಮೆ ಮಾಡುತ್ತೇವೆ ಎಂಬ ಭ್ರಮೆ ಹುಟ್ಟಿಸುತ್ತ ಸಾಗಿ ದ್ದಾರೆ. “ಹೆಣ್ಣು ಮಾಯೆಯೆಂಬರು. ಹೆಣ್ಣು ಮಾಯೆ ಯಲ್ಲ. ಮಣ್ಣು ಮಾಯೆಯೆಂಬರು ಮಣ್ಣು ಮಾಯೆ ಯಲ್ಲ. ಮನದ ಮುಂದಣ ಆಸೆಯೇ ಮಾಯೆ!” ಎಂಬುದು ಶರಣರ ನಿಲುವು. ಆದರೆ ಮಠಾಧೀಶರು ತಮ್ಮ ಮಠಗಳ ಗರ್ಭಗುಡಿಯೊಳಗೆ ಇನ್ನೂ ಮಹಿಳೆ ಯರನ್ನು ಬಿಟ್ಟುಕೊಳ್ಳುವುದಿಲ್ಲ. ಅವಳು ‘ಮುಟ್ಟಾಗುವಳು’ ಎಂಬ ಕಾರಣಕ್ಕೆ ಇನ್ನೂ ಮುಟ್ಟಬೇಡಿ, ಎಂಬ ಮಂತ್ರ ವನ್ನು ಚಾಲ್ತಿಯಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಮಹಿಳೆ ಯರನ್ನು ಗರ್ಭಗುಡಿಯಲ್ಲಿ ಬಿಟ್ಟುಕೊಳ್ಳದೆ ಇರುವವರಂತೆ ತೋರಿಸಿಕೊಳ್ಳುವ ಇವರು ತಮ್ಮ ಖಾಸಗಿಕೋಣೆಯಲ್ಲಿ ಅವಳ “ಕಳ್ಳಗರ್ಭಕ್ಕೆ” ಕಾರಣೀಭೂತರಾಗುತ್ತಾರೆ.

“ಹಾವಿನ ಹಲ್ಲಕಳೆದು ಹಾವ ನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು ಕಂಡಯ್ಯ”, “ಹೆಣ್ಣಿನೊಳಗೆ ಮನವಾದರೆ ಲಗ್ನವಾಗಿಕೂಡುವುದು”, “ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ. ಗಂಡೂ ಅಲ್ಲ” - ಎಂಬ ಮಾತುಗಳು ಇವರಿಗೆ ಅಂತರಂಗದಲ್ಲಿ ಇಷ್ಟವಾಗಿಯೇ ಕಾಣುತ್ತವೆ. ಆದರೆ ಬಹಿರಂಗದಲ್ಲಿ ಅವನ್ನು ಜಾರಿಗೆ ತರಲಾಗದ ನಡುಕ. ಅದನ್ನು ಜಾರಿಗೆ ತಂದುದೆ ಆದರೆ ಎಲ್ಲಿ ತಾವು ತೊಟ್ಟುಕೊಂಡ ಕಾವಿ ಕಳಚಿಬಿದ್ದು, ಜನ ಕಾಲಿಗೆರಗಿ ದಕ್ಷಿಣೆ ಕೊಡುವುದು ತಪ್ಪುತ್ತದೋ ಎಂಬ ಭಯ.

ಮೇಲಿನ ಈ ಎಲ್ಲಾ ಲಕ್ಷಣಗಳು ಬ್ರಾಹ್ಮಣಿಕೆಯ ಸಂಕೇತ. ‘ಬ್ರಾಹ್ಮಣಿಕೆ’ ಅಂದರೆ ಬೇರೆ ಇನ್ನೇನು ಅಲ್ಲ. ಅಥವಾ ಬ್ರಾಹ್ಮಣ ಜಾತಿಯಲ್ಲ. ಮೋಸದ ನಡವಳಿಕೆ ಯಿಂದ ಜನಸಾಮಾನ್ಯರನ್ನು ದಿಕ್ಕು ತಪ್ಪಿಸಿ ಅದರ ಲಾಭ ಪಡೆಯುವುದೆಂದೇ ಅರ್ಥ. ಬಸವಾದಿ ಶರಣರ ನಿರ್ಗ ಮನವಾದ ನಂತರ ಅವರ ಅನುಯಾಯಿ ಮಠಗಳೆಂದು ಹೇಳಿಕೊಂಡ ಸ್ವಾಮಿಗಳು, ಮಠಗಳು ಇಂದು ಆ ತತ್ವಗಳಿಗೆ ಎಳ್ಳು ನೀರು ಬಿಟ್ಟು ಹಿಂದಿನ ಪರಂಪರಾಗ ತವೆಂಬ ಜೊಳ್ಳು ಆಚರಣೆಗಳಿಗೆ ತಗಲು ಬಿದ್ದಿದ್ದಾರೆ. “ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರಗೋಷ್ಠಿ, ತರ್ಕವೆಂಬುದು ತಗರ ಹರಟೆ” ಎಂದು ಸ್ಪಷ್ಟ ಮಾತು ಗಳನ್ನು ಇವನ್ನೆಲ್ಲ ಜರಿದಿದ್ದರೂ ಲಿಂಗಾಯತ ಮಠಗಳ ಮಠಾಧೀಶರು ಇವನ್ನೇ ತಮ್ಮ ಮೌಲ್ಯ ಎಂದು ಆರಾಧಿ ಸುತ್ತ ಸಾಗಿದ್ದಾರೆ. ಒಂದರ್ಥದಲ್ಲಿ ಲಿಂಗಾಯತ ಮಠಾ ಧೀಪತಿಗಳೂ ‘ಬ್ರಾಹ್ಮಣ್ಯ’ಕ್ಕೆ ಮತ್ತೆ ಜೋತು ಬಿದ್ದಿದ್ದಾರೆ.

ನಮ್ಮ ಸಮಾಜ ಹಿಂದೊಂದು ಸಂದರ್ಭದಲ್ಲಿ ಬ್ರಾಹ್ಮಣ್ಯಕ್ಕೆ ಜೋತುಬಿದ್ದುದರ ಪರಿಣಾಮ ಘಜನಿಮೊಹ್ಮ ದನಂತಹ ಸಾಮಾನ್ಯ ರಾಜನು ಸಹ ನಮ್ಮ ದೇಶದ ಮೇಲೆ ದಂಡೆತ್ತಿ ಬಂದು ಇಲ್ಲಿನ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದ. ನಮ್ಮ ತಾತ ಮುತ್ತಾತರೆಲ್ಲ ಅಕ್ಷರದ ಸಮೀಪಕ್ಕೆ ಬಂದರೆ ಅಕ್ಷರಗಳೇ ನಾಶವಾಗುತ್ತವೆ ಎಂದು ಹೇಳಿ ಅವರನ್ನು ಅಕ್ಷರ ಕಲಿಕೆಯಿಂದ ದೂರವೇ ಇಡ ಲಾಗಿತ್ತು. ‘ಗುಲಾಮಗಿರಿ’ ಮಾಡುವುದೇ ಅವರವರ ‘ಕರ್ಮ’ ಎಂದು ಸಾರಿಕೊಂಡು ಬರಲಾಗಿತ್ತು. ಇದರಿಂದ ದೇಶದ ಅತ್ಯುನ್ನತ ಸ್ಥಾನಗಳೆಲ್ಲ ಒಂದೇ ವರ್ಗದ ಜನರ ಪಾಲಾಗಿ ಹೋಯ್ತು. ಈ ಮಾತನ್ನು ತಿಳಿಯಬೇಕಾ ದವರು ಇಂದಿಗೂ ದೊಡ್ಡ ಹುದ್ದೆಯಲ್ಲಿ ವಿರಾಜಮಾ ನರಾಗಿರುವವರನ್ನು ಗಮನಿಸಬೇಕು. ಇವರು ಮತ್ತದೇ ಹಿಂದೆ ಇದ್ದ ಮನುವಾದವನ್ನು ಜಾರಿಗೆ ತರಲು ಹಂಬಲಿ ಸುತ್ತಾರೆ. ಮೌಢ್ಯಗಳನ್ನು ಯಥೇಚ್ಛವಾಗಿ ಬಿತ್ತುತ್ತಾರೆ. ಪೊಳ್ಳು ಸಿದ್ಧಾಂತಗಳ ಮೂಲಕ ಅವನ್ನು ಸಮರ್ಥಿಸುವ ಎತ್ತುಗಡೆಯಲ್ಲಿ ತೊಡಗುತ್ತಾರೆ.

ಖೊಟ್ಟಿ ಗ್ರಂಥಗಳನ್ನು ರಚಿಸಿ ಅವು ಇತಿಹಾಸ ಎಂಬಂತೆ ಬಿಂಬಿಸುತ್ತಾರೆ. ಮನುಷ್ಯನ ಸಾಮರ್ಥ್ಯಕ್ಕಿಂತ ಅವನ ಹಣೆಬರಹವೇ ದೊಡ್ಡದು ಎಂಬಂತೆ ಹೇಳುತ್ತಾರೆ. ಶಾಸ್ತ್ರ - ಪುರಾಣ ಆಗಮಗಳೆಲ್ಲ ಮತ್ತೆ ವಿಜೃಂಭಿಸುತ್ತವೆ. ಜೋತಿಷ್ಯಶಾಸ್ತ್ರವೂ ಒಂದು ವೈಜ್ಞಾನಿಕ ತಳಹದಿಯ ಮೇಲೆ ರೂಪಿತವಾದ ಶಾಸ್ತ್ರವೆಂದು ಸಾರಿಕೊಂಡು ಬರು ತ್ತಾರೆ. ಒಟ್ಟಿನಲ್ಲಿ ಮನುಷ್ಯತ್ವಕ್ಕಿಂತ ದೇವರೇ ಶ್ರೇಷ್ಠ ವೆಂದು ವಾದಿಸುತ್ತಾರೆ. ಆ ದೇವರನ್ನು ಗುತ್ತಿಗೆ ಹಿಡಿದು ನಮ್ಮನ್ನು ಕುರಿಯ ತುಪ್ಪಳ ಸುಲಿದಂತೆ ಸುಲಿಯುತ್ತಾರೆ. ಜೊತೆಗೆ ನಮ್ಮನ್ನು ಇವರು ಮೋಸಗೊಳಿಸುತ್ತಿದ್ದಾರೆ ಎಂಬ ಭಾವನೆ ಬರದಂತೆ ಹುತಾತ್ಮ ಪಟ್ಟಕಟ್ಟಿ ನಮ್ಮನ್ನು ಚಟ್ಟಕ್ಕೆ ಏರಿಸುತ್ತಾರೆ.

ನೋಡಿ: ಈ ನೆಲದಲ್ಲಿ ನಮ್ಮ ನಿಮ್ಮಂತೆ ರಕ್ತ ಮಾಂಸ ತುಂಬಿಕೊಂಡು ಓಡಾಡಿದ ಎಂಬಂತೆ ಕಲ್ಪಿಸಿಕೊ ಳ್ಳಲಿಕ್ಕೂ ಸಾಧ್ಯವಾಗದ ವ್ಯಕ್ತಿ ಮಹಾತ್ಮಗಾಂಧೀಜಿಯವರು. ಇಂಥ ಮಹಾತ್ಮನನ್ನು ಗುಂಡಿಕ್ಕಿ ಕೊಂದವರು ಇದೇ ಸನಾತನಿಗಳು. ಆದರೆ ಇವತ್ತು ಮತ್ತದೇ ಗಾಂಧೀ ಪ್ರತಿ ಮೆಗೆ ಮಾಲಾರ್ಪಣೆ ಮಾಡುತ್ತಾರೆ. ಆತನ ಹೆಸರನ್ನು ಕ್ಷಣ ಕ್ಷಣವೂ ಪಠಿಸುತ್ತಾರೆ. ನಾಗಾರ್ಜುನ ಕೊಂಡ ಎಂಬ ಪ್ರದೇಶದಲ್ಲಿ ಬೌದ್ಧರ ಮಾರಣಹೋಮಕ್ಕೆ ಕಾರಣಿ ಕರ್ತನಾದ ಶಂಕರಾಚಾರ್ಯರ ತತ್ವಗಳೇ ಇವರಿಗೆ ಆದರ್ಶ. ಗೋಡ್ಸೆ, ಗೋವಾಳ್ಕರ್‌ಗಳೆಲ್ಲ ಇವರ ನೈತಿಕ ಸಂಕೇತಗಳು: ‘ಮನುಸ್ಮೃತಿ’ ಎಂಬ ಪಾಖಂಡಿ ಗ್ರಂಥವೇ ಇವರ ಸಂವಿಧಾನ. ಅಸಮಾನತೆಯನ್ನು ಪೋಷಿಸಿ ಬೆಳೆ ಸುವುದೇ ಇವರ ಆದ್ಯಕರ್ತವ್ಯ ಎಂದು ತಿಳಿದಿರುವವರು.

“ಗೋತ್ರನಾಮವ ಬೆಸಗೊಂಡರೆ ಮಾತ ನಾಡದೆ ಸುಮ್ಮನಿದ್ದಿರದೇಕೆ? ಮಾದಾರ ಚೆನ್ನಯ್ಯನ ಗೋತ್ರವೆಂದು ಹೇಳಿ. ಕಕ್ಕ ಯ್ಯನ ಗೋತ್ರವೆಂದು” ಹೇಳಿ ಎಂಬ ಮೂಲಕ ಅವರಲ್ಲಿ ಆತ್ಮಸ್ಥೈರ್ಯ ತುಂಬಿದ್ದ ಬಸವಣ್ಣನವರ ವಚನದ ಸಾಲುಗಳನ್ನು ಮರೆತು ಬಿಟ್ಟಿದ್ದಾರೆ. ತಮ್ಮ ಮಠದ ಅಂಗಳದಲ್ಲಿ ಇಂದಿಗೂ ಕೆಲವು ಜನಾಂಗದವರನ್ನು ಬಿಟ್ಟುಕೊಳ್ಳುವುದಕ್ಕೆ ರೆಡಿ ಇಲ್ಲ. ಅಪ್ಪಿಕೊಳ್ಳುವುದಂತೂ ದೂರದ ಮಾತು. ಗುಡಿ ಗುಂಡಾರಗಳು ನಡೆಸುವ ಶೋಷಣೆಗಳನ್ನು ಗಮನಿಸಿದ, ಧಾರ್ಮಿಕ ಗುತ್ತೇದಾರಿಕೆಯನ್ನು ಖಂಡಿಸಿ ತನ್ನಾಶ್ರಯದ ರತಿಸುಖವನ್ನು ತಾನುಂಬ ಊಟವನು ತಾ ಮಾಡ ಬೇಕಲ್ಲದೆ ಅನ್ಯರ ಕೈಲಿ ಮಾಡಿಸಬಹುದೆ? ಎಂದು ಮರ್ಮಘಾತಕವಾದ ನುಡಿಗಳಿಂದ ಪ್ರಜ್ಞೆ ಯುಂಟು ಮಾಡಿದ್ದ ಬಸವಾದಿ ಶರಣರ ಮಾತು ಇಂದು ಯಾವ ಮಠದ ಸ್ವಾಮಿ ಪಾಲಿಸುತ್ತಿದ್ದಾನೆ? ಎಲ್ಲರೂ ತಮ್ಮ ಗಮನ ಭಕ್ತರಿಗೆ ಕೊಡುವುದಕ್ಕಿಂತ ತಾವಿರುವ ಮಠದ ಜಡ ಕಟ್ಟಡಕ್ಕೆ (ಗುಡಿಗೆ) ಹೆಚ್ಚು ಪ್ರಾಧಾನ್ಯತೆ ಕೊಡುತ್ತಿದ್ದಾರೆ. “ಲಿಂಗಪ್ರತಿ ಷ್ಠೆಯ ಮಾಡಿದವಂಗೆ ನಾಯಕ ನರಕ” ಎಂಬ ಮಾತನ್ನು ಮುದ್ದಾಂ ಮರೆತಿ ದ್ದಾರೆ. ವೈಭವೋ ಪೇತವಾಗಿ ಗುಡಿಯಲ್ಲಿ ಕಲ್ಲಾಗಿರುವ ದೇವರಿಗೆ ಹಾಲು, ಮೊಸರು, ತುಪ್ಪದ ಅಭಿಷೇಕ ಮಾಡು ವುದೇ ಪೂಜೆ ಎಂಬಂತಾಗಿದೆ.

"ವ್ಯಾಸ ಬೋಯಿತಿಯ ಮಗ, ಮಾರ್ಕಂಡೆಯ ಮಾತಂಗಿಯ ಮಗ, ಅಗಸ್ತ್ಯ ಕಬ್ಬಿಲನಾಗಿದ್ದರೂ ಸೈ" ಇವರು ನಮ್ಮದೇ ಜನಾಂಗದ 'ಮಾಡೆಲ್'ಗಳನ್ನು ಪಡೆದು ಅವಕ್ಕೆ ಮತ್ತದೇ 'ಬ್ರಾಹ್ಮಣ್ಯ'ದಲ್ಲಿ ಅದ್ದಿ ನಮ್ಮ ಮುಂದೆ ಇಡುತ್ತಾರೆ. ರಾಮ ಕ್ಷತ್ರಿಯನಾಗಿದ್ದರೂ, ಕೃಷ್ಣ ಗೊಲ್ಲರವನಾಗಿದ್ದರೂ, ಬುದ್ಧ ಕ್ಷತ್ರಿಯನಾಗಿದ್ದರೂ, ಅಂಬೇಡ್ಕರ್ ಕೆಳವರ್ಗಕ್ಕೆ ಸೇರಿದವನಾಗಿದ್ದರೂ ಅವರನ್ನು ಮತ್ತೆ ಮತ್ತೆ "ವಿಷ್ಣುವಿನ ಅವತಾರ"ಗಳೆಂದು ಪ್ರಚುರ ಪಡಿಸುತ್ತಾಗೆ. ಬ್ರಾಹ್ಮಣ್ಯವನ್ನು ಸಂಪೂರ್ಣ ವಿರೋಧಿಸಿದ ಬುದ್ಧನಂತಪ ವ್ಯಕ್ತಿಯನ್ನೂ ಯಾವ ನಾಚಿಕೆಯೂ ಇಲ್ಲದೆ ವಿಷ್ಣುವಿನ ಹನ್ನೊಂದನೆಯ ಅವತಾರ ಎಂದು ಕರೆಯುತ್ತಾರೆ. ಯಾವುದನ್ನು ಅಂಬೇಡ್ಕರ ತನ್ನ ಜೀವಿತಾವಧಿಯವರೆಗೂ ವಿರೋಧಿಸುತ್ತ ಬಂದನೋ, ಆತನಿಗೆ ಆಧುನಿಕ ಮನು ಎಂಬ ಬಿರುದು ನೀಡಿ (ಗೌರವಿಸುವಂತೆ ಕಂಡರೂ) ಆತನನ್ನು ಸೂಕ್ಷ್ಮವಾಗಿ ಕೊಲೆಮಾಡುತ್ತಾರೆ. ಹಿಂದೂ ಧರ್ಮದ ಟೊಳ್ಳುತನಗಳನ್ನು ನಖಶಿಖಾಂತವಾಗಿ ವಿರೋಧಿಸಿದ ಹಾಗೂ "ಯಾವಾಗಲೂ ಪ್ರಗತಿಗೆ ವಿರೋಧಿಯಾಗಿರುವ ಪೂಜಾರಿ, ಪುರೋಹಿತ ಮುಲ್ಲಾ, ಪಾದ್ರಿಗಳನ್ನು ನಂಬಲು ಹೋಗಬೇಡಿ.

ಅವರು ಪ್ರಗತಿಯ ವಿರೋಧಿಗಳು. ಅವರು ತಮ್ಮನ್ನು ಎಂದೂ ತಿದ್ದಿಕೊಳ್ಳುವುದಿಲ್ಲ. ಅವರನ್ನು ಈ ದೇಶದಿಂದಲೇ ಒದ್ದೋಡಿಸಿ" ಎಂದು ಸ್ಪಷ್ಟವಾಗಿಯೆ ಹೇಳಿದರು. ಆದರೆ ಪರಿಸ್ಥಿತಿ ಏನಾಗಿದೆಯೆಂದರೆ ಇಂಥ ಕ್ರಾಂತಿಪುರುಷ ವಿವೇಕಾನಂದರಿಗೂ ಇಂದು ಮಕಮಲ್ಲಿನ ಟೋಪಿ ಹೊಲಿಸಿದ್ದಾರೆ ಈ "ಹಿಂದೂ ಟೆರರಿಸ್ಟ್"ಗಳು. ಚಾಲ್ತಿಯಲ್ಲಿರುವ (ನಮ್ಮವರೇ ಆಗಿರುವ- ನಮ್ಮವೇ ಆಗಿರುವ) ವ್ಯಕ್ತಿ -ಸಂಗತಿಗಳನ್ನು ತಮ್ಮ 'ಕಬ್ಜಾ' ಮಾಡಿಕೊಂಡು ನಮ್ಮನ್ನು 'ಕುರಿ'ಗಳನ್ನಾಗಿ ಮಾಡುತ್ತಾರೆ. ಹುಬ್ಬಳ್ಳಿಯ ಈದ್ಗಾ ಮೈದಾನ, ಅಯೋಧ್ಯೆಯ ರಾಮಮಂದಿರ, ಬಾಬಾ ಬುಡನಗಿರಿ ಬೆಟ್ಟ, ಇದೀಗ ಸೇತು ಸಮುದ್ರಂ ವಿವಾದಗಳನ್ನು ಯಾರಾದರೂ ಸೂಕ್ಷ್ಮವಾಗಿ ಪರಿಶೀಲಿಸಬಹುದು.

ಇವನ್ನೆಲ್ಲ ಗಮನಿಸಿದಾಗ ಬ್ರಾಹ್ಮಣರ ಪುರೋಹಿತರಿಗೂ, ಲಿಂಗಾಯತರ ಜಂಗಮ ಮಠಾಧೀಶರಿಗೂ ಯಾವುದೇ ರೀತಿಯ ವ್ಯತ್ಯಾಸ ಕಂಡುಬರುವುದಿಲ್ಲ. ಇವರಲ್ಲಿ ಯಾವುದೇ ತಾತ್ವಿಕ ಸಿದ್ಧಾಂತಗಳೂ ಇಲ್ಲ. ತಮ್ಮ ಸುತ್ತ ನೆರೆದ ಜನರನ್ನು ಧರ್ಮದ ಹೆಸರು ಹೇಳಿಕೊಂಡು ಸುಲಿಯುವುದೊಂದೇ ಇವರ ಧರ್ಮವಾಗಿದೆ. ಹಿಂದೊಂದು ಸಂದರ್ಭದಲ್ಲಿ ಮೈಸೂರು ರಾಜ್ಯದ ಹೈಕೋರ್ಟ್ ಮೆಟ್ಟಿಲನ್ನು ಏರಿ ಅಲ್ಲಿ ವಾದಿಸಿ ನ್ಯಾಯಿಕ ತೀರ್ಪು ಪಡೆದಂತೆ ಇವರೂ 'ಲಿಂಗಿ ಬ್ರಾಹ್ಮಣರು!' ರಂಭಾಪುರಿ ಪಂಚಪೀಠ(ಡ)ದ ಸ್ವಾಮಿಯಂತೂ ಇಂಥ 'ಲಿಂಗಿ ಬ್ರಾಹ್ಮಣರ' ಹಿಂದೆ ಇಂದು 'ಲಿಂಗಾಯತ'ರು ಹೊರಟಿರುವುದು ಎಷ್ಟು ಸರಿ? ಮಠಾಧೀಶರೇ ನಮ್ಮ ಏನೆಲ್ಲ ಬೆಳವಣಿಗೆಗೆ ಕಾರಣ ಎಂದು ತಿಳಿದ ಲಿಂಗಾಯತರ ಅವಜ್ಞತೆಯೂ ಇದಕ್ಕೆ ಕಾರಣ ಎಂದು ಹೇಳದೆ ವಿಧಿಯಿಲ್ಲವಾಗಿದೆ.

"ಇವನಾರವ ಇವನಾರವ ಎನ್ನದೆ ಇವ ನಮ್ಮವ, ಇವ ನಮ್ಮವ" ಎಂದು ಎಲ್ಲರನ್ನು ಅಪ್ಪಿಕೊಂಡ ಧರ್ಮ ಮನುವಾದಿಗಳಾಗಿರುವ 'ಜಂಗಮ'ರ ಮೂಲಕ, "ಇವನಾರ- ಇವನಾರವ" ಎಂದು ಕೇಳುವಂತಾಗುತ್ತೇವೆ. ಆದ್ದರಿಂದ ನಿಜವಾದ ಬಸವಾದಿ ಶರಣರ ಅನುಯಾಯಿಗಳೆಂದು ಹೇಳಿಕೊಳ್ಳುವ ಲಿಂಗಾಯತರು ತಮ್ಮ ತತ್ವಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು. ವಚನ ಸಾಹಿತ್ಯದ 'ತಾಯಿ' ಹೇಳಿದಂತೆ ನಾವು ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕೆ ಹೊರತು, ಈ ಗುರುಗಳೆಂಬ 'ಭಾವುಗ'ಗಳು ಹೇಳಿದಂತೆ ಅಲ್ಲ. ನಮಗೆ ನಮ್ಮ 'ಅರಿವು' ಗುರುವಾಗಬೇಕೆ ಹೊರತು. ಯಾವೊಬ್ಬ ವ್ಯಕ್ತಿ ಗುರುವಾಗಬಾರದು.

ವೈದಿಕಶಾಹಿಯ ಗರ್ಭದಿಂದ ಉದಿಸಿದ ಬಿ.ಜೆ.ಪಿ ಎಂಬ ಸನಾತನಿಗಳ ಪಕ್ಷವನ್ನು ನಮ್ಮ ಗುರುಗಳು(?) (ಜಂಗಮರು) ನಂಬಿದ್ದಾರೆಂದೂ ಲಿಂಗಾಯತರು ನಂಬಿಕೊಂಡು ಹೊರಟವೆಂದರೆ ನಮ್ಮ ಹಳ್ಳವನ್ನು ನಾವೇ ತೋಡಿಕೊಳ್ಳುತ್ತೇವೆ. ಅಥವಾ "ಹುಲಿಯ ಮೀಸೆಯ ಹಿಡಿದು ಉಯ್ಯಾಲೆ ಆಡಿದರು", "ಮಡಿಲಲ್ಲಿ ಸುಣ್ಣವ ಕಟ್ಟಿಕೊಂಡು ಮಡುವ ಬಿದ್ದರು" ಎಂಬಂಥ ಸ್ಥಿತಿಯಲ್ಲಿ ಲಿಂಗಾಯತರು ಸರ್ವನಾಶವಾಗುತ್ತಾರೆ. ಈ ಮೂಲಕ ಬಸವಾದಿ ಶರಣರನ್ನು ಕ್ಷಣ ಕ್ಷಣಕ್ಕೂ ಇರಿದು ಕೊಲ್ಲಿದ ಘಾತುಕತನಕ್ಕೆ ಪಕ್ಕಾಗುತ್ತಾರೆ. ಆದರೆ ಈ ಸತ್ಯವನ್ನು ಕರ್ನಾಟಕದ ಲಿಂಗಾಯತರು ತಿಳಿದುಕೊಳ್ಳುವರೆ? □

ಕಾವ್ಯ

ನನ್ನ ಕವನ

○ ಎ.ಬಿ. ರಾಮಚಂದ್ರಪ್ಪ

ನನ್ನ ಕವನ ನನ್ನವ್ವನಂತೆ
ಸದಾ ಕೇರುತ್ತ
ಚಪ್ಪರಿಸುತ್ತ
ಮಣ್ಣಿನೊಳಗೆ ಕಾಳ ಹೆಕ್ಕುವ
ನನ್ನವ್ವನಂತೆ

    ನನ್ನ ಕವನ ನನ್ನವ್ವನಂತೆ
    ಕಣದಂಚಿನ ಮುಂಕಟ್ಟ
    ಕುಟ್ಟಿ ತೂರಿ
    ಜಳ್ಳ ಎಸೆದು ಗಟ್ಟಿ ಅರಸುವ
    ನನ್ನವ್ವನಂತೆ

ನನ್ನ ಕವನ ನನ್ನವ್ವನಂತೆ
ಕೂಳೆ ಹೊಲದ
ಹಾಯ್ದೆನೆಗಳಲಿ
ಕನಸು ಹೆಕ್ಕುವ
ನನ್ನವ್ವನಂತೆ

    ನನ್ನ ಕವನ ನನ್ನವ್ವನಂತೆ
    ಉಡಿಯ ಸೆರಗಲಿ
    ಬಚ್ಚಿಟ್ಟ ಬಿಡಿಗಾಸಲಿ
    ಪಾಟೀ ಚೀಲ ತುಂಬಿ ತಂದ
    ಆ ಅಗಳಂತೆ ನನ್ನ ಕವನ

ನನ್ನ ಕವನ ನನ್ನವ್ವನಂತೆ
ಮನೆಗೆ ಕೊರೆದ ಕನ್ನ,
ಹೆಗ್ಗಣದ ಹೆದ್ದಾರಿಗಳಿಗೆ ಕಲ್ಲಬಡಿದು ಮಣ್ಣ ಮೆತ್ತಿ
ರಂಗೋಲಿಯ ಚಿತ್ತಾರದಲಿ
ವಿರಮಿಸುವ ನನ್ನವ್ವನಂತೆ

ನನ್ನ ಕವನ ನನ್ನವ್ವನಂತೆ
ಅವಳದೇ ಉಟ್ಟ ಸೀರೆ
ತೊಟ್ಟರವಿಕೆ
ಕರಿಮಣಿ ದಂಡೆಯಲಿ
ಕಂಗೊಳಿಸುವ
ನನ್ನವ್ವನಂತೆ

ಹಿಂದೂ! ಹಾಗಂದರೇನು?

ಸಂತೋಷ್ ಕುಮಾರ್ ಪಿ. ಕೆ

ಆಧುನಿಕ ಜಗತ್ತಿನ ಬುದ್ಧಿಜೀವಿಗಳ ವಲಯದಲ್ಲಿ ಹೆಚ್ಚಾಗಿ ಚರ್ಚಿತವಾಗುತ್ತಿರುವ ವಿಷಯವೆಂದರೆ ಹಿಂದೂಯಿಸಂ, ಈ ಹಿಂದೂಯಿಸಂನ ಅಧ್ಯಯನಕ್ಕಾಗಿ ಅಮೆರಿಕಾದಂತಹ ರಾಷ್ಟ್ರಗಳಲ್ಲಿ ಬೃಹತ್ ಮಟ್ಟದ ಸಂಸ್ಥೆಗಳು ಹುಟ್ಟಿಕೊಂಡಿವೆ. ಈ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಹುತೇಕ ಬುದ್ಧಿಜೀವಿಗಳು ಹಿಂದೂಯಿಸಂ ಎಂಬ ರಿಲಿಜನ್ ಅಸ್ಥಿತ್ವದಲ್ಲಿದ್ದು ಅದರ ಸಾಧಕ ಬಾಧಕಗಳ ಕುರಿತು ಆಲೋಚಿಸುವ ಸಂದರ್ಭದಲ್ಲಿ ಕೊಂಚ ವಿಭಿನ್ನವಾಗಿ ಪರ್ಯಾಲೋಚಿಸುವ ಕುರಿತು ಇಲ್ಲಿ ಬರೆಯಲು ಪ್ರಯತ್ನಿಸಿದ್ದೇನೆ. ನಾವು ನಮ್ಮದಲ್ಲದ ವಿಚಾರಗಳನ್ನು ನಮ್ಮದೇ ಎಂದು ಹೇಗೆ ತಿಳಿದುಕೊಂಡಿದ್ದೇವೆ ಹಾಗು ಅವುಗಳು ನಮ್ಮವೇ ಎಂದು ಸ್ಪಷ್ಟಪಡಿಸುವಲ್ಲಿ ಇತರ ಅಂಶಗಳ ಪಾತ್ರಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದೇನೆ. ಪ್ರಸಕ್ತ ಲೇಖನದಲ್ಲಿ ಈ ಕೆಳ ಕಾಣಿಸಿರುವ ಅಂಶಗಳ ಮೇಲೆ ಬೆಳಕನ್ನು ಹರಿಸಲು ಪ್ರಯತ್ನಿಸಿದ್ದೇನೆ.

೧. ಹಿಂದೂ ಪದದ ಉಗಮ, ಬೆಳವಣಿಗೆ ಮತ್ತು ಅದರ ಇಂದಿನ ಬಳಕೆ

೨. ಹಿಂದೂಯಿಸಂನ ಉಗಮ ಮತ್ತು ಅದರ ಪ್ರಸಕ್ತತೆ

೧. ಹಿಂದೂಯಿಸಂನ ಕುರಿತು ಚರ್ಚಿಸುವ ಮುನ್ನ ಈ ಹಿಂದೂ ಎಂಬ ಪದವು ಹೇಗೆ ಅಸ್ಥಿತ್ವಕ್ಕೆ ಬಂದಿತೆಂದು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಸಾಮಾನ್ಯವಾಗಿ ಭಾರತದವರು ಹಿಂದುಗಳು ಎಂಬ ಕಲ್ಪನೆ ಬಹಳಷ್ಟು ಜನರಿಗೆ ಬೇರೂರಿದೆ, ಪ್ರೌಢಶಾಲಾ ಶಿಕ್ಷಣ ಮುಗಿಸಿದವರಿಗೆ ನೆನಪಿರಬಹುದು, ಹಿಂದೂ ಎಂಬ ಪದ ಹೇಗೆ ಬಂತೆಂದು. ಪೋರ್ಚುಗೀಸರು ಮೊದಲು ಭಾರತಕ್ಕೆ ಬಂದಾಗ ಸಿಂಧೂ ನದಿಯ ಬಯಲಿನಲ್ಲಿ ವಾಸಿಸುತ್ತಿದ್ದ ಜನರನ್ನು ಹಿಂದೂಗಳೆಂದು ಕರೆದರು, ಈ ವಿಷಯಕ್ಕೆ ಸಂಬಂಧಿಸಿದಂತೆ ಆಧಾರವನ್ನು ಒದಗಿಸುವ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ, ಕಾರಣ ಪ್ರೌಢಶಾಲಾ ಪಠ್ಯಪುಸ್ತಕಗಳಲ್ಲಿ ದೊರಕುವ ಸರ್ವೇಸಾಮಾನ್ಯ ಮಾಹಿತಿಯಾಗಿದೆ. ಆದರೆ ಹಿಂದೂಸ್ಥಾನ ಎಂಬ ಹೆಸರು ಬಹಳ ಹಿಂದಿನಿಂದಲೂ ಭಾರತಕ್ಕೆ ಇತ್ತು ಆದ ಕಾರಣ ಇಲ್ಲಿ ವಾಸಿಸುವವರಿಗೆ ಹಿಂದೂಗಳೆಂದು ಹೆಸರು ಬಂದಿರುವುದು ಎಂಬುದು ಕೆಲವರವಾದ ಇರಬಹುದು, ಆದರೆ ನಾನು ಆ ರೀತಿಯ ಗೊಂದಲ ಚರ್ಚೆಗೆ ಇಳಿಯಬಸುವುದಿಲ್ಲ, ಬದಲಿಗೆ ನಾ ಹೇಳ ಹೊರಟಿರುವುದು, ಹಿಂದೂ ಎಂಬುದು ಹೇಗೆ ಅಸ್ಥಿತ್ವಕ್ಕೆ ಬಂದಿತು ಮತ್ತು ಅದರ ಬಳಕೆ ಪ್ರಸಕ್ತ ಕಾಲದಲ್ಲಿ ಯಾವ ರೀತಿ ಆಗುತ್ತಿದೆ ಎಂಬುದನ್ನು ವಿಶ್ಲೇಷಿಸುತ್ತೇನೆ. ನಮಗೆ ಈ ವಿಷಯಗಳು ತಿಳಿದಿದ್ದರೂ ಅದರ ಕುರಿತು ಆಲೋಚಿಸುವಾಗ ಸ್ವಲ್ಪ ಎಡವಿರುವುದು ಬುದ್ಧಿಜೀವಿಗಳ ಆಲೋಚನಾ ಕ್ರಮಗಳನ್ನು ನೋಡಿದರೆ ತಿಳಿಯುತ್ತದೆ.

ಇದರ ಆಧಾರದ ಮೇಲೆಯೇ (ಅಂದರೆ ಹಿಂದೂಗಳು ಎಂಬ ಕಲ್ಪನೆ) ೧೯೨೫ ರಿಂದೀಚೆಗೆ ಕುತೂಹಲಕಾರಿ ಬೆಳವಣಿಗೆ ಭಾರತದಲ್ಲಿ ಕಂಡುಬಂದಿತು, "ಎಲ್ಲಾ ಹಿಂದೂಗಳು ಒಂದಾಗಿ ಅಖಂಡ ಹಿಂದೂಸ್ಥಾನದ ನಿರ್ಮಾಣ" ಎಂಬ ಘೋಷಣೆಯೊಂದಿಗೆ ಆರ್.ಎಸ್.ಎಸ್. ಸಂಘಟನೆ ಹುಟ್ಟಿಕೊಂಡಿತು, ಹೀಗೆ ಹಿಂದೂಗಳನ್ನು ಒಂದು ಮಾಡುವುದು ಸಾಧ್ಯವೇ? ಗೊತ್ತಿಲ್ಲ......... ಆದರೆ ಒಂದು ಉದಾಹರಣೆ ಕೊಡುವ ಮೂಲಕ ಇದಕ್ಕೆ ಸಂಬಂಧಿಸಿದಂತೆ ನಾನು ಕೆಲವು ಪ್ರಶ್ನೆಗಳನ್ನು ಎತ್ತಲು ಬಯಸುತ್ತೇನೆ.

ಸುಮಾರು ಐದು ಅಥವಾ ಆರು ಶತಮಾನಗಳ ನಂತರ ಯಾವದೋ ದೇಶದ ವಿದೇಶಿ ಯಾತ್ರಿಕರು ಭಾರತಕ್ಕೆ ಬರುತ್ತಾರೆ ಎಂದಿಟ್ಟುಕೊಳ್ಳಿ, ಅವರಿಗೆ ನಮ್ಮ ಭಾಷೆ ಬರುವುದಿಲ್ಲ ಹಾಗೆಯೇ ನಮಗೆ ಅವರ ಭಾಷೆ ಅರ್ಥವಾಗುವುದಿಲ್ಲ, ಇಂತಹ ಸನ್ನಿವೇಶದಲ್ಲಿ ವಿದೇಶಿಗರು ನಮ್ಮ ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ ಇಲ್ಲಿನ ಜನರನ್ನು ಏನೆಂದು ಕರೆಯಬೇಕೆಂದು ತಿಳಿಯದೇ ಗಿಲ್-ಗಿಲ್ ಎಂದು ನಾಮಕರಣ ಮಾಡಿ ಇಲ್ಲಿ ವಾಸಿಸುವ ಎಲ್ಲರನ್ನೂ ಗಿಲ್-ಗಿಲ್‌ಗಳು ಎಂದು ಕರೆದರು ಅಂತಿಟ್ಟುಕೊಳ್ಳಿ. ಅವರು ತಮ್ಮ ದೇಶಗಳಿಗೆ ಹಿಂದಿರುಗಿದ ಅಥವಾ ನಾಮಕರಣಗೊಳಿಸಿದ ೨೦೦ ವರ್ಷಗಳ ತರುವಾಯ ಭಾರತದಲ್ಲಿ ಯಾವುದೋ ಒಂದು ಸಂಘ ಅಥವಾ ಗುಂಪು ಹುಟ್ಟುತ್ತದೆ ಮತ್ತು ಅದರ ಮೂಲ ಉದ್ದೇಶ "ಎಲ್ಲಾ ಗಿಲ್-ಗಿಲ್ ಗಳನ್ನು ಒಂದಾಗಿಸಿ ಅಖಂಡ ಗಿಲ್-ಗಿಲ್‌ಗಳ ದೇಶವನ್ನು ನಿರ್ಮಾಣ ಮಾಡುವುದೇ ಆಗಿರುತ್ತದೆ" ಇದು ಸಾಧ್ಯವೇ ಎಂಬುದು ನನ್ನ ಮೂಲಭೂತ ಪ್ರಶ್ನೆಯಾಗಿದೆ. ಕಾರಣ ಗಿಲ್-ಗಿಲ್ ಎಂಬುದು ಅವರ ಅನುಭವಾತ್ಮಕ ವಸ್ತುವೇ ಆಗಿರುವುದಿಲ್ಲ, ಈ ನೆಲೆಗಟ್ಟಿನಲ್ಲಿ ಹಿಂದೂಗಳ ಒಗ್ಗೂಡಿಸುವಿಕೆ ಸಾಧ್ಯವೇ? ಏಕೆಂದರೆ ಹಿಂದೂ ಎಂಬುದು ಇಲ್ಲಿನ ಜನರ ಅನುಭವಾತ್ಮಕ ವಿಷಯವೇ ಅಲ್ಲ. ಇದನ್ನು ಈ ಕೆಳಗಿನ ಕೆಲವು ಅಂಶಗಳಿಂದ ಇನ್ನೂ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ಸಾಮಾನ್ಯವಾಗಿ, ಯಾರಾನ್ನಾದರೂ ನೀವು ಯಾರು ಎಂದು ಕೇಳಿದೊಡನೆ ಆತ ನಿಸ್ಸಂಶಯವಾಗಿ ತನ್ನ ಹೆಸರು ಅಥವಾ ಊರು, ತಾನು ಇವರ ಮಗ, ತಾನು ಇಂತಹ ಜಾತಿಗೆ ಸೇರಿದವನು ಅಥವಾ



ವಿದೇಶಿ ಯಾತ್ರಿಕರು ಭಾರತಕ್ಕೆ ಬರುತ್ತಾರೆ ಎಂದಿಟ್ಟುಕೊಳ್ಳಿ, ಅವರಿಗೆ ನಮ್ಮ ಭಾಷೆ ಬರುವುದಿಲ್ಲ ಹಾಗೆಯೇ ನಮಗೆ ಅವರ ಭಾಷೆ ಅರ್ಥವಾಗುವುದಿಲ್ಲ, ಇಂತಹ ಸನ್ನಿವೇಶದಲ್ಲಿ ವಿದೇಶಿಗರು ನಮ್ಮ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವಾಗ ಇಲ್ಲಿನ ಜನರನ್ನು ಏನೆಂದು ಕರೆಯಬೇಕೆಂದು ತಿಳಿಯದೇ ಗಿಲ್-ಗಿಲ್ ಎಂದು ನಾಮಕರಣ ಮಾಡಿ ಇಲ್ಲಿ ವಾಸಿಸುವ ಎಲ್ಲರನ್ನೂ ಗಿಲ್-ಗಿಲ್‌ಗಳು ಎಂದು ಕರೆದರು ಅಂತಿಟ್ಟುಕೊಳ್ಳಿ. ಅವರು ತಮ್ಮ ದೇಶಗಳಿಗೆ ಹಿಂದಿರುಗಿದ ಅಥವಾ ನಾಮಕರಣಗೊಳಿಸಿದ ೨೦೦ ವರ್ಷಗಳ ತರುವಾಯ ಭಾರತದಲ್ಲಿ ಯಾವುದೋ ಒಂದು ಸಂಘ ಅಥವಾ ಗುಂಪು ಹುಟ್ಟುತ್ತದೆ ಮತ್ತು ಅದರ ಮೂಲ ಉದ್ದೇಶ "ಎಲ್ಲಾ ಗಿಲ್-ಗಿಲ್‌ಗಳನ್ನು ಒಂದಾಗಿಸಿ ಅಖಂಡ ಗಿಲ್-ಗಿಲ್‌ಗಳ ದೇಶವನ್ನು ನಿರ್ಮಾಣ ಮಾಡುವುದೇ ಆಗಿರುತ್ತದೆ" ಇದು ಸಾಧ್ಯವೇ ಎಂಬುದು ನನ್ನ ಮೂಲಭೂತ ಪ್ರಶ್ನೆಯಾಗಿದೆ.

ತಾನು ಇಂತಹ ಉದ್ಯೋಗ ನಿರ್ವಹಿಸುತ್ತಿರುವವನು ಎಂದೆಲ್ಲಾ ಹೇಳಬಹುದು ಆದರೆ ನಾನೊಬ್ಬ ಹಿಂದೂ ಎಂದು ಹಿಂದೆ ಮುಂದೆಯೂ ಆತ ಹೇಳುವುದಿಲ್ಲ, ಕಾರಣ ಹಿಂದೂ ಎಂಬುದು ಆತನ ಅನುಭವಾತ್ಮಕ ಸಂಗತಿಯೇ ಆಗಿರುವುದಿಲ್ಲ, ಬದಲಿಗೆ ಆತನ ಹೆಸರು, ಕುಲ, ಪಂಗಡ, ಇತ್ಯಾದಿಗಳು ಅವನ ಅನುಭವಕ್ಕೆ ನಿಲುಕುತ್ತಿರುತ್ತವೆ. ಪ್ರಿಯ ಓದುಗರೇ ನೀವೇ ಸ್ವಲ್ಪ ಯೋಚಿಸಿ ನಿಮಗೆಂದಾದರೂ ಹಿಂದೂ ಎಂಬ ಭಾವನೆ ಮೂಡಿದೆಯೇ ಎಂದು?

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಯಾರಾದರೂ ನಮ್ಮ ಹೆಸರನ್ನು ಕರೆದರೆ ಆ ಹೆಸರು ನಮ್ಮದೆಂಬ ಅನುಭವವಾಗುತ್ತದೆ, ಅಂತೆಯೇ ನಾವು ಪಡೆದ ಶಿಕ್ಷಣದ ಆಧಾರದ ಮೇಲೆ ನಮ್ಮನ್ನು ಗುರುತಿಸಿದರೆ ಆ ಶಿಕ್ಷಣದ ಅನುಭವ ನಮಗಿರುತ್ತದೆ, ಕೆಲವೊಮ್ಮೆ ಜಾತಿ ನಮ್ಮ ದೈನಂದಿನ ಜೀವನದಲ್ಲಿ ಅನುಭವಕ್ಕೆ ಬಾರದಿದ್ದರೂ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ (ಅಂದರೆ ವಿವಾಹ, ಜಾತಿ ಸಂಘಟನೆಗಳ ಕಾರ್ಯಕ್ರಮಗಳು, ಇತ್ಯಾದಿಗಳಲ್ಲಿ) ತಾನು ಇಂತಹ ಜಾತಿಯವನು ಎಂಬುದು ನಮ್ಮ ಅನುಭವಕ್ಕೆ ನಿಲುಕುತ್ತದೆ, ಆದರೆ ಹಿಂದೂ ಎಂಬುದು ಯಾವ ಸಂದರ್ಭದಲ್ಲಿ ನಮ್ಮ ಅನುಭವಕ್ಕೆ ಬರುತ್ತದೆ ಎಂಬುದೇ ಪ್ರಶ್ನಾರ್ಹ ಸಂಗತಿಯಾಗಿದೆ. ಶಾಲೆಗಳಿಗೆ ಸೇರಿಸುವ ಅಥವಾ ಸೇರುವ ಸಂದರ್ಭದಲ್ಲಿ ಶಾಲಾ ಅರ್ಜಿಗಳಲ್ಲಿ ಮಾತ್ರ ರಿಲಿಜನ್‌ನ ಮುಂದೆ ಹಿಂದೂ ಎಂದು ಬರೆಯುತ್ತೇವೆ, ಆದರೆ ಅದರ ಅರ್ಥವೂ ನಮಗೆ ತಿಳಿದಿರುವುದಿಲ್ಲ, ಅರ್ಜಿಯಲ್ಲಿ ರಿಲಿಜಿಯನ್ ಎಂಬ ಕಾಲಂ ಇರದಿದ್ದರೂ ನಾವು ತಲೆಕೆಡಿಸಿಕೊಳ್ಳುವುದಿಲ್ಲ.

೨. ಇನ್ನೂ ಹಿಂದೂಯಿಸಂ ವಿಷಯಕ್ಕೆ ಬರುವಾ, ಹಿಂದೂ ಎಂಬುದೇ ನಮ್ಮ ಅನುಭವಾತ್ಮಕ ಸಂಗತಿ ಅಲ್ಲದ ಮೇಲೆ ಹಿಂದೂಯಿಸಂ ನಮ್ಮ ರಿಲಿಜಯನ್ ಆಗಿರಲು ಸಾಧ್ಯವೇ? ಹಾಗಾದರೆ ಹಿಂದೂಯಿಸಂ ನಮ್ಮ ರಿಲಿಜನ್ ಅಲ್ಲವಾದರೆ ಬೇರೆ ಯಾವುದಾದರೂ ರಿಲಿಜನ್ ಇದೆಯೇ? ಸದ್ಯಕ್ಕೆ ದೊರೆತಿರುವ ಮಾಹಿತಿಯ ಪ್ರಕಾರ ನಮಗೆ ರಿಲಿಜನ್ನೂ ಇಲ್ಲ, ಹಿಂದೂಯಿಸಂ ರಿಲಿಜನ್ನೂ ಅಲ್ಲ. ಆದರೆ ಈ ಹಿಂದೂಯಿಸಂ ಭಾರತದಲ್ಲಿ ರಿಲಿಜನ್ ಎಂದು ಹೇಗೆ ಗುರುತಿಸಲ್ಪಟ್ಟಿತು ಮತ್ತು ಯಾರಿಂದ ಗುರುತಿಸಲ್ಪಟ್ಟಿತು ಎಂಬುದು ಅತ್ಯಂತ ಪ್ರಮುಖವಾದ ವಿಚಾರವಾಗಿದೆ.

ಭಾರತದಲ್ಲಿರುವ ಯಾರೊಬ್ಬರಿಗೂ ತಿಳಿಯದ ರಿಲಿಜನ್ ಮೊದಲು ಕಂಡಿದ್ದು ಪಾಶ್ಚಾತ್ಯರು ಹಾಗು ಕ್ರೈಸ್ತ ಮಿಷನರಿಗಳೇ ಆಗಿದ್ದಾರೆ. ಹಾಗೆ ಅವರು ಭಾರತದಲ್ಲಿ ರಿಲಿಜನ್‌ನ್ನು ಕಾಣಲು ಎರಡು ಪ್ರಮುಖವಾದ ಕಾರಣಗಳೂ ಇದ್ದವು, ಅವುಗಳೆಂದರೆ,

ಅ) ಪಾಶ್ಚಾತ್ಯರ ಸಾಂಸ್ಕೃತಿಕ ಹಿನ್ನೆಲೆ

ಆ) ಕ್ರೈಸ್ತ ಮಿಷನರಿಗಳ ಮತ ಪ್ರಚಾರ

ಅ) ಪಾಶ್ಚಾತ್ಯರು ಭಾರತಕ್ಕೆ ವಿವಿಧ ಉದ್ದೇಶಗಳಿಗಾಗಿ ಶತಮಾನಗಳ ಹಿಂದಿನಿಂದಲೂ ಬರುತ್ತಿದ್ದರು, ಹಾಗೆ ಬಂದವರು ಈ ಸಮಾಜವನ್ನು ಅರ್ಥಮಾಡಿಕೊಳ್ಳಲು ಇಲ್ಲಿನ ರಿಲಿಜನ್ನಿನ ಶೋಧದಲ್ಲಿ ತೊಡಗಿದರು. ಅವರು ಈ ರೀತಿ ಶೋಧದಲ್ಲಿ ತೊಡಗಲು ಕಾರಣ ಅವರ ಸಾಂಸ್ಕೃತಿಕ ಹಿನ್ನೆಲೆಯೇ ಆಗಿತ್ತು. ಅವರು ಕ್ರಿಶ್ಚಿಯಾನಿಟಿ ಎಂಬ ರಿಲಿಜನ್‌ನ್ನು ಹೊಂದಿದ್ದರು. ಹಾಗೆಯೇ ಪ್ರಪಂಚದ ಎಲ್ಲಾ ಸಂಸ್ಕೃತಿಗಳಿಗೂ ಒಂದು ರಿಲಿಜನ್ ಇದ್ದಿರಲೇಬೇಕು ಎಂಬ ಧೃಢ ನಂಬಿಕೆಯನ್ನು ಹೊಂದಿದ್ದರು. (S.N. Balagangadhara, The Heathen in His Blindness- p.2) ರಿಲಿಜನ್ ಇರದ ಸಂಸ್ಕೃತಿ ಇರಬಹುದೆಂಬ ಕಲ್ಪನೆಯನ್ನೂ ಸಹ ಅವರಿಂದ ಮಾಡಲು ಸಾಧ್ಯವಿರಲಿಲ್ಲ, ಈ ರೀತಿಯ ಒಂದು ರಿಲಿಜಿಯಸ್ ಹಿನ್ನೆಲೆಯಿಂದ ಬಂದ ಪಾಶ್ಚಾತ್ಯರು ರಿಲಿಜನ್‌ನನ್ನೆ ಹುಡುಕುವ ಪ್ರಯತ್ನದಲ್ಲೇ ತಮ್ಮನ್ನು ತೊಡಗಿಸಿಕೊಂಡರು. ಇದನ್ನು ಒಂದು ಉದಾಹರಣೆಯ ಮೂಲಕ ಇನ್ನೂ ಸರಳವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಒಬ್ಬ ಮರಳುಗಾಡಿನಲ್ಲಿ ವಾಸಿಸುವ ವ್ಯಕ್ತಿ, ಮರಳುಗಾಡನ್ನು ಬಿಟ್ಟು ಬೇರಾವ ಪ್ರದೇಶವನ್ನು ಕಂಡಿರದವನು ಮತ್ತು ಮರಳುಗಾಡು ಇರದಿರುವ ಪ್ರದೇಶ ಇರಬಹುದೆಂಬುದನ್ನೂ ಆಲೋಚಿಸಲಾಗದವನು ಎಂದು ಕಲ್ಪಿಸಿಕೊಳ್ಳಿ, ಒಮ್ಮೆ ಆತ ಯಾವುದೋ ಕಾರಣಕ್ಕಾಗಿ ಬೇರೆ ಪ್ರದೇಶಕ್ಕೆ ಪ್ರಯಾಣಿಸುವ ಸಂದರ್ಭ ಬಂದೊದಗಿತೆಂದು ಇಟ್ಟುಕೊಳ್ಳಿ, ಆತ ಭೇಟಿ ಮಾಡಿದ ಪ್ರದೇಶ ಆತ ಜೀವಿಸುತ್ತಿದ್ದ ಮರಳುಗಾಡು ಪ್ರದೇಶಕ್ಕಿಂತ ತೀರಾ ವಿಭಿನ್ನವಾಗಿದ್ದಿರಬಹುದು.

ಅಂದರೆ ಮಲೆನಾಡೇ ಆಗಿರಬಹುದು, ಆಗ ಆತನಿಗೆ ಮಲೆನಾಡನ್ನು ನೋಡಿ ಏನನ್ನಿಸಬಹುದು. ಎಂಬುದು ಆ ಪ್ರದೇಶವನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಮುಖವಾಗಿರುತ್ತದೆ, ತಕ್ಷಣದಲ್ಲಿ ಆ ವ್ಯಕ್ತಿಗೆ ಹಂತ ಹಂತವಾಗಿ ಹೀಗೆ ಅನ್ನಿಸಬಹುದು, ಮೊದಲ ಹಂತದಲ್ಲಿ ಈ ಪ್ರದೇಶ ಮರಳುಗಾಡಿನ ವ್ಯತ್ಯಸ್ಥ ರೂಪವಾಗಿರಬೇಕು ಅಥವಾ ಮರಳುಗಾಡು ಆಗುವ ಮೊದಲ ಹಂತದಲ್ಲಿರಬೇಕು ಅಂದರೆ ಬಾಲ್ಯಾವಸ್ಥೆಯ ಪ್ರದೇಶವಿರಬಹುದು ಎಂದೆನಿಸಬಹುದು ಆದ ಕಾರಣ ಎರಡನೇ ಹಂತದಲ್ಲಿ ಆತ ಅಲ್ಲಲ್ಲಿ ಮರಳನ್ನು ಹುಡುಕುವ ಪ್ರಯತ್ನವನ್ನೂ ಮಾಡಬಹುದು, ಆದರೆ ಆತನ ಸಮಸ್ಯೆ ಎಂದರೆ ಮರಳೇ ಇಲ್ಲದ ಪ್ರದೇಶಗಳೂ ಇರಲು ಸಾಧ್ಯವಿಲ್ಲ ಆದ್ದರಿಂದ ಇಲ್ಲಿ ಮರಳಿನಿಂದ ಆವೃತವಾದ ಪ್ರದೇಶ ಇದ್ದಿರಲೇಬೇಕು, ಇದಕ್ಕೆ ಕಾರಣ ಎಲ್ಲಾ ಪ್ರದೇಶಗಳು ಮರಳುಗಾಡಿನಿಂದ ಕೂಡಿರುತ್ತವೆ ಎಂಬ ಅವನ ಪೂರ್ವಾಗ್ರಹ ಯೋಚನೆಯೇ ಆಗಿರುತ್ತದೆ. ಈ ನಿಟ್ಟಿನಲ್ಲಿ ತನ್ನ ಯೋಚನಾಲಹರಿಯಿಂದ ಆ ಪ್ರದೇಶವನ್ನು ತಪ್ಪಾಗಿ ಗ್ರಹಿಸಿ, ಅರ್ಥೈಸಿಕೊಂಡು ತನ್ನ ಅನುಭವವನ್ನೇ ಇತರರಿಗೂ ಸತ್ಯವೆಂಬಂತೆ ಆತ ಮನದಟ್ಟು ಮಾಡಬಹುದು.

ಈ ರೀತಿಯ ಸನ್ನಿವೇಶಗಳೇ ಪಾಶ್ಚಾತ್ಯರಿಗೆ ಉಂಟಾಗಿದ್ದವು, ಅವರ ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೇ ಭಾರತದಲ್ಲಿ ರಿಲಿಜನ್ನಿನ ಪ್ರಮುಖ ಅಂಶಗಳಾದ ಪವಿತ್ರ ಗ್ರಂಥಗಳು, ಪ್ರೀಸ್ಟ್‌ಗಳು, ಧಾರ್ಮಿಕ ಸಂಸ್ಥೆಗಳು ಹಾಗು ಪ್ರವಾದಿ ಇತ್ಯಾದಿಗಳನ್ನು ಹುಡುಕಲು ಪ್ರಾರಂಭಿಸಿದರು. ಈ ಹಂತದಲ್ಲಿ ಅವರಿಗೆ ಎದುರಾದ ಪ್ರಮುಖ ತೊಡಕುಗಳೆಂದರೆ ಅವರ ನಿರೀಕ್ಷೆಯ ಫಲಗಳು ದೊರೆಯದಿದ್ದುದು, ಆದರೆ ಅವರು ಉಪಯೋಗಿಸಿದ ಚತುರತೆ ಎಂದರೆ ಇಲ್ಲಿರುವ ವಸ್ತುಗಳನ್ನು ಅವರ ಗ್ರಹಿಕೆಗನುಸಾರವಾಗಿ ಬದಲಾಯಿಸುತ್ತಾ ಅವರ ಸಾಂಸ್ಕೃತಿಕ ಚೌಕಟ್ಟಿನ ಒಳಗಡೆಯೇ (ರಿಲಿಜಿಯಸ್ ಚೌಕಟ್ಟು) ಸತ್ಯವೆಂಬಂತೆ ನಿರೂಪಿಸುತ್ತಾ ಬಂದರು. ಇದು ಅವರ ಯೋಚನಾ ಲಹರಿಯ ಮಿತಿಯೂ ಆಗಿತ್ತು. ಹಾಗಾದರೆ ಆ ಮಿತಿ ಯಾವ ತೆರನದ್ದಾಗಿತ್ತು? ಪ್ರತಿಯೊಂದು ಸಂಸ್ಕೃತಿಯ ಜನರು ತಮ್ಮದೇ ಆದ ಬದುಕುವ ರೀತಿಯನ್ನು ಹೊಂದಿರುತ್ತಾರೆ. ಅಂತೆಯೇ ಪಾಶ್ಚಾತ್ಯರು ರಿಲಿಜನ್ ಆಧಾರದ ಮೇಲೆ ತಮ್ಮ ಜೀವನವನ್ನು ರೂಪಿಸಿಕೊಂಡರೆ, ಪೌರಾತ್ಯರು ತಮ್ಮ ಸಂಪ್ರದಾಯಗಳ ಆಧಾರದ ಮೇಲೆ ಬದುಕುತ್ತಿದ್ದಾರೆ, ಹೀಗೆ ಬೇರೆ ಬೇರೆ ಹಿನ್ನೆಲೆಯ ಸಂಸ್ಕೃತಿಯಲ್ಲಿ ಬದುಕುವ ಜನರಿಗೆ ಇತರೆ ಸಂಸ್ಕೃತಿಯ ಜನರನ್ನು ನೋಡುವಾಗ, ಅಥವಾ ಅಭ್ಯಸಿಸುವಾಗ ತಮ್ಮ ಸಂಸ್ಕೃತಿಯ ನೆಲೆಗಟ್ಟಿನಲ್ಲಿಯೇ ನೋಡುವಂತೆ ಅವರು ಹೊಂದಿರುವ ಜ್ಞಾನ ಅವರನ್ನು ಪ್ರೇರೇಪಿಸುತ್ತದೆ ಮತ್ತು ಅವರಿಗೆ ತಿಳಿಯದೆ ನಿರ್ದಿಷ್ಟ ಚೌಕಟ್ಟನ್ನು ಅಥವಾ ಜ್ಞಾನ ಮಿತಿಯನ್ನು ಅವ

ಒಬ್ಬ ಮರಳುಗಾಡಿನಲ್ಲಿ ವಾಸಿಸುವ ವ್ಯಕ್ತಿ, ಮರಳುಗಾಡನ್ನು ಬಿಟ್ಟು ಬೇರಾವ ಪ್ರದೇಶವನ್ನು ಕಂಡಿರದವನು ಮತ್ತು ಮರಳುಗಾಡು ಇರದಿರುವ ಪ್ರದೇಶ ಇರಬಹುದೆಂಬುದನ್ನೂ ಆಲೋಚಿಸಲಾಗದವನು ಎಂದು ಕಲ್ಪಿಸಿಕೊಳ್ಳಿ, ಒಮ್ಮೆ ಆತ ಯಾವುದೋ ಕಾರಣಕ್ಕಾಗಿ ಬೇರೆ ಪ್ರದೇಶಕ್ಕೆ ಪ್ರಯಾಣಿಸುವ ಸಂದರ್ಭ ಬಂದೊದಗಿತೆಂದು ಇಟ್ಟುಕೊಳ್ಳಿ, ಆತ ಭೇಟಿ ಮಾಡಿದ ಪ್ರದೇಶ ಆತ ಜೀವಿಸುತ್ತಿದ್ದ ಮರಳುಗಾಡು ಪ್ರದೇಶಕ್ಕಿಂತ ತೀರಾ ವಿಭಿನ್ನವಾಗಿದ್ದಿರಬಹುದು. ಅಂದರೆ ಮಲೆನಾಡೇ ಆಗಿರಬಹುದು, ಆಗ ಆತ ನಿಗೆ ಮಲೆನಾಡನ್ನು ನೋಡಿ ಏನನ್ನಿಸಬಹುದು. ಎಂಬುದು ಆ ಪ್ರದೇಶವನ್ನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಮುಖವಾಗಿರುತ್ತದೆ, ತಕ್ಷಣದಲ್ಲಿ ಆ ವ್ಯಕ್ತಿಗೆ ಹಂತ ಹಂತವಾಗಿ ಹೀಗೆ ಅನ್ನಿಸಬಹುದು, ಮೊದಲ ಹಂತದಲ್ಲಿ ಈ ಪ್ರದೇಶ ಮರಳುಗಾಡಿನ ವ್ಯತ್ಯಸ್ಥ ರೂಪವಾಗಿರಬೇಕು ಅಥವಾ ಮರಳುಗಾಡು ಆಗುವ ಮೊದಲ ಹಂತದಲ್ಲಿರಬೇಕು ಅಂದರೆ ಬಾಲ್ಯಾವಸ್ಥೆಯ ಪ್ರದೇಶವಿರಬಹುದು ಎಂದೆನಿಸಬಹುದು ಆದ ಕಾರಣ ಎರಡನೇ ಹಂತದಲ್ಲಿ ಆತ ಅಲ್ಲಲ್ಲಿ ಮರಳನ್ನು ಹುಡುಕುವ ಪ್ರಯತ್ನವನ್ನೂ ಮಾಡಬಹುದು, ಆದರೆ ಆತನ ಸಮಸ್ಯೆ ಎಂದರೆ ಮರಳೇ ಇಲ್ಲದ ಪ್ರದೇಶಗಳೂ ಇರಲು ಸಾಧ್ಯವಿಲ್ಲ ಆದ್ದರಿಂದ ಇಲ್ಲಿ ಮರಳಿನಿಂದ ಆವೃತವಾದ ಪ್ರದೇಶ ಇದ್ದಿರಲೇಬೇಕು, ಇದಕ್ಕೆ ಕಾರಣ ಎಲ್ಲಾ ಪ್ರದೇಶಗಳು ಮರಳುಗಾಡಿನಿಂದ ಕೂಡಿರುತ್ತವೆ ಎಂಬ ಅವನ ಪೂರ್ವಾಗ್ರಹ ಯೋಚನೆಯೇ ಆಗಿರುತ್ತದೆ.

ರವರ ಸಂಸ್ಕೃತಿ ಅವರಿಗೆ ಹಾಕುತ್ತದೆ. ಈ ಸಿಟ್ಟಿನಲ್ಲಿ ಪಾಶ್ಚಾತ್ಯರು ರಿಲಿಜಿಯಸ್ ಸಂಸ್ಕೃತಿಯಿಂದ ಬಂದವರಾದ್ದರಿಂದ ಭಾರತದಲ್ಲಿ ಮೊದಲು ರಿಲಿಜನ್‌ನನ್ನೆ ಹುಡುಕುವ ಪ್ರಯತ್ನ ಮಾಡಿದರು. ಅದರ ಪರಿಣಾಮವೇ ಹಿಂದೂಯಿಸಂ ಒಂದು ರಿಲಿಜನ್ ಆಗಿ ಗೋಚರವಾಗಿದ್ದು.

ಇನ್ನೂ ಹಿಂದೂಯಿಸಂ ಏಕೆ ರಿಲಿಜನ್ ಆಗಿದ್ದಿರಲು/ಆಗಲು ಸಾಧ್ಯವಿಲ್ಲವೆಂಬುದನ್ನು ರಿಲಿಜನ್ನಿನ ಮೇಲೆ ಮಹತ್ವದ ಸಿದ್ಧಾಂತವನ್ನು ಕಟ್ಟುತ್ತಿರುವ ಪ್ರೊ. ಬಾಲಗಂಗಾಧರರವರ ವಾದ ಸರಣಿಯನ್ನು ಗಮನಿಸಿದರೆ ತಿಳಿಯುತ್ತದೆ. ಅವರ ಪ್ರಕಾರ ತರ್ಕಬದ್ಧವಾಗಿ ನೋಡಿದರೆ ಕ್ರಿಶ್ಚಿಯಾನಿಟಿ, ಇಸ್ಲಾಂ ಇವುಗಳು ರಿಲಿಜನ್ ಆದರೆ ಹಿಂದೂಯಿಸಂ ರಿಲಿಜನ್ ಆಗಿರಲು ಸಾಧ್ಯವಿಲ್ಲ, ಅಂತೆಯೇ ಹಿಂದೂಯಿಸಂ ರಿಲಿಜನ್ ಆದರೆ ಕ್ರಿಶ್ಚಿಯಾನಿಟಿ, ಇಸ್ಲಾಂ, ಜೂಡಾಯಿಸಂಗಳು ರಿಲಿಜನ್ ಆಗಲು ಸಾಧ್ಯವಿಲ್ಲ, ಕಾರಣ ರಿಲಿಜನ್ ಅಸ್ತಿತ್ವಕ್ಕೆ ಅಗತ್ಯವಾದ ಅಂಶಗಳಾದ ಏಕದೇವ ಕಲ್ಪನೆ, ಪ್ರವಾದಿ, ದೇವೋಪಾಸನೆಗೆ ಒಂದು ಸಂಸ್ಥೆ ಹಾಗು ಪವಿತ್ರ ಗ್ರಂಥ, ಇವುಗಳನ್ನು ಕ್ರಿಶ್ಚಿಯಾನಿಟಿ, ಇಸ್ಲಾಂಗಳಲ್ಲಿ ಗುರುತಿಸಬಹುದು ಆದರೆ ಹಿಂದೂಯಿಸಂನಲ್ಲಿ ಸಾಧ್ಯವಿಲ್ಲ. ಹಾಗೆಯೇ ಹಿಂದೂಯಿಸಂನಲ್ಲಿರುವ ಅಂಶಗಳು ರಿಲಿಜನ್ನಿನ ಅಸ್ತಿತ್ವಕ್ಕೆ ಅಗತ್ಯ ಅಂಶಗಳೆಂದಾದರೆ ಕ್ರಿಶ್ಚಿಯಾನಿಟಿ, ಇಸ್ಲಾಂಗಳು ರಿಲಿಜನ್‌ಗಳಾಗಲು ಸಾಧ್ಯವಿಲ್ಲ.

ಆದರೆ ಭಗವದ್ಗೀತೆ, ಮಹಾಕಾವ್ಯಗಳು, ವೇದಗಳು, ಆಗಮಗಳು ಪವಿತ್ರ ಗ್ರಂಥಗಳೆಂದು ಕೆಲವೊಬ್ಬರ ಪ್ರಭಾವದಿಂದ ನಿಮಗನಿಸಿರಬಹುದು, ಸತ್ಯಾಂಶವೆಂದರೆ ಇವೆಲ್ಲಾ ಪವಿತ್ರಗ್ರಂಥಗಳಿರಬಹುದೆಂದು ತೋರಿಸಿಕೊಟ್ಟವರೇ ಪಾಶ್ಚಾತ್ಯರಾಗಿದ್ದಾರೆ. ಹಾಗಾದರೆ ಪಾಶ್ಚಾತ್ಯರಿಗೆ ಹೇಗೆ ತಿಳಿಯಿತು ಎಂಬ ಪ್ರಶ್ನೆ ಉದ್ಭವಿಸದೇ ಇರಲಾರದು. ಅವರಿಗೇನು ದೇವರೇ ಬಂದು ಹೇಳಿದನೇ? ಅಥವಾ ಭೂಮಿ ಅಗೆದಾಗ ದೊರಕಿತೇ? ಅಥವಾ ಅವರೇ ತಮ್ಮ ಬುದ್ಧಿ ಶಕ್ತಿಯಿಂದ ತಿಳಿದುಕೊಂಡರೇ? ಉತ್ತರ ಇವ್ಯಾವುದೂ ಅಲ್ಲ..... ಭಾರತದ ನಿವಾಸಿಗಳೇ ಅವರಿಗೆ ಮಾಹಿತಿಯನ್ನು ನೀಡಿದ್ದರು. ಹಾಗಾದರೆ ಭಾರತೀಯರೇ ನೀಡಿದ್ದರೆ, ಅದು ಅವರ ಧರ್ಮಗ್ರಂಥವಾಗಿದ್ದಿರಲೇಬೇಕು ಎಂಬ ಸಹಮತವೂ ನಿಮ್ಮಲ್ಲಿ ಮೂಡಬಹುದು, ಈ ಸನ್ನಿವೇಶವನ್ನು ಇನ್ನೊಂದು ಉದಾಹರಣೆಯ ಮೂಲಕ ಅರ್ಥೈಸಲು ಪ್ರಯತ್ನಿಸುತ್ತೇನೆ.

ನಿಮ್ಮ ಮನೆಗೆ ಕ್ರಿಶ್ಚಿಯನ್ ವಿದೇಶಿಯೊಬ್ಬ ಬರುತ್ತಾನೆಂದಿಟ್ಟುಕೊಳ್ಳಿ, ಆತ ಮೂಲತಃ ಕ್ರಿಶ್ಚಿಯಾನಿಟಿಯವನಾದ್ದರಿಂದ ಆಚಾರ-ವಿಚಾರ, ನೀತಿ-ನಿಯಮಗಳನ್ನು ನಿರ್ದೇಶಿಸುವ ಪವಿತ್ರಗ್ರಂಥಗಳು ಎಲ್ಲರಿಗೂ ಇರುತ್ತವೆ ಎಂಬ ನಂಬಿಕೆಯವನಾಗಿರುತ್ತಾನೆ, ಆತ ನಿಮ್ಮಲ್ಲಿಗೆ ಬಂದು ನಿಮ್ಮ ಮನೆಯಲ್ಲಿ ಎತ್ತರವಾಗಿ ಜೋಡಿಸಿಟ್ಟ 'ಧರ್ಮಸಿಂಧು' ಅಥವಾ 'ಗುರುಚರಿತ್ರೆ' ಪುಸ್ತಕಗಳನ್ನು ನೋಡಿ, ಇವು ಯಾವ ಪುಸ್ತಕಗಳು ಮತ್ತು ಇದರಲ್ಲೇನಿದೆ ಎಂದು ನಿಮಗೆ ಕೇಳಿದರೆ ಸಾಮಾನ್ಯವಾಗಿ ನೀವು ಅದರಲ್ಲಿ ಒಳ್ಳೊಳ್ಳೆಯ ಕಥೆಗಳಿವೆ ಅದರಲ್ಲೂ ಹೆಚ್ಚಾಗಿ ನೀತಿ ಬೋಧನೆಯ ಕಥೆಗಳಿವೆ. ಮತ್ತು ಪೂಜೆಗಳನ್ನು ಮಾಡುವ ಸಂದರ್ಭಗಳಲ್ಲಿ ಯಾವ ಯಾವ ನಿಯಮಗಳನ್ನು ಪಾಲಿಸಬೇಕು ಎಂದು ಬರೆಯಲಾಗಿದೆ, ಎಂಬಿತ್ಯಾದಿಯಾಗಿ ನೀವು ಉತ್ತರಿಸಬಹುದು, ಆದರೆ ನೀವು ಸ್ವಲ್ಪ ಇಂಗ್ಲಿಷ್ ಮಾತನಾಡುವ ಭರಾಟೆಯಲ್ಲಿ Morality, ethics, the way of worshipping or the way of offering puja, ಇವೆಲ್ಲಾ ಇದೆ ಎಂದು ಹೇಳಿದೊಡನೆ, ತಕ್ಷಣದಲ್ಲಿ ಆತನಿಗೆ ಇಷ್ಟೆಲ್ಲಾ ಇವೆಯೆಂದರೆ ಇದೊಂದು ಜನರ ಕಟ್ಟಚಟುವಟಿಕೆಗಳನ್ನು ನಿಯಂತ್ರಿಸುವ ಅಮೂಲ್ಯವಾದ ಪುಸ್ತಕವಿದ್ದಿರಬಹುದು. ಅಂದರೆ ಇವರನ್ನು ನಿರ್ದೇಶಿಸುವ ಪವಿತ್ರ ಗ್ರಂಥವೇ ಇರಬಹುದು. ಆದ್ದರಿಂದ ಇದು ಪವಿತ್ರಗ್ರಂಥದ ಸರಣಿಮಾಲೆ ಎಂದೆನಿಸದೇ ಇರಲಾರದು. ನೀವು ನೀಡಿದ ಮಾಹಿತಿ ಅವನ ಸತ್ಯಕ್ಕೆ ದೂರವಾಗಿದ್ದರೂ ಅವನ ಗ್ರಹಿಕೆಗೆ ಹತ್ತಿರವಾಗಿರುತ್ತದೆ.

ಆದಕಾರಣ ಅವುಗಳು ಪವಿತ್ರಗ್ರಂಥಗಳು ಎಂಬ ನಿರ್ಧಾರಕ್ಕೆ ಆತ ಬರಬಹುದು, ಇಂತಹ ಸನ್ನಿವೇಶವೇ ಪಾಶ್ಚಾತ್ಯರಿಗೆ ಬ್ರಾಹ್ಮಣರು ನೀಡಿದ ಮಾಹಿತಿಯಿಂದ ಆಗಿರುವುದು, (Kevin Hobson- The Indian Caste System and the British) ಇದೇ ರೀತಿಯ ತಪ್ಪು ಗ್ರಹಿಕೆಯಿಂದಾಗಿ ಅನೇಕ ಪುಸ್ತಕಗಳು ಹಿಂದೂಯಿಸಂನ ಪವಿತ್ರ ಧರ್ಮಗ್ರಂಥಗಳಾದವು.

ಆ) ಭಾರತಕ್ಕೆ ಆಗಮಿಸಿದ ಕ್ರಿಶ್ಚಿಯನ್ ಮಿಷನರಿಗಳ ಮೂಲ ಉದ್ದೇಶ ಕ್ರೈಸ್ತ ಮತವನ್ನು ಹರಡುವುದೇ ಆಗಿತ್ತು, ಹಿಂದೂಯಿಸಂ ರಿಲಿಜನ್ ಆಗಲಿಕ್ಕೂ ಮಿಷನರಿಗಳು ಮತಪ್ರಚಾರ ಮಾಡುವುದಕ್ಕೂ ಏನು ಸಂಬಂಧ ಎಂದೆನಿಸಬಹುದು, ಇವೆರಡಕ್ಕೂ ಒಂದು ರೀತಿಯ ನೇರವಾದ ಸಂಬಂಧವಿದೆ. ಭಾರತಕ್ಕೆ ಬಂದ ಕ್ರಿಶ್ಚಿಯನ್ ಮಿಷನರಿಗಳಿಗೆ ತಮ್ಮ ರಿಲಿಜಿಯನ್‌ನನ್ನು ಪ್ರಚಾರ ಮಾಡಿ ಭಾರತದ ನಿವಾಸಿಗಳನ್ನು ಮತಾಂತರ ಗೊಳಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ, ಆದ್ದರಿಂದ ಅವರು ಇಲ್ಲೊಂದು ತಪ್ಪಾದ ರಿಲಿಜನ್ ಇದೆ ಎಂದು ತೋರಿಸುವುದು ಅಗತ್ಯವಾಗಿತ್ತು ಆದ ಕಾರಣ ಭಾರತೀಯರಿಗೆ ಒಂದು ರಿಲಿಜಿಯನ್ ಇದೆ, ಅದು ತಪ್ಪಾದ ರಿಲಿಜಿಯನ್ ಆಗಿದ್ದು, ದೇವರ ಕೃಪೆ ಮತ್ತು ಮೋಕ್ಷ ಪಡೆಯಲು ಅದರಿಂದ ಸಾಧ್ಯವಿಲ್ಲ ಆದ್ದರಿಂದ ಎಲ್ಲರನ್ನೂ ಸರಿಯಾದ ರಿಲಿಜಿಯನ್‌ಡೆಗೆ ಒಯ್ಯಬೇಕು, ಹಾಗೆ ಕ್ರಿಶ್ಚಿಯನ್ನೇತರರನ್ನು ಮಾಡಬೇಕಾದರೆ ಕ್ರಿಶ್ಚಿಯಾನಿಟಿಗೆ ಮತಾಂತರಗೊಳಿಸುವುದೊಂದೇ ಮಾರ್ಗ ಎಂಬ ಪ್ರಣಾಳಿಕೆಯನ್ನು ಸಿದ್ಧಪಡಿಸಿಕೊಂಡರು, ಭಾರತೀಯರು ತಪ್ಪಾದ ರಿಲಿಜನ್ ಎಂದು ನಿರೂಪಿಸಲು ಭಾರತೀಯರು ಮರ, ಗಿಡ, ಭೂಮಿ ಮತ್ತು ದೇವರಿಗೆ ವಿರುದ್ಧವಾದ ಶಕ್ತಿಗಳಾದ ಭೂತ, ದೆವ್ವಗಳಿಗೆ ಪೂಜಿಸುತ್ತಾರೆ ಎಂಬಿತ್ಯಾದಿ ವಿಚಾರಗಳನ್ನು ಪ್ರಚಾರ ಮಾಡುತ್ತಾ ಬಂದರು. ಆದ್ದರಿಂದ ಅವರಿಗೆ ಹಿಂದೂಯಿಸಂನ್ನು ರಿಲಿಜನ್ ಎಂದು ಗುರುತಿಸುವ ಅಗತ್ಯತೆ ಹೆಚ್ಚಾಗಿತ್ತು.

ಹೀಗೆ ಹಿಂದೂಯಿಸಂ ಎಂಬ ರಿಲಿಜನ್ ಪಾಶ್ಚಾತ್ಯರ ಗ್ರಂಥಾಲಯಗಳಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಅದರ ಬಗ್ಗೆ ಸ್ವಲ್ಪವೂ ಆಲೋಚಿಸದೆ ಭಾರತದ ಬಹುತೇಕ ಜನಪ್ರಿಯ ಅಗ್ರಗಣ್ಯರು ತಮ್ಮ ರಿಲಿಜನ್ ಎಂಬಂತೆ ಒಪ್ಪಿಕೊಂಡರು, ಮತ್ತು ಎಲ್ಲಿ ಯಾವುದೇ ರೀತಿಯ ಸಾಮಾಜಿಕ ಸಮಸ್ಯೆಗಳುಂಟಾದರೂ ಅವುಗಳನ್ನು ಈ ಹಿಂದೂಯಿಸಂನ ಚೌಕಟ್ಟಿನ ಮೂಲಕ ನೋಡಲು ಪ್ರಾರಂಭಿಸಿದರು, ಇದರಿಂದ ಸಮಸ್ಯೆಗಳು ಇನ್ನೂ ಹೆಚ್ಚು ಉಲ್ಬಣವಾಗುತ್ತಿದ್ದವೇ ಹೊರತು ಪರಿಹಾರವಾಗುತ್ತಿರಲಿಲ್ಲ, ಕಾರಣ ಅವುಗಳ ಮೂಲ ಹಿಂದೂಯಿಸಂ ಎಂಬ ಬಲವಾದ ನಂಬುಗೆಯನ್ನು ಹೊಂದಿದ್ದರು. ನಾವುಗಳು ಈಗ ಹೊಸದೊಂದು ಚೌಕಟ್ಟಿನಡಿಯಲ್ಲಿ ಈ ರೀತಿಯ ವಾದಗಳನ್ನು ಗ್ರಹಿಸುವುದು ಸೂಕ್ತ. □

ದೇಸಿ ಅಂಗಡಿಯಲ್ಲಿ

ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ!!

ಪ್ರಕಾಶಕರು ನಮಗೆ ನೀಡುವ ಕಮಿಷನ್ನಿನಲ್ಲಿ, ಅಂಗಡಿಯ ನಿರ್ವಹಣೆಯ ಕನಿಷ್ಠ ಖರ್ಚನ್ನು ಕಳೆದು, ಮಿಕ್ಕಿದ್ದನ್ನು ನಿಮಗೇ ಬಿಟ್ಟುಕೊಡುತ್ತೇವೆ. ಕೊಂಡು ಓದುವವರಿಗೆ ಪ್ರೋತ್ಸಾಹ ನೀಡಬೇಕೆಂಬುದು ದೇಸಿ ಸಂಸ್ಥೆಯ ಉದ್ದೇಶ. ಕನ್ನಡ ಪುಸ್ತಕಗಳ ರಿಯಾಯಾತಿ ಮಾರಾಟದ ಈ ಯೋಜನೆಯು ದೇಸಿಯ ಎಲ್ಲಾ ಮಾರಾಟ ಮಳಿಗೆಗಳಲ್ಲೂ ಲಭ್ಯವಿರುತ್ತದೆ.

ಬನ್ನಿ ಕನ್ನಡ ಪುಸ್ತಕಗಳನ್ನು ಕೊಂಡು ಓದಿ!

ಪುಸ್ತಕ ಚಳವಳಿಯನ್ನು ಬೆಳೆಸಿ!

ದೇಸಿ, 27, ಪಟಾಲಮ್ಮ ಗುಡಿ ಬೀದಿ,
ಸೌತ್ ಎಂಡ್ ಸರ್ಕಲ್,
ಬಸವನಗುಡಿ, ಬೆಂಗಳೂರು-560004
ಫೋನ್ : 080 - 26576669

ನಮ್ಮೊಳಗೊಬ್ಬ ಚೋಮ್‌ಸ್ಕಿ ಇದ್ದಿದ್ದರೆ...

ಜಾಗತಿಕ ಸಂದರ್ಭದಲ್ಲಿ, ರಾಜಕೀಯ-ಆರ್ಥಿಕ ಪ್ರಾಬಲ್ಯ ಮತ್ತು ಪ್ರಭುತ್ವವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಳ್ಳಲು ಸತತ ಪ್ರಯತ್ನಿಸುವ ಅಮೆರಿಕದಂತಹ ದೇಶವನ್ನು ವಿಮರ್ಶಿಸುವ ಮತ್ತು ಅದರ ನಿಲುವುಗಳನ್ನು ಪ್ರತಿಭಟಿಸುವ ಎದೆಗಾರಿಕೆ ನೋಮ್ ಚೋಮ್‌ಸ್ಕಿಗಿದೆ. ಚೋಮ್‌ಸ್ಕಿಯು ಯಾವಾಗಲು ತನ್ನನ್ನು ತಾನು 'ಅನಾರ್ಕಿಸ್ಟ್' ಎಂದು ಗುರುತಿಸಿಕೊಳ್ಳುವನು. ಅರಾಜಕವಾದ ಎನ್ನುವುದು ಯಾವುದೆ ನಿಯಂತ್ರಣ ಅಧಿಕಾರ-ವರ್ಗ ಮತ್ತು ಶಕ್ತಿಯನ್ನು ತಿರಸ್ಕರಿಸುವುದು. ಇವನು ತನ್ನನ್ನು ಉದಾರ ಸಮಾಜವಾದಿಯೆಂದು ಗುರುತಿಸಿಕೊಂಡಿರುವನು. ಭಾಷೆ, ಚರಿತ್ರೆ, ತತ್ವಶಾಸ್ತ್ರ, ರಾಜಕೀಯ, ಯುದ್ಧನೀತಿ, ಅಂತರರಾಷ್ಟ್ರೀಯ ಸಂಬಂಧ, ಪ್ರಾಬಲ್ಯ, ಯಜಮಾನಿಕೆ, ಮಾನವ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತು ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುವ ದಿಸೆಯಲ್ಲಿ ಇವನ ಆಲೋಚನೆಗಳು ರೂಪಗೊಂಡಿರುವವು.

ಮೇಟಿ.ಮಲ್ಲಿಕಾರ್ಜುನ

ಇವತ್ತಿನ ರಾಜಕೀಯ-ಸಾಂಸ್ಕೃತಿಕ ವಿದ್ಯಾಮಾನಗಳನ್ನು ಗಮನಿಸಿದಾಗ ಪ್ರತಿಯೊಬ್ಬ ಸೂಕ್ಷ್ಮಮನಸ್ಥಿತಿಯ ವ್ಯಕ್ತಿಗೆ ಆಘಾತವಾಗದೆ ಇರಲಾರದು. ಸಾಂಸ್ಕೃತಿಕ-ರಾಜಕೀಯ ನಿಲುವುಗಳು, ನಡುವಳಿಕೆಗಳು, ತೀರ್ಮಾನಗಳು ಮತ್ತು ನಿರ್ಧಾರಗಳು ಎಲ್ಲವೂ ವೈಯಕ್ತಿಕ ರಾಜಕೀಯ ಹಿತಾಶಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಪ್ರಯೋಜನ ಪಡೆದುಕೊಳ್ಳುವವು. ಕೇವಲ ಅಧಿಕಾರಕ್ಕಾಗಿ ರಾಜಕೀಯ-ಸಾಂಸ್ಕೃತಿಕ ತೀರ್ಮಾನಗಳು ಜನಪರವಾಗಿರದೆ ಕೆಲವು ಪಟ್ಟಭದ್ರಹಿತಾಸಕ್ತ ಗುಂಪುಗಳ ಮತ್ತು ರಾಜಕಾರಣಿಗಳ ಪರವಾಗಿ ರೂಪಗೊಳ್ಳುವುದನ್ನು ಮನಗಂಡಾಗ ನಮ್ಮೊಳಗೊಬ್ಬ ಚೋಮ್‌ಸ್ಕಿ ಇದ್ದಿದ್ದರೆ... ಎನ್ನುವ ಹತಾಸೆ ಭಾವನೆ ಬರದೆ ಇರಲಾರದು. ಯಾಕಂದರೆ, ಚೋಮ್‌ಸ್ಕಿಯು ನಿರಂತರವಾಗಿ ಇಂತಹ ಎಲ್ಲ ರಾಜಕೀಯ-ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅಥವಾ ಪಲ್ಲಟಗಳನ್ನು ಕುರಿತು ವಸ್ತುನಿಷ್ಠ ಅಭಿಪ್ರಾಯಗಳನ್ನು ಮಂಡಿಸಿ ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದಾನೆ.

ಅಂದರೆ ಜಾಗತಿಕ ಸಂದರ್ಭದಲ್ಲಿ, ರಾಜಕೀಯ-ಆರ್ಥಿಕ ಪ್ರಾಬಲ್ಯ ಮತ್ತು ಪ್ರಭುತ್ವವನ್ನು ತನ್ನ ಕಪಿಮುಷ್ಠಿಯಲ್ಲಿಟ್ಟುಕೊಳ್ಳಲು ಸತತ ಪ್ರಯತ್ನಿಸುವ ಅಮೆರಿಕದಂತಹ ದೇಶವನ್ನು ವಿಮರ್ಶಿಸುವ ಮತ್ತು ಅದರ ನಿಲುವುಗಳನ್ನು ಪ್ರತಿಭಟಿಸುವ ಎದೆಗಾರಿಕೆ ನೋಮ್ ಚೋಮ್‌ಸ್ಕಿಗಿದೆ. ಚೋಮ್‌ಸ್ಕಿಯು ಯಾವಾಗಲು ತನ್ನನ್ನು ತಾನು 'ಅನಾರ್ಕಿಷ್ಟ' ಅಂದರೆ ಅರಾಜಕನೆಂದು ಗುರುತಿಸಿಕೊಳ್ಳುವನು. ಅರಾಜಕವಾದ ಎನ್ನುವುದು ಯಾವುದೆ ನಿಯಂತ್ರಣ ಅಧಿಕಾರ-ವರ್ಗ ಮತ್ತು ಶಕ್ತಿಯನ್ನು ತಿರಸ್ಕರಿಸುವುದು. ಅಂದರೆ ಇಂತಹ ವ್ಯವಸ್ಥೆಯನ್ನು ಧ್ವಂಸಗೊಳಿಸಿ ಹೊಸಮನ್ವಂತರದ ಹೊಸ ಭರವಸೆಗಳಿಗೆ ತುಡಿವ ಮನಸ್ಥಿತಿಯೆಂದು ಹೇಳಬಹುದು. ಹಾಗಾಗಿ ಇವನು ತನ್ನನ್ನು ಉದಾರ-ಸಮಾಜವಾದಿಯೆಂದು ಗುರುತಿಸಿಕೊಂಡಿರುವನು. ಭಾಷೆ, ಚರಿತ್ರೆ, ತತ್ವಶಾಸ್ತ್ರ, ರಾಜಕೀಯ, ಯುದ್ಧನೀತಿ, ಅಂತರರಾಷ್ಟ್ರಿಯ ಸಂಬಂಧ, ಪ್ರಾಬಲ್ಯ ಮತ್ತು ಯಜಮಾನ್ಯಿಕೆ ಹಾಗೂ ಮಾನವಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತು ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸುವ ದಿಸೆಯಲ್ಲಿ ಇವನ ಆಲೋಚನೆಗಳು ರೂಪಗೊಂಡಿರುವವು. ಅಂದರೆ, ಹೇಗೆ ಅಮೆರಿಕವು ತನ್ನ ಹಿತಾಶಕ್ತಿಯನ್ನು ಜಾಗತೀಕರಣದ ನೀತಿ, ತಂತ್ರ, ಹುನ್ನಾರ ಮತ್ತು ಆರ್ಥಿಕ ದಿಗ್ಬಂಧನವನ್ನು ಹೇರುವ ಗೊತ್ತುವಳಿಗಳ ಮುಖಾಂತರ ರೂಪಿಸುವುದು ಎನ್ನುವುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವವನು.

ಇಂತಹ ಜನವಿರೋಧಿ ಕಾರ್ಯಚಟವಟಿಕೆಗ್ಗಳನ್ನು ಪ್ರತಿಭಟಿಸುವ ಮತ್ತು ಪ್ರತಿರೋಧಿಸುವ ದಿಟ್ಟ ನಿಲುವುಗಳನ್ನು ಚೋಮ್‌ಸ್ಕಿಯು ರೂಢಿಸಿಕೊಂಡಿರುವನು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣಮಾಡುವ ಅಧಿಕಾರಸ್ಥವರ್ಗಗಳ ವಿರುದ್ಧ ಪ್ರತಿಭಟಿಸುವ ಕ್ರಮ ವಿಶಿಷ್ಟವಾದದ್ದು ಅಂದರೆ ಫ್ರಾನ್ಸ್‌ನ ರಾಬರ್ಟ್ ಫ್ಯೂರಿಸನ್‌ರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಚೋಮ್‌ಸ್ಕಿಯು ಕೈಗೊಂಡ ನಿಲುವುಗಳು ಚಾರಿತ್ರಿಕವಾದವು. ಈ ನಿಲುವುಗಳಿಂದ ಚೋಮ್‌ಸ್ಕಿಯ ವ್ಯಕ್ತಿತ್ವಕ್ಕೆ ದಕ್ಕೆ ಬಂತು ಆದಗ್ಯೂ He has right to say ಎನ್ನುವ ನಿಲುವು ಇವನದು.

ನೋಮ್ ಚೋಮ್‌ಸ್ಕಿಯು ಆಧುನಿಕಭಾಷಾತತ್ವಶಾಸ್ತ್ರ ಮತ್ತು ತತ್ವಶಾಸ್ತ್ರದಲ್ಲಿ ಪ್ರಭಾವಿ ಚಿಂತಕ. ಗೆಲಿಲಿಯೋ ನಂತರದ ಮಾನಸಿಕ ಕ್ರಾಂತಿಯ (Cognitive Revolution) ಹರಿಕಾರ. ಇವನು ಯಾವದಕ್ಕೂ ಯಾವತ್ತೂ ರಾಜಿಮಾಡಿಕೊಳ್ಳದ ರಾಜಕೀಯ ವಿಶ್ಲೇಷಕ. ತನ್ನ ಚಿಂತನೆಗಳನ್ನು ವ್ಯಾಪಕವಾಗಿ ಚರ್ಚಿಸಿದವನು. ಅಂದರೆ ಸೌತ್ ಈಸ್ಟ್ ಏಷಿಯಾ, ಇಸ್ರೇಲ್, ದಕ್ಷಿಣ ಅಮೆರಿಕದ ಮಾನವ ಹಕ್ಕು ಮತ್ತು ಭಯೋತ್ಪದನೆ ಸಂಬಂಧಿ ಚರ್ಚೆಗಳು ಸೂಕ್ಷ್ಮ ಹೊಳವುಗಳನ್ನು ನೀಡುವವು. ಹಾಗೂ ವಿಯ ಟ್ನಾಮ್‌ಯುದ್ಧ ವಿರೋಧಿ ನೀತಿಯ ನಿಲುವುಗಳು ಕೂಡ ಚಾರಿತ್ರಿಕವಾದವು. ಜಾಗತಿಕ ಚಿಂತಕರು ಹಾಗೂ ಸಮೂಹಮಾಧ್ಯಮಗಳು

ನೋಮ್ ಚೋಮ್‌ಸ್ಕಿಯು ಆಧುನಿಕಭಾಷಾ ತತ್ವಶಾಸ್ತ್ರ ಮತ್ತು ತತ್ವಶಾಸ್ತ್ರದಲ್ಲಿ ಪ್ರಭಾವಿ ಚಿಂತಕ. ಗೆಲಿಲಿಯೋ ನಂತರದ ಮಾನಸಿಕ ಕ್ರಾಂತಿಯ ಹರಿಕಾರ. ಇವನು ಯಾವದಕ್ಕೂ ಯಾವತ್ತೂ ರಾಜಿಮಾಡಿಕೊಳ್ಳದ ರಾಜಕೀಯ ವಿಶ್ಲೇಷಕ. ತನ್ನ ಚಿಂತನೆಗಳನ್ನು ವ್ಯಾಪಕವಾಗಿ ಚರ್ಚಿಸಿದವನು. ಅಂದರೆ ಸೌತ್ ಈಸ್ಟ್ ಏಷಿಯಾ, ಇಸ್ರೇಲ್, ದಕ್ಷಿಣ ಅಮೆರಿಕದ ಮಾನವ ಹಕ್ಕು ಮತ್ತು ಭಯೋತ್ಪದನೆ ಸಂಬಂಧಿ ಚರ್ಚೆಗಳು ಸೂಕ್ಷ್ಮ ಹೊಳವುಗಳನ್ನು ನೀಡುವವು. ಹಾಗೂ ವಿಯಟ್ನಾಮ್‌ಯುದ್ಧ ವಿರೋಧಿ ನೀತಿಯ ನಿಲುವುಗಳು ಕೂಡ ಚಾರಿತ್ರಿಕವಾದವು.



ಹೇಗೆ ಸಾಮ್ರಾಜ್ಯಶಾಹಿ ಮತ್ತು ಮೇಲ್ವರ್ಗದ ಪರವಾಗಿ ಮಿಥ್‌ಗಳನ್ನು ಸೃಷ್ಟಿಸಿ ಅವುಗಳನ್ನೇ ಸತ್ಯವನ್ನಾಗಿ ಹೇಗೆ ಸಾಕ್ಷಾತ್ಕರಿಸುತ್ತವೆ ಎನ್ನುವದನ್ನು ವಿಶ್ಲೇಷಿಸುವ ಕ್ರಮ ಜನಪರವಾದದ್ದು. ಇವನ ಈ ಸಾಮ್ರಾಜ್ಯಶಾಹಿ ಧೋರಣೆ, ಯುದ್ಧ ಮತ್ತು ಯುದ್ಧ ನೀತಿ ಕುರಿತ ಚರ್ಚೆಗಳು ಒಂದುಯುಗ ಜನಾಂಗದ ಆಲೋಚನಕ್ರಮವನ್ನೇ ಬದಲಾಯಿಸಿವೆ ಎನ್ನಬಹುದು. ಆದ್ದರಿಂದ, ಇವನ ಬಿಡುವಿಲ್ಲದ 'Dissident Politics'ಮತ್ತು 'Activism'ನಿಂದ ಸರಕಾರದ ಸುಳ್ಳುಗಳನ್ನು ದಾಖಲಿಸುವ, ಬಂಡವಾಳಶಾಹಿಗಳ ಹಿಡನ್ ಪ್ರಭಾವವನ್ನು ಬಯಲಿಗೆಳೆಯುವ ಮತ್ತು ಮಾಧ್ಯಮ ಹಾಗೂ ಬುದ್ಧಿಜೀವಿಗಳು ಪ್ರಭುತ್ವದ ಹಿಡನ್ ನಿಲುವು ಹಾಗೂ ತೀರ್ಮಾನಗಳಿಗೆ ಮೌನದಿಂದಲೆ ಅನುಮೋದಿಸುವ ಕ್ರಮಗಳು ಜನಪರ-ಸಾಮಾಜಿಕ ಮಾದರಿಯ ಕ್ರಮವನ್ನು ಸ್ಥಾಪಿಸಿರುವವು. ಅಮೇರಿಕ ಹುಟ್ಟು ಹಾಕುವ ಹೊಸ ಪರಿಭಾಷೆಗಳು ಹೇಗೆ ಜನವಿರೋಧಿ ಎನ್ನುವುದನ್ನೂ ಅಷ್ಟೆ ಸೂಕ್ಷ್ಮವಾಗಿ ಗ್ರಹಿಸುವ ನಿಲುವು ದಕ್ಕಿ ಸಿಕೊಡುವುದು ಚೋಮ್‌ಸ್ಕಿಯ ಜವಾಬ್ದಾರಿಯಾಗಿದೆ. ಅಂದರೆ, ಅಮೆರಿಕದ ಯುದ್ಧ ವಿಭಾಗ (War Department) ವನ್ನು 'Defense' .ಎಂದು ಕರೆದಿರುವುದನ್ನು ಗಮನಿಸಬಹುದು. ಇಂತಹ ಪರಿಭಾಷೆಗಳು ಜನಸಾಮಾನ್ಯರ ಬುದ್ಧಿಗೆ ಮಂಕು ಕವಿಸುವ ಕ್ರಮವನ್ನು ಹೀನಾಯವಾಗಿ ಬಯಲಿ ಗೆಳೆಯುವನು. ಇದೆಲ್ಲವನ್ನು ಗಮನಿಸಿದಾಗ ಚೋಮ್‌ಸ್ಕಿಯು ಇವತ್ತಿನ ಜಾಗತಿಕ ಸಂದರ್ಭದ ಆತ್ಮ ಸಾಕ್ಷಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಮನಗಾಣಬಹುದು. ಈ ದೃಷ್ಟಿಯಿಂದ ಇವನನ್ನು ಜಾಗತಿಕ ಪ್ರಭಾವಿ-ಚಿಂತಕರಾದ ಐನ್‌ಸ್ಟೈನ್, ಪಿಕಾಸೋ, ಫ್ರಾಯ್ಡ್ ಮುಂತಾದವರೊಟ್ಟಿಗೆ ಹೋಲಿಸಿ ಜಗತ್ತಿನ ಹತ್ತು ಚಿಂತಕರಲ್ಲಿ ಇವನನ್ನು ಎಂಟನೆಯವನಾಗಿ ಗುರುತಿಸಲಾಗಿದೆ.

ಚೋಮ್‌ಸ್ಕಿಯ ಈ ಎಲ್ಲ ಆಲೋಚನ ಕ್ರಮಗಳನ್ನು ಭಾರತ ಸಂದರ್ಭಕ್ಕೆ ಅಳವಡಿಸಿಕೊಂಡು ಯೋಚಿಸಿದರೆ, ಇಲ್ಲಿಯೂ ಯಾವುದೆ ಜನತಂತ್ರ ವಿರೋಧಿ ಚಟುವಟಿಕೆಗಳಿಗೇನು ಕೊರತೆಯಿಲ್ಲ. ಭಾರತ ದೇಶ "ಉದಾರಿ-ಪ್ರಜಾತಂತ್ರ" ವ್ಯವಸ್ಥೆಯಂದು ಬೀಗುವ ನಮ್ಮ ಪ್ರಜಾಪ್ರಭುತ್ವದ ನಾಯಕರು ಕೂಡ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣಮಾಡುವ ರೀತಿ ಯಾವುದೆ ಸಾಮ್ರಾಜ್ಯಶಾಹಿ ಧೋರಣೆಗೆ ಕಮ್ಮಿಯಾದದ್ದಲ್ಲ. ಯಾಕಂದರೆ, "ಆನು ದೇವ ಹೊರಗಣವನು.." ಕೃತಿಯ ಮುಟ್ಟುಗೋಲು ಅಭಿ ವ್ಯಕ್ತಿ ಸ್ವಾತಂತ್ರ್ಯದ ಹರಣವಲ್ಲದೆ ಬೇರೆನಲ್ಲ. ಇದರ ವಿವರಗಳು ಅಪ್ಪಟ ಸತ್ಯವನ್ನು ಹೇಳುವದಿಲ್ಲವೆಂದಾದರೂ, ಅವು ಅಪ್ರಾಮಾಣಿಕವಾದಂತವಲ್ಲ. ಯಾಕಂದರೆ, ಸಂಶೋಧನೆಯ ಮುಖ್ಯ ಉದ್ದೇಶ ಚರಿತ್ರೆ ಅಥವಾ ಇನ್ನಾವುದೇ ಸ್ಥಿತಿ ಅಥವಾ ಮನೋಧರ್ಮವನ್ನು ಗುಮಾನಿಯಿಂದ ನೋಡುವುದೆ ಸಂಶೋಧನೆಯ ಪ್ರವೃತ್ತಿ.

ಚೋಮ್‌ಸ್ಕಿಯು ಎಲ್ಲವನ್ನು ಗುಮಾನಿಯಿಂದಲೇ ನೋಡುತ್ತಾನೆ. ಇದನ್ನು ಒಪ್ಪಿಕೊಳ್ಳುವ ಅಗತ್ಯವಿಲ್ಲ. ಆದಾಗ್ಯೂ ಒಂದು ವರ್ಗದ ಯಜಮಾನ್ಯಿಕೆಯ ಅಧಿಕಾರ ಮತ್ತು ಜ್ಞಾನದಂತಹ ನಿಯಂತ್ರಣ ಮಾನದಂಡಗಳ ಮುಖಾಂತರ ಚಾರಿತ್ರಿಕ ದಾಖಲೆಗಳು ರೂಪಗೊಂಡಿರುವವು. ಈ ಎಲ್ಲ ದಾಖಲೆಗಳು ಸಮಾಜದ ಮುನ್ನೆಲೆ ಮತ್ತು ಮೇಲ್ವರ್ಗದ ಪರವಾಗಿರುತ್ತವೆ. ಹಾಗಾಗಿ, ಆನು ದೇವ ಹೊರಗಣವನು.." ಕೃತಿಯ ತೀರ್ಮಾನ ಶೂದ್ರ ಸಮುದಾಯದ ಹೆಗ್ಗಳಿಕೆ ಎಂದು ಗುರುತಿಸಬೇಕು. ಯಾಕಂದರೆ, ಬಸವತತ್ವವು ವೈದಿಕ ಚಿಂತನೆಯೊಂದಿಗೆ ಧ್ರುವಿಕರಣಗೊಳ್ಳದೆ ಅವೈದಿಕ ಚಿಂತನೆಗೆ ಮತ್ತೊಂದು ಆಯಾಮವನ್ನು ದಕ್ಕಿಸುವುದು. ಇದು ಸಾಂಸ್ಕೃತಿಕ ತಿಳುವಳಿಕೆಯನ್ನು ವಿಸ್ತರಿಸುವುದಕ್ಕೆ ಪೂರಕವಾಗಿರುವಂತಹದು: ಕೆಲವು ಸಂದರ್ಭಗಳಲ್ಲಿ ಸಾಂಸ್ಕೃತಿಕ ಹುನ್ನಾರವನ್ನು ಮಾಡುವ ತೀರ್ಮಾ ನಗಳು ಮೇಲುಗೈ ಸಾಧಿಸುವವು. ಉದಾ: "ಆವರಣ" ಕೃತಿಯ ವಿವರ ಹಾಗೂ ಅದರ ಪರವಾಗಿ ಬಂದ ವಾದಗಳನ್ನು ಗಮನಿಸಬಹುದು. ಇದಕ್ಕೆ ಮುಖ್ಯ ಕಾರಣ ಧಾರ್ಮಿಕತೆ-ಸಾಮಾಜಿಕತೆ ಮತ್ತು ವರ್ಗ-ಧರ್ಮಗಳ ಪ್ರಾಬಲ್ಯದಿಂದ ಜನವಿರೋಧಿ ರಾಜಕೀಯ ತೀರ್ಮಾನಗಳು ಸಂವಿಧಾನಾತ್ಮಕ ಮಹತ್ವವನ್ನು ಪಡೆದುಕೊಳ್ಳುವವು. ಇದರೊಂದಿಗೆ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದಾಗ ಚೋಮ್‌ಸ್ಕಿಯು ನಮಗೆ ಇನ್ನೂ ಬಹಳ ಪ್ರಸ್ತುತವೆನಿಸುವನು. ಅಂದರೆ ಅಧಿಕಾರ ಹಸ್ತಾಂತರ ಕುರಿತ ನಿಲುವುಗಳು, ಪರಮಾಣು ನೀತಿಯ ತೀರ್ಮಾನಗಳು ಹಾಗೂ ರಾಮಸೇತುವೆ ಕುರಿತ ಹೋರಾಟಗಳ ಒಟ್ಟು ಸ್ವರೂಪ ಹಾಗೂ ತಾತ್ತ್ವಿಕ ನಿಲುವುಗಳ ಸೂಕ್ಷ್ಮತೆಯನ್ನು ಸ್ಪಷ್ಟವಾಗಿ ಅರ್ಥೈಯಿಸಿಕೊಳ್ಳಬಹುದು. ಸಂಬಳದ ಮುಲಾಜಿಗೆ ಪ್ರಭುತ್ವದ ಅಧೀನದಲ್ಲಿದ್ದುಕೊಂಡು ಜನತಂತ್ರ ವಿರೋಧಿ ಕಾರ್ಯಗಳನ್ನು ವಿರೋಧಿಸುವ ದಿಟ್ಟತನ ಯಾವತ್ತು ನಮಗೆ ದಕ್ಕಲಾರದು. ಇಂತಹ ದಿಟ್ಟತನವನ್ನು ಚೋಮ್‌ಸ್ಕಿಯಿಂದ ಪಡೆದುಕೊಳ್ಳಬಹುದು. ಆದ್ದರಿಂದಲೇ ನಮ್ಮ ಕೆಲವು ಬುದ್ಧಿಜೀವಿಗಳು ಜನಪರ ಕಾಳಜಿಯನ್ನು ಹೊಂದಿದ್ದಕ್ಕೆ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದರು. ಉದಾ: ನಕ್ಸಲ್ ಬೆಂಬಲಿಗರ ಪಟ್ಟಿ ಯನ್ನು ಸ್ಮರಿಸಿಕೊಳ್ಳಬಹುದು.

ಇಂತಹ ಎಲ್ಲ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅಥವಾ ಪಲ್ಲಟಗಳನ್ನು ಕುರಿತು ವಸ್ತುನಿಷ್ಠ ಅಭಿಪ್ರಾಯಗಳನ್ನು ಮಂಡಿಸಲು ಚೋಮ್‌ಸ್ಕಿಯ ಆಲೋಚನ ಕ್ರಮಗಳು ಸಹಾಯಮಾಡುತ್ತವೆ.

ದುರದೃಷ್ಟವಶಾತ್ ಚೋಮ್‌ಸ್ಕಿಯಂತಹ ಮನಸ್ಥಿತಿಯೂ ಕೂಡ ಪ್ರಭುತ್ವ-ಅಧಿಕಾರಸ್ಥ ಗೂಡಿನಲ್ಲಿ ಅಡಗಿಕೊಂಡಿರುವುದು. ಹಾಗಾಗಿ ನೋಮ್ ಚೋಮ್‌ಸ್ಕಿ ನಮ್ಮೊಳಗಿದ್ದಿದ್ದರೆ....ಎನ್ನುವ ಹತಾಶ ಭಾವನೆ ಬರದೆ ಇರಲಾರದು. □



ಚೋಮ್‌ಸ್ಕಿಯು ಎಲ್ಲವನ್ನು ಗುಮಾನಿಯಿಂದಲೇ ನೋಡುತ್ತಾನೆ. ಇದನ್ನು ಒಪ್ಪಿಕೊಳ್ಳುವ ಅಗತ್ಯವಿಲ್ಲ. ಆದಾಗ್ಯೂ ಒಂದು ವರ್ಗದ ಯಜಮಾನಿಕೆಯ ಅಧಿಕಾರ ಮತ್ತು ಜ್ಞಾನದಂತಹ ನಿಯಂತ್ರಣ ಮಾನದಂಡಗಳ ಮುಖಾಂತರ ಚಾರಿತ್ರಿಕ ದಾಖಲೆಗಳು ರೂಪಗೊಂಡಿರುವವು. ಈ ಎಲ್ಲ ದಾಖಲೆಗಳು ಸಮಾಜದ ಮುನ್ನೆಲೆ ಮತ್ತು ಮೇಲ್ವರ್ಗದ ಪರವಾಗಿರುತ್ತವೆ. ಹಾಗಾಗಿ, ಆನು ದೇವ ಹೊರಗಣವನು.." ಕೃತಿಯ ತೀರ್ಮಾನ ಶೂದ್ರ ಸಮುದಾಯದ ಹೆಗ್ಗಳಿಕೆ ಎಂದು ಗುರುತಿಸಬೇಕು. ಯಾಕಂದರೆ, ಬಸವತತ್ವವು ವೈದಿಕ ಚಿಂತನೆಯೊಂದಿಗೆ ದ್ರುವಿಕರಣಗೊಳ್ಳದೆ ಅವೈದಿಕ ಚಿಂತನೆಗೆ ಮತ್ತೊಂದು ಆಯಾಮವನ್ನು ದಕ್ಕಿಸುವುದು. ಇದು ಸಾಂಸ್ಕೃತಿಕ ತಿಳುವಳಿಕೆಯನ್ನು ವಿಸ್ತರಿಸುವುದಕ್ಕೆ ಪೂರಕವಾಗಿರುವಂತಹದು. ಕೆಲವು ಸಂದರ್ಭಗಳಲ್ಲಿ ಸಾಂಸ್ಕೃತಿಕ ಹುನ್ನಾರವನ್ನು ಮಾಡುವ ತೀರ್ಮಾನಗಳು ಮೇಲುಗೈ ಸಾಧಿಸುವವು. ಉದಾ: "ಆವರಣ" ಕೃತಿಯ ವಿವರ ಹಾಗೂ ಅದರ ಪರವಾಗಿ ಬಂದ ವಾದಗಳನ್ನು ಗಮನಿಸಬಹುದು.

ಪೂರ್ವ ವಿದರ್ಭ ಪ್ರಾಂತ್ಯದ ಝಾಡಿ ಪಟ್ಟಿ ರಂಗಭೂಮಿ

ಮಹಾರಾಷ್ಟ್ರದ ವಿದರ್ಭ ಪೂರ್ವ ಪ್ರಾಂತ್ಯದ ನಾಲ್ಕು ಜಿಲ್ಲೆಗಳಲ್ಲಿ 'ಝಾಡಿಪಟ್ಟಿ' ಎಂಬ ವಿಶಿಷ್ಟ ರಂಗಭೂಮಿ ಪ್ರಾಕಾರ ಬೇರು ಬಿಟ್ಟಿದೆ. ಝಾಡಿಪಟ್ಟಿ ರಂಗಭೂಮಿಗೆ ಅರಣ್ಯಪ್ರದೇಶದ ರಂಗಭೂಮಿ ಎಂಬಂತಹ ಅರ್ಥ ಬರುತ್ತದೆ. ನಗರ ಪ್ರದೇಶದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಪರದಾಡುತ್ತಿರುವ ರಂಗಭೂಮಿ, ವಿದರ್ಭ ಪ್ರಾಂತ್ಯದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. 'ಝಾಡಿ ಪಟ್ಟಿ'ಗೆ ಶತಮಾನದ ಇತಿಹಾಸವಿದೆ. ಜನರ ಜೀವನವೇ ಈ ಪ್ರಾಕಾರದ ನಾಟಕ ತಂಡಗಳ ನಾಟಕಗಳು. ಝಾಡಿ ಪಟ್ಟಿಯ ವೇಳಾ ಪಟ್ಟಿ ಕೃಷಿ ಚಟುವಟಿಕೆಗಳಿಗೆ ಹೊಂದಿಕೊಂಡಿರುತ್ತದೆ. ಇದು ಕೆಲವು ಮಂದಿಗೆ ವರ್ಷ ಪೂರ್ತಿ ಉದ್ಯೋಗ ನೀಡುತ್ತದೆ. ಕಾರ್ಮಿಕರು, ದರ್ಜಿಗಳು, ಬಡಗಿಗಳು ಇದನ್ನು ಅವಲಂಬಿಸಿದ್ದಾರೆ. ಇಲ್ಲಿನ ನಟರು ಪ್ರದರ್ಶನವೊಂದಕ್ಕೆ ೩ ಸಾವಿರ ರೂ. ಸಂಪಾದಿಸಬಹುದು.

ಮೂಲ: ಪಿ. ಸಾಯಿನಾಥ್
ಅನು: ಸತ್ಯಪ್ರಕಾಶ್ ಎಂ. ಆರ್

ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಆ ರೈತ ಹತಾಶೆ ವ್ಯಕ್ತಪಡಿಸಿದಾಗ ಅದಾಗಲೇ ನಡುರಾತ್ರಿಯಾಗಿತ್ತು. ಇನ್ನು ಈ ಜೀವನ ಸಾಕಾಗಿ ಹೋಗಿದೆ. ಇಂತಹ ಜೀವನಕ್ಕೆ ಅರ್ಥವಿಲ್ಲ ಎಂದು ಆ ರೈತ ಹೇಳುತ್ತಿದ್ದ. ವಾತಾವರಣ ಶೀತಲಮಯವಾಗಿತ್ತು. ಆದರೂ ಯಾರೂ ಜಾಗ ಬಿಟ್ಟು ಕದಲುವಂತಿರಲಿಲ್ಲ. ಅಲ್ಲಿ ಒಂದು ರೀತಿಯ ಬಿಗುವಿನ ವಾತಾವರಣದ ಅನುಭವವಾಗುತ್ತಿತ್ತು. ಆ ನಾಟಕದ ಹೆಸರು 'ಆತ್ಮಹತ್ಯಾ'. ನಡುರಾತ್ರಿ ಕಳೆದ ಮೇಲೂ ನಾಟಕವನ್ನೇ ಕೌತುಕದಿಂದ ನೋಡುತ್ತಿದ್ದ ಸುಮಾರು ೬,೦೦೦ ಮಂದಿ ಪ್ರೇಕ್ಷಕರಲ್ಲಿ ನಾವೂ ಇದ್ದೆವು. ನಗರ ಪ್ರದೇಶಗಳಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಪರದಾಡುತ್ತಿರುವ ರಂಗಭೂಮಿ, ಇಲ್ಲಿ, ವಿದರ್ಭ ಪ್ರಾಂತ್ಯದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ. ಇದು 'ಝಾಡಿ ಪಟ್ಟಿ ರಂಗಭೂಮಿ'ಯ ಋತು. ಝಾಡಿ ಪಟ್ಟಿ ರಂಗಭೂಮಿಗೆ 'ಅರಣ್ಯ ಪ್ರದೇಶದ ರಂಗಭೂಮಿ' ಎಂಬಂತಹ ಅರ್ಥ ಬರುತ್ತದೆ.

ಇದರಲ್ಲಿ ಎಲ್ಲರೂ ಭಾಗಿಗಳೇ. "ನಮ್ಮ ನಾಟಕ ತಂಡದಲ್ಲಿ ದರ್ಜಿಗಳು, ರೈತರು, ಪೈಂಟರ್‌ಗಳು, ಸಣ್ಣವ್ಯಾಪಾರಿಗಳು, ಎಲ್ಲರೂ ಇದ್ದಾರೆ" ಎನ್ನುವ 'ಆತ್ಮಹತ್ಯಾ' ನಾಟಕ ಪ್ರಸ್ತುತ ಪಡಿಸುತ್ತಿರುವ ವೆಂಕಟೇಶ್ ನಾಟ್ಯಮಂಡಳಿಯ ಗುಲಾಂ ಸೂಫಿ, "ಇದೇ ಕಾರಣದಿಂದ ಇದು ಜನಸಾಮಾನ್ಯರಿಗೆ ತೀರ ಹತ್ತಿರವಾಗಿದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ೬೦ ಮಂದಿ ಸದಸ್ಯರನ್ನು ಹೊಂದಿರುವ ನಾಟ್ಯ ಮಂಡಳಿಯಲ್ಲಿ ಸೂಫಿ, ತಬಲಾವಾದಕರು. ಸೂಫಿ ತಬಲಾ ಬಾರಿಸುವುದನ್ನು ನೋಡಿದ ನಾವು, ನಾಟಕದ ಮಧ್ಯೆ ತರಾತುರಿಯಲ್ಲಿ ಮೇಕಪ್ ಧರಿಸಿ ಆತ ಪ್ರಮುಖವಾದ ಸಣ್ಣ ಪಾತ್ರವೊಂದರಲ್ಲಿ ಅಭಿನಯಿಸಿದ್ದನ್ನೂ ನೋಡಿದೆವು. ಮಧ್ಯಾಹ್ನ ತಿರುಗುವ ವೇದಿಕೆಯನ್ನು ಸಜ್ಜುಗೊಳಿಸಿದ ರಂಗತಂಡದ ಪ್ರಧಾನ ಕಲಾವಿದ ಕೂಡ ಸಣ್ಣ ಪಾತ್ರ ನಿರ್ವಹಿಸಿದ್ದನ್ನು ನಾವು ಗಮನಿಸಿದೆವು.

ಝಾಡಿ ಪಟ್ಟಿ, ಮುಂಬೈ ಮತ್ತು ಪುಣೆ ನಗರಗಳಲ್ಲಿರುವ ಮುಖ್ಯವಾಹಿನಿಯ ರಂಗಭೂಮಿಗಿಂತ ವಿಭಿನ್ನವಾದುದು. ಇದು ಮಹಾರಾಷ್ಟ್ರದ ಇತರ ಭಾಗಗಳಲ್ಲಿರುವ ಜನಪದ ನಾಟಕ ಪ್ರಕಾರಗಳಂತೆಯೂ ಇಲ್ಲ. ಕಾಡಿನಿಂದ ಸುತ್ತುವರೆದಿರುವ ವಿದರ್ಭದ ಪೂರ್ವ ಪ್ರಾಂತ್ಯದ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಬೇರು ಬಿಟ್ಟಿರುವ ವಿಶಿಷ್ಟ ನಾಟಕ ಪ್ರಕಾರ ಇದು. ಝಾಡಿ ಪಟ್ಟಿಗೆ ಶತಮಾನದಾಚೆಯ ಇತಿಹಾಸವಿದೆ. "ನೋಡಿ ನಮ್ಮ ಪ್ರೇಕ್ಷಕರನ್ನು" ಎಂದು ಚಂದಾಪುರ ಜಿಲ್ಲೆಯ ನಂದಗಾವ್ ಗ್ರಾಮದ ಸದಾನಂದ ಬೋರ್ಕರ್ ಹೆಮ್ಮೆಯಿಂದ ಬೀಗುತ್ತಾರೆ. ಆ ದಿನ ನಾಟಕ ಪ್ರದರ್ಶನವಾಗಿದ್ದು ನಂದಗಾಂವ್‌ನಲ್ಲಿಯೇ. ಈ ಒಂದು ಗ್ರಾಮದಲ್ಲಿಯೇ ಮೂರು ಅನುಭವಿ ತಂಡಗಳಿವೆ. ವಿದರ್ಭದ ಪೂರ್ವ ಪ್ರಾಂತ್ಯದಲ್ಲಿ ಇಂತಹ ನೂರಾರು ತಂಡಗಳಿವೆ. ಬೋರ್ಕರ್, 'ಆತ್ಮಹತ್ಯಾ' ನಾಟಕದ ರಚನೆಕಾರರಷ್ಟೇ ಅಲ್ಲ, ನಟ–ನಿರ್ದೇಶಕ ಕೂಡ. "ನಮ್ಮ ತಂಡ, ವೆಂಕಟೇಶ್ ನಾಟ್ಯ ಮಂಡಳಿಗೆ ಈ ವರ್ಷ ೧೧೦ ವರ್ಷ ತುಂಬುತ್ತದೆ" ಎಂದು ಹೆಮ್ಮೆ ವ್ಯಕ್ತಪಡಿಸುವ ಬೋರ್ಕರ್‌ರ ಪೂರ್ವಿಕರು ಈ ತಂಡವನ್ನು ಕಟ್ಟಿ ಬೆಳೆಸಿದವರು.

ವೆಂಕಟೇಶ್ ನಾಟ್ಯ ಮಂಡಳಿಯಷ್ಟು ಪರಿಣತಿ ಹೊಂದಿರದ ಕೆಲವು ಸಣ್ಣ ಪುಟ್ಟ ತಂಡಗಳಿಂದ ಆಗಾಗ ಅಭಾಸಗಳಾತ್ತವೆ. ಉದಾಹರಣೆಗೆ, ದಣಿವಿನಿಂದ ನಟ ಮೂರ್ಛೆ ಹೋದಾಗ ಪ್ರೇಕ್ಷಕರು ಚಪ್ಪಾಳೆ ತಟ್ಟುವುದು. ಸ್ಕ್ರೀನ್ ಹುಡುಗ, ತೆರೆಯೆಳೆಯುವುದನ್ನು ಮರೆತು, ಗಾಢ ನಿದ್ರೆಗೆ ಶರಣಾಗುವುದು. ಇಂತಹ ನಿದರ್ಶನಗಳು ಸಾಮಾನ್ಯ. ಆದರೆ ಅನುಭವಕ್ಕೆ ಬೆಲೆ ಕಟ್ಟಲಾಗುವುದಿಲ್ಲ ಅಲ್ಲವೇ?

ನಾಟಕ ಪ್ರದರ್ಶನದ ಟಿಕೆಟ್ ಖರೀದಿಸಲು ಬೇರೆ ಹಳ್ಳಿಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ಧಾವಿಸಿ ಬರುತ್ತಿದ್ದ ದೃಶ್ಯ ಅಂದು ಬೆಳಿಗ್ಗೆ ಕಂಡು ಬಂತು. ಯಾವುದೇ ಪ್ರಾಯೋಜಕರ ಬೆಂಬಲ ಇಲ್ಲದಿರುವುದು ಝಾಡಿ ಪಟ್ಟಿಯ ಹೆಗ್ಗಳಿಕೆ. ಕೋಲಾ ಕಂಪನಿಗಳ ಉದಾರತ್ವ ಸಾರುವ ಯಾವುದೇ ಫಲಕಗಳು ಅಲ್ಲಿರಲಿಲ್ಲ. ಇಲ್ಲಿ ಕಾರ್ಪೋರೆಟ್ ದೊರೆಗಳಿಗೆ ಸಿಗುವುದು ನಯವಾದ ನಿರಾಕರಣೆ. ರಾತ್ರಿ ಸುಮಾರು ೯.೩೦ರ ಹೊತ್ತಿಗೆ ಆರಂಭವಾದ 'ಆತ್ಮಹತ್ಯಾ' ನಡುರಾತ್ರಿ ಕಳೆದ

ಮೇಲೆ ಸುಮಾರು ಮುಂಜಾನೆ ೨ ಗಂಟೆಯ ಹೊತ್ತಿಗೆ ಮುಕ್ತಾಯವಾಯಿತು. ಕೆಲವು ನಾಟಕಗಳು ಮುಂಜಾನೆಯವರೆವಿಗೂ ನಡೆಯುವುದುಂಟು.

“ನಮ್ಮ ತಂಡ ಅಸ್ತಿತ್ವದಲ್ಲಿರುವುದು ಜನರಿಂದಾಗಿ” ಎನ್ನುತ್ತಾರೆ ಬೋರ್ಕರ್. “ಜನರ ಜೀವನವೇ ನಮ್ಮ ನಾಟಕಗಳು. ‘ಫಾಲ್ತು ನಾಟಕ’ ಅಥವಾ ಅತಿಯಾದ ಅಶ್ಲೀಲತೆಗೆ ಇಲ್ಲಿ ಅವಕಾಶವಿಲ್ಲ. ಎರಡು ವರ್ಷಗಳ ಹಿಂದೆ ಹೊರಗಿನ ತಂಡವೊಂದರ ಪೆಂಡಾಲನ್ನು ಇದೇ ಕಾರಣಕ್ಕೆ ಜನ ಕಿತ್ತು ಬಿಸಾಡಿದ್ದರು.” ಮೊದಲ ಹಂತದಲ್ಲಿ ಝಾಡಿ ಪಟ್ಟಿಗೆ, ಪೌರಾಣಿಕ ಕಥೆಗಳು ನಾಟಕದ ವಸ್ತುಗಳಾಗಿದ್ದವು. ನಂತರ ಐತಿಹಾಸಿಕ ಕಥೆಗಳು ಬಂದವು. ಈ ಅವಧಿಯಲ್ಲಿ, ಮುಂಬೈ ಮತ್ತು ಪುಣೆ ಮೂಲದ ನಾಟಕಗಳನ್ನು ಹೊರಗಿನ ತಂಡಗಳು ಇಲ್ಲಿ ಪ್ರದರ್ಶಿಸುತ್ತಿದ್ದವು. ಆದರೆ ಈಗ, ಇಲ್ಲಿನ ನಾಟಕಗಳಲ್ಲಿ ಮುಂಬೈ ಹಾಗೂ ಪುಣೆ ಮೂಲದ ರಂಗನಟರು ಅಭಿನಯಿಸುತ್ತಾರೆ. ಹೊರಗಿನ ನಟರು, ಬಹುತೇಕ ಮಹಿಳೆಯರು. “ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿನ ಮಹಿಳೆಯರು ನಾಟಕಗಳಲ್ಲಿ ಅಭಿನಯಿಸುವ ಇಚ್ಛೆ ತೋರಿಸುತ್ತಿಲ್ಲ” ಎನ್ನುತ್ತಾರೆ ಬೋರ್ಕರ್.

‘ಆತ್ಮಹತ್ಯಾ’ ತಂಡದಲ್ಲಿ ಹೊರಗಿನ ಇಬ್ಬರು ವೃತ್ತಿಪರ ನಟಿಯರಿದ್ದಾರೆ. ಪುಣೆ ಮೂಲದ ಅನುಭವಿ ನಟಿ ರಜನಿ ಭಟ್ ಮತ್ತು ನಾಸಿಕ್ ಮೂಲದ ಉದಯೋನ್ಮುಖ ನಟಿ ಕಂಛನ್ ಮಿಟ್ಕರ್. ಈ ಇಬ್ಬರೂ ಝಾಡಿ ಪಟ್ಟಿಯ ಶಿಸ್ತು, ವಿಶಿಷ್ಟತೆ ಹಾಗೂ ಪ್ರೇಕ್ಷಕವರ್ಗದ ಬಗ್ಗೆ ಗೌರವಾದರ ಹಾಗೂ ಪ್ರಶಂಸೆ ವ್ಯಕ್ತಪಡಿಸುತ್ತಾರೆ. “ನೀವು ಈ ರಂಗಭೂಮಿಯ ಮೇಲೆ ಅಭಿನಯಿಸಿದರೆ, ಬೇರೆ ಯಾವ ವೇದಿಕೆಯಲ್ಲಿಯಾದರೂ ಅಭಿನಯಿಸುವ ವಿಶ್ವಾಸ ನಿಮಗೆ ಬರುತ್ತದೆ” ಎನ್ನುತ್ತಾರೆ ರಜನಿ ಭಟ್. ೬೦ ರೂಪಾಯಿ ಕೊಟ್ಟು ಟಿಕೆಟ್ ಖರೀದಿಸಿದರೆ, ನೀವು ಕುರ್ಚಿಯ ಮೇಲೆ ಕೂರಬಹುದು. ಅಗ್ಗದ ಟಿಕೆಟ್ ಬೆಲೆ ಇಪ್ಪತ್ತು ರೂಪಾಯಿ.

ಝಾಡಿ ಪಟ್ಟಿಗೆ ಯಾವುದೇ ಪ್ರಾಯೋಜಕರಿಲ್ಲದಿರಬಹುದು. (ಪ್ರಾಯೋಜಕತ್ವ ಹುಡುಕುವ ಅಗತ್ಯತೆ ಇಲ್ಲಿ ಯಾರಿಗೂ ಕಂಡುಬಂದಿಲ್ಲ.) ಆದರೆ ಇದು ಸಣ್ಣ ಉದ್ದಿಮೆಯಾಗಿ ಯಶಸ್ಸು ಕಾಣುತ್ತಿದೆ. “ಇದಕ್ಕೆ ಸರ್ಕಾರದ ಬೆಂಬಲ ಕೂಡ ಇಲ್ಲ” ಎನ್ನುತ್ತಾರೆ, ಸ್ಥಳೀಯ ಫೈನ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರೂ ಆಗಿರುವ ಬೋರ್ಕರ್. ಝಾಡಿ ಪಟ್ಟಿಯ ವೇಳಾಪಟ್ಟಿ ಸಾಮಾನ್ಯವಾಗಿ ಕೃಷಿ ಚಟುವಟಿಕೆಗಳಿಗೆ ಹೊಂದಿಕೊಂಡಿರುತ್ತದೆ. “ಇಳುವರಿಯ ಸಮಯ, ಜನರ ಬಳಿ ಸ್ವಲ್ಪ ಹಣವಿದ್ದು, ಸ್ವಲ್ಪ ವಿಶ್ರಾಂತಿಗೂ ಸಮಯವಿರುವಾಗ, ನಾವು ಕಾರ್ಯಪ್ರವೃತ್ತರಾಗುತ್ತೇವೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಆರಂಭವಾಗುವ ಸೀಸನ್ ಏಪ್ರಿಲ್ ತಿಂಗಳೊಳಗೆ ಮುಗಿಯುತ್ತದೆ.”

ವಿದರ್ಭದ ಪೂರ್ವ ಪ್ರಾಂತ್ಯದ ಅತ್ಯಂತ ವಿಶಿಷ್ಟವಾದ ಈ ರಂಗಭೂಮಿ, ಕೆಲವು ಮಂದಿಗೆ ವರ್ಷಪೂರ್ತಿ ಉದ್ಯೋಗ ಒದಗಿಸುತ್ತದೆ. ಹಾಗೂ ಪ್ರತಿ ಋತುವಿನಲ್ಲಿ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸುತ್ತದೆ. ಇದರ ಗಳಿಕೆ ಹಲವು ಕೋಟಿ ರೂಪಾಯಿಗಳಷ್ಟಿವೆ. ಬಿತ್ತನೆಯ ಕಾಲದಲ್ಲಿ ಕಾರ್ಮಿಕರು, ದರ್ಜಿಗಳು, ಬಡಗಿಗಳು ಮತ್ತಿತರರು ಉದ್ಯೋಗಕ್ಕೆ ಇದನ್ನು ಅವಲಂಬಿಸಿದ್ದಾರೆ. ದೊಡ್ಡ ಕೇಂದ್ರಗಳಲ್ಲಿ ನಾಟಕ ಪ್ರದರ್ಶಿಸಲು ಸುಮಾರು ೮೦,೦೦೦ ರೂಪಾಯಿಗಳಷ್ಟು ಖರ್ಚಾಗುತ್ತದೆ. ಸಣ್ಣ ಗ್ರಾಮಗಳಲ್ಲಿ ಪ್ರದರ್ಶನದ ವೆಚ್ಚ ಇದರ ಅರ್ಧದಷ್ಟಿರುತ್ತದೆ.

ಬಿತ್ತನೆಯ ಕಾಲದಲ್ಲಿ ಕಾರ್ಮಿಕರು, ದರ್ಜಿಗಳು, ಬಡಗಿಗಳು ಮತ್ತಿತರರು ಉದ್ಯೋಗಕ್ಕೆ ಇದನ್ನು ಅವಲಂಬಿಸಿದ್ದಾರೆ. ದೊಡ್ಡ ಕೇಂದ್ರಗಳಲ್ಲಿ ನಾಟಕ ಪ್ರದರ್ಶಿಸಲು ಸುಮಾರು ೮೦,೦೦೦ ರೂಪಾಯಿಗಳಷ್ಟು ಖರ್ಚಾಗುತ್ತದೆ. ಸಣ್ಣ ಗ್ರಾಮಗಳಲ್ಲಿ ಪ್ರದರ್ಶನದ ವೆಚ್ಚ ಇದರ ಅರ್ಧದಷ್ಟಿರುತ್ತದೆ. ಹತ್ತಿರದ ವಾಡ್ಸಾ ಪಟ್ಟಣದಲ್ಲಿ ರಂಗಭೂಮಿ ಆಧಾರಿತ ಪೋಸ್ಟರ್‌ಗಳು ಮತ್ತು ಕರಪತ್ರಗಳ ಕೈಗಾರಿಕೆಗಳಿವೆ. ಬೇಡಿಕೆಯ ಮೇರೆಗೆ ಹಳ್ಳಿಗಳಿಗೆ ರಂಗತಂಡಗಳನ್ನು ಇಲ್ಲಿಂದ ಕಳುಹಿಸಿಕೊಡಲಾಗುತ್ತದೆ. ಝಾಡಿ ಪಟ್ಟಿ ರಂಗಭೂಮಿಯಲ್ಲಿ ನಟಿಸುವ ಮುಂಬೈ ಅಥವಾ ಪುಣೆ ಮೂಲದ ವೃತ್ತಿಪರ ನಟರು, ಪ್ರದರ್ಶನವೊಂದಕ್ಕೆ ೩,೦೦೦ ರೂಪಾಯಿಗಳಷ್ಟು ಸಂಭಾವನೆ ಗಳಿಸಬಹುದು. ಅಂದು ಸುಮಾರು ನೂರು ಕಿಲೋಮೀಟರ್ ಸುತ್ತಮುತ್ತಲ ಪ್ರದೇಶಗಳಿಂದ ಜನರು ‘ಆತ್ಮಹತ್ಯಾ’ ನಾಟಕ ವೀಕ್ಷಿಸಲು ಬಂದಿದ್ದರು. ಇದಕ್ಕೆ ಇನ್ನೊಂದು ಸಾಮಾಜಿಕ ಆಯಾಮ ಕೂಡ ಇದೆ. “ಜನರು ೧೫ ಹಳ್ಳಿಗಳಿಂದ ಒಟ್ಟಾಗಿ ಬರಬಹುದು” ಎನ್ನುವ ಬೋರ್ಕರ್, “ಇಲ್ಲಿ ಸಭೆ ಗಳು ನಡೆಯುತ್ತವೆ, ವಧು–ವರರ ಅನ್ವೇಷಣೆ ನಡೆಯುತ್ತವೆ, ಮದುವೆಗಳು ಕೂಡ ಈ ರಾತ್ರಿ ಇಲ್ಲಿ ಇತ್ಯರ್ಥವಾಗಬಹುದು”. ಎಂಬ ವಿಶಿಷ್ಟ ಅಂಶವನ್ನು ನಮ್ಮ ಮುಂದಿಡುತ್ತಾರೆ.

ಹತ್ತಿರದ ವಾಡ್ಸಾ ಪಟ್ಟಣದಲ್ಲಿ ರಂಗಭೂಮಿ ಆಧಾರಿತ ಪೋಸ್ಟರ್‌ಗಳು ಮತ್ತು ಕರಪತ್ರಗಳ ಕೈಗಾರಿಕೆಗಳಿವೆ. ಬೇಡಿಕೆಯ ಮೇರೆಗೆ ಹಳ್ಳಿಗಳಿಗೆ ರಂಗತಂಡಗಳನ್ನು ಇಲ್ಲಿಂದ ಕಳುಹಿಸಿಕೊಡಲಾಗುತ್ತದೆ. ಝಾಡಿ ಪಟ್ಟಿ ರಂಗಭೂಮಿಯಲ್ಲಿ ನಟಿಸುವ ಮುಂಬೈ ಅಥವಾ ಪುಣೆ ಮೂಲದ ವೃತ್ತಿಪರ ನಟರು, ಪ್ರದರ್ಶನವೊಂದಕ್ಕೆ ೩,೦೦೦ ರೂಪಾಯಿಗಳಷ್ಟು ಸಂಭಾವನೆ ಗಳಿಸಬಹುದು.

ಅಂದು ಸುಮಾರು ನೂರು ಕಿಲೋಮೀಟರ್ ಸುತ್ತಮುತ್ತಲ ಪ್ರದೇಶಗಳಿಂದ ಜನರು ‘ಆತ್ಮಹತ್ಯಾ’ ನಾಟಕ ವೀಕ್ಷಿಸಲು ಬಂದಿದ್ದರು. ಇದಕ್ಕೆ ಇನ್ನೊಂದು ಸಾಮಾಜಿಕ ಆಯಾಮ ಕೂಡ ಇದೆ. “ಜನರು ೧೫ ಹಳ್ಳಿಗಳಿಂದ ಒಟ್ಟಾಗಿ ಬರಬಹುದು” ಎನ್ನುವ ಬೋರ್ಕರ್, “ಇಲ್ಲಿ ಸಭೆಗಳು ನಡೆಯುತ್ತವೆ, ವಧು–ವರರ ಅನ್ವೇಷಣೆ ನಡೆಯುತ್ತವೆ, ಮದುವೆಗಳು ಕೂಡ ಈ ರಾತ್ರಿ ಇಲ್ಲಿ ಇತ್ಯರ್ಥವಾಗಬಹುದು” ಎಂಬ ವಿಶಿಷ್ಟ ಅಂಶವನ್ನು ನಮ್ಮ ಮುಂದಿಡುತ್ತಾರೆ. ರೈತರ ಆತ್ಮಹತ್ಯೆಗಳ ಬಗ್ಗೆ ‘ಆತ್ಯಹತ್ಯಾ’ ನಾಟಕದಲ್ಲಿ ಕಂಡುಬರುವ ಧೋರಣೆ, ವಿದರ್ಭದ ಪೂರ್ವ ಪ್ರಾಂತ್ಯದ ಮೂಲದಿಂದ ಬಂದಿರುವಂತಹುದು. ಹೀಗಾಗಿ, ಹತ್ತಿ ಬೆಳೆಯುವ ಪ್ರದೇಶದ ರೈತರ ಬವಣೆ ಇಲ್ಲಿ ಕಾಣಸಿಗುವುದಿಲ್ಲ. ಆದರೆ, ಆತ್ಮಹತ್ಯೆಗೆ ಪ್ರಮುಖ ಕಾರಣ ಸಾಲದ ಹೊರೆ, ಎಂಬ ಅಂಶವನ್ನು ನಾಟಕದಲ್ಲಿ ಕಾಣಬಹುದು. ಜತೆಗೆ, ಇತರ ಕಾರಣಗಳನ್ನು ಕೂಡ ನಾಟಕ ಚಿತ್ರಿಸುತ್ತದೆ. ಬದಲಾಗುತ್ತಿರುವ ಜೀವನ ಶೈಲಿ ಹಾಗೂ ಅಭಿರುಚಿಗಳಿಗೆ ಸಂಬಂಧಿಸಿದ ಕೌಟುಂಬಿಕ ಡ್ರಾಮಾ, ಕೃಷಿಯಿಂದ ದೂರ ಸರಿಯುತ್ತಿರುವ ಕುಟುಂಬಗಳ ಚಿತ್ರಣಗಳನ್ನು ಕೂಡ ಕಾಣಬಹುದು. ಝಾಡಿ ಪಟ್ಟಿ ರಂಗಭೂಮಿಯ ಪ್ರಕಾರದಲ್ಲಿ ಕುಟುಂಬಕ್ಕೆ ಪ್ರಮುಖ ಆದ್ಯತೆ.

ನಾಟಕದ ಸಂದೇಶ ಕೂಡ ಸಕಾರಾತ್ಮಕವಾದುದು; ಆತ್ಮಹತ್ಯೆ ಪರಿಹಾರವಲ್ಲ. ನಿಮ್ಮ ಮನೆಗಳಲ್ಲಿ ಇಂತಹ ಆಲೋಚನೆಗಳ ವಿರುದ್ಧ ಹೋರಾಡಿ. ದಾಖಲೆ ನಿರ್ಮಿಸಿದ ಬೋರ್ಕರ್ ಅವರ ಈ ಹಿಂದಿನ ನಾಟಕ–‘ನನ್ನ ಗಂಡನನ್ನು ನಾನೇ ಕೊಂದೆ’– ಮೂಢನಂಬಿಕೆಗಳ ವಿರುದ್ಧ ಬಲವಾದ ಪ್ರಹಾರ ಮಾಡಿತ್ತು. ನಾಟಕದಲ್ಲಿ ಗಳಿಸಿದ ಹಣವನ್ನು ಹಲವಾರು ಹಳ್ಳಿಗಳಲ್ಲಿ ರೈತರಿಗೆ ಸಣ್ಣ ಪ್ರಮಾಣದ ಸಾಲ ನೀಡಲು ಬಳಸಿದ ಉದಾಹರಣೆಗಳಿವೆ. ಸ್ಥಳೀಯ ಕಾರ್ಯಗಳ ಅನುಷ್ಠಾನಕ್ಕೆ ಕೂಡ ಈ ಹಣವನ್ನು ಬಳಸಿಕೊಳ್ಳಲಾಗಿದೆ. ಕಳೆದೆರಡು ದಶಕಗಳಿಂದಾಚೆಗೆ, ಝಾಡಿ ಪಟ್ಟಿ, ನ್ಯಾಯಕ್ಕೆ ಒತ್ತು ನೀಡುವಂತಹ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ನಾಟಕದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿದೆ. (ಚುನಾವಣಾ ಸಮಯದಲ್ಲಿ ರಾಜಕಾರಣಿಗಳು ಝಾಡಿ ಪಟ್ಟಿಯ ವೇದಿಕೆಯ ಮೇಲೆ ಕಾಣಿಸಿಕೊಳ್ಳಲು ತುದಿಗಾಲಲ್ಲಿ ನಿಂತಿರುತ್ತಾರೆ.) ನಾಟಕಕ್ಕೆ ಈಗ, ಪ್ರಾಂತ್ಯದ ರೈತರ ಆತ್ಮಹತ್ಯೆ ಪ್ರಮುಖ ವಸ್ತುವಾಗಿದೆ.

ನಾಗಪುರದ ಸೇಂಟ್ ಫ್ರಾನ್ಸಿಸ್ ಡಿ ಸಲೇಸ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಪ್ರಮೋದ್ ಮುಂಗಾಟೆ ಅವರ ಪ್ರಕಾರ “ಇದು ಮಹಾರಾಷ್ಟ್ರ ರಾಜ್ಯದ ಅತ್ಯಂತ ವಿಶಿಷ್ಟವಾದ ರಂಗಪ್ರಕಾರ” ಕಾಲೇಜಿನ ಮರಾಠಿ ವಿಭಾಗದ ಮುಖ್ಯಸ್ಥರಾದ ಮುಂಗಾಟೆ, ಯುಜಿಸಿ ಅನುದಾನದಡಿ ಝಾಡಿ ಪಟ್ಟಿ ರಂಗಭೂಮಿ ಕುರಿತು ಅಧ್ಯಯನ ಕೈಗೊಂಡಿದ್ದಾರೆ. “ನಾಗಪುರದಲ್ಲಿ ನಾಟಕಕ್ಕೆ ಜನ ಸೇರಬೇಕಿದ್ದರೆ, ಅದರಲ್ಲಿ ಪ್ರಮುಖ ನಟ ನಟಿಯರಿರಬೇಕು, ನುರಿತ ರಂಗಕರ್ಮಿಗಳಿರಬೇಕು. ಆದರೆ ವಿದರ್ಭದ ಕುರುದ್‌ನಂತಹ ಹಳ್ಳಿಯಲ್ಲಿ ಮುಂಬರುವ ಫೆಬ್ರವರಿ ೯ರಂದು ಒಂಭತ್ತು ನಾಟಕಗಳು ಒಮ್ಮೆಲೇ ಪ್ರದರ್ಶನ ಕಾಣಲಿದೆ. ಬಹುತೇಕ ಪಾರ್ಟ್–ಟೈಂ ನಟರು ಅಭಿನಯಿಸುವ ಈ ಎಲ್ಲಾ ನಾಟಕಗಳಿಗೂ ಬೃಹತ್ ಪ್ರೇಕ್ಷಕವರ್ಗ ಇದ್ದೇ ಇರುತ್ತದೆ. ಈಗ ಬಹುಸಂಖ್ಯೆಯಲ್ಲಿ ಟಿವಿ ವಾಹಿನಿಗಳು ಮನೆಮನೆಗೆ ಲಗ್ಗೆಯಿಡುತ್ತಿದ್ದರೂ, ಝಾಡಿ ಪಟ್ಟಿಯ ಪ್ರಭಾವವನ್ನು ಕುಗ್ಗಿಸಲು ಸಾಧ್ಯವಾಗಿಲ್ಲ. ಇದು ನಿಜವಾಗಿ ಜನರ ಜೀವನಕ್ಕೆ ಹತ್ತಿರವಾಗಿರುವ ಜನರದ್ದೇ ಚಳವಳಿ. ಇದಕ್ಕೆ ಯಾವುದೇ ಪ್ರಾಯೋಜಕರಿಲ್ಲ ಅಥವಾ ವಾಣಿಜ್ಯ ಬೆಂಬಲವಿಲ್ಲ. ಆದರೆ ಇದಕ್ಕೆ ಪ್ರೇಕ್ಷಕರ ಬೆಂಬಲವಿದೆ. ಪ್ರತಿಕ್ರಿಯೆಯಿದೆ. ಇದು ಕೂಡ ರಂಗಭೂಮಿಯೇ”?

(ಕೃಪೆ: ‘ದಿ ಹಿಂದೂ’) □

ಗಾಂಧೀಜಿ ದೃಷ್ಟಿಯಲ್ಲಿ ಮಹಿಳೆ

ಮ. ಶ್ರೀ. ಮುರಳಿ ಕೃಷ್ಣ.

ಮಹಿಳೆಯರು ಸೇವೆಯ ಅಪರಾವತಾರ. ಆದರೆ ಅವರ ಕಾರ್ಯಕ್ಷೇತ್ರ ಹೆಚ್ಚಾಗಿ ತಮ್ಮ ಕುಟುಂಬಗಳಿಗೆ ಸೀಮಿತವಾಗಿದೆ. ಆದರೆ ಅದು ಇಡೀ ಭಾರತಕ್ಕೆ ಪಸರಿಸಬೇಕು. ದೇಶಸೇವೆ ಮಾನವ ಸೇವೆಯ ಪ್ರಥಮ ಸೋಪಾನ, ಇದೇ ಕೊನೆಗೆ ಸ್ವಯಂ-ತಿಳಿವಳಿಕೆಗೆ (ಮೋಕ್ಷ) ದಾರಿದೀಪ. ಅನೇಕ ಮಹಿಳೆಯರು ಕ್ರಿಯಾಶಾಲಿಗಳಾಗಿಲ್ಲ. ಅವರನ್ನು ಕ್ರಿಯಾಶಾಲಿಗಳಾಗುವಂತೆ ಯಾರು ಮಾಡುತ್ತಾರೆ? ಹುಟ್ಟಿದಾಗಿನಿಂದಲೇ, ಮಕ್ಕಳನ್ನು ಇಡಿಯಾಗಿ ಆಭರಣಗಳು ಹಾಗೂ ಬಟ್ಟೆಗಳಿಂದ ಮುಚ್ಚುತ್ತಾರೆ. ಹುಡುಗಿಯರಿಗೆ ಎಳೆಯ ವಯಸ್ಸಿನಲ್ಲೇ ಮದುವೆ ಮಾಡುತ್ತಾರೆ. ವಯಸ್ಸಾದ ಗಂಡಸರಿಗೆ ವಿವಾಹ ಮಾಡಿಕೊಡುತ್ತಾರೆ. ಮಹಿಳೆಯರು ಧರಿಸುವ ಆಭರಣಗಳನ್ನು ಕಂಡಾಗ ನನಗೆ ನೋವಾಗುತ್ತದೆ. ನೈಜ ಸೌಂದರ್ಯವಿರುವುದು ಹೃದಯದಲ್ಲಿ, ಆಭರಣಗಳಲ್ಲಿಲ್ಲ ಎಂಬುದನ್ನು ಯಾರು ಅವರಿಗೆ ವಿವರಣೆ ನೀಡುತ್ತಾರೆ!

ಭಾರತದ ಸಾರ್ವಜನಿಕ ಜೀವನದಲ್ಲಿ ಒಂದು ಬೃಹತ್ ಸಂಚಲನ ಉಂಟು ಮಾಡಿ, ಅಹಿಂಸಾ ತತ್ವದ ಪ್ರತಿಪಾದಕರಾಗಿ, ವಿಶ್ವಕ್ಕೇ ಮಾದರಿಯಾಗಿದ್ದ ಮಹಾತ್ಮ ಗಾಂಧೀಜಿಯವರಿಗೆ ಅನೇಕ ವಿಷಯಗಳ ಬಗೆಗೆ ಖಚಿತ ಅಭಿಮತಗಳಿದ್ದವು. ಅವರು ಜೀವಿಸಿದ್ದ ಅವಧಿಯಲ್ಲಿ ಮಹಿಳೆಯರು ಅನೇಕ ಬಗೆಯ ಕಷ್ಟಕೋಟಲೆಗಳನ್ನು ಎದುರಿಸುತ್ತಿದ್ದರು. ಜಡ್ಡುಗಟ್ಟಿದ ಕಟ್ಟು ಕಟ್ಟಳೆಗಳಿಂದ ಬಾಧಿತರಾಗಿದ್ದರು. ಹೆಚ್ಚಾಗಿ ಮನೆಗಳ ನಾಲ್ಕು ಗೋಡೆಗಳ ಬಂಧಿಗಳಾಗಿದ್ದರು.

ಗಾಂಧೀಜಿಯವರ ಕೆಲವು ಬರೆಹಗಳು, ಪತ್ರಗಳಲ್ಲಿ ಮಹಿಳೆಯರ ಬಗೆಗಿನ ಅವರ ಅನಿಸಿಕೆಗಳು, ದೃಷ್ಟಿಕೋನಗಳು ಹಾಗೂ ನಿಲುವುಗಳು ವ್ಯಕ್ತವಾಗಿವೆ. ಅವರು ತಾವು ಸಾರ್ವಜನಿಕ ಜೀವನದಲ್ಲಿ ರೂಪಿಸಿದ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಸ್ಥಾನಮಾನ ನೀಡಿದ್ದರು. ಬ್ರಿಟಿಷರ ವಿರುದ್ಧ ಹೂಡಿದ ಸತ್ಯಾಗ್ರಹ ಹೋರಾಟದಲ್ಲಿ ಮಹಿಳೆಯರಿಗೂ ಸ್ಥಾನವನ್ನು ಕಲ್ಪಿಸಿದ್ದರು. ಸ್ವರಾಜ್ ಗಳಿಸುವ ಆಂದೋಲನದಲ್ಲಿ ಮಹಿಳೆಯರು ಸಮಾನ ಸಂಗಾತಿಗಳು ಎಂಬುದನ್ನು ಕಾಂಗ್ರೆಸ್ಸಿಗರು ಮನಗಂಡಿಲ್ಲ. ಸೇವಾ ಕ್ಷೇತ್ರದಲ್ಲಿ, ಗಂಡಸು ಅವಲಂಬಿಸಬಹುದಾದ ಒತ್ತಾಸೆಯನ್ನು ಮಹಿಳೆ ನೀಡಬಲ್ಲಳು. ಮಹಿಳೆಯರು ತಮ್ಮ ಗಣ್ಯತೆಯನ್ನು ಪೂರ್ಣವಾಗಿ ಅರಿತುಕೊಂಡು, ಪುರುಷರಿಗೆ ಸಮವಾಗಿ ತಮ್ಮ ಪಾತ್ರ ವಹಿಸಬೇಕೆಂಬ ಅಂಶವನ್ನು ಕಾಂಗ್ರೆಸ್ಸಿಗರು ಮನಗಾಣಬೇಕು. ಈ ತತ್ವವನ್ನು ಅನುಷ್ಠಾನಕ್ಕೆ ತರುವಲ್ಲಿ ಅವರು ತಮ್ಮ ಮನೆಗಳಲ್ಲೇ ಇದನ್ನು ಕಾರ್ಯರೂಪಕ್ಕಿಳಿಸಬೇಕು. ಪತ್ನಿಯನ್ನು ಗೊಂಬೆಗಳಂತೆ ಕಾಣದೆ, ಸಾರ್ವಜನಿಕ ಸೇವೆಯಲ್ಲಿ ಅವರನ್ನು ಗೌರವಾನ್ವಿತ ಸಂಗಾತಿಗಳಂತೆ ನಡೆಸಿಕೊಳ್ಳಬೇಕು. ಅವರಿಗೆ ಉದಾರ ಶಿಕ್ಷಣ ದೊರಕಿರದಿದ್ದರೆ, ಅದು ಪ್ರಾಪ್ತವಾಗುವಂತೆ ಮಾಡುವುದು ಗಂಡಂದಿರ ಜವಾಬ್ದಾರಿ ಎಂದು ಸಾರಿದರು.

ಮಹಿಳೆಯರು ಸೇವೆಯ ಅಪರಾವತಾರ. ಆದರೆ ಅವರ ಕಾರ್ಯಕ್ಷೇತ್ರ ಹೆಚ್ಚಾಗಿ ತಮ್ಮ ಕುಟುಂಬಗಳಿಗೆ ಸೀಮಿತವಾಗಿದೆ. ಆದರೆ ಅದು ಇಡೀ ಭಾರತಕ್ಕೆ ಪಸರಿಸಬೇಕು.. ದೇಶಸೇವೆ ಮಾನವ ಸೇವೆಯ ಪ್ರಥಮ ಸೋಪಾನ, ಇದೇ ಕೊನೆಗೆ ಸ್ವಯಂ- ತಿಳಿವಳಿಕೆಗೆ (ಮೋಕ್ಷ) ದಾರಿದೀಪ ಅನೇಕ ಮಹಿಳೆಯರು ಕ್ರಿಯಾಶಾಲಿಗಳಾಗಿಲ್ಲ. ಅವರನ್ನು ಕ್ರಿಯಾಶಾಲಿಗಳಾಗುವಂತೆ ಯಾರು ಮಾಡುತ್ತಾರೆ? ಹುಟ್ಟಿದಾಗಿನಿಂದಲೇ, ಮಕ್ಕಳನ್ನು ಇಡಿಯಾಗಿ ಆಭರಣಗಳು ಹಾಗೂ ಬಟ್ಟೆಗಳಿಂದ ಮುಚ್ಚುತ್ತಾರೆ. ಹುಡುಗಿಯರಿಗೆ ಎಳೆಯ ವಯಸ್ಸಿನಲ್ಲೇ ಮದುವೆ ಮಾಡುತ್ತಾರೆ. ವಯಸ್ಸಾದ ಗಂಡಸರಿಗೆ ವಿವಾಹ ಮಾಡಿಕೊಡುತ್ತಾರೆ. ಮಹಿಳೆಯರು ಧರಿಸುವ ಆಭರಣಗಳನ್ನು ಕಂಡಾಗ ನನಗೆ ನೋವಾಗುತ್ತದೆ. ನೈಜ ಸೌಂದರ್ಯವಿರುವುದು ಹೃದಯದಲ್ಲಿ, ಆಭರಣಗಳಲ್ಲಿಲ್ಲ ಎಂಬುದನ್ನು ಯಾರು ಅವರಿಗೆ ವಿವರಣೆ ನೀಡುತ್ತಾರೆ! ಎಂದು ಗಾಂಧೀಜಿಯವರು ತಮ್ಮ ಅಳಲನ್ನು ತೋಡಿಕೊಂಡಿರುವುದನ್ನು ಕಾಣಬಹುದು.

ನಮ್ಮ ಮಹಿಳೆಯರು ಪುರುಷ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಲು ಒಪ್ಪಿಗೆ ನೀಡುವುದಿಲ್ಲ. ಇದು ಒಂದು ಬಗೆಯ ಕೃತಕ ಮರ್ಯಾದೆಯ ದ್ಯೋತಕ. ಇವರ ಬೇರಿರುವುದು ಲಿಂಗ ಭ್ರಾಂತಿಯಲ್ಲಿ. ಈ ವಿಚಾರದಲ್ಲಿ ಪಾಶ್ಚಿಮಾತ್ಯರು ಅನುಸರಿಸುವ ವಿಧಾನ ಸರಿಯಾದದ್ದು. ಕೆಲವು ಅಚಾತುರ್ಯಗಳು ನಡೆದಿರಬಹುದು. ಆದರೆ ಅದನ್ನೇ ಆಧಾರವಾಗಿಟ್ಟುಕೊಂಡು ಒಳ್ಳೆಯ ಕಾರ್ಯಗಳನ್ನು ನಿಲ್ಲಿಸಬಹುದು. ನಮಗೆ ನಮ್ಮ ಮೇಲೆ ಭರವಸೆಯಿರಬೇಕು.

ಪುರುಷರ ಭೋಗೇಚ್ಛೆ ಮಹಿಳೆಯರನ್ನು ಕೆಳಮಟ್ಟಕ್ಕೆ ತಳ್ಳಿದೆ ಇದು ಅವರನ್ನು ಅಲಂಕಾರಿಕ ವಸ್ತುಗಳನ್ನಾಗಿ ಮಾರ್ಪಡಿಸಿದೆ. ಆದರೆ ಅವರಿಗೆ ತಾವು ಈ ಮೂಲಕ ಗುಲಾಮರಾಗುತ್ತಿದ್ದೇವೆ ಎಂಬ ಅರಿವು ಇಲ್ಲ. ಮೂಗು, ಕಿವಿಗಳು, ಪಾದಗಳಲ್ಲಿ ಆಭಾರಣ ಧರಿಸಿ, ಅವುಗಳು ಸಂಕೋಲೆಗಳಾಗಿ ಪರಿಣಮಿಸಿವೆ. ಇವುಗಳನ್ನು ಧರಿಸುವುದರಿಂದ ತಮ್ಮ ಶಕ್ತಿ ಕುಂದುತ್ತದೆ ಎಂಬುದು ಅವರಿಗೆ ತಿಳಿದಿಲ್ಲ. ಎಂದು ಗಾಂಧೀಜಿ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಮಹಿಳೆಯರ ಹಕ್ಕುಗಳ ವಿಚಾರದಲ್ಲಿ ಗಾಂಧೀಜಿಯವರಿಗೆ ಸ್ಪಷ್ಟವಾದ ನಿಲುವಿತ್ತು. ಆಸ್ತಿ

(೧೮ನೇ ಪುಟಕ್ಕೆ)

ಮಹಾತ್ಮ ಗಾಂಧಿ ಮತ್ತು ಕ್ರಾಂತಿ...

ಎಂ. ಕಿರಣ್

ಇಂದು ನಮ್ಮ ಕಣ್ಣೆದುರಿಗೆ ಹಲವಾರು ಹಿಂಸಾತ್ಮಾಕ ಚಳವಳಿಗಳು ನಡೆಯುತ್ತಿವೆ ಇವು ಕ್ರಾಂತಿಯಿಂದಲೇ ಬದಲಾವಣೆ ಸಾಧ್ಯ; ಶೋಷಿತರ ಧ್ವನಿ ಇಂದು ಹೋರಾಟದಲ್ಲಿ ಅಡಗಿದೆ ಎಂದು ಬಿಂಬಿಸುವುದರ ಮೂಲಕ ಹಿಂಸೆಯನ್ನೆ ಪ್ರಚೋದಿಸುತ್ತಿದೆ. ನಕ್ಸಲಿಸಂ, ಅಸ್ಸಾಂನ ಮಾವೂಯಿಸಂ, ಕಾಶ್ಮೀರದ ಭಯೋತ್ಪಾದನೆ ಇವೆಲ್ಲ ಇದರ ಪರಿಣಾಮಗಳೇ. ನಿಜ, ಇಂದು ವ್ಯವಸ್ಥೆ ಭ್ರಷ್ಟರಿಂದ ಕೂಡಿದೆ, ಉಳ್ಳವನು ಇಲ್ಲದವನ್ನು ಶೋಷಿಸುತ್ತಿದ್ದಾನೆ, ಶೋಷಿತರ ಹೋರಾಟಕ್ಕೆ ಸದೃಢ ಧ್ವನಿಯೇ ಇಲ್ಲವಾಗಿದೆ, ಇಂದು ಕೆಲವೇ ಜನರ ಹಿತಾಸಕ್ತಿ ಸಾರ್ವಜನಿಕ ಹಿತಾಸಕ್ತಿ ಎಂದು ಬಿಂಬಿತವಾಗುತ್ತಿವೆ. ಪಟ್ಟಭದ್ರ ಹಿತಾಸಕ್ತಿಗಳು ಇಂದು ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಉನ್ನತ ಹಂತದ ರಾಜಕಾರಣಿಯಿಂದ ಹಿಡಿದು ಕೆಳಗಿನ ಸಾಮಾನ್ಯ ಡಿ ಗ್ರೂಪ್ ನೌಕರನವರೆಗೆ ಭ್ರಷ್ಟಚಾರ ಹಬ್ಬಿದೆ!

‘ಬ್ರಿಟಿಷರು ಭಾರತವನ್ನು ಆಕ್ರಮಣ ಮಾಡಿಕೊಳ್ಳಲಿಲ್ಲ, ಭಾರತೀಯರು ತಮ್ಮನ್ನು ತಾವು ಬ್ರಿಟಿಷರಿಗೆ ಕೊಟ್ಟುಕೊಂಡಿದ್ದಾರೆ. ಎಲ್ಲಿಯವರೆಗೆ ಈ ಆಳ್ವಿಕೆ ಬಲ ಪ್ರಯೋಗದ ಮೇಲೆ ನಿಂತಿದೆ ಅಂತ ನಂಬಿರುತ್ತಾರೋ ಅಲ್ಲಿಯವರೆಗೆ ಭಾರತೀಯರು ಬ್ರಿಟಿಷ್; ಮಹಾತ್ಮ ಗಾಂಧಿ

ಹಿಂದ್ ಸ್ವರಾಜ್ ಮಹಾತ್ಮ ಗಾಂಧಿಯವರು ಬರೆದ ಒಂದು ಅತ್ಯಂತ ಪ್ರಸಿದ್ದ ಗ್ರಂಥ. ಇದು ಅವರು ಲಂಡನ್ನಿನಿಂದ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಹಿಂದುರುಗುವಾಗ ಬರೆದ ಪುಸ್ತಕ. ಇದು ಮೂವತ್ತು ಸಾವಿರ ಪದಗಳನ್ನು ಹೊಂದಿದೆ ೧೯೦೯ ನವೆಂಬರ್ ೧೩ ರಿಂದ ೨೨ ರವರೆಗೆ ಹಗಲು ರಾತ್ರಿ ಇದನ್ನು ಬರೆದಿದ್ದಾರೆ. ೨೭೧ ಹಸ್ತಪ್ರತಿಯ ಈ ಗ್ರಂಥದ ೪೦ ಹಸ್ತಪ್ರತಿಗಳನ್ನು ಗಾಂಧೀಜಿಯವರು ತಮ್ಮ ಎಡಗೈಯಲ್ಲಿ ಬರೆದಿದ್ದಾರೆ. ‘ಆಧುನಿಕತೆಯನ್ನು ತೀರ್ವವಾಗಿ ಖಂಡಿಸುವ ಹಿಂದ್ ಸ್ವರಾಜ್‌ನ ಮೂಲ ಗುಜರಾತಿ ಬಾಷೆಯಲ್ಲಿದೆ.

ಹಿಂದ್ ಸ್ವರಾಜ್ ಪುಸ್ತಕದ ತಾಂತ್ರಿಕವಾದ ತಿಳುವಳಿಕೆಗೆ ಈ ಮೇಲಿನ ಮಾಹಿತಿಗಳು ಸಾಕು ಆದರೆ ಗಾಂಧಿಯವರ ವಿಚಾರ ಅವರ ತತ್ವಗಳು ಮತ್ತು ಇಂದು ಅದರ ಪ್ರಸ್ತುತತೆಯನ್ನು ತಿಳಿಯಲು ಪುಸ್ತಕ ಕುರಿತು ಸ್ವಲ್ಪ ವಿವರಣಾತ್ಮಕವಾಗಿ ಚರ್ಚಿಸುವ ಅಗತ್ಯತೆ ಇದೆ. ಪ್ರತಿಯೊಂದು ಗ್ರಂಥವು ಸಮಾಜಕ್ಕೆ ಕೊಡಬಹುದಾದ ಕೆಲವು ಕೊಡುಗೆಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತದೆ ಎಂದು ನೋಡುವುದಾದರೆ ‘ಹಿಂದ್ ಸ್ವರಾಜ್’ ಇಂದಿನ ಸಮಾಜಕ್ಕೆ ನೀಡಬಹುದಾದ ಕೊಡುಗೆ ಏನು? ಎಂಬುದನ್ನು ವಿಶ್ಲೇಷಿಸುವುದೆ ಈ ಲೇಖನದ ಉದ್ದೇಶ. ನಿಜವಾದ ಅರ್ಥದಲ್ಲಿ ಹಿಂದ್ ಸ್ವರಾಜ್ ನ ತತ್ವಗಳು ಇಂದು ಪ್ರಸ್ತುತ ಸಮಾಜಕ್ಕೆ ಅತ್ಯಂತ ಅಗತ್ಯವಾಗಿ ಬೇಕಾಗಿರುವ ಅಂಶ ಗಳಾಗಿವೆ.

ಗಾಂಧೀಜಿಯವರು ಹಿಂದ್ ಸ್ವರಾಜ್ ಬರೆಯಲು ಇದ್ದ ಅನೇಕ ಪ್ರಮುಖ ಕಾರಣಗಳಲ್ಲಿ ಭಾರತೀಯ ದೇಶಸೇವಕರಲ್ಲಿ ಬೆಳೆಯುತ್ತಿದ್ದ ಹಿಂಸಾ ಪ್ರವೃತ್ತಿಯು ಒಂದು. ಗಾಂಧೀಜಿಯವರ ಪ್ರಕಾರ ಹಿಂಸೆ ಯಿಂದ ಯಾವುದೇ ಬದಲಾವಣೆ ಸಾಧ್ಯವಿಲ್ಲ ಒಂದು ವೇಳೆ ಬದಲಾವಣೆ ಆದರೂ ಕ್ಷಣಿಕವಾಗಿರುತ್ತದೆ. ಇದನ್ನು ವಿವರವಾಗಿ ನೋಡುವುದಾದರೆ ಹಿಂದ್ ಸ್ವರಾಜ್ ಕೃತಿಯಲ್ಲಿ ಅವರು ಭಾರತದ ಕ್ರಾಂತಿಕಾರಿ ಗಳಿಗೆ ಹೇಳುತ್ತಾರೆ. ಬ್ರಿಟಿಷರು ನಮ್ಮನ್ನು ಆಳುತ್ತಿರುವುದು ಬಲದ ಆಧಾರದ ಮೇಲೆ ಅವರ ಆಳ್ವಿಕೆಗೆ ಶಕ್ತಿಯೇ ಮೂಲ ಒಂದು ವೇಳೆ ನಾವು ನಮ್ಮ ಪ್ರಭುತ್ವಕ್ಕೆ ಬಲವೆ ಆಧಾರ ಎಂದು ತಿಳಿದು, ಬಲದ ಮೂಲಕ ಸ್ವಾತಂತ್ರ್ಯ ಪಡೆಯಲು ಹೊರಟರೆ ನಮಗೂ ಅವರಿಗೂ ಅಂತಹ ವ್ಯತ್ಯಾಸ ಕಾಣುವುದಿಲ್ಲ ಒಂದು ವೇಳೆ ಬಲಪ್ರಯೋಗದ ಮೂಲಕ ನಾವು ಸ್ವಾತಂತ್ರ್ಯ ಪಡೆದದ್ದೇ ಆದರೆ ನಾವು ಕಟ್ಟುವ ಸ್ವಾತಂತ್ರ್ಯ ಪ್ರಭುತ್ವ ಬ್ರಿಟಿಷರ ಪ್ರಭುತ್ವಕ್ಕಿಂತ ವಿಭಿನ್ನವಾಗಿರುವುದಕ್ಕೆ ಸಾಧ್ಯವೇ ಇಲ್ಲ. (ಹಿಂದ್ ಸ್ವರಾಜ್: ಉದ್ದೇಶ: ಐತಿಹಾಸಿಕ ಸಂದರ್ಭ ಪ್ರೋ ಜೆ.ಎಸ್.ಸದಾನಂದ;) ಆದ್ದರಿಂದ ಹಿಂಸೆಗೆ ಬದಲು ಅಹಿಂಸೆ ಪ್ರಬಲವಾದ ಅಸ್ತ್ರವಾಗಬೇಕು. ಏಕೆಂದರೆ ಹಿಂಸೆ ಬಲವನ್ನು ಆಶ್ರಯಿಸಿದರೆ ಅಹಿಂಸೆ ಮನೋಸ್ಥೈರ್ಯ, ಆತ್ಮವಿಶ್ವಾಸವನ್ನು ಅವಲಂಬಿಸಿರುತ್ತದೆ.. ಇದು ವ್ಯಕ್ತಿಗೆ ಅರ್ಥವಾಗಬೇಕಾದರೆ ಅವನಿಗೆ ತನ್ನನ್ನು ಆಳಿಕೊಳ್ಳಲು ತಿಳಿದಿರಬೇಕು. ಇದನ್ನೇ ಗಾಂಧೀಜಿಯವರು Self rule ಎಂದು ಕರೆದದ್ದು. ನಮಗೆ ತಿಳಿದಿರುವ ಇತಿಹಾಸ ಜಗತ್ತಿನ ಯುದ್ಧಗಳ ಮತ್ತು ರಾಜರುಗಳ ಕಥೆ ಮಾತ್ರ ರಾಜರು ಹೇಗೆ ಆಟವಾಡಿದರು, ಹೇಗೆ ಪರಸ್ಪರ ಹಗೆಗಳಾದರು, ಹೇಗೆ ಒಬ್ಬರನ್ನೊಬ್ಬರು ಕೊಂದರು ಎಂಬುದೆಲ್ಲಾ ಈಗಿನ ಇತಿಹಾಸದಲ್ಲಿ ವರ್ಣಿತವಾಗಿದೆ. ಜಗತ್ತಿನಲ್ಲಿ ಇಷ್ಟೆ ಆಗಿದ್ದರೆ ಈ ಲೋಕ ಎಂದೂ ಮುಳುಗಿ ಹೋಗುತ್ತಿತ್ತು. ಜಗತ್ತಿನ ಇತಿಹಾಸ ಯುದ್ಧದಿಂದ ಮೊದಲಾಗಿದ್ದರೆ ಇಂದು ಒಬ್ಬ ಮನುಷ್ಯನು ಬದುಕಿರುತ್ತಿರಲಿಲ್ಲ. ಜಗತ್ತಿನಲ್ಲಿ ಇನ್ನೂ ಕೋಟ್ಯಾಂತರ ಜನ ಬದುಕಿದ್ದಾರೆ ಎಂಬುದೇ ಈ ಜಗತ್ತು ಶಸ್ತ್ರಬಲದಿಂದ ನಡೆದಿಲ್ಲ ಆತ್ಮಬಲದಿಂದ ನಡೆದಿದೆ ಎಂಬುದಕ್ಕೆ ಸಾಕ್ಷಿ. ಇಂದು ಜಗತ್ತಿನಲ್ಲಿ ಲಕ್ಷಾಂತರ ಜನ ಈ ಆತ್ಮ ಬಲವನ್ನೆ ನಂಬಿ ಬದುಕುತ್ತಿದ್ದಾರೆ. (ಗಾಂಧೀಜಿ, ಹಿಂದ್ ಸ್ವರಾಜ್, ಪುಟ ೭೫).

ಪ್ರಸ್ತುತ ಸಮಾಜಕ್ಕೆ ಗಾಂಧೀಜಿಯವರ ಈ ಅಂಶ ಅತ್ಯಂತ ಅಗತ್ಯವಾಗಿ ಅರ್ಥವಾಗಬೇಕಿದ್ದೆ. ಏಕೆಂದರೆ ಇಂದು ನಮ್ಮ ಕಣ್ಣೆದುರಿಗೆ ಹಲವಾರು ಹಿಂಸಾತ್ಮಾಕ ಚಳವಳಿಗಳು ನಡೆಯುತ್ತಿವೆ. ಇವು ಕ್ರಾಂತಿ ಯಿಂದಲೇ ಬದಲಾವಣೆ ಸಾಧ್ಯ, ಶೋಷಿತರ ಧ್ವನಿ ಇಂದು ಹೋರಾಟದಲ್ಲಿ ಅಡಗಿದೆ. ಎಂದು ಬಿಂಬಿಸುವುದರ ಮೂಲಕ ಹಿಂಸೆಯನ್ನೆ ಪ್ರಚೋದಿಸುತ್ತಿದೆ. ಉದಾ; ನಕ್ಸಲಿಸಂ, ಅಸ್ಸಾಂನ ಮಾವೂಯಿಸಂ, ಕಾಶ್ಮೀರದ ಭಯೋತ್ಪಾದನೆ ಮುಂತಾದವು. ನಿಜ ಇಂದು ವ್ಯವಸ್ಥೆ ಭ್ರಷ್ಟರಿಂದ ಕೂಡಿದೆ, ಉಳ್ಳವನು ಇಲ್ಲದವನನ್ನು ಶೋಷಿಸುತ್ತಿದ್ದಾನೆ, ಶೋಷಿತರ ಹೋರಾಟಕ್ಕೆ ಸದ್ಯಢ ಧ್ವನಿಯೇ ಇಲ್ಲವಾಗಿದೆ, ಇಂದು ಕೆಲವೇ ಜನರ ಹಿತಾಸಕ್ತಿ ಸಾರ್ವಜನಿಕ ಹಿತಾಸಕ್ತಿ ಎಂದು ಬಿಂಬಿತವಾಗುತ್ತಿವೆ. ಪಟ್ಟಭದ್ರ ಹಿತಾಸಕ್ತಿಗಳು ಇಂದು ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಉನ್ನತ ಹಂತದ ರಾಜಕಾರಣಿಯಿಂದ ಹಿಡಿದು ಕೆಳಗಿನ ಸಾಮಾನ್ಯ ಡಿ ಗ್ರೂಪ್ ನೌಕರನವರೆಗೆ ಭ್ರಷ್ಟಚಾರ ಹಬ್ಬಿದೆ! ಪರಿಸ್ಥಿತಿ ಹೀಗಿರುವಾಗ ನಿಜವಾದ ಶೋಷಿತರ ಧ್ವನಿಗೆ ಬೆಲೆ ಎಲ್ಲಿದೆ? ಇದಕ್ಕೆ ಪರಿಹಾರವೇನು? ಈ ಪಟ್ಟಭದ್ರ ಗುಂಪುಗಳ ವಿರುದ್ದ ಹೋರಾಡಲು ಶೋಷಿತನಿಗೆ ಇರುವ ದಾರಿ ಯಾವುದು? ಎಂಬ ಪ್ರಶ್ನೆಗಳಿಗೆ ಹಿಂದ್ ಸ್ವರಾಜ್‌ನಲ್ಲಿ ತಕ್ಕ ಮಟ್ಟಿಗೆ ಉತ್ತರ ಪಡೆಯಬಹುದು.

ಸರಿ ತಾವು ಹೇಳಿದ ಎಲ್ಲಾ ಸಮಸ್ಯೆಗಳೂ ಇವೆ. ಆದರೆ ಅದಕ್ಕೆ ಪರಿಹಾರ ಕ್ರಾಂತಿ ಅಲ್ಲ, ಈ ಎಲ್ಲಾ ಸಮಸ್ಯೆಗಳನ್ನು ಇಂದು



ತಂದೊಡ್ಡಿದವರು ಈ ದೇಶದ ಪ್ರಭಾವಿ ರಾಜಕಾರಣಿಗಳು, ನೌಕರಶಾಹಿತ್ವ, ಮತ್ತು ಬಂಡವಾಳಶಾಹಿಗಳು. ಆದರೆ ನೆನಪಿಡಿ ಇವರೆಲ್ಲರೂ ಸಾಮಾನ್ಯ ಜನರನ್ನು ಶೋಷಿಸಲು ಬಳಸುತ್ತಿರುವುದು ಬದಲಾದ ಬಲದ ಸ್ವರೂಪನ್ನೆ. ಅಂದರೆ ಬ್ರಿಟಿಷರು ಅಂದು ನಮ್ಮನ್ನು ಆಳಲು ಸೈನಿಕಬಲ, ನೌಕಾಬಲವನ್ನು ಆಶ್ರಯಿಸಿದ್ದರೆ ಇಂದು ಈ ಪಟ್ಟ ಭದ್ರ ಗುಂಪುಗಳು ನಮ್ಮನ್ನು ಆಳಲು ಹಣದ ಬಲ, ಜಾತಿಯ ಬಲ, ಅಧಿಕಾರದ ಬಲಗಳನ್ನು ಬಳಸುತ್ತಿದ್ದಾರೆ. ಒಂದುವೇಳೆ ನಾವು ಇವರನ್ನು ಮಣಿಸಲು ಮತ್ತು ಶೋಷಿತರ ಪರ ಅವರ ಹಕ್ಕುಗಳಿಗಾಗಿ ಹೋರಾಡಲು ಬಲವನ್ನೆ (ಕ್ರಾಂತಿ) ಅವಲಂಬಿಸಿದರೆ ನಮಗೂ ಅವರಿಗೂ ಅಂತಹ ವ್ಯತ್ಯಾಸ ಕಾಣುವುದಿಲ್ಲ. ಹಿಂದಿನ ಹಲವಾರು ಚಳವಳಿಗಳಂತೆ ಈ ಚಳುವಳಿಯು ಸಹ ಯಾವುದೋ ಒಂದು ವರ್ಗಕ್ಕೊ ಜಾತಿಗೊ ಅಥವ ಸಿದ್ದಾಂತಕ್ಕೊ ಸೀಮಿತವಾಗುವ ಸಾಧ್ಯತೆ ಇದೆ. ಆದ್ದರಿಂದ ಹಿಂಸೆಯನ್ನು ಬಿಟ್ಟು, ಅಸ್ತ್ರಬಲದ ಬದಲು ಆತ್ಮಬಲ, ಮನೋಸ್ಥೈರ್ಯದ ಮೂಲಕ ಹೋರಾಡುವ ಅಗತ್ಯತೆ ಇದೆ. ಈ ರೀತಿಯ ಹೋರಾಟಕ್ಕೆ ಇರುವ ದಾರಿ ಸತ್ಯಗ್ರಹ "ಸ್ವಯಂ ಕಷ್ಟ ಸಹಿಸಿ ತಮ್ಮ ಅಧಿಕಾರಗಳನ್ನು ಗಳಿಸುವ ಪದ್ದತಿಯೇ ಸತ್ಯಗ್ರಹ"

(ಗಾಂಧೀಜಿ, ಹಿಂದ್ ಸ್ವರಾಜ್, ಪುಟ ೭೭)

ಹಿಂಸೆ ಎಂದಿಗೂ ಬಲವನ್ನೆ ನಂಬಿದೆ, ಹಿಂಸೆ, ಕೈಗೊಳ್ಳಲು ಕೊನೆಯ ಪಕ್ಷ ಜನಬಲ ಬೇಕು. ಆದರೆ ಗಾಂಧೀಜಿಯವರು ತಿಳಿಸಿದ ಅಹಿಂಸಾ ಮಾರ್ಗಕ್ಕೆ ಆತ್ಮಬಲ ಹೊಂದಿರುವ ಒಬ್ಬ ಸಾಕು. ಇಂದು ಹಳ್ಳಿಗಳಲ್ಲಿಯೇ ಇದ್ದುಕೊಂಡು ಶೋಷಣೆಯ ವಿರುದ್ಧ ಹೋರಾಡುತ್ತಿರುವ ಕ್ರಾಂತಿಕಾರಿಗಳಿಗೆ (ಉದಾ; ನಕ್ಸಲರಿಗೆ) ಗಾಂಧೀಜಿಯವರ ಈ ಆತ್ಮಬ ಲದ ಮೂಲಕ ಹೋರಾಡುವ ಅಹಿಂಸೆಯೇ ಮೂಲವಾಗಿ ರುವ ಸತ್ಯಾಗ್ರಹದ ದಾರಿ ಸಹ್ಯವೇ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ? ಏಕೆಂದರೆ ಗಾಂಧೀಜಿಯವರ ಸತ್ಯಾ ಗ್ರಹದ ಪರಿಕಲ್ಪನೆಗೂ ಗ್ರಾಮ ಸ್ವರಾಜ್ಯಕ್ಕೂ ನೇರವಾದ ಸಂಬಂಧ ಇದೆ. ಒಬ್ಬ ಸತ್ಯಾಗ್ರಹಿ ಸುತ್ತಮುತ್ತಲಿನ ಸಮಾ ಜಕ್ಕೆ ಮಾದರಿಯಾಗಿ ಬದುಕಬೇಕಾಗುತ್ತದೆ. ಹಾಗೆ ಬದು ಕಲು ಸಾಧ್ಯವಾಗುವುದು ಸಣ್ಣ ಗ್ರಾಮದಲ್ಲಿಯೇ, ನಗರ ಗಳಲ್ಲಿ ಯಾರೂ ಸತ್ಯಾಗ್ರಹಿ ಆಗುವುದಕ್ಕೆ ಸಾಧ್ಯ ಇಲ್ಲ. ಯಾಕೆಂದರೆ ನಗರಗಳಲ್ಲಿ ಯಾರೂ ಯಾರಿಗೂ ಒಳ್ಳೆಯ ಉದಾಹರಣೆ ಆಗುವುದಿಲ್ಲ. ಇನ್ನು ಮುಂದೆ ಹೋಗಿ ಗಾಂಧಿಯವರು ಸ್ವತಂತ್ರ್ಯ ಯಾರಿಂದ ಎಂಬ ವಿಷಯವಾಗಿ ಮಾತನಾಡುತ್ತಾರೆ. ಇಂದು ಸ್ವಾತಂತ್ರ್ಯವನ್ನು ವಿದೇಶಿ ಆಳ್ವಿಕೆಯಿಂದ ಭಾರತವನ್ನು ಮುಕ್ತಗೊಳಿಸುವುದು ಎನ್ನುವ ಬಹಳ ಸಂಕುಚಿತವಾಗಿ ಅರ್ಥೈಸಲಾಗುತ್ತಿದೆ. ನನ್ನ ಪ್ರಕಾರ ಸ್ವಾತಂತ್ರ್ಯ ಅಂದರೆ ಬ್ರಿಟಿಷರನ್ನು ಭಾರತದಿಂದ ಓಡಿಸುವುದಿಲ್ಲ, ಬ್ರಿಟಿಷರು ಮತ್ತು ನಾವೆಲ್ಲರು ಬಲಿಪಶುವಾದ ಆಧುನಿಕ ನಾಗರಿಕತೆಗೆ ಪರ್ಯಾಯಾಯವಾದದ್ದನ್ನು ಹುಡುಕುವುದು. ಅಂತಿಮವಾಗಿ ಗಾಂಧೀಜಿಯವರೆ ಹೇಳಿದ ಹಾಗೆ ಹಿಂದ್ ಸ್ವರಾಜ್ ದ್ವೇಷಕ್ಕೆ ಬದಲು ಆತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ಇದಿರಾಗಿ ಆತ್ಮ ಬಲವನ್ನು ನಿಲ್ಲಿಸುತ್ತದೆ. ಯಾಕೊ.... ಗಾಂಧೀಜಿ ಮತ್ತೆ ಮತ್ತೆ ನೆನಪಾಗುತ್ತಿದ್ದಾರೆ □

ಗಾಂಧೀಜಿ ದೃಷ್ಟಿಯಲ್ಲಿ ಮಹಿಳೆ

(೧೬ನೇ ಪುಟದಿಂದ)

ಹಕ್ಕಿಗೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳ ನಡುವೆ ತಾರತಮ್ಯವಿರಬಾರದು. ವನಿತೆಯನ್ನು ದುರ್ಬಲಳು ಎಂದು ಕರೆಯುವುದು ಅಪಮಾನಕರ. ಹೀಗೆ ಕರೆಯುವುದು, ಪುರುಷ ಆಕೆಯ ಮೇಲೆ ಎಸಗುವ ಅನ್ಯಾಯ ಬಲವನ್ನು ದೈಹಿಕವಾಗಿ ಮಾತ್ರ ಪರಿಗಣಿಸಬಹುದಾದರೆ, ಪುರುಷ ಹೆಚ್ಚು ಬಲಶಾಲಿ ತ್ಯಾಗ, ಬಲಿದಾನ, ಸಹಿಷ್ಣುತೆ, ಧೈರ್ಯ ಮುಂತಾದ ಆಯಾಮಗಳ ನಿಟ್ಟಿನಲ್ಲಿ ಬಲಾಬಲಗಳನ್ನು ವ್ಯಾಖ್ಯಾನಿಸುವುದಾದರೆ ಆಕೆ ತುಂಬಾ ಶಕ್ತಿಶಾಲಿ. ಆಕೆ ಪುರುಷನ ಮೂಲಾಧಾರ. ಅಹಿಂಸೆಯ ಮುನ್ನಡೆಗೆ ಮಹಿಳೆಯೇ ದಿಕ್ಸೂಚಿ. ಒಬ್ಬ ಮಹಿಳೆಗಿಂತ ಹೃದಯಕ್ಕೆ ಸಂವೇದನಾ ರೂಪದಲ್ಲಿ ಪರಿಣಾಮಕಾರಿಯಾಗಿ ತಟ್ಟಬಲ್ಲವರು ಯಾರಿದ್ದಾರೆ!

ಇಂದು ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ರಂಗದಲ್ಲಿದ್ದಾರೆ. ಹೆಚ್ಚಿನವರಿಗೆ ಸ್ವಂತ ಆಲೋಚನೆಗಳಿಲ್ಲ. ಅವರು ತಮ್ಮ ಮಾತಾಪಿತೃ ಅಥವಾ ಗಂಡಂದಿರ ಆಜ್ಞಾಪರಿಪಾಲಕರಾಗಿದ್ದಾರೆ. ಈ ಅವಲಂಬನೆಯ ಕಾರಣದಿಂದ ಅವರು ಮಹಿಳಾ ಹಕ್ಕುಗಳ ಬಗೆಗೆ ಕೂಗಾಡುತ್ತಾರೆ. ಇವರ ಬದಲು ಅವರು ಮಹಿಳೆಯರನ್ನು ಮತದಾರರನ್ನಾಗಿ ನೋಂದಾಯಿಸಬೇಕು. ಅವರಿಗೆ ಸೂಕ್ತ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳಬೇಕು. ಸ್ವಂತವಾಗಿ ಯೋಚಿಸುವ ಶಕ್ತಿಯನ್ನು ನೀಡುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಜಾತಿಯ ಸಂಕೋಲೆಯಿಂದ ಬಿಡಿಸಿಕೊಳ್ಳಬೇಕು. ಹೇಗಾದಾಗ ಮಾತ್ರ ಪುರುಷರಿಗೆ ಮಹಿಳೆಯ ಶಕ್ತಿ, ಆಕೆಯ ಬಲಿದಾನ ಅವಳಿಗೆ ಗೌರವಯುತವಾದ ಸ್ಥಾನವನ್ನು ನೀಡುತ್ತವೆ. ಇಂದೂ ಸಹ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತ್ ಹಾಗೂ ಇತರೆಡೆ ಜನ ಪ್ರತಿನಿಧಿಗಳಾಗಿರುವ ಹಲವು ಮಹಿಳೆಯರು ಸೂತ್ರದ ಗೊಂಬೆಗಳಾಗಿರುವುದನ್ನು ಕಾಣುತ್ತಿದ್ದೇವೆ. ಇದರಿಂದ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪಿತೃಪ್ರಧಾನತೆ ಎಂತಹ ಪಾತ್ರ ವಹಿಸುತ್ತಿದೆ ಎಂಬುದು ವೇದ್ಯವಾಗುತ್ತದೆ.

ಆದರೆ ಗಾಂಧೀಜಿಯವರ ಮಹಿಳೆಯರ ಕುರಿತ ಕೆಲವು ಹೇಳಿಕೆಗಳು, ಅಭಿಪ್ರಾಯಗಳು ವಿರೋಧಾಭ್ಯಾಸದಿಂದ ಕೂಡಿರುವುದನ್ನು ಗಮನಿಸಬಹುದು. ಪುರುಷರು ಹಾಗೂ ಮಹಿಳೆಯರನ್ನು ವಿಭಿನ್ನವಾಗಿ ಮಾಡಿರುವುದು ನಿಸರ್ಗ. ಆದುದರಿಂದ ಇವರೀರ್ವರ ನಡುವಿನ ಶಿಕ್ಷಣದಲ್ಲಿ ವ್ಯತ್ಯಾಸ ಇರಬೇಕು. ಜೀವನದಲ್ಲಿ ಅವರು ಸರಿಸಮಾನರು. ಆದರೆ ಅವರ ಕ್ರಿಯೆಗಳು ಭಿನ್ನವಾಗಿವೆ. ಮನೆಯನ್ನಾಳುವುದು ಮಹಿಳೆಯೊಬ್ಬಳ ಹಕ್ಕು. ಅದರ ಹೊರಗಡೆ ಪುರುಷ ಸರದಾರ. ಪುರುಷ ಗಳಿಸುತ್ತಾನೆ. ಮಹಿಳೆ ಉಳಿಸುತ್ತಾಳೆ; ಖರ್ಚು ಮಾಡುತ್ತಾಳೆ. ಅವಳು ಮಗುವಿನ ಲಾಲನೆ ಪಾಲನೆ ಮಾಡುತ್ತಾಳೆ; ಅದರ ಭವಿಷ್ಯವನ್ನು ರೂಪಿಸುತ್ತಾಳೆ. ವ್ಯಕ್ತಿತ್ವವನ್ನು ರೂಪಿಸುವ ಜವಾಬ್ದಾರಿಯನ್ನು ಹೊರುತ್ತಾಳೆ. ಆಕೆ ತನ್ನ ಮಕ್ಕಳ ಶಿಕ್ಷಕಿ ಹಾಗೆಯೇ ರಾಷ್ಟ್ರಕ್ಕೇ ಮಾತೆ. ಆ ಅರ್ಥದಲ್ಲಿ ಪುರುಷ ತಂದೆಯಲ್ಲ. ಬೆಳೆದ ಮಗು ಹೆಚ್ಚಾಗಿ ಬೆರೆಯುವುದು ತಾಯಿಯ ಜೊತೆ ತಂದೆಯ ಜೊತೆಗಲ್ಲ. ಪ್ರಕೃತಿಯ ವಿಧಾನವು ಹೀಗಿರಬೇಕಾದರೆ, ಒಬ್ಬ ಮಹಿಳೆ ತನ್ನ ಜೀವನ ನಡೆಸುವುದಕ್ಕಾಗಿ ಸಂಪಾದಿಸಬೇಕಿಲ್ಲ. ಹೆಂಗಸರು ಟೆಲಿಗ್ರಾಫ್ ಗುಮಾಸ್ತರು, ಬೆರಳಚ್ಚುಗಾರರಾಗಿ ದುಡಿಯುವ ಪರಿಸ್ಥಿತಿ ಒಳ್ಳೆಯದಲ್ಲ. ಒಂದೆಡೆ ಮಹಿಳೆಯರನ್ನು ಅಜ್ಞಾನ ಹಾಗೂ ದಬ್ಬಾಳಿಕೆಯಲ್ಲಿ ನಲುಗಿಸುವುದು ತಪ್ಪು. ಇನ್ನೊಂದೆಡೆ ಪುರುಷರು ಮಾಡುವ ಕೆಲಸಗಳಲ್ಲಿ ಅವರನ್ನು ತೊಡಗಿಸುವುದು ಅವನತಿ ಹಾಗು ನಿರಂಕುಶ ಪ್ರಭುತ್ವದ ಸಂಕೇತ, ಹಾಗೆಯೇ ಜನನ ನಿಯಂತ್ರಣದ ನಿಟ್ಟಿನಲ್ಲಿ ಬಳಸುವ ಗರ್ಭನಿರೋಧಕಗಳು ಇಡೀ ಸ್ತ್ರೀ ಸಮುದಾಯಕ್ಕೇ ಅವಮಾನಕರ ಎಂಬಿತ್ಯಾದಿ ಗಾಂಧೀಜಿಯವರ ನಿಲುವುಗಳು ವಿವಾದಾತ್ಮಕವಾಗಿವೆ.

> ಇಂದು, ನಾವು ಸ್ವಾತಂತ್ರ್ಯ ಗಳಿಸಿ ೬೦ ವರ್ಷಗಳಾದವು, ಮಹಿಳೆಯರ ಜೀವನದಲ್ಲಿ ಅಪಾರ ಬದಲಾವಣೆಗಳಾಗಿವೆ. ವಿದ್ಯಾವಂತರಾಗಿ, ಹಲವು ಕ್ಷೇತ್ರಗಳು ಹಾಗು ಸ್ತರಗಳಲ್ಲಿ ಮುಂದಿದ್ದಾರೆ. ದುಡಿಯುವ ಮೂಲಕ ತಮ್ಮ ಕುಟುಂಬಗಳಿಗೆ ಆರ್ಥಿಕವಾಗಿ ಆಧಾರವಾಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ಸಮರ್ಥವಾಗಿ ನಿಭಾಯಿಸಿ ಸೈ ಎನಿಸಿಕೊಂಡಿದ್ದಾರೆ.

ಆದರೆ ಈ ದ್ವಂದ್ವಗಳ ಹೊರತಾಗಿಯೂ, ಗಾಂಧೀಜಿ ಮಹಿಳೆಯರ ಏಳಿಗೆಯ ವಿಘುಲದಲ್ಲಿ ಮುನ್ನೋಟ ಹೊಂದಿದ್ದ ನಾಯಕರಾಗಿದ್ದರು ತಾವು ನಂಬಿದ್ದ ಮೌಲ್ಯಗಳನ್ನು ಕಾರ್ಯರೂಪಕ್ಕಿಳಿಸಿ, ಒಂದು ಅಪೂರ್ವ ಮಾದರಿಯಾಗಿದ್ದರು.

ಇಂದು, ನಾವು ಸ್ವಾತಂತ್ರ್ಯ ಗಳಿಸಿ ೬೦ ವರ್ಷಗಳಾದವು, ಮಹಿಳೆಯರ ಜೀವನದಲ್ಲಿ ಅಪಾರ ಬದಲಾವಣೆಗಳಾಗಿವೆ. ವಿದ್ಯಾವಂತರಾಗಿ, ಹಲವು ಕ್ಷೇತ್ರಗಳು ಹಾಗು ಸ್ತರಗಳಲ್ಲಿ ಮುಂದಿದ್ದಾರೆ. ದುಡಿಯುವ ಮೂಲಕ ತಮ್ಮ ಕುಟುಂಬಗಳಿಗೆ ಆರ್ಥಿಕವಾಗಿ ಆಧಾರವಾಗಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ಸಮರ್ಥವಾಗಿ ನಿಭಾಯಿಸಿ ಸೈ ಎನಿಸಿಕೊಂಡಿದ್ದಾರೆ.

ಆದರೆ ಇದು ನಾಣ್ಯದ ಒಂದು ಮುಖ ಮಾತ್ರ. ಈಗಲೂ, ನಮ್ಮ ರಾಷ್ಟ್ರದಲ್ಲಿ ಕೋಟ್ಯಾಂತರ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಲಿಂಗ ತಾರತಮ್ಯಕ್ಕೆ ಈಡಾಗಿದ್ದಾರೆ. ಶೋಷಣೆ, ದಬ್ಬಾಳಿಕೆಗಳಿಗೆ ಒಳಗಾಗಿದ್ದಾರೆ. ಅಸಂಘಟಿತ ಕಾರ್ಮಿಕರ ಕ್ಷೇತ್ರದಲ್ಲಂತೂ ಕನಿಷ್ಠ ಕೂಲಿಯೂ ದೊರೆಯುತ್ತಿಲ್ಲ. ದಲಿತ ಮಹಿಳೆಯರು ಅತಂತ್ರರಾಗಿದ್ದಾರೆ. ಭ್ರೂಣ ಹತ್ಯೆಗಳು, ಅತ್ಯಾಚಾರ, ವರದಕ್ಷಣೆ, ಮುಂತಾದ ಪೀಡೆಗಳಿಂದ ನೊಂದಿದ್ದಾರೆ. ಗಾಂಧೀಜಿ ಕಲ್ಪನೆಯ ಮಹಿಳಾ ಸಬಲೀಕರಣ ಇನ್ನೂ ಸಾಕಾರಗೊಂಡಿಲ್ಲ. ರಾಷ್ಟ್ರದ ಮುನ್ನಡೆಗೆ ಅದು ಸಾಕಾರಗೊಳ್ಳಬೇಕಾದದ್ದು ಅವಶ್ಯಕ. □

ರಾಷ್ಟ್ರಪಿತನ

138ನೇ ಜಯಂತಿ

2ನೇ ಅಕ್ಟೋಬರ್, 2007

'ಅಂತರ್‌ರಾಷ್ಟ್ರೀಯ ಅಹಿಂಸಾ ದಿನಾಚರಣೆ'

-ವಿಶ್ವಸಂಸ್ಥೆ

<u>ನನ್ನ ಕನಸಿನ ಭಾರತ</u>

"ಬಡಜನತೆಯು ಭಾರತ ದೇಶವನ್ನು ತಮ್ಮ ನಾಡೆಂದು. ಈ ನಾಡನ್ನು ಕಟ್ಟುವಲ್ಲಿ ತಮ್ಮ ದನಿಗೂ ಮಹತ್ವವಿದೆಯೆಂದು ಭಾವಿಸುವಂತಹ ದೇಶಕ್ಕಾಗಿ ನಾನು ಶ್ರಮಿಸುತ್ತೇನೆ. ಮೇಲ್ವರ್ಗ ಮತ್ತು ಕೆಳವರ್ಗ ಎಂಬ ಭೇದವಿಲ್ಲದ ವರ್ಗರಹಿತ ಭಾರತವಾಗಿ, ಎಲ್ಲ ಸಮುದಾಯದವರು ಸೌಹಾರ್ದಯುತವಾಗಿ ಬಾಳ್ವೆ ನಡೆಸುವಂತಹ ಭಾರತವನ್ನು ಕಟ್ಟಲು ನಾನು ದುಡಿಯುತ್ತೇನೆ. ಅಸ್ಪೃಶ್ಯತೆ, ಮದ್ಯಪಾನ ಅಥವಾ ಮಾದಕ ದ್ರವ್ಯದಂತಹ ಶಾಪಗಳಿಂದ ಮುಕ್ತವಾದಂತಹ ಭಾರತವನ್ನು ಸ್ತ್ರೀ-ಪುರುಷರಿಗೆ ಸಮಾನ ಹಕ್ಕುಳ್ಳ ಭಾರತವನ್ನು, ವಿಶ್ವದ ಎಲ್ಲ ರಾಷ್ಟ್ರಗಳೊಂದಿಗೆ ಶಾಂತಿಯುತ ಸಂಬಂಧ ಹೊಂದಿರುವಂತಹ ಭಾರತವನ್ನು ಕಟ್ಟಲು ನಾನು ಪ್ರಯತ್ನಿಸುತ್ತೇನೆ. ಇದು ನನ್ನ ಕನಸಿನ ಭಾರತ".

–ಮಹಾತ್ಮ ಗಾಂಧಿ

ಕರ್ನಾಟಕ ವಾರ್ತೆ
Karnataka Information

ಪೂನಾ ಒಪ್ಪಂದ: ಚಾರಿತ್ರಿಕ ಅವಲೋಕನ

ರವಿಂದ್ರನಾಥ
ಎಸ್. ಹೊಸ್ಮನಿ

ದ್ವಿ-ಮತದಾನ ಪದ್ಧತಿ ವಿರುದ್ಧ ಉಪವಾಸ ಕುಳಿತ ಗಾಂಧಿ ಧರಣಿ ಮುಂದುವರಿಸುತ್ತಾರೆ ಅವರ ದೇಹ ಸ್ಥಿತಿ ಜಟಿಲವಾಗುತ್ತದೆ. ಇದನ್ನು ಮನಗಂಡ ಕಾಂಗ್ರೆಸ್ಸಿನವರು ಬಾಬಾಸಾಹೇಬರ ಮೇಲೆ ದಲಿತರಿಗೆ ಜೀವ ಬೆದರಿಕೆಯಂತಹ ಭಯವನ್ನು ಹುಟ್ಟಿಸಿ ಬ್ರಿಟಿಷರು ನೀಡಿದ ೭೮ ದ್ವಿ-ಮತದಾನ ಪದ್ಧತಿಯ ಸ್ಥಾನಗಳನ್ನು ಕೈ ಬಿಟ್ಟು ತಾವು ನೀಡುವ ೧೫೧ ಮೀಸಲು ಸ್ಥಾನಗಳನ್ನು ಒಪ್ಪಿಕೊಳ್ಳುವಂತೆ ಒತ್ತಡ ಹೇರುತ್ತಾರೆ. ಬಾಬಾಸಾಹೇಬರು ತನ್ನ ಜನಾಂಗದ ಮುಂದಿನ ಬೆಳವಣಿಗೆಯ ಹಿತದೃಷ್ಟಿಯನ್ನಿಟ್ಟುಕೊಂಡು ಅನಿವಾರ್ಯವಾಗಿ ಮೀಸಲಾತಿಯನ್ನು ಒಪ್ಪಿಕೊಳ್ಳುತ್ತಾರೆ. ಗಾಂಧೀಜಿ ಕುತಂತ್ರದಿಂದ ಮತ್ತೇ ದಲಿತರು ತಮ್ಮ ಸ್ವತಂತ್ರ ರಾಜಕೀಯ ಹಕ್ಕನ್ನು ಕಳೆದುಕೊಳ್ಳುತ್ತಾರೆ.

ಮೂರು ಶತಮಾನಗಳ ಕಾಲ ನಮ್ಮನ್ನಾಳಿದ ಬ್ರಿಟಿಷರು ಭಾರತೀಯರಿಗೆ ೧೮೩೫ರ ಲಾರ್ಡ್ ಮೇಕಾಲೆ ವರದಿಯ ಪ್ರಕಾರ ಸಾರ್ವತ್ರಿಕವಾಗಿ ಶಿಕ್ಷಣವನ್ನು ಕಡ್ಡಾಯಗೊಳಿಸಿದರು. ಆದರೆ ದಲಿತರಿಗೆ ನಿಜವಾದ ಶಿಕ್ಷಣ ದೊರೆತ್ತಿದ್ದು ಮಹಾತ್ಮ ಜ್ಯೋತಿಬಾಫುಲೆ ಮತ್ತು ಸಾವಿತ್ರಿ ಬಾಫುಲೆಯವರ ೧೮೪೮ ಮತ್ತು ೧೮೫೧ರ ಹೊಸ ಶಾಲೆ ಪ್ರಾರಂಭದ ನಂತರ ಎನ್ನುವುದು ನಾವ್ಯಾರು ಮರೆಯುವಂತಿಲ್ಲ ಬ್ರಿಟಿಷರ ರಾಜಕೀಯದಿಂದ ಭಾರತೀಯರಿಗೆ ಬಹಳಷ್ಟು ಅನ್ಯಾಯವಾದರೂ ಕೂಡ, ಶಿಕ್ಷಣ ಕ್ಷೇತ್ರದಿಂದ ಲಾಭವಾಗಿದೆಯನ್ನಬಹುದು. ನಮಗೆ ಶಿಕ್ಷಣದಿಂದ ಇತರ ದೇಶಗಳ ಜನರ ಸ್ಥಿತಿಗತಿಗಳನ್ನು ತಿಳಿಯಲು ಸಹಾಯಕವಾಯಿತು. ಈ ದೇಶದ ಮೂಲ ನಿವಾಸಿಗಳಾದ ದಲಿತರು ಅಧಿಕಾರ, ಆಸ್ತಿ, ವಿದ್ಯೆಯಿಂದ ವಂಚಿತರಾಗಿದ್ದರು. ಇವುಗಳನ್ನು ಮತ್ತೇ ಪಡೆಯಲು ಅನುಕೂಲವಾಯಿತು.

ಬ್ರಿಟಿಷ್ ಸರಕಾರ ಭಾರತೀಯರಿಗೆ ಮೀಸಲಾತಿಯನ್ನು ಕೊಡುವ ಉದ್ದೇಶದಿಂದ ೧೯೦೯ರಲ್ಲಿ ಹಿಂದಗಳಲ್ಲದವರು ಯಾರು ಎಂಬುದನ್ನು ಪತ್ತೇ ಹಚ್ಚಲು ಪ್ರಯತ್ನಿಸಿತು. ಅದರ ಫಲವಾಗಿ ೧೯೧೧ರಲ್ಲಿ ನಡೆದ ಜನಗಣತಿಯಲ್ಲಿ ೧೦ ಮಾನದಂಡಗಳನ್ನಿಟ್ಟುಕೊಂಡು ಹಿಂಧೂಯೇತರರನ್ನು ಗುರುತಿಸಿ ಅವರಿಗೆ ಮೀಸಲಾತಿಯನ್ನು ನೀಡಲು ಸರಕಾರ ತೀರ್ಮಾನಿಸಿತು. ಇದನ್ನು ಅರಿತ ಬಾಬಾಸಾಹೇಬರು ಈ ದೇಶದಲ್ಲಿರುವ ದಲಿತರು ಕೂಡ ಹಿಂದೂಗಳಲ್ಲ ಎಂದು ಸಾಬೀತು ಪಡಿಸಲು ೧೯೨೭ರಲ್ಲಿ ಚೌಡರ ಕೆರೆ ಪ್ರವೇಶ ಮಾಡಿದರು. ಇಲ್ಲಿನ ಜನ ದಲಿತರ ಮೇಲೆ ಹಲ್ಲೇ ಮಾಡಿದ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟವಾಯಿತು. ಇದೇ ಸಂದರ್ಭದಲ್ಲಿ ಸೈಮನ್‌ರ ನಾಯಕತ್ವದಲ್ಲಿ ೧೯೨೭ರಲ್ಲಿ ಬ್ರಿಟಿಷ ಕಮೀಷನ್ ಭಾರತಕ್ಕೆ ಬಂತು ಈ ಕಮೀಷನ್ ಮುಂದೆ ಬಾಬಾಸಾಹೇಬರು ದಲಿತರ ಮೇಲೆ ನಡೆದ ಹಲ್ಲೆಯ ವರದಿಯನ್ನು ಮಂಡಿಸಿದರು ನಂತರ ೧೯೩೦ರಲ್ಲಿ ಸೈಮನ್ ಕಮಿಷನ್ ವರದಿಯ ಅಂಶಗಳನ್ನು ಜಾರಿಗೊಳಿಸಲು ಬ್ರಿಟಿಷ ಸರಕಾರ ಲಂಡನಲ್ಲಿ ದುಂಡು ಮೇಜಿನ ಸಭೆಯನ್ನು ನಡೆದಲು ತೀರ್ಮಾನಿಸಿ ಭಾರತೀಯ ಕಾಂಗ್ರೆಸ್ ಪಕ್ಷಕ್ಕೂ ಹಿಂದೂಗಳೇತರರಿಗೂ, ದಲಿತರಿಗೂ ಈ ಸಭೆಯಲ್ಲಿ ಪಾಲ್ಗೊಳ್ಳಲು ಆಹ್ವಾನಿಸಿತು. ಈ ಚರ್ಚೆಯಲ್ಲಿ ಕಾಂಗ್ರೆಸ್ ಭಾಗವಹಿಸದಂತೆ ನಿರ್ಣಯ ಕೈಗೊಂಡರೆ, ಹಿಂದೂಗಳೇತರರು.

ಬಾಬಾಸಾಹೇಬರು ಪಾಲ್ಗೊಂಡರು. ಬಾಬಾಸಾಹೇಬರು ತಾವೂ ಹಿಂದೂಗಳಲ್ಲದವರಿಗೆ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸಿ, ಭಾರತದಲ್ಲಿ ರುವ ದಲಿತರು ಹಿಂದೂಗಳಲ್ಲ ಎನ್ನುವು ದಕ್ಕೆ ಚೌಡರಕೆರೆ ಪ್ರವೇಶ ಕಾಳರಾಮ ದೇವಸ್ಥಾನದ ಪ್ರವೇಶಗಳಂತ ಘಟನೆಗಳೇ ಸಾಕ್ಷಿ, ಹಾಗು ಸೈಮನ್ ಕಮೀಷನ್ ಪ್ರಕಾರ ಭಾರತದ ದಲಿತರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ. ಹಿಂದುಳಿದಿದ್ದಾರೆಂದು ಶಿಫಾರಸ್ಸು ಮಾಡಿದೆ. ಈ ಹಿಂದುಳಿಯಲು ನಿಮ್ಮ ಆಡಳಿತವೇ ಸಾಕ್ಷಿಯಾಗಿದೆ. ಇವರಿಗೆ ಈ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಲು ಪ್ರತ್ಯೇಕ ಮೀಸಲಾತಿ ಕೊಡಬೇಕೆಂದು ವಾದಿಸಿದರು. ಈ ಸಭೆ ಮುಕ್ತಾಯಗೊಂಡಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಗಾಂಧಿಯವರು ಈ ದೇಶದ ಪ್ರತಿನಿಧಿಗಳು ನಾವೇ ಎಂದು ಹೇಳಿಕೊಳ್ಳುತ್ತಿದ್ದರು ಬ್ರಿಟಿಷ್ ಸರಕಾರ ೧೯೩೨ರಲ್ಲಿ ಕಡ್ಡಾಯವಾಗಿ ಎಲ್ಲ ವರ್ಗದ ನಾಯಕರು ಭಾಗವಹಿಸಬೇಕೆಂದು ಹೇಳಿ ಎರಡನೇ ದುಂಡು ಮೇಜಿನ ಸಭೆಗೆ ಆಹ್ವಾನಿಸಲಾಯಿತು. ಮೊದಲನೆ ಸಭೆಯಲ್ಲಿ ಭಾಗವಹಿಸದ ಕಾಂಗ್ರೆಸ್ಸಿನ ಸದಸ್ಯರಿಗೂ ಎರಡನೇ ಸಭೆಯಲ್ಲಿಯೂ ನಾವು ಇಲ್ಲಿದೇ ನಿರ್ಣಯ ತೆಗೆದುಕೊಳ್ಳಬಹುದೆಂದು ಭಾವಿಸಿ ಕಾಂಗ್ರೆಸ್ಸಿನ ಪರವಾಗಿ ಗಾಂಧೀಜಿಯವರು ದಲಿತರ ಪರವಾಗಿ ಬಾಬಾಸಾಹೇಬರು, ಮುಸ್ಲಿಂಪರವಾಗಿ ಜಿನ್ನರರವರು ಹಾಗೇ, ಸಿಖ್, ಪಾರ್ಶಿ, ಕ್ರೈಸ್ತರ ಪ್ರಮುಖ ನಾಯಕರು ,ಸಭೆಯಲ್ಲಿ ಪಾಲ್ಗೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಬಾಬಾಸಾಹೇಬರು ಮೊದಲಿನ ಸಭೆಯಲ್ಲಿ ಮಾತನಾಡಿದಂತೆ ಈ ಸಭೆಯಲ್ಲಿಯೂ ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿ ಜಾರಿಗೆ ತರಬೇಕು ಎಂದು ವಾದಿಸುತ್ತಾರೆ. ಇದನ್ನು ಕಟ್ಟಗೆ ಮುರಿದಂತೆ ಗಾಂಧೀಯವರು ವಿರೋಧಿಸಿ ಈ ದೇಶಕ್ಕೆ ಸ್ವಾತಂತ್ರ್ಯ ಸಿಗದಿದ್ದರೂ ಚಿಂತೆಯಿಲ್ಲ. ಆದರೆ ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿ ಜಾರಿಗೊಳಿಸುವುದನ್ನು ವಿರೋಧಿಸುತ್ತೆನೆಂದು ಹೇಳಿ, ನಿಮ್ಮ ಸರ ಕಾರದ ವಿರುದ್ಧ ಅಸಹಕಾರ ಚಳವಳಿ ರೂಪಿಸುತ್ತೇನೆಂದು ಭಾರತಕ್ಕೆ ಮರಳುತ್ತಾರೆ. ಇದನ್ನು ಮನಗಂಡ ಸರಕಾರ ಗಾಂಧಿಯವರು ಭಾರತಕ್ಕೆ ಬಂದಿಳಿದ ತಕ್ಷಣ ಅವರನ್ನು ಪೊಲೀಸರು ಬಂಧಿಸಿ ಪೂನಾದ ಯರವಾಡ ಜೈಲಿನ ಬಂಧನದಲ್ಲಿ ಇಡಲಾಗುತ್ತದೆ. ಬ್ರಿಟಿಷ್



ಒಡಂಬಡಿಕೆಯನ್ನು ಕುರಿತು ಬಾಬಾ ಸಾಹೇಬರು ನೋವಿನಿಂದ ಮಾತನಾಡುತ್ತಾ, ಪೂನಾ ಒಪ್ಪಂದದಲ್ಲಿನ ರಸವನ್ನು ಹೀರಿಕೊಂಡ ಕಾಂಗ್ರೆಸ್ ಪಕ್ಷವು ಸಿಪ್ಪೆಯನ್ನು ಅಸ್ಪೃಶ್ಯರ ಮುಖದ ಮೇಲೆ ಉಗಳಿತು. ಗಾಂಧಿ ಮತ್ತು ಕಾಂಗ್ರೇಸ್‌ಗರನ್ನು ನನ್ನ ಜನ ಯಾವತ್ತು ಕ್ಷಮಿಸಲಾರರು ಎಂದು ಹೇಳುತ್ತಾರೆ.

ಸರಕಾರದ ವಿರುದ್ಧ ೨೦ ಸೆಪ್ಟೆಂಬರ್ ೧೯೩೨ರಂದು ಜೈಲಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಳ್ಳುತ್ತಾರೆ.

ಎರಡನೇ ದುಂಡು ಮೇಜಿನ ಸಭೆಯಲ್ಲಿ ದೀರ್ಘ ಕಾಲದ ಚರ್ಚೆಯನಂತರ ಸರಕಾರ ಅಲ್ಲಿ ನಡೆದ ಚರ್ಚೆಗಳು ಜಾರಿಗೊಳಿಸುವಂತೆ ಮನವಿ ಮಾಡಿಕೊಂಡು ಬಾಬಾಸಾಹೇಬರು ಮರಳಿ ಭಾರತಕ್ಕೆ ಹಿಂದುರುಗುತ್ತಾರೆ. ಬ್ರಿಟಿಷ ಸರಕಾರ ಬಾಬಾಸಾಹೇಬರು ಕೇಳಿದ ಪ್ರತ್ಯೇಕ ಮತದಾನದ ಬದಲಾಗಿ ಪ್ರತ್ಯೇಕ ಚುನಾಯಿಕ ಪದ್ಧತಿಯನ್ನು ನೀಡುತ್ತಾರೆ. ಅಂದರೆ ದ್ವಿ-ಮತದಾನ ಪದ್ಧತಿ ಒಂದು ಮತದಿಂದ ತಮ್ಮ ನಾಯಕನನ್ನು ತಾವೇ ಆಯ್ಕೆ ಮಾಡಿಕೊಳ್ಳುವುದು ಇನ್ನೊಂದು ಮತದಿಂದ ಸಾಮಾನ್ಯ ವರ್ಗದ ನಾಯಕನನ್ನು ಆಯ್ಕೆ ಮಾಡಿಕೊಳ್ಳುವ ಪದ್ಧತಿಯನ್ನು ಜಾರಿಗೊಳಿಸುತ್ತಾರೆ.

ದ್ವಿ-ಮತದಾನ ಪದ್ಧತಿ ವಿರುದ್ಧ ಉಪವಾಸ ಕುಳಿತ ಗಾಂಧಿಯ ಧರಣಿ ಮುಂದುವರಿಸುತ್ತಾರೆ. ಅವರ ದೇಹ ಸ್ಥಿತಿ ಚಿಟಲವಾಗುತ್ತದೆ. ಇದನ್ನು ಮನಗಂಡ ಕಾಂಗ್ರೆಸ್ಸಿನವರು ಬಾಬಾಸಾಹೇಬರ ಮೇಲೆ ದಲಿತರಿಗೆ ಜೀವ ಬೆದರಿಕೆಯಂತಹ ಭಯವನ್ನು ಹುಟ್ಟಿಸಿ ಬ್ರಿಟಿಷರು ನೀಡಿದ ೭೮ ದ್ವಿ-ಮತದಾನ ಪದ್ಧತಿಯ ಸ್ಥಾನಗಳನ್ನು ಕೈ ಬಿಟ್ಟು ನಾವು ನೀಡುವ ೧೪೮ ಮೀಸಲು ಸ್ಥಾನಗಳನ್ನು ಒಪ್ಪಿಕೊಳ್ಳುವಂತೆ ಕಾಂಗ್ರೆಸ್ ಮತ್ತು ಗಾಂಧಿ ಒತ್ತಡ ಹೇರುತ್ತಾರೆ ಬಾಬಾಸಾಹೇಬರು ತನ್ನ ಜನಾಂಗದ ಮುಂದಿನ ಬೆಳವಣಿಗೆಯ ಹಿತದೃಷ್ಟಿಯನ್ನಿಟ್ಟುಕೊಂಡು ಅನಿವಾರ್ಯತೆಯಿಂದ ಮೀಸಲಾತಿಯನ್ನು ಒಪ್ಪಿಕೊಳ್ಳುತ್ತಾರೆ. ಗಾಂಧೀಜಿ ಕುತಂತ್ರದಿಂದ ಮತ್ತೇ ದಲಿತರು ತಮ್ಮ ಸ್ವತಂತ್ರ ರಾಜಕೀಯ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಕಾಂಗ್ರೆಸ್ ಪರವಾಗಿ ಮದನ್ ಮೋಹನ್ ಮಾಳವೀಯ ಮತ್ತು ಬಾಬಾಸಾಹೇಬರ ನುಧ್ಯೆ ಸೆಪ್ಟೆಂಬರ್ ೨೪-೧೯೩೨ರಂದು ಪೂನಾದ ಯರವಾಡ ಜೈಲಿನಲ್ಲಿ ಒಪ್ಪಂದವಾಯಿತು. ಇದರ ಫಲವಾಗಿ ಗಾಂಧೀಯ ಉಪವಾಸ ಅಂತ್ಯವಾಗಿ ಗಾಂಧಿಯ ನಾಟಕದ ಮುಖವಾಡ ಬಯಲಿಗೆ ಬಂದಿರ್ರುವುದನ್ನು ಕಾಣುತ್ತೇವೆ.

ಈ ಒಪ್ಪಂದ/ ಒಡಂಬಡಿಕೆಯನ್ನು ಕುರಿತು ಬಾಬಾಸಾಹೇಬರು ನೋವಿನಿಂದ ಮಾತನಾಡುತ್ತಾ, ಪೂನಾ ಒಪ್ಪಂದದಲ್ಲಿನ ರಸವನ್ನು ಹೀರಿಕೊಂಡ ಕಾಂಗ್ರೆಸ್ ಪಕ್ಷವು ಸಿಪ್ಪೆಯನ್ನು ಅಸ್ಪೃಶ್ಯರ ಮುಖದ ಮೇಲೆ ಉಗಳಿತು ಗಾಂಧಿ ಮತ್ತು ಕಾಂಗ್ರೆಸ್ಸಿಗರುನ್ನು ನನ್ನ ಜನ ಯಾವತ್ತು ಕ್ಷಮಿಸಲಾರರು ಎಂದು ಹೇಳುತ್ತಾರೆ.

ಈ ಒಪ್ಪಂದ ಜರುಗಿ ೨೪ ಸೆಪ್ಟೆಂಬರ್ ೨೦೦೭ಕ್ಕೆ ೭೫ ವರ್ಷಗಳಾತ್ತಿವೆ. ಇಂದಿನ ಮೀಸಲಾತಿ ಪಡೆದುಕೊಂಡು ಆಯ್ಕೆಯಾಗುತ್ತಿರುವ ೧೨೧ ಲೋಕಸಭಾಸದಸ್ಯರು ೧೦೬೦ ವಿಧಾನ ಸಭಾ ಸದಸ್ಯರು ದಲಿತರ ಬದುಕು ಹಸನುಗೊಳಿಸುವಲ್ಲಿ ಪ್ರಯತ್ನಿಸುತ್ತಿಲ್ಲ. ಏಕೆಂದರೆ ಇವರದೇ ಆದ ರಾಜಕೀಯ ಪಕ್ಷ ಇಲ್ಲಾ (BSP ಮತ್ತು RPI ಹೊರತುಪಡಿಸಿ. ಮೇಲ್ವರ್ಗದ ಪಕ್ಷಗಳ ಸಿದ್ಧಾಂತಕ್ಕೆ ಅಭ್ಯರ್ಥಿಗಳು ಜೋತುಬೀಳುತ್ತಾರೆಂದು ಭಾವಿಸಿಕೊಂಡೇ ಬಾಬಾಸಾಹೇಬರು ಪ್ರತ್ಯೇಕ ಮತದಾನ ಪದ್ಧತಿ ಕೇಳಿರುವುದನ್ನು ಗಮನಿಸಿದರೆ, ಅವರ ದೂರಾಲೋಚನೆಯ ನೋಟ ಎಂಥದ್ದು ಎಂಬುದು ಅರ್ಥವಾಗುತ್ತದೆ. ಇಂದು ದಲಿತರ ಮೇಲೆ ಕೊಲೆ, ಸುಲಿಗೆ, ಅತ್ಯಾಚಾರ, ದೌರ್ಜನ್ಯ, ಅಪಮಾನದಂತ ಘಟನೆಗಳು ಕಣ್ಣೆದುರಿಗೆ ಜರುಗಿದರು ಮೀಸಲಾತಿಯಿಂದ ಆಯ್ಕೆಯಾದ ಯಾವೊಬ್ಬ ದಲಿತ ರಾಜಕಾರಣಿ ಇದರ ವಿರುದ್ಧ ಚಕಾರ ಹತ್ತುವುದಿಲ್ಲ ಇಂತಹ ಘಟನೆಗಳು ಬಾಬಾಸಾಹೇಬರ ಜೀವಿತಾವಧಿಯಲ್ಲಿಯೇ ನಡೆದವು. ಇದನ್ನು ಗಮನಿಸಿ ಬಾಬಾಸಾಹೇಬರು ದಲಿತ ರಾಜಕಾರಣಿಗಳು "ಮಜಲ್ಸ್ ಡಾಗ್ಸ್"ನಂತೆ ವರ್ತಿಸುತ್ತಿದ್ದಾರೆ. ಅವರ ಹೈಕಮಾಂಡ್, ಅವರ ಪಕ್ಷದ ಸಿದ್ಧಾಂತಕ್ಕೆ ಅಂಟಿಕೊಂಡು ದಲಿತರ ನಾಶಮಾಡುತ್ತಿದ್ದಾರೆಂದು ಹೇಳುತ್ತಾರೆ. ಇದನ್ನರಿತ ಬಾಬಾಸಾಹೇಬರು ೧೯೩೬ ರಲ್ಲಿ ಸ್ವಾತಂತ್ರ್ಯ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿ ILP ಆನೆಯನ್ನು ಚಿಹ್ನೆಯನ್ನಾಗಿ ನೀಲಿ ಬಾವುಟವನ್ನಾಗಿ ಆಯ್ಕೆ ಮಾಡಿಕೊಂಡು ೧೯೩೭ ರಲ್ಲಿ ನಡೆದ ಮಹಾರಾಷ್ಟ್ರ ಚುನಾವಣೆಯಲ್ಲಿ ೨೧ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಾರೆ.

ಇವರಲ್ಲಿ ೭ ಜನ ಅಭ್ಯರ್ಥಿಗಳು ಆಯ್ಕೆಯಾಗುತ್ತಾರೆ. ಇದು ಬಾಬಾಸಾಹೇಬರ ಕಾಲದ ರಾಜಕೀಯ ಸಾಧನೆ ಎನ್ನಬಹುದು. ಇವತ್ತಿನ ಪ್ರಜ್ಞಾವಂತ ದಲಿತರು ಇದ್ದರೂ ಕೂಡ ಇನ್ನೂ ತನಕ ಬಾಬಾಸಾಹೇಬರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುವ ಮನಸ್ಸುಗಳು ನಿರ್ಮಾಣವಾಗುತಿಲ್ಲ. ಇದಕ್ಕೆ ಮೂಲ ಕಾರಣ ಸ್ವಾರ್ಥ ಎಂದು ಹೇಳಬಹುದು. ಮೀಸಲಾತಿ ಪಡೆದುಕೊಂಡು ಆಯ್ಕೆಯಾಗುತ್ತಿರುವ ದಲಿತರ ರಾಜಕಾರಣಿಗಳ ಮುಂದಾಲೋಚನೆಯುಳ್ಳವರಾಗಿಲ್ಲ. ಮುಂದಿನ ಪೀಳಿಗೆಯ ಭವಿಷ್ಯದ ಬಗ್ಗೆ ಚಿಂತಿಸುತ್ತಿಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಯೋಚಿಸುತ್ತಿಲ್ಲ. ತನ್ನ ಕ್ಷೇತ್ರದ ಜನತೆಯ ಜೀವನ ಶೈಲಿಯನ್ನು ಗಮನಿಸುತ್ತಿಲ್ಲ. ದಲಿತ ರಾಜಕಾರಣಿಗಳು ಸಿದ್ಧಾಂತವಿಲ್ಲದೆ ಪಕ್ಷದ ಗುಲಾಮರಾಗಿಯೇ ಮುಂದುವರೆದರೆ ಮುಂಬರುವ ದಿನಗಳು ಅವರ ಅವನತಿ ದಿನಗಳೆಂಬುದನ್ನು ಮರೆಯಬಾರದು.

"ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು" ಎಂಬ ಬಾಬಾಸಾಹೇಬರ ಮಾತಿನಂತೆ ಪ್ರಸ್ತುತ ದಲಿತ ರಾಜಕಾರಣಿಗಳು ತನ್ನ ಸಮಾಜದ ಜನರ ಇತಿಹಾಸವನ್ನು ಈಗಲಾದರು ಅಭ್ಯಾಸಿಸಲಿ. ಬಹುತೇಕ M.L.A. ಮತ್ತು M.P.ಗಳಿಗೆ ಇನ್ನೂ ತನಕ ಪೂನಾ ಒಡಂಬಡಿಕೆಯಿಂದ ನಾವು ಏನನ್ನು ಪಡೆದುಕೊಂಡೆವು ಏನನ್ನು ಕಳೆದುಕೊಂಡೆವು ಎಂಬ ಅರಿವು ಇಲ್ಲವಾಗಿದೆ. ಈಗಲಾದರು. ರಾಜಕಾರಣಿಗಳು, ಪ್ರಜ್ಞಾವಂತರು, ವಿದ್ಯಾರ್ಥಿ ಮಿತ್ರರು ಸ್ವಾರ್ಥ ಮನೋಭಾವ ಬಿಟ್ಟು ಸಮಾಜದ ಏಳಿಗೆಗಾಗಿ ಶ್ರಮಿಸಿ ಈ ಒಡಂಬಡಿಕೆಗೆ ವಿರೋಧಿಸುವ ಮನಸ್ಸುಗಳು ನಿರ್ಮಾಣವಾಗಲಿ ಎಂಬುದುದೇ ನನ್ನ ಆಸೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಕಥೆ

ಅವಳು, ಅವನು, ಮತ್ತು ಗಾಂಧಿ

ಜೈ ಕುಮಾರ್ ಎಚ್.ಎಸ್.

ಅಷ್ಟೊಂದು ನಾಚಿಕೆ, ಸಂಕೋಚ, ಹಿಂಜರಿಕೆ, ಕಾಲು ನಡುಗಿಸುವಷ್ಟಿಲ್ಲದಿದ್ದರೂ ಸಣ್ಣ ಭಯ ಮನೆ ಮಾಡಿದ್ದು ಅವನು ಇತ್ತೀಚೆಗೆ ಅವಳನ್ನು ನೋಡದಂತೆಯೂ ನೋಗಿಬಿಡುತ್ತಿದ್ದ. ಒಮ್ಮೆಯೂ ಯಾವುದೇ ಹುಡುಗಿಯನ್ನು ಒಂದು ಕ್ಷಣಕ್ಕೂ ಮೀರಿ ಇಷ್ಟಪಟ್ಟು ದಿಟ್ಟಸುವಷ್ಟು ಮನಸ್ಸು ಮಾಡಿದ ಧೈರ್ಯ ಮಾಡದ ಇವನು, ಹಂಸದಂತೆ ಹೊಳೆಯುತ್ತಿದ್ದ ಅವಳ ಮುಂಗುರುಳು, ವಯಸ್ಸು ಇಪ್ಪತ್ತೈದಾಗಿದ್ದರೂ ದೈಹಿಕವಾಗಿ ಕೃಶವಾಗಿದ್ದರಿಂದ ಅವಳ ಪುಟ್ಟದಾದ ಆದರೆ ಸುಂದರವಾಗಿದ್ದು ಮುಟ್ಟಿ ಮುತ್ತಿಡಬೇಕೆನಿಸುವಂತಿದ್ದ ಕೈ ಬೆರಳುಗಳು, ಅವಳ ಬೆನ್ನ ಮೇಲೆ ಮಿರಮಿರನೆ ಮಿಂಚಿ ಮಿನುಗುತ್ತಿದ್ದ ರೋಮಗಳು, ಸೂರ್ಯಕಾಂತಿಗೂ ಒಂದು ಕೈ ಮೇಲೆಂಬಂತೆ ಫಳ ಫಳ ಹೊಳೆಯುವ ಕಣ್ಣುಗಳು, ಅವಳು ಮಾತನಾಡಿ ಪದವುದುರಿಸಿದರೆ ಸಾಕು ಸಂಗೀತ ದ್ವೊನಲನ್ನೇ ಹರಿಸುತ್ತಿರುವಳೇನೋ ಎಂಬಂತ್ತಿದ್ದ ಅವಳ ಧ್ವನಿ, ಚಿಕ್ಕದಿದ್ದರೂ ಆಕರ್ಷಣೆಯನ್ನಡಗಿಸಿಟ್ಟದ್ದ ಅವಳ ಭುಜ. ಇವೆಲ್ಲಕ್ಕೂ ತನ್ನ ಮಾಯೆಯನ್ನೊದಗಿಸಿ ನಕ್ಕರೆ ನಕ್ಷತ್ರ ರಾಶಿಯೇ ಮಳೆಯಾಗಿ ಸುರಿಯುವಂತಿದ್ದ ನಗುಮುಖ ಇವೆಲ್ಲವೂ ಇನ್ನು ಕೆಲವೇ ದಿನಗಳಲ್ಲಿ ತನ್ನದಾಗುತ್ತವೆಂದು ಪುಳಕಿತಗೊಳ್ಳುತ್ತಿದ್ದ. ಕೆಲವೊಮ್ಮೆ ಅವಳು ತುಂಬಾ ಪುಟ್ಟದಾದ ಸಂಗಾತಿ ಎಂದೆನಿಸಿದರೂ, ಯಾವಾಗಲೂ ಚಿಕ್ಕದಾಗಿ ಪುಟ್ಟಗಿರುವುದು ಸುಂದರವಾಗಿರುತ್ತದೆಂದೂ. ಈ ಸುಂದರ ಮೂರ್ತಿಯು ತನಗೆ ಭಾರೀ ಮೌಲ್ಯವುಳ್ಳದ್ದಾಗಿದ್ದು, ಬಹಳ ಹಿತವಾಗಿ ಎಚ್ಚರಿಕೆಯಿಂದ ಇದನ್ನು ಸಂರಕ್ಷಿಸಬೇಕೆಂದು ಮತ್ತು ಇವೆಲ್ಲವನ್ನು ಕಾಪಾಡಲು ತನ್ನ ಪ್ರಾಣ ಒತ್ತೆಯಿಟ್ಟಾದರೂ ಸಿದ್ದನಿರುವೆನೆಂದು ಭಾವುಕಗೊಳ್ಳುತ್ತಿದ್ದ.

ಇಷ್ಟೊಂದು ಇಷ್ಟಪಟ್ಟಿರುವ ಮಾತ್ರಕ್ಕೆ ಅವಳೇನೂ ಅಪೂರ್ವ ಸುಂದರಿಯಾಗಿರಲಿಲ್ಲ. ಏಕೆಂದರೆ ಅವನು ಅವಳಲ್ಲಿ ಗಮನಿಸಿಯೂ ಗಮನಿಸಿದಂತಿದ್ದ ಅಂಶಗಳು ಬಹಳಷ್ಟಿದ್ದವು. ಕೃಶವಾದ ದೇಹ, ಅಷ್ಟೇನೂ ಎತ್ತರವಿಲ್ಲದ ಆಕೆ ಅತಿ ಸಣ್ಣಗಿದ್ದು ಮುಂದೇನಾದರೂ ಅವಳು ಮಕ್ಕಳನ್ನು ಹೆರುವ ಸ್ಥಿತಿಯನ್ನೂ, ಹುಟ್ಟುವ ಮಗುವನ್ನೂ ನೆನೆದರೆ ಸಾಕು ಭಯ ಆವರಿಸುತ್ತಿದ್ದದ್ದು ಸಹಜವೇ ಸರಿ. ಸ್ಫುರದ್ರೂಪಿಯಾಗಿದ್ದ ಸ್ನೇಹಿತನೊಬ್ಬ. 'ಇಂಥವರನ್ನೆಲ್ಲ ಯಾರು ಮದ್ವೆಯಾಗ್ತಾರೆ ಅಂತೀ' ಎಂದೂ ಇವನಲ್ಲೊಮ್ಮೆ ಪ್ರಸ್ತಾಪಿಸಿದ್ದ. ಅವಳು ನಕ್ಕಾಗ ಅತಿ ಸುಂದರಿಯೆನಿಸಿದರೂ ಹತ್ತಿರ ನಿಂತವರಿಗೆ ಅವಳ ಮೀಸೆಯ ಉದ್ದನೆಯ ಕೂದಲುಗಳು ಕಾಣಿಸಿ ಅವಳ ರೂಪವನ್ನೆಲ್ಲ ಒಂದೇ ಏಟಿಗೆ ವಿರೂಪ ಮಾಡಿ ಬಿಡುತ್ತಿದ್ದರೂ, ಇವನೋ ಅವಳ ಕಿರುಮೀಸೆಯಿಂದಲೇ ಅವಳ ರೂಪಕ್ಕೆ ಕಳೆಕಟ್ಟುತ್ತದೆಂದು ಭಾವಿಸಿದ್ದ. ಅವಳು ಸರಿಸಮಾನದ ಕೆಲಸದಲ್ಲಿರುವುದು ಅವನ ಭಾವನೆಗಳಿಗೆ ಈ ಅಂತಿಮ ರೂಪ ಕೊಟ್ಟಿದೆಯೋ ಇಲ್ಲವೋ ಎಂಬುದನ್ನು ಓದುಗರೇ ನಿರ್ಧರಿಸಬೇಕು.



ಅವನೇನೂ ಸ್ಫುರದ್ರೂಪಿಯಲ್ಲದಿದ್ದರೂ ಗಟ್ಟಿಮುಟ್ಟಾದ ಸದೃಢನಾಗಿದ್ದು ಯಾವುದೇ ವಿಷಯದ ಮೇಲೂ ತನ್ನ ವಾದವನ್ನು ಮಂಡಿಸಿ ಉತ್ತಮವಲ್ಲದಿದ್ದರೂ ಸ್ವಲ್ಪಮಟ್ಟಿಗೆ ಪಂಡಿತನೆನಿಸಿದ್ದ. ಅವನೂರಿನ ಹಣ ಕೂಡಿಟ್ಟ ಮಂದಿ ಯಾವಾಗಲೂ ಸರ್ಕಾರಿ ವರನೆ ಸುರಕ್ಷಿತವೆಂಬ ಭಾವನೆಗೆ ಹಿಂದಿನಿಂದಲೂ ಅಪ್ಪ ಹಾಕಿದ ಆಲದ ಮರದ ಬಿಳಿಲಿಗೆ ಆತುಕೊಂಡಂತೆ ಇದ್ದುದ್ದರಿಂದ ಬೇರೆ ಹುಡುಗಿ ಮದುವೆಯಾಗಿದ್ದರೆ ಕಡಿಮೆ ಎಂದರೂ ಒಂದಿಪ್ಪತ್ತೈದು ಲಕ್ಷ ದಕ್ಷಿಣೆಗೇನೂ ಮೋಸವಿರಲಿಲ್ಲ: ಆದರೂ ಅವನು ಈಗಾಗಲೇ ವರದಕ್ಷಿಣೆಯಿಲ್ಲದೆ ಮದುವೆಯಾಗಬೇಕೆಂದು ತೀರ್ಮಾನಿಸಿಯಾಗಿರುವುದರಿಂದ ಇನ್ನುಳಿದಿರುವ ಆದಾಯ ಹೆಚ್ಚಳದ ಏಕೈಕ ಹಾದಿಯೆಂದರೆ ಉದ್ಯೋಗಿ ವಧುವನ್ನು ವರಿಸುವುದು! ನಮ್ಮ ಕಥಾ ನಾಯಕನ ಅತಿದೊಡ್ಡ ದೌರ್ಬಲ್ಯವೆಂದರೆ ತೀರಾ ಭಾವುಕತೆಗೆ ಸಿಲುಕುತ್ತಿದ್ದ.

ಅವನು ಮತ್ತು ಅವಳು ಇಬ್ಬರೂ ಒಂದೇ ಕಡೆ ಒಂದೇ ಸಲ ಕೆಲಸಕ್ಕೆ ಸೇರಿದ್ದರೂ ಅಷ್ಟೊಂದೇನೂ ಆಕರ್ಷಿತರಾದಂತೆ ಇರಲಿಲ್ಲ. ದಿನ ಬೆಳಗಾದರೆ ಜತೆಯಲ್ಲೇ ಕೆಲಸ ಮಾಡುತ್ತಿದ್ದರೂ ಒಂದ್ಯೆದಾರು ತಿಂಗಳುಗಳವರೆಗೆ ತಮ್ಮ ಪಾಡಿಗೆ ತಾವು ಏನೇನೋ ಕನಸುಗಳ್ಹೆಣೆಯುತ್ತಾ ಕನಸುಗಳ ಸಾಗರದಲ್ಲಿ ತೇಲುತ್ತಾ ಅವುಗಳಲೆಯ ಜತೆ ಮೇಲೇರಿ ಕುಣಿದು ಕುಪ್ಪಳಿಸುತ್ತಾ ಕಾಲನ ದಿಕ್ಸೂಚಿಗನುಗುಣವಾಗಿ ದಿನಕಳೆಯುತ್ತಿದ್ದರು, ನೀಲಿಯಾಗಸ ತನ್ನನ್ನಾವರಿಸಿ ತನಗೊಂದು ರೂಪುಕೊಡುವ ಮೋಡವನ್ನು ಕಾಣದಿದ್ದರೂ, ಬಿಸಿಯಿಂದ ಕಾವೇರಿದ್ದ ಭೂತಾಯಿಯನ್ನು ಬಿಗಿದಪ್ಪಿ ಅಂತರೈಕ್ಯವಾಗಲು ಪ್ರಿಯಕರ–ಮಳೆ ಬಾರದಿದ್ದರೂ ಕಾಲಾಧಿಪತಿ ಮಾತ್ರ ತನ್ನ ದಿಕ್ಕು ತಾನು ಎಂದೆಂದೂ ಕಂಡುಕೊಂಡಿರುವನಂತೆ ದಿನವುರುಳಿ ದಿನಮರಳುತ್ತಿದ್ದವು. ಅವಳ ಮದುವೆಯ ಬಗ್ಗೆ ಅವನಲ್ಲಿ ಪರೋಕ್ಷ ಪ್ರಸ್ತಾಪ ಮಾಡಿದಾಗ ಅವನು ಉತ್ತರಿಸಲಾಗದೆ ಸೊಪ್ಪು ಹಾಕದೆ ಇದ್ದುದರಿಂದ ಅವಳ ಸಂಬಂಧಿಯೊಬ್ಬರು ಅವನಿಗೆ ನೇರವಾಗಿ ಫೋನಾಯಿಸಿ ವಿಷಯ ಮುಂದಿಟ್ಟಿದ್ದರು. ಅವನು ಹುಡುಗಿಯನ್ನೊಪ್ಪಿದ್ದರೂ ಯಾವುದೇ ಪ್ರತ್ಯುತ್ತರ ನೀಡದ್ದಕ್ಕೆ ಕಾರಣವಿತ್ತು. ಅನುಕೂಲಸ್ಥನಾಗಿರುವ ತನ್ನ ಸೋದರ ಮಾವನ ಧನವಂತಿಕೆ ಮತ್ತು ಜನ ಸಂಪರ್ಕ, ಅಂತಸ್ತುಗಳನ್ನು ಕಂಡು ತನ್ನನ್ನು ವರನಾಗಿ ಗುರುತಿಸಿರುವರೆಂದೂ ತನ್ನ ಹಿನ್ನೆಲೆ & ನೈಜ ಸ್ಥಿತಿಯೇನಾದರೂ ಕಂಡರೆ ಹಾವು ತುಳಿದವರಂತೆ ಪೇರಿ ಕೀಳುವರೆಂದು ಸುಮ್ಮನಿದ್ದ. ಆದರೂ ಇಷ್ಟೆಲ್ಲ ಹೇಳಿದ ಮೇಲಾದರೂ ತನ್ನಾಭಿಪ್ರಾಯವನ್ನು ತಿಳಿಸುವುದು ಸರಿಯೆಂದು ಅದೂ ಒಂದೆರಡು ತಿಂಗಳನಂತರ ಅವಳೊಬ್ಬಳೇ ಸಿಕ್ಕಾಗ 'ನಿಮ್ಮ ಮನೆಯವರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ನಿಮ್ಮ ಜತೆ ನಾನು ಮಾತನಾಡ್ಬೇಕು. ನೀವು ಬಿಡುವಾಗಲೆಂದು ಸುಮ್ಮನಿದ್ದೆ' ಎಂದು ಉಸಿರು ಗಟ್ಟಿಕೊಂಡವನಂತೆ ಉಸುರಿದ.

ಇಷ್ಟು ದಿನವಾದರೂ ತನ್ನ ಒಪ್ಪಿಗೆಯನ್ನು ತಿಳಿಸದಿರುವಷ್ಟು ಜಂಭವಿದೆ ಇವನಿಗೆ ಎಂದು ಅರ್ಥೈಸಿ ಎದುರು

ಸಿಕ್ಕಾಗ ಮಾತನಾಡಿಸದೆ ಹುಸಿ ಮುನಿಸು ತೋರುತ್ತಾ ಹತಾಶಳಾಗಿ ಕೋಪಗೊಂಡಿದ್ದ ಅವಳು ಅಷ್ಟೇ ದೃಢವಾಗಿ 'ಬಿಡುವಾ? ನನಗ್ಯಾವಾಗ ಬಿಡುವಿರಲಿಲ್ಲ?' ಎಂದಳು. ಅವಳ ಧೈರ್ಯಕ್ಕೆ ದಂಗಾದರೂ ಸಾವರಿಸಿಕೊಂಡು ಅವಳ ಹತ್ತಿರ ಕುಳಿತುಕೊಳ್ಳಲು ಹೊರಟವನನ್ನು ಕಂಡು ಕುಳಿತಿದ್ದ ಅವಳು ಗೌರವ ಸೂಚಕವಾಗಿಯೆಂಬಂತೆ ಎದ್ದು ನಿಂತದ್ದು ಮನಕ್ಕೆ ಭಾರೀ ಖುಷಿಕೊಟ್ಟಿತು. ಹುಡುಗಿ ಎಂದರೆ ಹೀಗಿರಬೇಕೆಂದುಕೊಂಡು ಅವನು ನೀವೊಬ್ಬರೇ ಎಂದೂ ಒಂಟಿಯಾಗಿ ಸಿಗಲಿಲ್ಲವಾದ್ದರಿಂದ ಹಾಗೆ ಭಾವಿಸಿದೆನೆಂಬ ಪಲಾಯನದ ಉತ್ತರ ನೀಡಿದ.

ತಾವಿಬ್ಬರೂ ಇಂಥಹದೊಂದು ದಿನ ಆಫೀಸು ಮುಗಿದ ಮೇಲೆ ಸಂಧಿಸುವುದೆಂದು ಸಮಯ ನಿಗದಿಪಡಿಸಿಕೊಂಡರು. ಅವಳೇನೋ ತನ್ನ ಸ್ನೇಹಿತೆಯರನ್ನು ಏನೋ ನೆಪವೊಡ್ಡಿ ಸಾಗ ಹಾಕಿದಳು. ಆದರೆ ತನ್ನೆಲ್ಲ ಮಿತ್ರರನ್ನು ಕಳುಹಿಸಲೆತ್ನಿಸಿದರೂ ಒಬ್ಬ ಸಹೋದ್ಯೋಗಿ ಮಾತ್ರ ಇವನು ನೆಪಮಾತ್ರ ಹೇಳಿದ ಕೆಲಸಕ್ಕೂ ಕಂಪನಿ ಕೊಡುವೆನೆಂದು ತಗುಲಿ ಹಾಕಿಕೊಂಡ. ಇವಳೊಂದು ಸುಂದರ ನಗೆ ಬೀರಿ ಬನ್ನಿ ನಾವಿಬ್ಬರೂ ಬೇರೆ ಕಡೆಯೇ ಹೋಗಿ ಮಾತಾಡೋಣವೆಂಬಂತೆ ಕರೆದಳು. ಆದರೆ ಇವನ ಸಹೋದ್ಯೋಗಿಯಿಂದಾಗಿ ಇಬ್ಬರು ಎಲ್ಲೂ ಹೋಗಲಾಗದೆ ಒಬ್ಬರ ಮುಖ ಇನ್ನೊಬ್ಬರು ನೋಡುತ್ತಾ ನಿಂತು, ಇವನೊಬ್ಬ ಸ್ನೇಹಿತನನ್ನು ಯಾಮಾರಿಸಲು ಬಾರದ ಇವನ ದಡ್ಡತನವನ್ನು ಅವಳು ಮೆಲುಕು ಹಾಕುತ್ತಾ ಸಂಜೆಯ ಕತ್ತಲಾವರಿಸಲು ಶುರುವಿಟ್ಟದ್ದರಿಂದ ಮನೆಗೆ ಹೋಗುವುದೇ ವಾಸಿಯೆಂದು ತೀರ್ಮಾನಿಸಿದರು. ಮಳೆ ಧಾರಾಕಾರವಾಗಿ ಸುರಿದಿದ್ದರಿಂದ ಕಲಾಸಿಪಾಳ್ಯದ ರಸ್ತೆಗಳ ಬಗಡದ ನೀರು ತುಂಬಿದ್ದ ಹಳ್ಳಕೊಳ್ಳಗಳನ್ನು ದಾಟುತ್ತಾ ಮೂವರು ಹೊರಟರು ದೊಡ್ಡ ಹಳ್ಳಗಳನ್ನು ದಾಟಲಾರದೆ ಅವಳು ನಿಂತಾಗಲಂತೂ ತನ್ನ ಮಾತು ಕೇಳಲು ಏನೆಲ್ಲ ಕಷ್ಟಪಟ್ಟು ತಾನು ಕರೆದಲ್ಲಿಗೆ ಬಂದಿರುವಳೆಂದು ತನ್ನ ಬಗ್ಗೆ ತಾನೇ ಪುಳಕಗೊಂಡ, ವಿಸ್ಮಯಗೊಂಡ. ತಾನೊಬ್ಬ ಸಾಮಾನ್ಯ ಮನುಷ್ಯನಲ್ಲವೆಂದೂ ತನ್ನಲ್ಲಿರುವ ಶಕ್ತಿಯ ಪ್ರಖರತೆಯನ್ನು ಕಂಡು ಇತರರು ಹಿಂಬಾಲಿಸುತ್ತಿದ್ದರೂ ತನಗೇ ಅದರ ಅರಿವಿರಲಿಲ್ಲವೆಂದು ಒಂದು ಕ್ಷಣ ರೋಮಾಂಚನಗೊಂಡ. ಅವಳನ್ನು ಬೀಳ್ಕೊಟ್ಟು ಬಸ್ಸು ಹತ್ತಿಸಿ ತನಗಂಟಿಕೊಂಡಿದ್ದ ಸ್ನೇಹಿತನನ್ನು ಕರೆದುಕೊಂಡು ಮನೆಯತ್ತ ಹೊರಟ. ಬಸ್ಸಿನಲ್ಲಿ ಕುಳಿತವನಿಗೆ ಅವಳೊಡನೆ ಕಲಾಸಿಪಾಳ್ಯದಲ್ಲಿ ಓಡಾಡಿದಾಗ ರಸ್ತೆಯ ಇಕ್ಕೆಲಗಳಲ್ಲೇ ಉಚ್ಚೆ ಹೂಯ್ಯುತ್ತಾ ಎರಡು ಮಾಡುತ್ತಾ ಉಗುಳುತ್ತಾ ಕುಳಿತವರು, ಚರಂಡಿಗಳು ತುಂಬಿ ಹರಿದು ರಸ್ತೆಯಲ್ಲಿ ಪಸರಿಸುತ್ತಿದ್ದ ಅಮಾಧಿ ವಾಸನೆ ಎಲ್ಲವುಗಳ ಕುರಿತು ಮೆಲುಕು ಹಾಕಿದ ಅವನು ತನಗಾಗಿ ಇಲ್ಲೆಲ್ಲ ಬವಣೆ ಪಟ್ಟ ಅವಳ ಬಗ್ಗೆ ಬಹಳ ಮರುಕ ಪಟ್ಟಂತೆ ಪ್ರೀತಿ ಇಮ್ಮಡಿಯಾಗುತ್ತಾ ಬೆಳೆಯಿತು.

ಮೂರ್ನಾಲ್ಕು ದಿನ ಕಳೆದ ನಂತರ ವಿಶ್ವ ಪ್ರಯತ್ನದಿಂದ ಚೂರು ಪಾರು ಧೈರ್ಯವನ್ನೆಲ್ಲ ಒಗ್ಗೂಡಿಸಿಕೊಂಡು ತನ್ನ ಸ್ನೇಹಿತರೆಲ್ಲರನ್ನೂ ಸಾಗ ಹಾಕಿ ಅವಳಿಂದು ಮಾತಿಗಾಗಿ ಸಿದ್ಧಳಿರಬೇಕೆಂದು ಹೇಳಿದಾಗ ಆಕೆಯೂ ಈ ಆಮಂತ್ರಣವನ್ನೇ ಕಾಯುತ್ತಿದ್ದವಳಂತೆ ಹೂಗುಟ್ಟಳು. ಸ್ನೇಹಿತರೆಲ್ಲ ಹೊರಟು ಹೋದ ಬಳಿಕ ಮುಚ್ಚಿದ್ದ ಶಾಪಿಂಗ್ ಕಾಂಪ್ಲೆಕ್ಸ್ ಬಳಿ ಇಬ್ಬರೂ ಕುಳಿತರು. ಅವಳ ಕಣ್ಣುಗಳನ್ನೇ ದಿಟ್ಟಿಸುತ್ತಾ 'ಏನು ಸಮಾಚಾರ ಹೇಳ್ರಿ' ಎಂದುದಕ್ಕೆ 'ಎಲ್ಲಾ ನೀವೇ ಹೇಳ್ಬೇಕು' ಎಂದು ಅಳುಕಿದರೂ ನಗಲು ಪ್ರಯತ್ನಿಸಿದಳು. ತಮ್ಮ ಪಕ್ಕದಲ್ಲೇ ಬೇಕಾದಷ್ಟು ಮಂದಿ ದಾರಿ ಹೋಕರು ಹಾದು ಹೋಗುತ್ತಿದ್ದದ್ದು, ಇವರಿಗೆದುರೇ ವಿಶಾಲವಾದ ರಸ್ತೆಯ ತುಂಬಾ ವಾಹನಗಳ ಶಬ್ದದ ಕಿರಿಕಿರಿ ಯಾವುವೂ ಸಮಸ್ಯೆಯಾಗಲಿಲ್ಲ ಇವರಿಗೆ

'ನೀವೇಕೆ, ಏನನ್ನು ಕಂಡು ನನ್ನನ್ನು ಇಷ್ಟ ಪಟ್ಟಿದ್ದಿರಿ?' ಎಂದು ನೇರವಾಗಿಯೇ ಅವನು ಕೇಳಿದಾಗ ಒಂದರೆ ಕ್ಷಣ ತಬ್ಬಿಬ್ಬಾದವಳಂತೆ ಕಂಡು ಬಂದರೂ ಮರುಕ್ಷಣವೇ ಸಾವರಿಸಿಕೊಂಡು 'ಅದನ್ನೆಲ್ಲ ಹೇಗೆ ಹೇಳೋದಿಕ್ಕಾಗುತ್ರೀ?' ಎಂದಳು ಪಾಪ, ಅವಳಿಗೆ ಪ್ರಶ್ನೆ ಸ್ವಲ್ಪ ಕಗ್ಗಂಟಾಗಿದೆಯೆಂದು ತಿಳಿದು "ನಾನೇಕೆ ನಿಮ್ಮನ್ನು ಇಷ್ಟ ಪಟ್ಟಿದೀನಿಂತ ಹೇಳಿದ ಮೇಲಾದರೂ ನೀವು ತಿಳಿಸಿ. ನೀವು ಶಾಲಾ ಮಾಸ್ತರರ ಮಗಳಾದ್ದರಿಂದ ಅಲ್ಪಸ್ವಲ್ಪವಾದರೂ ಆದರ್ಶಗಳ ನಡುವೆ ಬೆಳೆದು ಬಂದಿರ್ತಿರಿ. ಆದ್ದರಿಂದ ಜೀವನದಲ್ಲಿ ಯಶಸ್ಸು ಸಾಧಿಸೋಕೆ ನಿಮ್ಮ ವಿದ್ಯಾವಂತ ಕುಟುಂಬದ ಹಿನ್ನೆಲೆ ಸಹಕಾರಿಯಾಗುತ್ತೇಂತ ನಾನು ಒಪ್ಪಿರೋದು" ಎಂದು ಮಾತುಗಳನ್ನು ಸಿದ್ಧಪಡಿಸಿರುವವನಂತೆ ಹೇಳಿದ. ತಾನೇನೂ ತಾವುದರಲ್ಲೂ ಕಡಿಮೆಯೇನಿಲ್ಲವೆಂಬಂತೆ ಅವಳು ನುಡಿದಳು: "ನಮ್ಮ ಮನೆಯಲ್ಲಿ ನೀವಂದ್ರೆ ಬಹಳ ಇಷ್ಟ. ಆದ್ರೆ ನೀವಿನ್ನೂ ೩-೪ ವರ್ಷ ಮದುವೆಯಾಗೋಲ್ಲಾಂತ ತಿಳಿಸಿದ್ದೀರಿ. ಇನ್ನೂ ನನ್ನ ತಂಗಿ ಇರೋದ್ರಿಂದ ನಮ್ತಂದೆ ಅಲ್ಲಿವರ್ಗೂ ಕಾಯೋಲ್ಲ. ಇನ್ನೊಂದ್ವರ್ಷ ಬೇಕಾದ್ರೆ ಮುಂದಕ್ಕೆ ಹಾಕಬಹುದಷ್ಟೇ". ಇಬ್ಬರೂ ಹತ್ತಿರದವರಂತೆ ಒಬ್ಬರಿಗೊಬ್ಬರು ಕಾಣಲಾರಂಭಿಸಿದರು.

ಹುಸಿ ಮುನಿಸು ತೋರುತ್ತಾ ಹತಾಶಳಾಗಿ ಕೋಪಗೊಂಡಿದ್ದ ಅವಳು ಅಷ್ಟೇ ದೃಢವಾಗಿ 'ಬಿಡುವಾ? ನನಗ್ಯಾವಾಗ ಬಿಡುವಿರಲಿಲ್ಲ?' ಎಂದಳು. ಅವಳ ಧೈರ್ಯಕ್ಕೆ ದಂಗಾದರೂ ಸಾವರಿಸಿಕೊಂಡು ಅವಳ ಹತ್ತಿರ ಕುಳಿತುಕೊಳ್ಳಲು ಹೊರಟವನನ್ನು ಕಂಡು ಕುಳಿತಿದ್ದ ಅವಳು ಗೌರವ ಸೂಚಕವಾಗಿಯೆಂಬಂತೆ ಎದ್ದು ನಿಂತದ್ದು ಮನಕ್ಕೆ ಭಾರೀ ಖುಷಿಕೊಟ್ಟಿತು. ಹುಡುಗಿ ಎಂದರೆ ಹೀಗಿರಬೇಕೆಂದುಕೊಂಡು ಅವನು ನೀವೊಬ್ಬರೇ ಎಂದೂ ಒಂಟಿಯಾಗಿ ಸಿಗಲಿಲ್ಲವಾದ್ದರಿಂದ ಹಾಗೆ ಭಾವಿಸಿದೆನೆಂಬ ಪಲಾಯನದ ಉತ್ತರ ನೀಡಿದ. ತಾವಿಬ್ಬರೂ ಇಂಥಹದೊಂದು ದಿನ ಆಫೀಸು ಮುಗಿದ ಮೇಲೆ ಸಂಧಿಸುವುದೆಂದು ಸಮಯ ನಿಗದಿಪಡಿಸಿಕೊಂಡರು. ಅವಳೇನೋ ತನ್ನ ಸ್ನೇಹಿತೆಯರನ್ನು ಏನೋ ನೆಪವೊಡ್ಡಿ ಸಾಗ ಹಾಕಿದಳು. ಆದರೆ ತನ್ನೆಲ್ಲ ಮಿತ್ರರನ್ನು ಕಳುಹಿಸಲೆತ್ನಿಸಿದರೂ ಒಬ್ಬ ಸಹೋದ್ಯೋಗಿ ಮಾತ್ರ ಇವನು ನೆಪಮಾತ್ರ ಹೇಳಿದ ಕೆಲಸಕ್ಕೂ ಕಂಪನಿ ಕೊಡುವೆನೆಂದು ತಗುಲಿ ಹಾಕಿಕೊಂಡ. ಇವಳೊಂದು ಸುಂದರ ನಗೆ ಬೀರಿ ಬನ್ನಿ ನಾವಿಬ್ಬರೂ ಬೇರೆ ಕಡೆಯೇ ಹೋಗಿ ಮಾತಾಡೋಣವೆಂಬಂತೆ ಕರೆದಳು.

ತಾನು ತಿಳಿಸಿರುವ ಅವಧಿಯವರೆಗೆ ತಾನೂ ಕೂಡ ಕಾಯಲಾರನೆಂದು ಪ್ರಾಯೋಗಿಕ ಲೆಕ್ಕಾಚಾರ ಮಾಡಿದ ಅವನು ಹೇಳಿದ: "ನಮ್ಮ ಮನೆಯಲ್ಲಿ ಹಿಂದಿನಿಂದಲೂ ಖಡಾಖಂಡಿತವಾಗಿ ಬೇಡವೆಂದರೂ ಸೋದರ ಮಾವನ ಮಗಳನ್ನೇ ಮದುವೆಯಾಗೂಂತ ಪೀಡಿಸ್ತಿರೋದ್ರಿಂದ ಇನ್ನೂ ೩-೪ ವರ್ಷಗಳವರೆಗೆ ಮದುವೆಯೇ ಬೇಡಾಂತ ಹೇಳಿದೀನಿ. ಆದ್ರೆ ಕನಿಷ್ಠ ಒಂದೂವರೆ ವರ್ಷದವರೆಗೆ ಕೆಲವೊಂದು ಜವಾಬ್ದಾರಿಗಳನ್ನು ಪೂರೈಸಬೇಕಿರೋದ್ರಿಂದ ಮದುವೆ ಬೇಡಾಂತ" ತಿಳಿಸಿದ. ಜವಾಬ್ದಾರಿಯುತ ಕೆಲಸಗಳು ಏನೇನಿವೆಯೆಂಬ ಧಾಟಿಯಲ್ಲಿ ಇವನ್ನೇ ದಿಟ್ಟಿಸತೊಡಗಿದಳು.

"ನನ್ನೊಬ್ಬ ತಮ್ಮನನ್ನು ಓದಿಸೋಕೆ ಸಾಧ್ಯವಾಗಲಿಲ್ಲ. ಸದ್ಯಕ್ಕೆ ಅವನು ವ್ಯವಸಾಯ ಮಾಡುತ್ತಿದ್ದರೂ ಎಷ್ಟು ಶ್ರಮಪಟ್ಟು ಬೆಳೆ ತೆಗೆದರೂ ಯಾವ ಬೆಲೆಯೂ ಸಿಗದಿರೋದ್ರಿಂದ ಅವನಿಗೇನಾದ್ರೂ ಒಂದು ವ್ಯಾಪಾರ ಹಾಕಿಕೊಡೋಣವೆಂದು ಕೊಂಡಿದೀನಿ. ತಂಗಿ ಇನ್ನೂ ಚಿಕ್ಕವಳಿರೋದ್ರಿಂದ ಇನ್ನೊಂದಷ್ಟು ವರ್ಷವಾದ ಮೇಲೆ ಮದುವೆ ಮಾಡ್ಬೇಕು. ಇಷ್ಟು ಸದ್ಯಕ್ಕೆ ನನ್ನ ಜವಾಬ್ದಾರಿ".

"ನಿಮ್ತಂಗಿ ಅಷ್ಟೇನೂ ಚೆನ್ನಾಗಿ ಓದ್ತಿಲ್ಲವಾದರೆ ಬೇಗ ಮದುವೆ ಮಾಡಿಬಿಡೋದು ಸರಿಯಲ್ಲವೇ?"

"ಸುಮಾರಾಗಿ ಓದ್ತಾಳೆ. ಆದರೆ ಚಿಕ್ಕ ವಯಸ್ಸಿಗೇ ಮದುವೆ ಮಾಡುವ ಮನಸ್ಸಿಲ್ಲದರ ಜತೆಗೆ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಯಾಗೋದು ನನಗಿಷ್ಟ" ಎಂದು ಅವಳ ಆಸ್ಥೆಯನ್ನು ಈ ವಿಷಯದಲ್ಲಿ ಗಮನಿಸಿದ.

"ಒಂದು ವೇಳೆ ನಿಮ್ಮ ಮನೆಯವರು ನನ್ನನ್ನು ಒಪ್ಪದೇ ನಿಮ್ಮ ಸೋದರ ಮಾವನ ಮಗಳನ್ನೇ ಮದುವೆಯಾಗಬೇಕೆಂದರೆ ಏನು ಮಾಡ್ತೀರಿ?" ತನ್ನ ಮನೆಯವರು ತನಗಿಷ್ಟವಿಲ್ಲದಿದ್ದರೆ ಬಲವಂತ ಮಾಡೋದಿಲ್ಲವಾದರೂ ಎಲ್ಲರನ್ನೂ ಒಪ್ಪಿಸುವ ಜವಾಬ್ದಾರಿ ತನ್ನದೆಂದು ದೃಢ ನಿಶ್ಚಯದಿಂದೆಂಬಂತೆ ಹೇಳಿದಾಗ ಬಹಳ ಹರ್ಷಗೊಂಡ ಅವಳು "ಹಾಗಿದ್ರೆ ನಮ್ಮ ಮನೆಯವರೊಂದಿಗೆ ಮಾತಾಡಿ ಇನ್ನೊಂದ್ವರ್ಷ ಕಾಯಲು ಹೇಳಿ" ಎಂದಳು. "ನಾನಂತೂ ಹೇಳಲ್ಲಪ್ಪ. ನಿಮಗೇ ಗೊತ್ತು, ನಾನೆಷ್ಟು ಸಂಕೋಚದ ಸ್ವಭಾವದವನೂಂತ. ನಿಮ್ಮ ಜತೆ ಮಾತಾಡೋಕೆ ಎರಡು ತಿಂಗಳು ಸಮಯ ತಗೊಂಡಿದೀನಿ" ಎಂದು ನಿರ್ದಾಕ್ಷಿಣ್ಯವೆಂಬಂತೆ ನುಡಿದ.

"ಅದ್ಸರಿ, ನನಗೇನೋ ದೇವರಂದ್ರೆ ತುಂಬಾ ಭಕ್ತಿ. ನೀವಂತೂ ಸ್ವಲ್ಪವೂ

ನಂಬಲ್ಲವಲ್ಲ, ಚಾರ್ವಾಕ ವಂಶದೋರಾ?" ಎಂದು ಛೇಡಿಸಿದಳು.

"ಪರವಾಗಿಲ್ವೆ ಚಾರ್ವಾಕರ ಹೆಸರೂ ಕೂಡ ಕೇಳಿದ್ದೀರಿ?"

"ಚಾರ್ವಾಕರು ದೇವರನ್ನು ನಂಬುತ್ತಿರಲಿಲ್ಲಾಂತ ಗೊತ್ತಷ್ಟೆ. ನಿಮಗೇನಾದರೂ ಗೊತ್ತಿನೆಯಾ ಅವರ ಬಗ್ಗೆ" ಎಂದಳು ನವುರಾಗಿ.

"ನಾನು ತಿಳಿದಿರೋದು ಕೂಡ ಸ್ವಲ್ಪವೇ. ಬಹಳಷ್ಟು ಹಿಂದೆ ಮಂತ್ರೋದೋಷಗಳ, ದೇವರು ದೆವ್ವ ಮುಂತಾದ ಮಾಯೆಗಳ ಹೆಸರಲ್ಲಿ ಜನರಿಗೆಲ್ಲ ಬೆಪ್ಪಿಡಿಸಿ ಸಮಾಜದವನ್ನೆಲ್ಲ ತನ್ನ ತೆಕ್ಕೆಯಲ್ಲಿಟ್ಟುಕೊಂಡು ದಾಶ್ಯತನಕ್ಕೆ ತಳ್ಳಿದ್ದ ಉನ್ನತ ವರ್ಗದ ವಿರುದ್ಧ ಸಮರ ಸಾರಿ 'ಕಣ್ಣಿಗೆ ಕಾಣುವುದು ಮಾತ್ರ ಸತ್ಯ, ಮಿಕ್ಕಿದ್ದೆಲ್ಲ ಮಿಥ್ಯ' ಎಂದು ಅವರ ಅಧಿಪತ್ಯದ ಅವನತಿಗೆ ಕಾರಣರಾಗಿದ್ದವರೇ ಚಾರ್ವಾಕರು. ಆದರೆ ಆ ಚಾರ್ವಾಕರನ್ನು ಅವರ ಗ್ರಂಥ ಸಮೇತ ಸುಟ್ಟು ಬೂದಿ ಮಾಡಿತು ಕುಟಿಲೋಪಾಯದ ಪುರೋಹಿತಶಾಹಿ". ನಂತರ ಧಾಟಿ ಬಸಲಿಸಿ,

"ನಾನು & ನನ್ನ ಒಡಹುಟ್ಟಿದವರೆಲ್ಲ ಬೀದಿ ಭಿಕಾರಿ ಸ್ಥಾನದಿಂದ ಕಷ್ಟುಪಟ್ಟು ದುಡಿದು ಮೇಲೇರಿ ಬಂದಿದ್ದೇವೆ. ಹಣ, ಸಂಪತ್ತನ್ನು ಕೂಡಿ ಹಾಕಲು ಕೊಳ್ಳೆ ಹೊಡೆಯಬೇಕು ಅನ್ನೋದಕ್ಕೆ ಸಹ ನನ್ನ ವಿರೋಧವಿದೆ. ನಾವು ಬದುಕೋಕೆ ಮೈ ತುಂಬಾ ಬಟ್ಟೆ ಹಾಕೋಕೆ ಮತ್ತು ಮೂರ್ಹೊತ್ತು ಹೊಟ್ಟೆ ತುಂಬಾ ಉಣ್ಣೋದಿಕ್ಕೆ ಮಾತ್ರ ನನಗೆ ಹಣದ ಅವಶ್ಯಕತೆ" ಎಂದು ಪುಂಖಾನುಪುಂಖವಾಗಿ ತನ್ನೆಲ್ಲ ಅನಿಸಿಕೆಯನ್ನು ಹೊರಸುರಿದಷ್ಟು ಸಮಾಧಾನ ಅವನಿಗೆ. ಮೊದಲಿಂದಲೂ ಬಹಳ ಆಸಕ್ತಿಯಿಂದ ಉತ್ಸಾಹಬರಿತಳಾಗಿ ಮಾತು ಕೇಳುತ್ತಿದ್ದವಳು, ಅವನ ಕೊನೆಯ ಮಾತುಗಳನ್ನು ಕೇಳಿ ತುಂಬಾ ನಿರುತ್ಸಾಹಗೊಂಡಂತಾಗಿ ಹೇಳಿದಳು 'ಅಯ್ಯೋ, ಗಾಂಧೀನಾ ನೀವು! ಅದೆಲ್ಲ ಈಗಿನ ಕಾಲದಲ್ಲಿ ನಡೆಯೋದಿಲ್'ವಲ್ರಿ, ಈ ತರಹವಿದ್ದರೆ ಜೀವನ ಭಾರೀ ಕಷ್ಟವಾಗುತ್ತೆ".

ಅವನ ಮೇಲೆ ಭರವಸೆಯಿಟ್ಟು ಇಲ್ಲಿವರೆಗೆ ಬಂದಿದ್ದೆಲ್ಲ ಹುಸಿ ನಿರೀಕ್ಷೆಯಾಯಿತೆಂಬ ವಿಷಾದ, ಅವಳ ಮಾತಲ್ಲಿ ತುಂಬಿತ್ತು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ಅವನು ತನ್ನ ಮಾತಲ್ಲಿ ತನಗೆ ನಂಬಿಕೆಯಿದೆ ಎಂಬಂತೆ "ಗಾಂಧಿಯ ಆದರ್ಶದ ಹಾದಿಯಲ್ಲಿ ಹೆಜ್ಜೆ ಹಾಕಿದಾಕ್ಷಣ ಗಾಂಧಿಯಾಗಿ ಬಿಡ್ತೀನಿ ಎಂಬ ಭ್ರಮೆ ನನಗಿಲ್ಲ. ಆದರೆ ಯಾವುದೇ ಮನುಷ್ಯ ಸಮಾಜದ ಏಳಿಗೆಯನ್ನು ಬಯಸಿದಾಗ ಕೆಲವು ಆದರ್ಶ ತತ್ವಗಳಿಗೆ ಬದ್ಧನಾಗಿರಬೇಕಾಗುತ್ತದೆ" ಎಂದ.

ಇವನಿಗಿಂತಲೂ ಪ್ರಾಪಂಚಿಕ ಜ್ಞಾನದಲ್ಲಿ ತಾನೆಷ್ಟು ಚತುರೆಯೆಂಬುದನ್ನು ಸಾಬೀತು ಪಡಿಸುವವಳಂತೆ ಮೊದಲ ಬಾರಿಗೆ ದೊಡ್ಡ ದನಿಯಲ್ಲಿ ಮಾತನಾಡಲಾರಂಭಿಸಿದಳು. "ಗಾಂಧಿ ಬಗ್ಗೆ ನನಗೂ ಗೌರವ ಇದೆ. ಆದರೆ ಗಾಂಧಿ ದಾರಿಯಲ್ಲಿ ಸತ್ಯ ಹುಡುಕ ಹೊರಟ ಎಷ್ಟೋ ಆದರ್ಶ ವ್ಯಕ್ತಿಗಳು ಯಾವ ದಡ ತಲುಪಿದ್ದಾರೆ ಅಂತಾನೂ ನಮಗೆ ಗೊತ್ತಿದೆ. ಇಂದು ಗಾಂಧಿಯ ಆದರ್ಶ ತತ್ವಗಳು ನಗಪಾಟಲಿಗೀಡಾಗುತ್ತವೆಯಷ್ಟೆ. ಆರ್ಥಿಕವಾಗಿ ಬಲವಿಲ್ಲದವರನ್ನು ಹೇಗೆ ಸಮಾಜದಲ್ಲಿ ಒಸಗಿ ಹಾಕ್ತಾರೇಂತ ನಿಮಗೂ ಗೊತ್ತು" ಎಂದು ತನ್ನ ಆತಂಕಗಳನ್ನು ಸುರುವಿಕೊಂಡಳು.

ನಾನು & ನನ್ನ ಒಡಹುಟ್ಟಿದವರೆಲ್ಲ ಬೀದಿ ಭಿಕಾರಿ ಸ್ಥಾನದಿಂದ ಕಷ್ಟುಪಟ್ಟು ದುಡಿದು ಮೇಲೇರಿ ಬಂದಿದ್ದೇವೆ. ಹಣ, ಸಂಪತ್ತನ್ನು ಕೂಡಿ ಹಾಕಲು ಕೊಳ್ಳೆ ಹೊಡೆಯಬೇಕು ಅನ್ನೋದಕ್ಕೆ ಸಹ ನನ್ನ ವಿರೋಧವಿದೆ. ನಾವು ಬದುಕೋಕೆ ಮೈ ತುಂಬಾ ಬಟ್ಟೆ ಹಾಕೋಕೆ ಮತ್ತು ಮೂರ್ಹೊತ್ತು ಹೊಟ್ಟೆ ತುಂಬಾ ಉಣ್ಣೋದಿಕ್ಕೆ ಮಾತ್ರ ನನಗೆ ಹಣದ ಅವಶ್ಯಕತೆ" ಎಂದು ಪುಂಖಾನುಪುಂಖವಾಗಿ ತನ್ನೆಲ್ಲ ಅನಿಸಿಕೆಯನ್ನು ಹೊರಸುರಿದಷ್ಟು ಸಮಾಧಾನ ಅವನಿಗೆ. ಮೊದಲಿಂದಲೂ ಬಹಳ ಆಸಕ್ತಿಯಿಂದ ಉತ್ಸಾಹಬರಿತಳಾಗಿ ಮಾತು ಕೇಳುತ್ತಿದ್ದವಳು, ಅವನ ಕೊನೆಯ ಮಾತುಗಳನ್ನು ಕೇಳಿ ತುಂಬಾ ನಿರುತ್ಸಾಹಗೊಂಡಂತಾಗಿ ಹೇಳಿದಳು 'ಅಯ್ಯೋ, ಗಾಂಧೀನಾ ನೀವು! ಅದೆಲ್ಲ ಈಗಿನ ಕಾಲದಲ್ಲಿ ನಡೆಯೋದಿಲ್'ವಲ್ರಿ, ಈ ತರಹವಿದ್ದರೆ ಜೀವನ ಭಾರೀ ಕಷ್ಟವಾಗುತ್ತೆ".

"ಗಾಂಧಿ, ಅಂಬೇಡ್ಕರ್, ಬುದ್ಧ, ಬಸವ, ಮಾರ್ಕ್ಸ್ ಹೀಗೆ ಹಲವಾರು ತತ್ವಜ್ಞಾನಿಗಳು ತಮ್ಮ ಸಮಕಾಲೀನರಲ್ಲೆಲ್ಲ ಮೇರು ಮಟ್ಟದ ವಿದ್ವಾಂಸರಾಗಿದ್ದು, ತಾವೆಣಿಸಿದ ಕನಸಿನ ಸುಖಿ ಜೀವನವನ್ನು ಪಡೆಯಲು ಸಾಮರ್ಥ್ಯವಿದ್ದರೂ ತಮ್ಮೆಲ್ಲ ಜೀವನವನ್ನು ಸಮಾಜದ ಒಳಿತಿಗಾಗಿ ಬಲಿ ಕೊಟ್ಟ ಮಹನೀಯರು. ವಜ್ರವನ್ನು ಉಜ್ಜಿದಷ್ಟು ಹೊಳಪು ನೀಡುತ್ತದೆ" ಎಂದು ಕಷ್ಟದ ಹಾದಿಗೂ ಸಿದ್ಧವಿದ್ದಲ್ಲಿ ಒಪ್ಪಬೇಕೆಂಬ ಧಾಟಿಯನ್ನು ರವಾನಿಸಿದ.

"ಆದರೆ ಅದೇನೋ ಗಾಂಧಿ ತತ್ವ ಕಂಡ್ರೆ ನನಗೆ ಅಷ್ಟೊಂದು ಹಿಡಿಸಲ್ಲ" ಎಂದಳು.

"ಗಾಂಧಿವಾದಲ್ಲಿ ಮಿತಿಯಿರುವುದು ನಿಜ. ಆದರೆ ಕೇವಲ ಹಿಂದೂ ಅಥವಾ ಮುಸ್ಲಿಂ ಮತೀಯ-ವಾದಿಗಳು ಅವರನ್ನು ಬಹಳ ದ್ವೇಷಿಸ್ತಾರೆ".

"ನಾನೇನೂ ಮತೀಯವಾದಿಯಲ್ಲಪ್ಪ. ನಾನು ನಂಬಿರುವ ಮಾಧ್ಯಮದ ಪಾತ್ರ ಇದರಲ್ಲಿದೆ."

"ಅಂಬೇಡ್ಕರ್‌ರವರು ಅಸ್ಪೃಶ್ಯತೆಯನ್ನು ಬುಡಮಟ್ಟ ಕೀಳಲು ಮಹಾನ್ ಸಾಹಸವನ್ನೇ ಮಾಡುತ್ತಿದ್ದಾಗ ಗಾಂಧಿಯವರಿಂದ ನಿರೀಕ್ಷಿಸಿದ ಮಟ್ಟದಲ್ಲಿ ಬೆಂಬಲ ಮತ್ತು ಪ್ರೋತ್ಸಾಹ ಸಿಗಲಿಲ್ಲವೆಂಬ ಭಾವನೆ ಮೂಡುವಂತಹ ಪರಿಸ್ಥಿತಿಯಿತ್ತು". ಎಂದ.

"ದೇಶ ಇಬ್ಭಾಗವಾಗೋದನ್ನು ಅವರು ತಪ್ಪಿಸಲಾಗಲಿಲ್ಲ. ಅಹಿಂಸೆ ಅಹಿಂಸೆ ಅಂಥ ಹೇಳಿ ಭಾರತದ ಯುವಶಕ್ತಿಯನ್ನು ಜಡಗೊಳಿಸಿದರಂತ ಕೆಲವರು ಹೇಳ್ತಾರಲ್ಲ" ಎಂದಳು ತನ್ನ ಸಿಹಿಯಾದ ಧ್ವನಿಯಿಂದ.

"ಭಗತ್‌ಸಿಂಗ್, ಸುಭಾಷ್ ಚಂದ್ರ ಬೋಸ್‌ರಂಥಹ ಕ್ರಾಂತಿಕಾರಿಗಳಿಗೆ ಬೆಂಬಲ ಕೊಡದಿದ್ದುದು ಗಾಂಧಿಯವರ ದೌರ್ಬಲ್ಯವಾಗಿತ್ತು. ಅಹಿಂಸೆಯಿಂದ ಮಾತ್ರ ಜನರನ್ನು ಒಟ್ಟುಗೂಡಿಸಬಹುದೆಂಬ & ಬ್ರಿಟಿಷರನ್ನು ಅದರಿಂದಲೇ ಓಡಿಸಬಹುದೆಂಬ ಅವರ ನಂಬುಗೆ ನಿಜವಾದರೂ ಸಹ ವಾಸ್ತವವಾಗಿ ಒಬ್ಬ ವಿದೇಶಿ ಶೋಷಣೆಕಾರನಿಂದ ಮತ್ತೊಬ್ಬ ದೇಶಿ ಶೋಷಣೆಕಾರನಿಗೆ ಅಧಿಕಾರ ವರ್ಗಾವಣೆಯಾದದ್ದನ್ನು ಬಿಟ್ಟರೆ ಮತ್ತೇನೂ ಇಲ್ಲ.

ಗಾಂಧಿಯವರ ಆಸೆ ಅಖಂಡ ಭಾರತವಾಗಿದ್ದರೆ, ಹಿಂದೂ ಮತೀಯವಾದಿಗಳಿಗೆ ಹಿಂದೂ ಭಾರತವೂ, ಮುಸ್ಲಿಂ ಮತೀಯವಾದಿಗಳಿಗೆ ಮುಸಿಂ-ಪಾಕಿಸ್ತಾನವೂ ಬೇಕಿತ್ತು. ಗಾಂಧಿ ಪಟ್ಟು ಸಡಿಲಿಸದಿದ್ದರಿಂದ, ವಿಭಜಿತವಾದರೂ ಭಾರತ ಹಿಂದೂವಾಗದೆ ಜಾತ್ಯಾತೀತವಾಯ್ತು. ಇದರಿಂದ ಸಿಟ್ಟುಗೊಂಡ ಮತೀಯವಾದಿಯೊಬ್ಬ ಅವರಿಗೆ ಗುಂಡಿಕ್ಕಿದ" ಎಂದು ಹೇಳಿದಾಗ ಕಣ್ಣು ಮಿಟುಕಿಸದೆ ಇವನ್ನೇ ನೋಡುತ್ತಿದ್ದ ಅವಳು ಅಂತಿಮವಾಗಿ ಹೇಳಿದ್ದಿಷ್ಟು: "ಹೀಗಿನ ಭಾರತದಲ್ಲಿ ಗಾಂಧಿ ಕೂಡ ತನ್ನ ತತ್ವ ಪಾಲಿಸಲು ಸಾಧ್ಯವಿಲ್ಲದಿರೋ ತರಹ. ಮಾಡಿದ್ದಾರೆ. ಅವರ ಶಿಷ್ಯಂದಿರು. ಗಾಂಧಿ ತತ್ವ ಹಿಂದಿನ ತಲೆಮಾರಿಗೆ ಮೀಸಲು." "ನಮ್ಮ ಮನೆಯವರೊಂದಿಗೆ ಮಾತನಾಡಿ ಅವರಂತೆ ನಡೀತೀನಿ. ಏಕೆಂದರೆ, ನನಗೆ ಈ ಲವ್ ಮ್ಯಾರೇಜ್‌ನಲ್ಲೆಲ್ಲ ನಂಬಿಕೆ ಇಲ್ಲ". ಇವನೂ ನಿರ್ವಾಹವಿಲ್ಲದೆ ಹೂಗುಟ್ಟಿದ. ಈ ವ್ಯವಸ್ಥೆಯು ಆಸ್ತಿ, ಆರ್ಥಿಕತೆಯ ತಳಪಾಯದ ಮೇಲೆ ಬೇರೂರಿ ನಿಂತಿರೋದ್ರಿಂದ ನೈಜ ಪ್ರೀತಿ, ಪ್ರೇಮ ಅನ್ನೋದೆಲ್ಲ ಲೊಳಲೊಟ್ಟೆಯೆಂಬುದು ಅವಳ ಇಂಗಿಂತವೇನು? ಎಲ್ಲರಿಗೂ ಒಪ್ಪಿಗೆಯಾಗಿದೆಯೆಂದೇ ಹೇಳಿದ್ದವಳು ಗಾಂಧಿ ಪ್ರಸ್ತಾಪ ಮಾಡಿದ್ದರಿಂದ ಬೆಚ್ಚಿ ಇನ್ನೂ ತನ್ನ ಮನೆಯವರೊಂದಿಗೆ ಚರ್ಚಿಸುವ ಹೊಸ ಕಥೆ ಶುರು ಮಾಡಿದ್ದಾಳೆನಿಸಿತು.

ಮಾತುಕತೆ ತನ್ನ ಮನಸ್ಸಿಗೆ ಮುದ ನೀಡುವಂತೆ ನಡೆದಿಲ್ಲವೆಂದು ನಿರಾಶನಾದ ಅವನು ಮತ್ತಿನ್ನೇನಿಲ್ಲ ಹೊರಡುವಾ ಎಂದಾಗ ಸ್ವಲ್ಪವೂ ಆತುರ ತೋರಿಸಲಿಲ್ಲ ಅವಳು. ಬಸ್‌ಸ್ಟಾಪಿನಲ್ಲಿ ಹಿಂದಿನ ಬಾಗಿಲಲ್ಲಿಳಿದ ಅವನು ಅವಳಿಗೆ ಮತ್ತೆ ಮುಖ ತೋರಿಸದೆ ಹೊರಟರೂ ಮುಂದಿನ ಬಾಗಿಲಲ್ಲಿಳಿದ ಅವಳು ಇವನ್ನು ಹಿಂಬಾಲಿಸಿ ಬಂದು ಮಾತನಾಡಿಸಿ ಬೀಳ್ಕೊಟ್ಟಳು. ಇವೆಲ್ಲ ನಡುವೆಯೂ ಅವಳ ಆಶಾದಾಯಕವಲ್ಲದ ಮಾತನ್ನು ಕಡೆಗಣಿಸಿ ಅವನನ್ನೇ ಬಯಸುತ್ತದೆನ್ನುವ ಅವಳ ನಡುವಳಿಕೆಯನ್ನು ತಾಳೆ ಮಾಡಿದಾಗ ಅವನಿಗನ್ನಿಸಿದ್ದಿಷ್ಟು: ತನ್ನ ಮೇಲೆ ಇಷ್ಟವಿದ್ದರೂ ಮಾತಿನಲ್ಲಿ ಮಾತ್ರ ತೋರಗೊಂಡಿಲ್ಲವೆಂದು. ಏಕೆಂದರೆ ಅವಳು ಊರಿಗೆ ಹೊರಡುವ ದಿನ ಅವನಿಗೆ ವಿಶೇಷವಾಗಿ ಬೈ ಬೈ ಹೇಳಿ ಹೋಗಿದ್ದಳು.

ತಾನು ಕಷ್ಟಪಟ್ಟು ಬದುಕು ಸವೆಸಿರುವ ಹಾದಿಯಲ್ಲಿ ಜತೆಗೆ ಇವಳೂ ಕೂಡಿದಳೆಂದರೆ ಅದಕ್ಕೊಂದು ಕಳೆ ಮೂಡುತ್ತದೆನಿಸಿತು. ಮನಸ್ಸಿನಲ್ಲೇ ಅಮೃತಶಿಲೆಯಿಂದ ಅವಳಿಗೊಂದು ಕೋಟೆಕಟ್ಟಿ ಆ ಕೋಟೆಯೊಳಗೆ ಅವಳಾಡುವ ಆಟ ನೆನೆದು ಅವಳೊಂದಿಗೆ ತಾನೂ ಕುಣಿದು ಕುಪ್ಪಳಿಸಿ ಖುಷಿಗೊಂಡ. ತನ್ನ ಕಠಿಣ ಹಾದಿಯ ನೋಡಿದವಳು ಆ ಹಾದಿಯ ಮಹತ್ವವನ್ನರಿತೇ ಮೆಚ್ಚಿರುವಳೆನಿಸಿತು. ಅವನು ಕಣ್ಣು

ಮುಚ್ಚಲಿ ಬಿಡಲಿ ಅವಳ ಚಿತ್ರವೇ ಮೂಡಿ ಜಗತ್ತಿನ ತುಂಬೆಲ್ಲ ಅವಳೇ ತುಂಬಿರುವಂತೆಯೂ ಅವಳ ಕನಸು ಮನಸುಗಳಲ್ಲೂ ಇದೇ ರೀತಿ ಚಿತ್ರಗಳು ತರಾವರಿಯಾಗಿ ಮೂಡಿ ಛಾಪೊತ್ತಿದೆಯೆನಿಸಿತು.

ಊರಿನಿಂದ ಅವಳು ಹಿಂತಿರುಗಿ ಬಂದಾಗಲೂ ಅಷ್ಟೇ. ಅವಳೊಂದು ಸುಂದರ ಲವಲವಿಕೆಯ ನಗೆ ಬೀರಿ ಮಾತಾಡಿಸಿದಾಗ ಅವಳಪ್ಪನಿಂದ ಅವಳಿಗೆ ಗ್ರೀನ್ ಸಿಗ್ನಲ್ ಸಿಕ್ಕು ನಗೆಯಾಗಿ ಹೊಮ್ಮಿದಂತಿತ್ತು. ಹೆಣ್ಣು ಸಂಕೋಚದಲ್ಲೂ ಧೈರ್ಯದಿಂದ ಭಾವನೆಗಳ ಮೂಲಕ ಮೂಕಳಂತೆ ವ್ಯಕ್ತಪಡಿಸುವುದಿದೆಯಲ್ಲ, ಅದರ ಮುಂದೆ ಗಂಡು ತಾನ್ಹೆಣಿಸಿದನ್ನು ಧೈರ್ಯವಾಗಿ ಬಡಬಡಿಸುವುದೂ ಕೂಡ ಏನೂ ಅಲ್ಲ. ತಾನೇ ಶ್ರೇಷ್ಠನೆಂದು ತನ್ನ ಶಕ್ತಿಯನ್ನು ಜಗಜ್ಜಾಹೀರು ಮಾಡುತ್ತಾ ಗಂಡು ಮೆರೆದರೆ ಆ ಶಕ್ತಿಯನ್ನು ಮುಚ್ಚಿಟ್ಟು ಸಮಯ ಬಂದಾಗ ಉಪಯೋಗಿಸುವ ಕಲೆಗಾರಿಕೆ ತಂತ್ರಗಾರಿಗೆ ಹೆಣ್ಣಲಿದೆಯಲ್ಲವೆ? ದಿನೇ ದಿನೇ ದಿನೇ ಅವಳ ಬಲಾಬಲಗಳನ್ನೇ ಕಣ್ಣಲ್ಲಿ ತುಂಬಿಕೊಂಡು ಬಲಹೀನವಾಗುತ್ತಾ ಹೋಗುತ್ತಿರುವೆನೇನೋ ಎಂದು ಭಯವಾಗುತ್ತಿತ್ತವನಿಗೆ.

ತನ್ನೀ ಹೊಸಗನಸಿನಿಂದಾಗಿ ಸ್ನೇಹಿತರ್‍ಯಾರಿಗೂ ಎಷ್ಟೋ ದಿನಗಳಿಂದ ಫೋನು ಹಾಯಿಸದಿರುವುದು ನೆನಪಿಗೆ ಬಂದದ್ದು ಆಶ್ಚರ್ಯವೊ ಗ್ರಹಚಾರವೊ ತಿಳಿಯದು. ತನ್ನೊಬ್ಬ ಸ್ನೇಹಿತನಿಗೆ ಫೋನ್ ಮಾಡಿ ಮಾತನಾಡುವಾಗ ಸ್ನೇಹಿತ ಹೇಳಿದ! 'ನಿನ್ನ ಜತೆ ಕೆಲಸ ಮಾಡುತ್ತಿರುವ ಹುಡುಗಿಯನ್ನು ನೋಡಲು ಬುಲಾವ್ ಬಂದಿದೆಯಪ್ಪ. "ನಿನ್ನಭಿಪ್ರಾಯವೇನು?" ಎಂದದ್ದು ಕೇಳಿಯೇ ನಾಲಿಗೆಯೊಣಗಿ ತೊದಲಲಾರಂಭಿಸಿ "ಹೋಗಿ ನೋಡಿ ಬನ್ನಿ... ಒಳ್ಳೇ ಹುಡುಗಿ" ಎಂದಷ್ಟೇ ಹೇಳಿ ಫೋನಿಟ್ಟ. ಎದೆ ಬಡಿತ ಜೋರಾಯಿತು. ತನ್ನ ಧೈರ್ಯವನ್ನೆಲ್ಲಾ ಒಗ್ಗೂಡಿಸಬೇಕೆಂದುಕೊಂಡರೂ ಆಕೆಯೇ ಅದನ್ನೆಲ್ಲ ಅಮರಿಕೊಂಡು ನುಂಗುತ್ತಿದ್ದಾಳೆನಿಸಿತು.

ರಾತ್ರಿಯೆಂಬ ರಂಗಿ ಜಗವನ್ನೆಲ್ಲ ತನ್ನ ಕಪ್ಪು ಸೀರೆಯಿಂದ ಮಚ್ಚಿ ಬೆಳಕನ್ನೆಲ್ಲ ನುಂಗಿದ್ದಳು. ರಾತ್ರಿ ಆಗಸದೆಡೆ ಮುಖಚಾಚಿ ಮಲಗಿದ್ದಾಗ ಒಂದೊಂದು ಸತ್ಯವೂ ಕಣ್ಣ ಮುಂದೆ ಹಾದು ಹೋದವು. ತನ್ನದು ಬಲಹೀನತೆಯ ಬಾಳೇ? ಜಗತ್ತು ಶಕ್ತಿವಂತರನ್ನು ಮಾತ್ರ ಪ್ರೀತಿಸುತ್ತದೆಯೇ? ಆದರೆ ಹಣಬಲವೇ ಶಕ್ತಿಯ ಪ್ರತಿನಿಧಿಯೇನು? ತನಗೆ ಹಣ ಬಲದ ಆಧಾರದ ಮೇಲೇರ್ಪಡುವ ಸಂಬಂಧವೇ ಬೇಡ. ಮತ್ತೂ ದಿಟ್ಟಿಸಿದಾಗ ಮಿನುಗುತ್ತಿರುವ ಚುಕ್ಕಿಗಳ ನಡುವೆ ಕೆಲ ಉಲ್ಕೆಗಳು ಭುವಿಗುದುರಿ ಬೀಳುವುದು ಕಾಣಿಸಿತು. ಕೆಳ ಉಲ್ಕೆಗಳು ಆಕಾಶ ತ್ಯಜಿಸಿದಾಕ್ಷಣ ಬೆಳಕಿನ ಶಕ್ತಿಗುಂದುವುದೇ? ಇಷ್ಟೂ ದಿನ ಏನೇನೋ ಆಸೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಬಹು ಎತ್ತರದಲ್ಲಿ ಗಾಳಿಪಟದಂತೆ ಹಾರಾಡಿ ಎಂಥೆಂಥದೋ ಲೋಕವನ್ನೆಲ್ಲ ಕಂಡ ಮನಸ್ಸು ಇಂದು ಬಿರುಗಾಳಿಗೆ ಸಿಕ್ಕಿ ನಲುಗಿ ಕನಸುಗಳ ಬಾಲಂಗೋಚಿಯನ್ನು ಹೊರಲಾರದೆ ಕೆಲ ಬೀಳುವಾಗ ನೋವಾಯಿತು. ಅವನ ಮನದಲ್ಲಿ ಸುಳಿದಾಡಿ ಅವಳು ಮೂಡಿಸಿದ್ದ ಗುರುತುಗಳನ್ನು ಅಳಿಸಿ ಹಾಕುವಾಗ ಕಣ್ಣೀರು ತುಂಬಿಕೊಂಡ. ಆ ಗುರುತುಗಳು ಸುಮ್ಮನೆ ಅಳಿಸಿದರೆ ಹೋಗುವಂತಿರಲಿಲ್ಲ.

ಮನಸ್ಸು ಸ್ಥಿಮಿತಕ್ಕೆ ಬಾರದೆ ಏನೇನೋ ಚಿಂತಿಸಲಾರಂಭಿಸಿತು. ತನ್ನ ಜೀವನವನ್ನು ಯಾವುದೋ ಕೆಲಸಕ್ಕೆ ಬಾರದ ಮಂದಿಗೆ ಹೋಲಿಸಿರಬೇಕವಳು. ಒಂದೊಂದು ಬೆವರ ಹನಿಯಿಂದ, ಹೆಬ್ಬಂಡೆಯಂಥಹ ಕಷ್ಟಗಳ ಉಳಿಯಿಂದ, ಮಹಾನ್ ಶಿಲ್ಪಿಯಾಗಲು ಪಡುವಷ್ಟು ಬವಣೆಯಿಂದ, ಒಂದೊಂದು ಹಸಿವಿನ ಸಂಕಟದುಬ್ಬುಮೆಯಿಂದ, ನೇಗಿಲು ಯೋಗಿಯೊಬ್ಬ ಭಯ, ಭಕ್ತಿ, ಶ್ರಮಗಳಿಂದ ಉತ್ತು ಬಿತ್ತು ಜೋಪಾನದಿಂದ ಬೆಳೆ ತೆಗೆದ ರೀತಿ ತನ್ನ ಜೀವನ ರೂಪಿಸಿರುವುದು ಕಣ್ಣ ಮುಂದೆ ಬಂತು. ಅದರ ಬೆಲೆ ಅರಿವಾಗುವುದು ಆ ದಾರಿಯಲ್ಲಿ ತೆವಳುತ್ತಾ, ನರಳಿ ಅರಳಿ, ಸತ್ತು ಹುಟ್ಟಿ ಬದುಕಿ ಬಂದ ಮನುಜರಿಗಲ್ಲದೆ ಯಾರದೋ ಹೆಗಲ ಮೇಲೆ ಕೂತು ಬಂದವರಿಗೆ ಸಾಧ್ಯವೇ? ತನಗೆ ನೋವುಣಿಸಿದವಳ ರೀತಿ ರಿವಾಜುಗಳು ಬಾಳಿನ ರೀತಿಯಲ್ಲವೆಂದೂ ತನ್ನನ್ನು ತಿರಸ್ಕರಿಸಿದರೂ ಕೊನೆ ಪಕ್ಷ ಸೌಜನ್ಯಕ್ಕಾಗಿ ತನ್ನೊಂದಿಗೆ ತಿಳಿಸಬೇಕಿತ್ತೆಂದು ಹೇಳಲು ಅವಳಿಗೆ ಫೋನು ಮಾಡಿದ.

ಅತ್ತ ಕಡೆಯ ಧ್ವನಿ ತೀರಾ ಉದಾಸನತೆಯಿಂದ ತುಂಬಿದೆಯೆನಿಸಿತು. "ನಾವು ಯಾರಿಗೂ ಬರಹೇಳಿಲ್ಲ. ನಿಮ್ಮ ಸ್ನೇಹಿತನೇ, ನನ್ನ ಹಿಂದೆ ಬಿದ್ದಿದ್ದಾನೆ..." "ನನ್ನ ಸ್ನೇಹಿತನದು ಒಳ್ಳೆ ಕುಟುಂಬ, ಆರ್ಥಿಕವಾಗಿ ಸದೃಢರು. ಆದರೆ ನೀವು ನನಗೆ ಭರವಸೆಯಿತ್ತು ನೋವುಂಟು ಮಾಡಬಾರದಿತ್ತು. ವರರನ್ನು ಖಾಸಗಿ ಕಂಪನಿಗಳು ಉದ್ಯೋಗಕ್ಕಾಗಿ ಸಂದರ್ಶನ ಮಾಡೋ ರೀತಿ ಮಾಡುವುದು ಸರಿಯಲ್ಲ. ದಯವಿಟ್ಟು ನೀವು ನನ್ನನ್ನು ಬದಿಗಿಟ್ಟು ಸ್ನೇಹಿತನ ಜತೇನೇ ಮುಂದುವರಿಸಿ" ಎಂದ. "ನಾವಂತೂ ನಿಮ್ಮನ್ನೇ ಇಷ್ಟ ಪಟ್ಟಿರೋದು" ಎಂದವಳು ಸುರಿಸಿದ ಮಾತಿನಲ್ಲಿ ಇವನಿಗೆ ಯಾವುದೇ ನಂಬಿಕೆಯಿರಲಿಲ್ಲ.

ರಾತ್ರಿಯೆಂಬ ರಂಗಿ ಜಗವನ್ನೆಲ್ಲ ತನ್ನ ಕಪ್ಪು ಸೀರೆಯಿಂದ ಮಚ್ಚಿ ಬೆಳಕನ್ನೆಲ್ಲ ನುಂಗಿದ್ದಳು. ರಾತ್ರಿ ಆಗಸದೆಡೆ ಮುಖಚಾಚಿ ಮಲಗಿದ್ದಾಗ ಒಂದೊಂದು ಸತ್ಯವೂ ಕಣ್ಣ ಮುಂದೆ ಹಾದು ಹೋದವು. ತನ್ನದು ಬಲಹೀನತೆಯ ಬಾಳೇ? ಜಗತ್ತು ಶಕ್ತಿವಂತರನ್ನು ಮಾತ್ರ ಪ್ರೀತಿಸುತ್ತದೆಯೇ? ಆದರೆ ಹಣಬಲವೇ ಶಕ್ತಿಯ ಪ್ರತಿನಿಧಿಯೇನು? ತನಗೆ ಹಣ ಬಲದ ಆಧಾರದ ಮೇಲೇರ್ಪಡುವ ಸಂಬಂಧವೇ ಬೇಡ. ಮತ್ತೂ ದಿಟ್ಟಿಸಿದಾಗ ಮಿನುಗುತ್ತಿರುವ ಚುಕ್ಕಿಗಳ ನಡುವೆ ಕೆಲ ಉಲ್ಕೆಗಳು ಭುವಿಗುದುರಿ ಬೀಳುವುದು ಕಾಣಿಸಿತು.

ದಿನಗಳೆದಂತೆ ಕಡಿದು ಹೋದ ಸಂಬಂಧದ ಬಗ್ಗೆಯೇ ಯೋಚನೆಗಳು ಮೂಡತೊಡಗಿ ಅವಳ ನೆನಪುಗಳು ಕಣ್ಣ ಪಟಲದ ಮುಂದೆ ಕಣ್ಣೀರು ಸುರಿಸುತ್ತಿದ್ದವು. ಸೌಗಂಧಿಕಾ ಪುಷ್ಪದಂಥ ನಗೆಯ ಬೆಂಬತ್ತಿ ಹೊರಟವನು ಹಿಂತಿರುಗಿ ಬರಲಾಗದೆ ಕೆಸರಿನೊಳಗೆ ಸಿಕ್ಕಂತಾಯಿತು. ಕಪಟತೆಯಲ್ಲೂ ಪರಿಪೂರ್ಣತೆಗೆ ಅವಳೇ ಸಾಕ್ಷಿಯೇನೋ? ಸುಂದರ ರೂಪದಲ್ಲೆಲ್ಲ ಮೋಸದ ಚುಕ್ಕಿಗಳು ಮೂಡಿ ಅವಳು ಕುರೂಪಿಯಾದ ಅನುಭವ. ಹಿಂದೆಲ್ಲ ಮಿರಿ ಮಿರಿ ಮಿಂಚುತ್ತಿದ್ದ ಬೆನ್ನ ಮೇಲಣ ಅವಳ ರೋಮ ಈಗ ಅವನ ಬೆನ್ನಿಗೆ ತಿವಿಯಲು ಹವಣಿಸುತ್ತಿರುವ ಖಡ್ಗದಂತೆ ಕಾಣುತ್ತಿದೆ. ಅವಳ ಮೀಸೆಯ ಕೂದಲುಗಳೆಲ್ಲ ದೊಡ್ಡದಾಗಿ ಬೆಳೆದಂತೆ ಬೆಳೆದು ಹಗ್ಗಕ್ಕಿಂತಲೂ ದಪ್ಪಗಾಗಿ ಅವನಮ್ಮ ನೇಣಿಗೇರಿಸಲು ಕಾಯುತ್ತಿರುವಂತಿದೆ. ಅವನ್ಹೆಣಿದಿದ್ದ ಕನಸುಗಳೆಲ್ಲ ಅವಳ ಮುಂಗುರುಳುಗಳು ಬೀಸಿದ್ದ ಬಲೆಗೆ ಸಿಕ್ಕು ಉಸಿರಾಡಲಾಗದೆ ವಿಲವಿಲನೆ ಒದ್ದಾಡಿ ಸಾಯುವಂತಿವೆ. ಪ್ರಕಾಶಮಾನವಾಗಿದ್ದ ಅವಳ ಕಣ್ಣಕಾಂತಿ ತಾನು ಜೋಪಾನ ಮಾಡಿದ್ದ ಹಸುಗೂಸಿನಂಥಹ ಮುಗ್ಧ ಕನಸುಗಳೆನ್ನೆಲ್ಲ ಭಸ್ಮಗೊಳಿಸಿದಂತಾಯಿತು. ಸ್ವರ್ಗವನ್ನೇ ಧರೆಗಿಳಿಸಿ ನಲಿಸುವಂತೆ ಕಂಡಿದ್ದ ಅವಳ ಸುಂದರ ನಗೆಯಿಂದ ಅವನನ್ನು ಕಪಟತೆಯ ಸುಳಿಯಲ್ಲಿ ಮುಳುಗಿಸುವ ಮುನ್ನ ಅಭಿನಯಿಸುವ ನಾಟಕದಂತೆಯೂ ಕುರಿ ಬಲಿಗೆ ಮುನ್ನ ಮಾಡುವ ಶೃಂಗಾರದ ದ್ಯೋತಕದಂತೆಯೂ ಕಾಣಿಸಿದೆ.

ಶಿಷ್ಟಾಚಾರದ ಮನುಷ್ಯನೆಂದು ಎಲ್ಲರಿಂದ ಮೆಚ್ಚುಗೆ ಗಳಿಸಿಕೊಂಡಿದ್ದ ತನ್ನನ್ನು ಒಂದೇ ಕ್ಷಣಕ್ಕೆ ಬುಗುರಿಯಾಡಿಸಿದಂತೆ ಆಡಿಸಿ ತಾನೇ ಗಾಳಿಯಲ್ಲಿ ತೂರಿಹೋದಂತೆ ಮಾಡಿದಳಲ್ಲ. ಈ ಸೌಂದರ್ಯದ ಹಿಂದೆಯಡಗಿರುವ ಠಕ್ಕುತನಕ್ಕೇ ತಾನೇ ಶ್ರೇಷ್ಠರೆಲ್ಲರು ತಮ್ಮ ಶ್ರೇಷ್ಠತೆಗೆ ಮಸಿ ಬಳಿದುಕೊಂಡಿರುವುದು.

ತಾನಿದೊಂದು ಸಣ್ಣ ಹಿನ್ನಡೆಯನ್ನು ಅರಗಿಸಿಕೊಳ್ಳಲಾಗದಿರುವಾಗ ತನ್ನವ್ವ ಆ ಹುಚ್ಚು ಬುದ್ಧಿ ಗಂಡ ಅನ್ನುವವನನ್ನು ಕಟ್ಕೊಂಡು ಅವನಿಂದ ಉಸಿರು ಕಿತ್ತು ಹೋಗುವಂತೆ ಬಡಿಸಿಕೊಂಡು ತನ್ನ ಕಂದಮ್ಮಗಳನ್ನು ಸಾಕಲು ಜೀವವನ್ನೇ ಬಸಿದು ಧಾರೆಯೆರೆದಿರುವುದನ್ನು ನೆನೆದಾಗ ದುಃಖ ಉಮ್ಮಳಿಸಿ ಬರತೊಡಗಿತ್ತು. ತನ್ನವ್ವನ ತೊಡೆ ಮೇಲೆ ತಲೆ ಹಾಕಿ ಎದೆಯ್ದುಗುರ ಮಾಡಿಕೊಳ್ಳ ಬೇಕೆನಿಸಿತು.

ಕಾಲ ಎಲ್ಲಿಂದೆಲ್ಲಿಯ ಗಾಳಿಯನ್ನು ಇನ್ನೆಲ್ಲಿಗೋ ಹೊತ್ತು ತೂರಾಡಿ ಆಕಾಶದ ಮೋಡಗಳನ್ನೂ ಸಾಗರಾದಲೆಗಳನ್ನೂ ತನ್ನ ಪಾಡಿಗೆ ತಾನು ಸ್ಥಾನ ಪಲ್ಲಟ ಮಾಡುತ್ತಲ್ಲಿತ್ತು. ಒಂದಷ್ಟು ದಿನ ಕಳೆದ ನಂತರ ಅವನ ಸ್ನೇಹಿತ ಸಿಕ್ಕಿ "ಆ ಹುಡುಗಿಗೇನೋ ನನ್ನ ಮೇಲೆ ಇಷ್ಟವಿಲ್ಲವಂತೆ ಕಣೋ. ನಾನು ಮಾಡಬೇಕೆಂದಿದ್ದ ಅವಳೊಂದಿಗಿನ ಭೇಟಿ ಕ್ಯಾನ್ಸಲ್ ಆಯ್ತು" ಎಂದಾಗ ಅವನಿಗೆ ಆಶ್ಚರ್ಯವಾಯಿತು.

ತನ್ನ ಮನದೊಳಗಿನ ದ್ವಂದ್ವ ಯೋಚನೆಗಳನ್ನೊಮ್ಮೆ ಮೆಲುಕು ಹಾಕಿ ತನ್ನೊಳಗಿನ ಗಾಂಧಿ ಗೆದ್ದನೇ ಎಂಬ ಪ್ರಶ್ನೆ ಮೂಡಿತು. ಅವನನ್ನು & ಸ್ನೇಹಿತನನ್ನೂ ಆಟದಲ್ಲಿ 'ಹೆಚ್ಚುವರಿ' ಆಟಗಾರರಂತೆಯೂ, ಐಟಿ ಕಂಪನಿಯಲ್ಲಿ 'ಬೆಂಚ್' ಮೇಲೆ ಕೂರಿಸಿದ್ದ ತಂತ್ರಜ್ಞರಂತೆಯೂ ವಧುವಿನ ಬುದ್ಧಿವಂತ ಮನೆಯವರು ಇವರನ್ನು ಕೂರಿಸಿದ್ದರೆಂಬುದು ನಂತರ ತಿಳಿಯಿತು.

ರಾಜಧಾನಿ ಬಳಿ ನೂರಾರು ಎಕರೆ ಜಮೀನು ಹೊಂದಿರುವ ಶ್ರೀಮಂತರ ಮನೆಗೆ ಅವಳ ನಿಶ್ಚಿತಾರ್ಥವಾಗಿರುವುದು ತಿಳಿದಾಗ ತನ್ನೊಳಗಿನ ಗಾಂಧಿ ಸೋತು ಸುಣ್ಣವಾಗಿಸಿರುವುದು ನಿಧಾನವಾಗಿ ತಿಳಿಯಿತವನಿಗೆ. ಆದರೆ ಗಾಂಧಿ ಯಾವೊತ್ತೂ ಸೋತೇ ತಾನೇ ಗೆದ್ದದ್ದು! □

ಭಯೋತ್ಪಾದನೆ ಇಡೀ ಜಗತ್ತನ್ನು ನಡುಗಿಸುತ್ತಿರುವ ಬಹು ದೊಡ್ಡ ಪಿಡುಗು. ಬಲಿಷ್ಠ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳನ್ನು ಹದ್ದುಬಸ್ತಿನಲ್ಲಿಡಲು ಬಳಸುತ್ತಿದ್ದ ಈ ಅಸ್ತ್ರ ಈಗ ಬಹುವ್ಯಾಪಿಯಾಗಿದ್ದು, ಇಡೀ ಜಗತ್ತನ್ನೇ ನಡುಗಿಸುತ್ತಿದೆ. ಶಾಂತಿ-ಸಹಬಾಳ್ವೆ ಆಶಿಸುವ ಎಲ್ಲರ ನೆಮ್ಮದಿ ಕೆಡಿಸಿದೆ. ಇತ್ತೀಚೆಗಂತೂ ಅದು ಧಾರ್ಮಿಕ ನೆಲೆಗಟ್ಟಿನ ಮೇಲೆ ವಿಸ್ತರಿಸಿಕೊಳ್ಳುತ್ತ ಜನಾಂಗ- ಜನಾಂಗಗಳ ನಡುವಿನ ದ್ವೇಷಕ್ಕೆ ಕಾರಣವಾಗುತ್ತಿದೆ. ಈ ಕುರಿತು ಚರ್ಚಿಸಬೇಕೆಂದು 'ಸಂವಾದ' ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಭಯೋತ್ಪಾದನೆಯನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಭಯೋತ್ಪಾದನೆಯ ಹಿಂದೆ ಇರುವ 'ಯುದ್ಧ ಸಿದ್ಧಾಂತ'ಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

೨. ಮುಸ್ಲಿಮರೆಲ್ಲ ದುಷ್ಟರು ಮತ್ತು ಭಯೋತ್ಪಾದಕರೆಂದು ಬಿಂಬಿಸುವ ಪ್ರಯತ್ನ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದೆ. ಒಂದು ಧರ್ಮವನ್ನು ಹಾಗೂ ಅದನ್ನು ಅವಲಂಬಿಸಿರುವವರನ್ನು ಸಾರಾ ಸಗಟು ಭಯೋತ್ಪಾದಕರೆಂದು ನಿಂದನೆಗೆ ಗುರಿ ಮಾಡುವುದು ಸರಿಯೇ? ಚರಿತ್ರೆಯ ದೀರ್ಘಕಾಲೀನ ಪರಿಣಾಮದಲ್ಲಿ ಇದು ಯಾವ ಆಯಾಮಗಳನ್ನು ಪಡೆದುಕೊಳ್ಳಬಹುದು?

೩. ಭಯೋತ್ಪಾದನೆ ಮೂಲತಃ ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ರಾಜಕೀಯ ದಾಳವಾಗಿ ಬಳಸಲ್ಪಡುತ್ತಿತ್ತಾದರೂ ಈಚೆಗೆ "ಇಸ್ಲಾಂ" ಮಾತ್ರ ಇಂಥ ಆಪಾದನೆಗೇಕೆ ಗುರಿಯಾಯಿತು? ಬೇರೆ ಧರ್ಮದ ಜನ ಭಯೋತ್ಪಾದನೆಯಲ್ಲಿ ತೊಡಗಿದ್ದರೂ ಆ ಧರ್ಮವನ್ನೇಕೆ ಭಯೋತ್ಪಾದನೆ ಜತೆ ಸಮೀಕರಿಸುತ್ತಿಲ್ಲ?

೪. ಭಯೋತ್ಪಾದನೆಯ ನಿವಾರಣೆಗೆ ನೀವು ಸೂಚಿಸುವ ಮಾರ್ಗೋಪಾಯಗಳೇನು?

ಮುಸ್ಲಿಂ ಭಯೋತ್ಪಾದನೆ: ಬಹು ದೊಡ್ಡ ಸವಾಲು

ಕೆ. ಮರುಳಸಿದಪ್ಪ
ಸಾಹಿತಿ, ಚಿಂತಕ



ಭಯೋತ್ಪಾದನೆ ಚರ್ಚೆ

೧. **ಸ**ರಳವಾಗಿ ಹೇಳುವುದಾದರೆ ಭಯೋತ್ಪಾದನೆಯು ಒಂದು ಸಾಮಾಜಿಕ ಪ್ರತಿಕ್ರಿಯೆ. ವ್ಯವಸ್ಥೆಯು ಶೋಷಣೆಯ ಬಗೆಗೆ ಕುರುಡಾದಾಗ, ಯಾವುದೇ ಬಗೆಯ ಹೋರಾಟಗಳು ಅರ್ಥರಹಿತ ವೆನ್ನಿಸತೊಡಗಿದಾಗ, ಭಯೋತ್ಪಾದನೆಗೆ ತಕ್ಕ ಪರಿಸ್ಥಿತಿ ಏರ್ಪಡುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳಿಂದ ದುರ್ಬಲರು ದಿಕ್ಕೆಟ್ಟು ಹತಾಶರಾಗುತ್ತಾರೆ. ಈ ಹತಾಶೆಯಿಂದ ಸಾಮಾನ್ಯರು ಕುಗ್ಗಿ ಹೋದರೆ, ತೀವ್ರಗಾಮಿಗಳು ಭಯೋತ್ಪಾದಕ ಸಂಘಟನೆಗಳ ಆಶ್ರಯ ಪಡೆಯುತ್ತಾರೆ; ತರಬೇತಿ ಹೊಂದಿದ ಬಳಿಕ ಅವರೂ ಭಯೋತ್ಪಾದಕರಾಗುತ್ತಾರೆ.

೨. ಭಯೋತ್ಪಾದನೆಯ ವಿವಿಧ ಮಾದರಿಗಳಿಗೆಲ್ಲ ಒಂದು ಸಮಾನವಾದ ತಾತ್ವಿಕ ಸಿದ್ಧಾಂತವಿದೆ, ಎಂದು ನನಗನ್ನಿಸುವುದಿಲ್ಲ. ಆದರೆ ಅವರೆಲ್ಲ ತಮ್ಮ ಗುರಿ ಮುಟ್ಟಲು ಹಿಂಸಾ ಮಾರ್ಗ ಅನುಸರಿಸಲು ನಿರ್ಧರಿಸಿದ್ದಾರೆಂಬುದೇ ಸಮಾನ ವಿಚಾರ ಇಪ್ಪತ್ತೊಂದನೆಯ ಶತಮಾನದ ಯುದ್ಧ ತಂತ್ರವೇ 'ಭಯೋತ್ಪಾದನೆ', ಎಂಬುದರಲ್ಲಿ ಯಾವ ಸಂದೇಹಕ್ಕೂ ಅವಕಾಶವಿಲ್ಲ. ಪ್ರಾಚೀನ ಹಾಗೂ ಮಧ್ಯಕಾಲೀನ ಯುದ್ಧಗಳ ಮೊದಲೇ ಗೊತ್ತು ಪಡಿಸಿದ ನಿರ್ದಿಷ್ಟ ರಣಾಂಗಣದಲ್ಲಿ ಸೈನ್ಯಗಳ ನಡುವೆ ನಡೆದರೆ, ಇಪ್ಪತ್ತನೆಯ ಶತಮಾನದಲ್ಲಿ ಬಾಂಬ್, ಟ್ಯಾಂಕರ್‌ಗಳ ಪ್ರವೇಶವಾಗಿ ಸಾಮಾನ್ಯ ನಾಗರಿಕರೂ ಯುದ್ಧದ ಅಪಾಯ ಹಾಗೂ ದುರಂತಗಳಿಗೆ ಬಲಿಯಾದರು. ಈ ಶತಮಾನದಲ್ಲಿ ಯುದ್ಧ ಮಾಡಲು ಭಾರಿ ಸೈನ್ಯದ ಅಗತ್ಯವಿಲ್ಲ; ಟ್ಯಾಂಕರ್ ಬಂಕರ್ ಇತ್ಯಾದಿ ಬೇಕಿಲ್ಲ. ಸಣ್ಣ ಪ್ರಮಾನದ ಬಾಂಬ್ ಅಥವಾ ಬಂದೂಕಿನಿಂದಲೇ ಗುರಿ ಸಾಧಿಸಬಹುದು. ಅವರ ಹಿಂಸೆಯ ಗುರಿ ನಾಗರಿಕರು. ರೈಲ್ವೆ ನಿಲ್ದಾಣ, ಮಾರ್ಕೆಟ್ ಚೌಕ, ಹೀಗೆ ಎಲ್ಲೆಂದರಲ್ಲಿ ಭಯೋತ್ಪದಕರು ಯುದ್ಧ ಹೂಡುತ್ತಾರೆ.

ಯಾವುದೇ ಶೋಷಣೆಗೆ ನೇರವಾಗಿ ಹೊಣೆಗಾರರಲ್ಲದ ಮುಗ್ಧ ನಾಗರಿಕರ ಮೇಲೆ ಹಿಂಸಾ ದಾಳಿ ಸರಿಯಲ್ಲ; ನಿಜ, ಆದರೆ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಬಾಂಬ್ ಹಾಕಿದಾಗ ಸತ್ತ ಲಕ್ಷಾಂತರ ಜನರು ಮುಗ್ಧ ನಾಗರಿಕರೇ ಅಲ್ಲವೇ? ಇಂತಹ ಯುದ್ಧಕ್ಕೆ, ಅಂದರೆ ಎರಡನೆಯ ಮಹಾಯುದ್ಧಕ್ಕೆ ಗಾಂಧೀಜಿಯೇ ಬೆಂಬಲ ಸೂಚಿಸಿದವರಲ್ಲವೇ? ಹೀಗೆ, ಭಯೋತ್ಪಾದಕ ಸಂಘಟನೆಗಳು ತರ್ಕ ಹೂಡಬಹುದು. ವ್ಯವಸ್ಥೆಯ ಬೆನ್ನು ಮುರಿಯಲು ಸಾಮಾನ್ಯ ಜೀವನವನ್ನು ಅಸ್ತವ್ಯಸ್ತಗೊಳಿಸಿ, ತಲ್ಲಣಗೊಳಿಸಿ, ಅರಾಜಕತೆಯನ್ನುಂಟು ಮಾಡುವುದು ಭಯೋತ್ಪಾದಕರ ತಂತ್ರವಾಗಿದೆ. ಬೆದರಿಸಿ ವಿರೋಧಿ ದೇಶಗಳನ್ನು ಮಣಿಸಿದಂತೆ ಭಯೋತ್ಪಾದಕರು ಬೆದರಿಸಿ ತಮ್ಮ ಗುರಿ ಸಾಧಿಸಲು ಹೊರಟಿದ್ದಾರೆ.

೩. ಮುಸ್ಲಿಂ ಭಯೋತ್ಪಾದನೆ, ನಮ್ಮ ಮುಂದಿರುವ ಬಹು ದೊಡ್ಡ ಸವಾಲು. ಜಗತ್ತಿನ ಭವಿಷ್ಯವೇ ಈ ಸವಾಲನ್ನು ನಿಭಾಯಿಸುವುದರಲ್ಲಿದೆ, ಎಂದು ನಾನು ನಂಬಿದ್ದೇನೆ. ಮುಸ್ಲಿಮರೆಲ್ಲ ದುಷ್ಟರು, ಭಯೋತ್ಪಾದಕರೆಂದು ಬಿಂಬಿಸುವ ಪಿತೂರಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ್‌ರಾಷ್ಟ್ರೀಯವಾಗಿ ನಡೆಯುತ್ತಿದೆ. ಎಂಬುದು ಸೂರ್ಯಸ್ಪಷ್ಟ ವಿಚಾರವೆಂದು ನಮಗೆಲ್ಲ ಗೊತ್ತು. ಆದರೆ ಈ ಪಿತೂರಿಯ ಜಾಲವನ್ನು ಹರಡುತ್ತಿರುವವರ ಸಂಚಿನ ಬಲೆಗೆ ಕಣ್ಣು ತೆರೆದುಕೊಂಡೇ ಮುಸ್ಲಿಮರೂ ಬೀಳುತ್ತಿದ್ದಾರೆಂಬುದು ಸುಳ್ಳಲ್ಲ. ಅವರಲ್ಲಿ ವಿವೇಕಿಗಳೂ, ಬುದ್ಧಿ

(೨೯ನೇ ಪುಟಕ್ಕೆ)

ಯಾವುದೇ ಶೋಷಣೆಗೆ ನೇರವಾಗಿ ಹೊಣೆಗಾರರಲ್ಲದ ಮುಗ್ಧ ನಾಗರಿಕರ ಮೇಲೆ ಹಿಂಸಾ ದಾಳಿ ಸರಿಯಲ್ಲ; ನಿಜ, ಆದರೆ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ಬಾಂಬ್ ಹಾಕಿದಾಗ ಸತ್ತ ಲಕ್ಷಾಂತರ ಜನರು ಮುಗ್ಧ ನಾಗರಿಕರೇ ಅಲ್ಲವೇ? ಇಂತಹ ಯುದ್ಧಕ್ಕೆ, ಅಂದರೆ ಎರಡನೆಯ ಮಹಾಯುದ್ಧಕ್ಕೆ ಗಾಂಧೀಜಿಯೇ ಬೆಂಬಲ ಸೂಚಿಸಿದವರಲ್ಲವೇ? ವ್ಯವಸ್ಥೆಯ ಬೆನ್ನು ಮುರಿಯಲು ಸಾಮಾನ್ಯ ಜೀವನವನ್ನು ಅಸ್ತವ್ಯಸ್ತ ಗೊಳಿಸಿ, ತಲ್ಲಣ ಗೊಳಿಸಿ, ಅರಾಜಕತೆಯನ್ನುಂಟು ಮಾಡುವುದು ಭಯೋತ್ಪಾದಕರ ತಂತ್ರವಾಗಿದೆ. ಬೆದರಿಸಿ ವಿರೋಧಿ ದೇಶಗಳನ್ನು ಮಣಿಸಿದಂತೆ ಭಯೋತ್ಪಾದಕರು ಬೆದರಿಸಿ ತಮ್ಮ ಗುರಿ ಸಾಧಿಸಲು ಹೊರಟಿದ್ದಾರೆ.

ಭಯೋತ್ಪಾದನೆ ಚರ್ಚೆ

ಅಮೆರಿಕಾದ ಕುತಂತ್ರ

ಡಾ॥ ಸಿದ್ದನಗೌಡಪಾಟೀಲ
ಕಾರ್ಯದರ್ಶಿ, ಸಿ.ಪಿ.ಐ

೧. ಭಯೋತ್ಪಾದನೆ ಆಧುನಿಕ ಸಮಾಜದ ಪಿಡುಗು. ಅಮಾಯಕ ಜನತೆಯ ಬದುಕನ್ನು ಅತಂತ್ರಗೊಳಿಸುವ ಸಾವು ನೋವುಗಳಿಗೆ ಕಾರಣವಾಗುವ ಈ ಭಯೋತ್ಪಾದನೆ ಈಗ ವಿಶ್ವ ವ್ಯಾಪಿಯಾಗುತ್ತಿದೆ.

ಅಧಿಕಾರ, ಬಂಡವಾಳ ಮತ್ತು ಮತಾಂಧತೆ ಇಂದು ಈ ಭಯೋತ್ಪಾದನೆಯ ಹಿಂದಿನ ಮೂಲ ಕಾರಣಗಳಾಗಿವೆ. ಒಂದು ವ್ಯವಸ್ಥೆಯಲ್ಲಿ ಜನ ನಂಬಿಕೆ ಕಳೆದುಕೊಳ್ಳುವಂತೆ ಮಾಡಿ ಆ ವ್ಯವಸ್ಥೆಯನ್ನು ನಾಶ ಮಾಡಲು ನಿರ್ದಿಷ್ಟ ಹಿತಾಸಕ್ತಿ ಇರುವ ಶಕ್ತಿಗಳು ಸಮಾಜ, ದೇಶಗಳಲ್ಲಿ ಭಯದ ವಾತಾವರಣ ಉಂಟು ಮಾಡುತ್ತವೆ. ಇನ್ನೊಂದು ಕಡೆ ಒಂದು ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ರಾಜ್ಯ ಸಹಿತ ಭಯೋತ್ಪಾದನೆಯ ಕ್ರಿಯೆಗಿಳಿದ ಘಟನೆಗಳನ್ನು ನಾವು ಕಾಣುತ್ತೇವೆ. ಇಂದು ಭಯೋತ್ಪಾದನೆ ಸಾಮ್ರಾಜ್ಯಶಾಹಿಗಳ ಹಾಗೂ ಮತಾಂಧರ ಪ್ರಮುಖ ಅಸ್ತ್ರವಾಗಿದೆ.

ಭಯೋತ್ಪಾದನೆಯ ಹಿಂದೆ ಇರುವ ಯುದ್ಧ ಸಿದ್ಧಾಂತಗಳು ಯುದ್ಧಕೋರರು ಹೇಳುವ ನೆಪಗಳು ಮಾತ್ರ. ಇತ್ತೀಚೆಗೆ ಇರಾಕ್ ದೇಶದ ಮೇಲೆ ಭಯೋತ್ಪಾದಕನ ಪಟ್ಟ ಕಟ್ಟಿದ ಅಮೆರಿಕಾ ತನ್ನ ಇತಿಹಾಸದಲ್ಲಿ ಹಲವಾರು ದೇಶಗಳಿಗೆ ಇಂಥ ಪಟ್ಟಗಳನ್ನು ಕಟ್ಟಿ ಯುದ್ಧಕ್ಕೆ ಕಾರಣಗಳನ್ನು ತೋರಿಸಿದೆ. ವಿಯೆಟ್ನಾಂ ದೇಶದಲ್ಲಿ ಯುದ್ಧದ ಹೆಸರಿನಲ್ಲಿ ಅಮೆರಿಕಾ ಮಾಡಿದ ಭಯೋತ್ಪಾದನೆ ಸ್ವಾತಂತ್ರ್ಯ ಬಯಸುವ ದೇಶಗಳಿಗೆ ಎಚ್ಚರಿಕೆಯಾಗಿತ್ತು. ಹಾಗೇ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಮಾಡಿದ ಜನಾಂಗೀಯ ಹಿನ್ನೆಲೆಯ ಭಯೋತ್ಪಾದನೆಯ ಹಿಂದೆ ಅಧಿಕಾರದ ದಾಹವಿತ್ತು. ಸೆಪ್ಟೆಂಬರ್ ೧೧ ಖಂಡಿಸುವ ಅಮೆರಿಕಾ ಇದರ ಸಾವಿರ ಪಟ್ಟು ದೊಡ್ಡ ದುರಂತವನ್ನು ಹಿರೋಶಿಮಾ ನಾಗಾಸಾಕಿ ಮೇಲೆ ಬಾಂಬ್ ದಾಳಿಯ ಮೂಲಕ ನಡೆಸಿತು. ಅದು ಯುದ್ಧದ ಹೆಸರಲ್ಲಿ ನಡೆದ ಭಯೋತ್ಪಾದನೆ. ಚಿಲಿ ದೇಶದ ಅಧ್ಯಕ್ಷ ಅಲೆಂಡೆಯವರನ್ನು ಕೊಲೆ ಮಾಡಿ ಇಡೀ ದಕ್ಷಿಣ ಅಮೆರಿಕಾದಲ್ಲಿ ಭಯದ ವಾತಾವರಣವನ್ನು ಉಂಟು ಮಾಡಿತು. ಇಂದು ಇಸ್ರೇಲ್ ಮೂಲಕ ಮಧ್ಯಪೂರ್ವದಲ್ಲಿ ಇಂಥ ಭಯೋತ್ಪಾದನೆಯನ್ನುಂಟು ಮಾಡುತ್ತಿದೆ. ಅಫ್ಘಾನಿಸ್ತಾನ ಮೇಲೆ ಮಾಡಿದ ದಾಳಿಯ ಹಿಂದೆ ಅಮೆರಿಕದ ದುರುದ್ದೇಶವಿದೆ. ಭಯೋತ್ಪಾದಕರೆಂದು ಹಣೆಪಟ್ಟಿ ಕಟ್ಟಿ ಬಹುತೇಕ ಸಂದರ್ಭದಲ್ಲಿ ಸುಳ್ಳು ಹೇಳಿ ಆ ದೇಶಗಳ ಮೇಲೆ ಯುದ್ಧ ನಡೆಸಿ ಅಲ್ಲಿನ ಸಂಪತ್ತನ್ನು ಲೂಟಿ ಹೊಡೆಯುವುದು ಅಮೆರಿಕಾ ಮತ್ತು ಅಂಥ ಸಾಮ್ರಾಜ್ಯಶಾಹಿಗಳ ಉದ್ದೇಶವಾಗಿದೆ. ಭಯೋತ್ಪಾದನೆ ತಡೆಯಲು ಯುದ್ಧ ಮಾಡುತ್ತೇವೆ ಎಂದು ಹೇಳುವ ಅಮೆರಿಕಾ ಮತ್ತು ಅಂಥ ಸಾಮ್ರಾಜ್ಯಶಾಹಿ ದೇಶಗಳು ಮೂಲ ಭಯೋತ್ಪಾದಕರು ಮತ್ತು ಭಯೋತ್ಪಾದನೆಯ ಉಗಮಕ್ಕೆ ಕಾರಣಕರ್ತರು.

೨. ಮುಸ್ಲಿಮರೆಲ್ಲ ಭಯೋತ್ಪಾದಕರು ಎಂದು ಬಿಂಬಿಸುವ ಕುತಂತ್ರ ಇಂದು ಅಂತಾರಾಷ್ಟ್ರೀಯವಾಗಿ ನಡೆಯುತ್ತಿದೆ. ಇದು ಸಾಮ್ರಾಜ್ಯಶಾಹಿಗಳ ಕುತಂತ್ರ. ಇಸ್ಲಾಂ ರಾಷ್ಟ್ರಗಳಲ್ಲಿ ಸಂಪತ್ತನ್ನು ದೋಚಲು ಆ ದೇಶಗಳ ಮೇಲೆ ಯುದ್ಧ ಮಾಡಲು ಅಮೆರಿಕಾಕ್ಕೆ ಮತ್ತದರ ಮಿತ್ರ ಕೂಟಕ್ಕೆ ಸಾಧ್ಯವಾಗಬೇಕಾದರೆ ಜಗತ್ತಿನ ದೃಷ್ಟಿಯಲ್ಲಿ ಮುಸ್ಲಿಮರು ದುಷ್ಟರು ಮತ್ತು ಭಯೋತ್ಪಾದಕರು ಎಂದು ಬಿಂಬಿಸಬೇಕು. ಅಂದಾಗ ಮಾತ್ರ ಅವರ ಯುದ್ಧಕೋರ ನೀತಿಗೆ ಬೆಂಬಲ ಸಿಗುತ್ತದೆ. ಇದೊಂದು ಕುತಂತ್ರ. ಭಯೋತ್ಪಾದಕರು ಎಲ್ಲ ಧರ್ಮದಲ್ಲಿದ್ದಾರೆ. ಆದರೆ ಯಾವುದೇ ಧರ್ಮದ ಎಲ್ಲ ಜನರೂ ಭಯೋತ್ಪಾದಕರಾಗಿರುವುದಿಲ್ಲ. ಹಿಟ್ಲರ್‌ನ ಕ್ರಿಶ್ಚಿಯನ್‌ರಲ್ಲಿ ಭಯೋತ್ಪಾದಕರ ಪಡೆ ತಯಾರಿಸಿದ್ದ ಇಸ್ರೇಲ್‌ನಲ್ಲಿ ಯಹೂದಿಗಳ ಭಯೋತ್ಪಾದಕ ಪಡೆಗಳಿವೆ. ಖೋಮೋನಿ, ಲಾಡೆನ್‌ನಂಥ ಭಯೋತ್ಪಾದಕರು ಇಸ್ಲಾಂನಲ್ಲಿದ್ದಾರೆ. ಆರ್‌ಎಸ್‌ಎಸ್ ಎಂಬ ಭಯೋತ್ಪಾದಕರು ಹಿಂದೂ ಧರ್ಮದಲ್ಲಿದ್ದಾರೆ. (ಇವರು ತಮ್ಮ ಕರಾಳ ರೂಪವನ್ನು ಗುಜರಾತ್‌ನಲ್ಲಿ ತೋರಿಸಿದ್ದಾರೆ) ಇಂಥ ಎಲ್ಲ ಧರ್ಮಗಳ ಭಯೋತ್ಪಾದಕ ಶಕ್ತಿಗಳ ಗುರು ಮಾರ್ಗದರ್ಶಿ ಅಮೆರಿಕಾದ ಸಾಮ್ರಾಜ್ಯಶಾಹಿ. ಹಿಂದಿನ ಅಫ್ಘಾನಿಸ್ತಾನ್ ದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ದಾರಿ ತಪ್ಪಿದ ಮುಸ್ಲಿಂ ಯುವಕರಿಗೆ ಪಾಕಿಸ್ತಾನದ ತುಂಬ ತರಬೇತಿ ಶಾಲೆಗಳನ್ನು ತೆಗೆದು ತರಬೇತಿ ಕೊಟ್ಟವರು ಇದೇ ಅಮೆರಿಕಾದವರು ಎಂಬುದನ್ನು ನೆನಪಿಡಬೇಕು. ಅಂಥ ಪಡೆಗಳಿಂದ ಅಫ್ಘಾನ್ ಪ್ರಜಾಸತ್ತಾತ್ಮಕ ಸರ್ಕಾರ ಉರುಳಿ ಇಂದು ಅಲ್ಲಿ ಅಮೆರಿಕದ ಕೈಗೊಂಬೆ ಸರ್ಕಾರವಿದೆ. ಭಯೋತ್ಪಾದನೆಯ ಉದ್ದೇಶ ಇದೆ. ಚರಿತ್ರೆಯ ದೀರ್ಘಕಾಲೀನ ಪಯಣದಲ್ಲಿ ಇದು ಘೋರ ಜನಾಂಗೀಯ ಕದನಗಳ ಹುಟ್ಟಿಗೆ ಕಾರಣವಾಗುತ್ತದೆ.

೩. ಇಸ್ಲಾಂ ರಾಷ್ಟ್ರಗಳು ಮಧ್ಯಪೂರ್ವದಲ್ಲಿ ಅಪಾರವಾದ ತೈಲ ಸಂಪತ್ತನ್ನು ಹೊಂದಿವೆ. ಆ ದೇಶಗಳೆಲ್ಲ ಅಮೆರಿಕದ ಕೈಗೊಂಬೆಯಾಗಿ ಅವರ ತೈಲ ಲೂಟಿಗೆ ಸಹಕರಿಸದಿದ್ದರೆ ಅವರು ಭಯೋತ್ಪಾದಕರಾಗುತ್ತಾರೆ. ಮೊನ್ನೆ ಸದ್ದಾಂ ಹುಸೇನ್, ಈಗ ಇರಾನ್ ಅವರ ಲಿಸ್ಟ್‌ನಲ್ಲಿದೆ. ಅಲ್ಲಿನ ಅಪಾರ ಸಂಪತ್ತನ್ನು ಲೂಟಿ ಮಾಡಬೇಕಾದರೆ ಅವರ ಮೇಲೆ ದಾಳಿ ಮಾಡಬೇಕು. ಅವರ ಮೇಲೆ ದಾಳಿ ಮಾಡಬೇಕಾದರೆ ಅವರನ್ನು ಭಯೋತ್ಪಾದಕರೆಂದು ಬಿಂಬಿಸಬೇಕು. ಅಮೆರಿಕದಿಂದಲೇ ತರಬೇತಿ ಪಡೆದ ಮುಸ್ಲಿಂ ಮತೀಯ ಭಯೋತ್ಪಾದಕ ಸಂಘಟನೆಗಳು ಈಗ ತಿರುಗಿ ಬಿದ್ದಿವೆ. ವಿಶ್ವದಲ್ಲಿನ ಅಪಾರವಾದ ಮುಸ್ಲಿಂ ಜನಾಂಗ ತಿರುಗಿ ಬಿದ್ದರೆ ಸಾಮ್ರಾಜ್ಯಶಾಹಿಗಳಿಗೆ ಅಪಾಯವಿದೆ. ಅದಕ್ಕೆ ಇಡೀ ಮುಸ್ಲಿಂ ಜನಾಂಗವನ್ನು ಭಯೋತ್ಪಾದಕರೆಂದು ಚಿತ್ರಿಸಿ ಸದಾ ಅವರ ಮೇಲೆ ಯುದ್ಧ ಮಾಡುವ ತಯಾರಿ ಸಾಮ್ರಾಜ್ಯಶಾಹಿಗಳದ್ದು. ಇತರ ಧರ್ಮಗಳ ಭಯೋತ್ಪಾದಕ ಗುಂಪುಗಳು ಈ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಪೂರಕವಾಗಿವೆ. ಭಾರತದ ಬಿಜೆಪಿ, ಆರ್‌ಎಸ್‌ಎಸ್ ತರಹ. ಅದಕ್ಕೆ ಅವರಾರೂ ಅಮೆರಿಕದ ದೃಷ್ಟಿಯಲ್ಲಿ ಭಯೋತ್ಪಾದಕರಲ್ಲ.

೪. ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ತೀವ್ರಗೊಳ್ಳಬೇಕು. ಜಾಗತೀಕರಣ ಮೂಲಕ ಸಬಲಗೊಳ್ಳುತ್ತಿರುವ ಸಾಮ್ರಾಜ್ಯಶಾಹಿಯನ್ನು ವಿಶ್ವದ ಬಡ ಅಭಿವೃದ್ಧಿಶೀಲ ದೇಶಗಳು ಪರ್ಯಾಯ ವಿಶ್ವ ಆರ್ಥಿಕ ವ್ಯವಸ್ಥೆಯ ಮೂಲಕ ಎದುರಿಸಬೇಕು. ಧರ್ಮ ಮತ್ತು ರಾಜಕಾರಣವನ್ನು ಬೇರ್ಪಡಿಸುವ ಹೋರಾಟ ನಡೆಯಬೇಕು. ಎಲ್ಲ ಧರ್ಮಗಳ ಮತಾಂಧರನ್ನು ಭಯೋತ್ಪಾದಕ ಗುಂಪುಗಳನ್ನು ಆಯಾ ಧರ್ಮದ ಜನರು ಮೊದಲು ತಿರಸ್ಕರಿಸಬೇಕು. ವಿಶ್ವಶಾಂತಿ ಚಳವಳಿ ಬಲಗೊಳ್ಳಬೇಕು. □

> **ಇಸ್ಲಾಂ ರಾಷ್ಟ್ರಗಳು ಮಧ್ಯಪೂರ್ವದಲ್ಲಿ ಅಪಾರವಾದ ತೈಲ ಸಂಪತ್ತನ್ನು ಹೊಂದಿವೆ. ಆ ದೇಶಗಳೆಲ್ಲ ಅಮೆರಿಕದ ಕೈಗೊಂಬೆಯಾಗಿ ಅವರ ತೈಲ ಲೂಟಿಗೆ ಸಹಕರಿಸದಿದ್ದರೆ ಅವರು ಭಯೋತ್ಪಾದಕರಾಗುತ್ತಾರೆ. ಮೊನ್ನೆ ಸದ್ದಾಂ ಹುಸೇನ್, ಈಗ ಇರಾನ್ ಅವರ ಲಿಸ್ಟ್‌ನಲ್ಲಿದೆ. ಅಲ್ಲಿನ ಅಪಾರ ಸಂಪತ್ತನ್ನು ಲೂಟಿ ಮಾಡಬೇಕಾದರೆ ಅವರ ಮೇಲೆ ದಾಳಿ ಮಾಡಬೇಕು. ಅವರ ಮೇಲೆ ದಾಳಿ ಮಾಡಬೇಕಾದರೆ ಅವರನ್ನು ಭಯೋತ್ಪಾದಕರೆಂದು ಬಿಂಬಿಸಬೇಕು.**

ಸಾಮ್ರಾಜ್ಯಶಾಹಿಗಳ ಪಿತೂರಿ

೧. ಭಯೋತ್ಪಾದನೆ ಎಂದರೆ ಶಸ್ತ್ರಧಾರಿಗಳಲ್ಲದ ಸಾಮಾನ್ಯ ನಾಗರಿಕರ ಮೇಲೆ, ಅಸಹಾಯಕರ ಮೇಲೆ ಶಸ್ತ್ರಧಾರಿಗಳು ಮಾಡುವ ದಾಳಿ, ಜೀವ ಅಥವಾ ಜೀವನದ ನಷ್ಟ, ಬೆದರಿಕೆಗಳು. ಇದರಲ್ಲಿ ಎರಡು ವಿಧ. ಪ್ರಭುತ್ವಗಳು, ಸರ್ಕಾರಗಳು ಸುಸಜ್ಜಿತ ಮಿಲಿಟರಿಯನ್ನು ಬಳಸಿ ನಿಶ್ಶಸ್ತ್ರಧಾರಿ ಸಾಮಾನ್ಯ ನಾಗರಿಕ ಮೇಲೆ ದಾಳಿ ಮಾಡುವ ಪ್ರಭುತ್ವ ಭಯೋತ್ಪಾದನೆ. ಇದಕ್ಕೆ ಉದಾಹರಣೆಯಾಗಿ ಪಾಬ್ಲೊಪಿಕಾಸೊರವರ ಪ್ರಸಿದ್ಧ ಕಲಾಕೃತಿ ಗೆರ್ನಿಕಾ, ಹಾಗೂ ಇತ್ತೀಚಿನ ಇರಾಕ್, ಪ್ಯಾಲೆಸ್ತೀನ್ ಜನರ ಮೇಲಿನ ದಾಳಿಗಳನ್ನು ಗಮನಿಸಬೇಕು. ಮತ್ತೊಂದು ವಿಧ ಖಾಸಗಿ ಗುಂಪುಗಳು ಶಸ್ತ್ರಗಳನ್ನು ಪಡೆದುಕೊಂಡು ಸಾಮಾನ್ಯ ನಾಗರಿಕರ ಮೇಲೆ ಧಾಳಿ ಮಾಡುವುದು. ಇಂದು ಹೀಗೆ ಖಾಸಗಿ ಗುಂಪುಗಳು ಮಾಡುವ ಸಶಸ್ತ್ರದಾಳಿ, ಬಾಂಬ್ ದಾಳಿಗಳನ್ನು ಮಾತ್ರ ಹೆಚ್ಚಾಗಿ ಭಯೋತ್ಪಾದನೆ ಎಂದು ಸಾಮಾನ್ಯ ಜನತೆ ತಿಳಿದುಕೊಂಡಿದ್ದಾರೆ. ಪ್ರಭುತ್ವಗಳು ಮಾಡುವ ಭಯೋತ್ಪಾದನೆ ಸಾಮಾನ್ಯ ಜನರ ಭಯೋತ್ಪಾದನೆಯ ವಾಖ್ಯಾನದ ಪರಿಧಿಗೆ ಅಳವಡುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಶ್ರೀಮಂತರ, ಅತಿ ಶ್ರೀಮಂತರ ಕೈಯಲ್ಲಿರುವ ಪತ್ರಿಕೆ, ಮಾಧ್ಯಮಗಳು ಕೆಲವು ರೀತಿಯ ಭಯೋತ್ಪಾದನೆಯನ್ನು ಉತ್ಪ್ರೇಕ್ಷಿಸುತ್ತಾ ಪ್ರಭುತ್ವದ ಭಯೋತ್ಪಾದನೆ, ಕೆಲವು ಗುಂಪುಗಳ ಭಯೋತ್ಪಾದನೆಯನ್ನು ಬೇರೆ ವರ್ಣನೆಗಳ ಮೂಲಕ ಮುಚ್ಚಿಡುವುದು, ವೈಭವೀಕರಿಸುವುದು ಕಾರಣವಾಗಿದೆ.

ಯಾವುದೇ ವಾಖ್ಯಾನವನ್ನು ಮಾಡುವಾಗ ಅದರ ಅರಿವಿಗೆ ಬರುವುದು ಯಾವುದು ಎಂಬುದು ಆ ಪದದ ಪರಿಕಲ್ಪನೆಯನ್ನು ತಿಳಿದುಕೊಳ್ಳುವುದಕ್ಕೆ ಎಷ್ಟು ಮುಖ್ಯವೋ ಆ ವಾಖ್ಯಾನಕ್ಕೆ ಯಾವುದು ಒಳಪಡುವುದಿಲ್ಲ ಎಂದು ತಿಳಿದುಕೊಳ್ಳುವುದೂ ಅಷ್ಟೇ ಮುಖ್ಯ. ಭಗತ್‌ಸಿಂಗ್, ರಾಜಗುರು ಇತ್ಯಾದಿ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಅನೇಕ ಗುಂಪುಗಳನ್ನು ಭಯೋತ್ಪಾದಕರೆಂದು ಬ್ರಿಟಿಷ್ ಪ್ರಭುತ್ವ ಕರೆಯಿತು. ಇವರೂ ಕೂಡ ಭಯೋತ್ಪಾದಕರ ವಾಖ್ಯಾನಕ್ಕೆ ಒಳಪಡುತ್ತಾರೆಯೇ ? ಬ್ರಿಟಿಷ್ ಪ್ರಭುತ್ವದ ಪೋಲಿಸ್ ಸೇನಾಧಿಕಾರಿ ಆಡಳಿತಾಧಿಕಾರಿಗಳನ್ನೇ ಗುರಿಯಾಗಿಟ್ಟುಕೊಂಡ ಸಾಮಾನ್ಯ ಬ್ರಿಟಿಷ್ ನಾಗರಿಕರ ಮೇಲೆ ಎಂದೂ ಕೈಮಾಡದಿದ್ದ ಈ ದಾಳಿಗಳು ಸ್ವಾತಂತ್ರ್ಯ ಹೋರಾಟದ ಒಂದು ರೂಪವೇ ಹೊರತು ಭಯೋತ್ಪಾದಕತೆಯ ವಾಖ್ಯಾನಕ್ಕೆ ಒಳಪಡುವುದಿಲ್ಲ.

ಪ್ರಶ್ನೆ ೨ ಮತ್ತು ೩

ಈಗಾಗಲೇ ಹೇಳಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆಯ ಕೃತ್ಯಗಳಲ್ಲಿ ಮುಸ್ಲಿಮರು ಮಾತ್ರವೇ ಭಾಗವಹಿಸುತ್ತಿದ್ದಾರೆ ಎನ್ನುವ ಉತ್ಪ್ರೇಕ್ಷಿತ ಚಿತ್ರವನ್ನು ಅಮೇರಿಕ ಮತ್ತು ಅವರ ಮಿತ್ರ ಸಾಮ್ರಾಜ್ಯಶಾಹಿ ದೇಶಗಳ ಹಿಡಿತದಲ್ಲಿರುವ ಮಾಧ್ಯಮಗಳು, ಸುದ್ದಿಸಂಸ್ಥೆಗಳು, ಪತ್ರಿಕೆಗಳ ಮೂಲಕ ಬಿಂಬಿಸಲಾಗಿದೆ. ತಮಗೆ ಎದುರಾದವರನ್ನು, ತಾವು ಯಾರನ್ನು ಹತ್ತಿಕ್ಕಬೇಕೆಂದು ಬಯಸಿದ್ದಾರೋ ಅವರನ್ನು ಅಸುರರೆಂದು ದುಷ್ಟರೆಂದು, ನರಕಂಟಕರೆಂದು ಚಿತ್ರಿಸುವುದು ಮಾನವ ಇತಿಹಾಸದಲ್ಲಿ ಹಲವು ಬಾರಿ ನಡೆದಿದೆ. ಲಿಬಿಯಾದ ಗಢಾಫಿ, ಇರಾಕ್‌ನ ಸದ್ದಾಂ, ವೆನಿಜುವೆಲಾದ ಚಾವೇಝ್, ಆಫ್ರಿಕಾದ ಹಲವು ಧೀರ ನಾಯಕರು, ಹಾಗೆಯೇ ರಷ್ಯಾ, ಚೀನಾ, ಕ್ಯೂಬಾ, ದೇಶಗಳು ಮತ್ತು ಅದರ ನಾಯಕರು ಇಂತಹ ಮಾಧ್ಯಮ ಕುತಂತ್ರಕ್ಕೆ ತುತ್ತಾದವರೇ. ಇದು ಭಾರತದಲ್ಲಿ ತುಳಿತಕ್ಕೊಳಗಾದವರಿಗೆ ಚೆನ್ನಾಗಿ ಅರ್ಥವಾಗುವ ವಿಷಯ.

ಇಂದು ಅಮೇರಿಕಾ ಇಡಿ ಪ್ರಪಂಚದ ಏಕಮೇವ ಸೂಪರ್‌ಶಕ್ತಿಯಾಗಲು ಏನೆಲ್ಲಾ ಮಾಡುತ್ತಿದೆ ಎಂಬುದು ತಿಳಿದ ವಿಷಯ. ಸಾಮ್ರಾಜ್ಯ ಸ್ಥಾಪಿಸುವ ಅದರ ಬಯಕೆಯ ಪ್ರಮುಖ ಸಾಧನ ಪೆಟ್ರೋಲಿಯಂ. ಪೆಟ್ರೋಲಿಯಂ ಯಾವ ದೇಶದಲ್ಲಿದೆಯೊ ಅದನ್ನೆಲ್ಲಾ ವಶಪಡಿಸಿಕೊಳ್ಳುವ ದಾಹಕ್ಕೆ ಮುಸ್ಲಿಂ ಸಮುದಾಯ ಪ್ರಧಾನವಾಗಿರುವ ದೇಶಗಳು ತುತ್ತಾಗಿವೆ. ಅವರ ದೇಶಗಳಲ್ಲಿ ಪೆಟ್ರೋಲಿಯಂ ಯಥೇಚ್ಚವಾಗಿರುವುದು ಅವರ ಈ ದೌರ್ಭಾಗ್ಯಕ್ಕೆ ಕಾರಣವಾಗಿದೆ.

ಇಂತಹ ಪರಿಸ್ಥಿತಿಗಳನ್ನು ಜನ ಸಮುದಾಯದ ಪ್ರಜಾಸತ್ತಾತ್ಮಕ ಚಳವಳಿಗಳಿಂದ ಪರಿಹರಿಸಿಕೊಳ್ಳುವ ಮಾರ್ಗವನ್ನು ಈ ಸಮುದಾಯಗಳು ಅನ್ವೇಷಿಸಬೇಕು. ಅವರು ಪ್ರಜಾಸತ್ತಾತ್ಮಕ ದಾರಿಯಿಂದ ಪರಿಹಾರ ಕಂಡುಕೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕು ಎಂಬುದು ಜಗತ್ತಿನ ಪ್ರಜಾಸತ್ತಾತ್ಮಕ ಚಳವಳಿಯ ಹೊಣೆಗಾರಿಕೆ. ಇನ್ನು ಪ್ರಭುತ್ವ ಭಯೋತ್ಪಾದನೆಯ ನಿವಾರಣೆ ಅಮೆರಿಕನ್ ಮತ್ತಿತರ ಸಾಮ್ರಾಜ್ಯಶಾಹಿಯ ಭಯೋತ್ಪಾದನೆ ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಕುಗ್ಗಿಸುವುದರಿಂದ ಮಾತ್ರ ಸಾಧಿಸಲು ಸಾಧ್ಯ.

ಜಿ.ಎನ್ ನಾಗರಾಜ್
ಕಾರ್ಯದರ್ಶಿ, ಸಿ.ಪಿ.ಐ(ಎಂ)



ಭಯೋತ್ಪಾದನೆ ಚರ್ಚೆ

ಈ ದೇಶಗಳಲ್ಲಿ ಹಲವು ಪ್ರಜಾಪ್ರಭುತ್ವವನ್ನೇ ಕಂಡಿಲ್ಲ, ಅಥವಾ ಜಾತ್ಯತೀತ ಪ್ರಜಾಪ್ರಭುತ್ವಗಳಾಗಿಧ್ದವು. ಮಿಲಿಟರಿ ಸರ್ವಾಧಿಕಾರಕ್ಕೆ ಮುಸ್ಲಿಂ ಮೂಲಭೂತವಾದಿಗಳ ತೆಕ್ಕೆಗೆ ಸಿಲುಕಿವೆ ಆದೇಶಗಳ ಸಮುದಾಯ ಅಮರಿಕಾ ಸಾಮ್ರಾಜ್ಯಶಾಹಿಯ ವಿರುದ್ಧ ಬೃಹತ್ ಪ್ರಜಾಸತ್ತಾತ್ಮಕ ಹೋರಾಟಗಳ ಮಾರ್ಗವನ್ನು ಹಿಡಿಯಲು ಸಾಧ್ಯವಾಗುತ್ತಿಲ್ಲ. ಇದೊಂದು ಬಹಳ ಪ್ರಮುಖ ಸಂಗತಿ. ಏಕೆಂದರೆ ಇಡೀ ಜನ ಸಮುದಾಯವನ್ನೇ ಭಯೋತ್ಪಾದಕರೆಂದು ಘೋಷಿಸುವುದು ಅವರನ್ನು ಪ್ರಜಾಸತ್ತಾತ್ಮಕ ಚಳವಳಿಯ ಹಾದಿಯಿಂದ ದೂರಮಾಡುತ್ತದೆ. ಮತ್ತಷ್ಟು ಭಯೋತ್ಪಾದಕರನ್ನು ಹುಟ್ಟಿಸುತ್ತದೆ. ಇದೇ ಸಾಮ್ರಾಜ್ಯಶಾಹಿಗಳಿಗೆ ಬೇಕಾದದ್ದು. ಆ ಪ್ರದೇಶಗಳನ್ನು ನಿರಂತರವಾಗಿ ತಮ್ಮ ಹಿಡಿತದಲ್ಲಿಡಲು ಅವರಿಗೆ ಭಯೋತ್ಪಾದಕತೆಯ ನಿಗ್ರಹವಲ್ಲ ಹೆಚ್ಚಳ ಬೇಕಾಗಿದೆ ಹೀಗಾಗಿ ಪ್ರಭುತ್ವದ ಭಯೋತ್ಪಾದನೆ–ಖಾಸಗಿ ಗುಂಪುಗಳ ಭಯೋತ್ಪಾದನೆ ಒಂದಕ್ಕೊಂದು ಪೂರಕವಾಗಿ ಪರಸ್ಪರ ಬೆಳವಣಿಗೆಗೆ ಕಾರಣವಾಗುತ್ತವೆ.

೪. ಭಯೋತ್ಪಾದನೆಯ ನಿವಾರಣೆ ಎಂದಾಗ ಖಾಸಗೀ ಗುಂಪುಗಳ ಭಯೋತ್ಪಾದನೆಯ ನಿವಾರಣೆ ಎಂದು ಭಾವಿಸುವುದಾದರೆ ಭಯೋತ್ಪಾದನೆಯ ಉಗಮದ ಮೂಲ ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳನ್ನು ಅನ್ವೇಷಿಸಬೇಕು. ಅವುಗಳನ್ನು ನಿವಾರಿಸಬೇಕು, ಇದೇ ಪ್ರಥಮ ಆದ್ಯತೆಯ ಹಾಗೂ ಶಾಶ್ವತ ಪರಿಹಾರ. ಸಾಮಾನ್ಯವಾಗಿ ಅಸಮಾನತೆ, ಅನ್ಯಾಯ, ಶೋಷಣೆ, ದಬ್ಬಾಳಿಕೆಗಳೇ ಇಂತಹ ಪರಿಸ್ಥಿತಿಗೆ ಮೂಲಭೂತ ಕಾರಣವಾಗಿರುತ್ತವೆ.

ಇಂತಹ ಪರಿಸ್ಥಿತಿಗಳನ್ನು ಜನ ಸಮುದಾಯದ ಪ್ರಜಾಸತ್ತಾತ್ಮಕ ಚಳವಳಿಗಳಿಂದ ಪರಿಹರಿಸಿಕೊಳ್ಳುವ ಮಾರ್ಗವನ್ನು ಈ ಸಮುದಾಯಗಳು ಅನ್ವೇಷಿಸಬೇಕು. ಅವರು ಪ್ರಜಾಸತ್ತಾತ್ಮಕ ದಾರಿಯಿಂದ ಪರಿಹಾರ ಕಂಡುಕೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕು ಎಂಬುದು ಜಗತ್ತಿನ ಪ್ರಜಾಸತ್ತಾತ್ಮಕ ಚಳವಳಿಯ ಹೊಣೆಗಾರಿಕೆ. ಇನ್ನು ಪ್ರಭುತ್ವ ಭಯೋತ್ಪಾದನೆಯ ನಿವಾರಣೆ ಅಮೆರಿಕನ್ ಮತ್ತಿತರ ಸಾಮ್ರಾಜ್ಯಶಾಹಿಯ ಭಯೋತ್ಪಾದನೆ ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಕುಗ್ಗಿಸುವುದರಿಂದ ಮತ್ತು ಅಳಿವಿನಿಂದ ಮಾತ್ರ ಸಾಧಿಸಲು ಸಾಧ್ಯ. ಪ್ರಜಾಸತ್ತಾತ್ಮಕ ಚಳವಳಿ ಜಾಗತಿಕ ಸ್ವರೂಪವನ್ನು ಪಡೆದುಕೊಳ್ಳುವುದರಿಂದ ಸಾಮ್ರಾಜ್ಯಶಾಹಿ ಶಕ್ತಿಯನ್ನು ಕುಗ್ಗಿಸುವಷ್ಟು ಪ್ರಬಲವಾಗುವುದರಿಂದ ಮಾತ್ರ ಅದು ಸಾಧ್ಯ. ಜಗತ್ತಿನ ಎಲ್ಲಾ ಪ್ರಜಾಸತ್ತಾತ್ಮಕ ಚಳುವಳಿಗಳೂ ಒಗ್ಗೂಡಬೇಕು ಜಗದಗಲ ಬೆಳೆಯಬೇಕು ಎಂಬುದು ಮೂಲಭೂತ ಅಗತ್ಯ.

ಅಲ್ಪಾವಧಿಯ ಪರಿಹಾರಗಳಾಗಿ ಗೂಢಚರ್ಯೆ ಭದ್ರತಾಕ್ರಮಗಳು, ಭಯೋತ್ಪಾದನೆಯ ವಿರುದ್ಧ ಧಾರ್ಮಿಕ ಮೂಲಭೂತವಾದದ ವಿರುದ್ಧ ಪ್ರಚಾರಾಂದೋಲನ ಇವುಗಳನ್ನು ಸರ್ಕಾರ, ಸಮಾಜ ಕೈಗೊಳ್ಳಬೇಕಾಗಿದೆ. □

ಕೋಮುವಾದಿಗಳೂ ಭಯೋತ್ಪಾದಕರೇ

ಶ್ರೀ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರು

ಭಯೋತ್ಪಾದನೆ

ಚರ್ಚೆ

೧. ಸುತ್ತಲಿನ ಜನಗಳಲ್ಲಿ ಸದಾ ಭಯ, ಆತಂಕಗಳ ಮಾನಸಿಕ ಕ್ಷೋಭೆ ಉಂಟು ಮಾಡುವವರು ಭಯೋತ್ಪಾದಕರು. ತಮ್ಮ ನಂಬಿಕೆಗಳಲ್ಲಿ ವಿಶ್ವಾಸವಿಡದೆ ಭಿನ್ನವಾಗಿ ನಡೆದುಕೊಳ್ಳುವವರನ್ನು ಹಾಗೂ ವಿರೋಧಿಸುವವರನ್ನು ಜತೆಗೆ ತ್ರಿಶೂಲ ಮಚ್ಚು, ಕೋವಿ ಬಳಸಿ ನಿರ್ನಾಮ ಮಾಡಬೇಕೆನ್ನುವ ಕೋಮುವಾದಿಗಳೂ ಭಯೋತ್ಪಾದಕರೇ.

೨. ಸರಿ ಅಲ್ಲ. ಚರಿತ್ರೆಯ ದೀರ್ಘಕಾಲೀನ ಪರಿಣಾಮ. ಯಾದವೀ ಕಲಹ, ಜನಾಂಗ-ಜನಾಂಗದಲ್ಲಿ ನಿರಂತರ ದ್ವೇಷ, ಸೇಡಿನ ಕೆಟ್ಟ ಆಯಾಮ ಹೆಚ್ಚೇನು ಮೂರನೆಯ ಮಹಾ ಯುದ್ಧಕ್ಕೆ ಕಾರಣವಾಗಬಹುದು.

೩. ಇದಕ್ಕೆ ನಿಖರ ಹಾಗೂ ಸ್ಪಷ್ಟ ಉತ್ತರ ಹೊಳೆಯುತ್ತಿಲ್ಲ. ಹೊಳೆದದ್ದು ಸರಿ ಅನಿಸುತ್ತಿಲ್ಲ. ಆದರೂ ಅನಿಸಿದಷ್ಟು ಹೇಳುವುದಾದರೆ ಜಗತ್ತಿನ ಮೂಲೆಯಲ್ಲಿ ಎಲ್ಲೋ ಓರ್ವ ವ್ಯಕ್ತಿ ಅಥವಾ ಸಾಂಘಿಕವಾಗಿ ದುಷ್ಕೃತ್ಯವೆಸಗಿದರೆ ಆತ ಪ್ರತಿನಿಧಿಸುವ ಧರ್ಮ ಮತ್ತು ಧರ್ಮ ಗ್ರಂಥವನ್ನು ಹೀಯಾಳಿಸಿ ಹಿಂಸೆಗೆ ಪ್ರಚೋದಿಸುತ್ತದೆ ಎನ್ನಬಹುದೋ? ಹಾಗಾದರೆ ಜಾರ್ಜ್ ಬುಷ್ ನಡೆಸಿರುವ ಹಿಂಸಾಕಾಂಡವನ್ನು ಕ್ರೈಸ್ತ ಧರ್ಮಕ್ಕೆ ಹೋಲಿಸಿ ದೂರಬೇಕೆ? ಬಾಬರಿ ಮಸೀದಿ ಒಡೆದವರನ್ನು ಅದಕ್ಕೆ ನೇತೃತ್ವ ವಹಿಸಿದ ಎಲ್.ಕೆ. ಅದ್ವಾನಿ; ಉಮಾಭಾರತಿ, ಅಶೋಕ್ ಸಿಂಘಾಲ್, ಮುರಳಿ ಮನೋಹರ ಜೋಶಿ ಮತ್ತಿತರರ ಧರ್ಮಗಳನ್ನು ಗುರುತಿಸಿ ಹಿಂದೂ ಧರ್ಮವನ್ನು ನಿಂದಿಸಿದರೆ ಅದು ನ್ಯಾಯವಾದಿತೆ? ಇವೆಲ್ಲಾ ಅಕ್ಷಮ್ಯ ಕೃತ್ಯಗಳಲ್ಲವೇ? ಆದರೂ ಇಸ್ಲಾಂನ್ನು ಈ ಆಪಾದನೆಗೆ ಗುರಿ ಮಾಡುವಲ್ಲಿ ಪ್ರಪಂಚದ ಬಲಾಢ್ಯ ರಾಷ್ಟ್ರಗಳ ಸ್ವಾರ್ಥದ ಷಡ್ಯಂತ್ರವೇ ಕಾರಣ.

೪. ಭಯೋತ್ಪಾದನೆ ನಿವಾರಣೆಗೆ ಮದರಸಾಗಳಲ್ಲಿ ಸರ್ವಶಿಕ್ಷಣ ಅಭಿಯಾನ ಹಾಗೂ ಮುಸ್ಲಿಂ ಮೊಹಲ್ಲಾಗಳಲ್ಲಿ ಉರ್ದು ಅಂಗನವಾಡಿಗಳ ಸ್ಥಾಪನೆ ಕಾರ್ಯಕ್ರಮದ ಮೂಲಕ ಆಧುನಿಕ ಶಿಕ್ಷಣದ ಅಳವಡಿಕೆ ಇವೆರಡೇ ಭಾರತದ ಸಾಂಪ್ರದಾಯಿಕ ಬಡ ಅಮಾಯಕ ಮುಸಲ್ಮಾನರನ್ನೂ 'ಜಿಹಾದಿ' ಆಕರ್ಷಣೆಯಿಂದ ವಿಮುಖಗೊಳಿಸಬಲ್ಲ ಅವಳಿ ಸೂತ್ರಗಳು.

ಅವರನ್ನು ಮತೀಯವಾದಿ ಮುಲ್ಲಾಗಳ ದಿಗ್ಬಂಧನದಿಂದ ಬಿಡಿಸಿ ಪ್ರಾಪಂಚಿಕ ಜ್ಞಾನ, ವೈಜ್ಞಾನಿಕ ಪ್ರಜ್ಞೆ ಹಾಗೂ ಸಾಮಾಜಿಕ ಅರಿವಿನ ಬೆಳಕಿನ ಹಾದಿಯತ್ತ ಕೊಂಡೊಯ್ಯಬಲ್ಲ ತಾರಕ ಮಂತ್ರಗಳು ಎಂದು ಪ್ರತಿಪಾದಿಸಿದವರು ಮುಸ್ಲಿಂ ನಾಯಕರಾದ 'ರೋಷನ್ ಬೇಗ್'. ಇವರ ಈ ಅಭಿಪ್ರಾಯಗಳು ತುಂಬ ಸಮರ್ಥನೀಯವೆನಿಸುತ್ತದೆ.

ಜಾರ್ಜ್ ಬುಷ್ ನಡೆಸಿರುವ ಹಿಂಸಾಕಾಂಡವನ್ನು ಕ್ರೈಸ್ತ ಧರ್ಮಕ್ಕೆ ಹೋಲಿಸಿ ದೂರಬೇಕೆ? ಬಾಬರಿ ಮಸೀದಿ ಒಡೆದವರನ್ನು ಅದಕ್ಕೆ ನೇತೃತ್ವ ವಹಿಸಿದ ಎಲ್.ಕೆ. ಅದ್ವಾನಿ, ಉಮಾಭಾರತಿ, ಅಶೋಕ್ ಸಿಂಘಾಲ್, ಮುರಳಿ ಮನೋಹರ ಜೋಶಿ ಮತ್ತಿತರರ ಧರ್ಮಗಳನ್ನು ಗುರುತಿಸಿ ಹಿಂದೂ ಧರ್ಮವನ್ನು ನಿಂದಿಸಿದರೆ ಅದು ನ್ಯಾಯವಾದೀತೆ? ಇವೆಲ್ಲಾ ಅಕ್ಷಮ್ಯ ಕೃತ್ಯಗಳಲ್ಲವೇ? ಆದರೂ ಇಸ್ಲಾಂನ್ನು ಈ ಆಪಾದನೆಗೆ ಗುರಿ ಮಾಡುವಲ್ಲಿ ಪ್ರಪಂಚದ ಬಲಾಢ್ಯ ರಾಷ್ಟ್ರಗಳ ಸ್ವಾರ್ಥದ ಷಡ್ಯಂತ್ರವೇ ಕಾರಣ.

ಬಹು ದೊಡ್ಡ ಸವಾಲು

(೨೬ನೇ ಪುಟದಿಂದ)

ವಂತರೂ ಸಾಕಷ್ಟಿದ್ದಾರೆ. ದುರದೃಷ್ಟವಶಾತ್ ಅವರೆಲ್ಲ ಅಸಹಾಯಕರಾಗಿದ್ದಾರೆ. ಇದರಿಂದಾಗಿ ಮುಂದಿನ ಕಾಲದಲ್ಲಿ ಮುಸ್ಲಿಂ ಭಯೋತ್ಪಾದನೆ ಇನ್ನು ಹೆಚ್ಚಾಗ ಬಹುದಾಗಿದೆ. ಇದರಿಂದಾಗಿ ಎಲ್ಲ ಧರ್ಮಗಳೂ ಭಯೋತ್ಪಾದನೆಯ ಮಾರ್ಗ ಹಿಡಿಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

೪. ಅಂತರ್ ರಾಷ್ಟ್ರೀಯವಾಗಿ ಭಯೋತ್ಪಾದನೆಯನ್ನು ಅಮೆರಿಕಾದಂತಹ ಬಂಡವಾಳಶಾಹಿ ರಾಷ್ಟ್ರಗಳ ರಾಜಕೀಯ ತಂತ್ರವಾಗಿ ಬಳಸುತ್ತಿರುವುದು ನಿಜವಾದರೂ, ಇಂಡಿಯಾ, ಶ್ರೀಲಂಕಾ, ಮುಂತಾದ ಅನೇಕ ದೇಶಗಳಲ್ಲಿ ಹಬ್ಬಿರುವ ಭಯೋತ್ಪಾದನೆಗಳನ್ನೆಲ್ಲಾ ಅಮೆರಿಕಾದ ತಲೆಗೆ ಕಟ್ಟಿ ಕೈ ತೊಳೆದುಕೊಳ್ಳಲಾಗುವುದಿಲ್ಲ. ನಮ್ಮ ದೇಶದ ಕಾಶ್ಮೀರ ಸಮಸ್ಯೆ, ಶ್ರೀಲಂಕಾದ ತಮಿಳರ ಸಮಸ್ಯೆ ಬಗೆಹರಿಸುವುದು ರಾಷ್ಟ್ರಮಟ್ಟದಲ್ಲೇ ಆಗಬೇಕಾದ ಪ್ರಯತ್ನಗಳು.

ಎಲ್ಲಾ ಜಾತಿ, ಧರ್ಮದ ಗುರುಗಳು, ರಾಜಕೀಯ ಮುಖಂಡರು, ಬಡವರನ್ನು ತಮ್ಮ ದಾಳಗಳನ್ನಾಗಿ ಬಳಸುತ್ತಾರೆ. ಮುಸ್ಲಿಮರಲ್ಲಿ ಬಡವರು, ಅವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮೂಲಭೂತವಾದಕ್ಕೆ ಅಲ್ಲಿ ಹೆಚ್ಚಿನ ಬೆಂಬಲವಿದೆ.

೫. ಎಲ್ಲಾ ಜಾತಿ, ಧರ್ಮ, ದೇಶಗಳ ಬಡವರನ್ನು, ಶೋಷಿತ ವರ್ಗವನ್ನು, ಮುಕ್ತಗೊಳಿಸಿದಾಗ ಮಾತ್ರ ಭಯೋತ್ಪಾದನೆಯನ್ನು ನಿವಾರಿಸಬಹುದಾಗಿದೆ. ಜಾತಿ, ಧರ್ಮ, ರಾಜಕೀಯ ಸಿದ್ಧಾಂತಗಳ ಸೆರೆಮನೆಯಿಂದ ಅವರನ್ನು ಬಿಡುಗಡೆ ಮಾಡದ ಹೊರತು ಅವರ ಉದ್ಧಾರವಾಗುವುದಿಲ್ಲ. ಅವರು ಹೀಗೆ ಶೋಷಣೆಗೆ ಗುರಿಯಾಗಿರಲು ಕಾರಣವೇ ಅಸಮಾನತೆ. ಈ ಅಸಮಾನತೆ ರಾಷ್ಟ್ರ ರಾಷ್ಟ್ರಗಳ ನಡುವೆ, ಜಾತಿ-ಧರ್ಮಗಳ ನಡುವೆ ಅಸ್ತಿತ್ವದಲ್ಲಿದೆ. ಈ ಅಸಮಾನತೆಯ ಮೂಲದಲ್ಲಿ ಆರ್ಥಿಕ ಕಾರಣಗಳಿವೆ; ಸಾಮಾಜಿಕ ತಾರತಮ್ಯಗಳಿವೆ. ಅಸಮಾನತೆಯನ್ನು ಹೋಗಲಾಡಿಸದೆ ಭಯೋತ್ಪಾದನೆಯನ್ನು ನಿಯಂತ್ರಿಸಲಾಗುವುದಿಲ್ಲ.

ಭಯೋತ್ಪಾದನೆಗೆ ಉತ್ತರ, ಅವರನ್ನು ಬಗ್ಗು ಬಡಿಯುವುದಲ್ಲ. ಹಿಂಸೆಗೆ ಹಿಂಸೆ ಉತ್ತರವಾಗುವುದಿಲ್ಲವೆಂದು ನಮಗೆ ಗಾಂಧೀಜಿ ಕಲಿಸಿದ್ದಾರೆ. ಮುಖ್ಯ ವಾಹಿನಿಯಿಂದ ಬೇರ್ಪಟ್ಟು ಹಿಂಸೆಯ ದಾರಿ ಹಿಡಿದಿರುವವರ ಅಹವಾಲುಗಳನ್ನು ಸರ್ಕಾರಗಳು ಮತ್ತು ಬಲಾಢ್ಯ ದೇಶಗಳು ಕಿವಿಗೊಟ್ಟು ಕೇಳಬೇಕು. ಅವರ ನೋವಿಗೆ ಸ್ಪಂದಿಸಬೇಕು. ಶಾಂತಿ, ಸಂಧಾನ, ಒಲಿಸಿಕೊಳ್ಳುವ ಮೂಲಕ ಸಮಸ್ಯೆ ಪರಿಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಯಬೇಕು.

ಆದರೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಯಾವುದೇ ಸಮಸ್ಯೆ ಬಗೆಹರಿಯುವುದು ಬೇಕಿಲ್ಲ. ಅಂತರ್ ರಾಷ್ಟ್ರೀಯ ಸಮಸ್ಯೆಯಿಂದ ಸ್ಥಳೀಯ ಸಮಸ್ಯೆಗಳವರೆಗೆ ಸಮಸ್ಯೆಗಳಿದ್ದರೇ ಪಟ್ಟಭದ್ರರು ಕ್ಷೇಮವಾಗಿರುತ್ತಾರೆ. ಅಧಿಕಾರ ಸೂತ್ರವನ್ನು ಅವರೇ ಹಿಡಿದಿರುವಾಗ ತಮ್ಮ ಬುಡಕ್ಕೇ ಕೊಡಲಿ ಹಾಕಿಕೊಳ್ಳಲು ಅವರು ಮುಂದಾಗುವುದಿಲ್ಲ. ಇದೊಂದು ಬಹು ಸಂಕೀರ್ಣ ಪರಿಸ್ಥಿತಿ. ಇದಕ್ಕೆ ಸುಲಭ ಪರಿಹಾರವಿದೆ, ಎಂದು ಕನಸು ಕಾಣಬಹುದು. ಪವಾಡಗಳೂ ಒಮ್ಮೊಮ್ಮೆ ಘಟಿಸುವಂತೆ ನಮ್ಮ ಕನಸುಗಳೂ ನನಸಾಗಲೆಂದು ಹಾರೈಸಬಹುದು. □

ಅಣ್ಣ ಹೇಳಿದ್ದು

ಎಪ್ಪತ್ತೆರಡರ ಸಜ್ಜೆ ಬರ. ಮನೆಯಲ್ಲಿ ತುಂಬಾ ಬಡತನ, ಸಾಲಸೂಲ ಮಾಡಿಯಾದರು ಬದುಕಿಸುವ ಜವಾಬ್ದಾರಿ ಅವ್ವ ಅಪ್ಪನದು. ನಾನು ಚಿಕ್ಕವನಾಗಿರವುದರಿಂದ ಅವ್ವ ಅಪ್ಪನೊಂದಿಗೆ ಬೀಗರ, ನೆಂಟರ ಊರಿಗೆ, ಸಂತೆ ಜಾತ್ರೆ ಮುಂತಾದ ಕಡೆಗೆ ಹೋಗುವುದೆಂದರೆ ನನಗೆ ಎಲ್ಲಿಲ್ಲದ ಖುಷಿ. ಸಂಸಾರ ತಾಪತ್ರಯಗಳು ಬಂದಾಗ ಮನೆಯಲ್ಲಿದ್ದ ಕೋಳಿ, ಕುರಿ, ಎಮ್ಮೆ, ಎತ್ತು, ಆಕಳು, ಕೋಣಗಳನ್ನು ಮಾರಿಯಾದರೂ ಹೊಟ್ಟೆ ಹೊರೆಯಬೇಕು. ಮೇಲಾಗಿ ತಾಮ್ರ, ಕಂಚಿನ ಪಾತ್ರೆಗಳನ್ನೂ ಮಾರಿ ನಮ್ಮನ್ನು ಅಪ್ಪ ಅವ್ವ ಸಲಹಿದ್ದಾರೆ. ಸುತ್ತೂರಿನ ಸಂತೆಗೆ ಹೊರಟರೆ ನಾನೂ ರೆಡಿ. ಯಾಕೆಂದರೆ ಮೇಕೆ, ಕುರಿ, ಎತ್ತುಗಳನ್ನು ಹಿಂದಿಂದ ಹೊಡೆದುಕೊಂಡು ಹೋಗಲು ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಕೋಳಿ ತುಂಬಿದ ಬುಟ್ಟಿಯನ್ನು ಹೊತ್ತದ್ದುಂಟು. ಜತೆಗಿದ್ದ ಪ್ರಾಣಿಗಳನ್ನು ಮಾರಾಟಕ್ಕಿಟ್ಟಾಗ ಒಳಗೊಳಗೆ ನೊಂದು ಸಮಾಧಾನ ಪಡುವುದು ಅನಿವಾರ್ಯವಾಗುತ್ತಿತ್ತು.

ಹಾದಿಯುದ್ದಕ್ಕೂ ಅಣ್ಣ ಹೇಳಿದ್ದು ಹೀಗೆ. ಶಾಲೆ ಬಿಟ್ಟು ಅಪ್ಪ ಅವ್ವನ ಜತೆಗೆ ತಿರುಗುವುದರಿಂದ ಸಾಲಿಗೆ ಹೋಗುವುದು ನಿಂತುಬಿಡುತ್ತಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಭವಿಷ್ಯದ ಬಗ್ಗೆ ಮನುಷ್ಯ ಮುಟ್ಟಬೇಕಾದ ಗುರಿಯ ಬಗ್ಗೆ ಬಹಳ ಮಾರ್ಮಿಕವಾಗಿ ಬುದ್ಧಿವಾದ ಹೇಳುತ್ತಿದ್ದರು. ಆಗಿನ ಕಾಲದ ಆರನೆ ತರಗತಿವರೆಗೆ ಓದಿದ ಅಪ್ಪ ಓದಿನಲ್ಲಿ ಬಹಳ ಬುದ್ಧಿವಂತರಾಗಿದ್ದರು.

ಆಗಿನ ಮುಲ್ಕಿ ಪರೀಕ್ಷೆಯ ಹತ್ತಿರದವರೆಗೆ ಓದಿದ ಅಪ್ಪನಿಗೆ ಶಿಕ್ಷಣದ ಮಹತ್ವ ಏನು ಎಂಬುದು ಸಹಜವಾಗಿ ತಿಳಿದಿತ್ತು. ಶಿಕ್ಷಣದಿಂದ ಬದುಕು ಹಸನಾಗುತ್ತದೆ. ಅದಕ್ಕಿರುವ ಮಹತ್ವವೇ ಬೇರೆ ಎಂದು ತನ್ನಿಬ್ಬರು ತಮ್ಮಂದಿರರಿಗೆ ಹೆಗಲ ಮೇಲೆ ಹೊತ್ತು ಶಾಲೆಗೆ ಕಳುಹಿಸಿ ಕಲಿಸಿದ ಅನುಭವವನ್ನು ವ್ಯಕ್ತಪಡಿಸುತ್ತ ಸ್ವಂತ ತಮ್ಮ ಹೆಚ್ಚು ಓದದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸುತ್ತಿದ್ದರು. ನನ್ನ ತಮ್ಮ ಓದಲಿಲ್ಲ ಇನ್ನು ಮುಂದೆ ನನ್ನ ಮಕ್ಕಳಾದರೂ ಓದಲಿ ಎಂದು ನಮ್ಮನ್ನು ಶಾಲೆಗೆ ಹಾಕಿ ಬಡತನದಲ್ಲಿಯೇ ಬೇಯಬೇಕಾಯಿತು. ಹೆಚ್ಚು ಓದಿ ತಾಲೂಕಾ ಮಾಮ್ಲೇದಾರ, ಜಿಲ್ಲಾ ಕಲೆಕ್ಟರ್, ವಕೀಲ ಹೀಗೆ ಉನ್ನತ ಶಿಕ್ಷಣ, ಶ್ರೇಷ್ಠ ಅಧಿಕಾರ ಪಡೆಯುವ ತನಕ ಮಕ್ಕಳನ್ನು ಬೆಳೆಸಬೇಕು ಎನ್ನುವ ಉತ್ಕಟ ಆಕಾಂಕ್ಷೆ ಅಪ್ಪನದು. ಆದರೆ ಬಡತನ ಅವರ ಆಕಾಂಕ್ಷೆಗೆ ಅಡ್ಡಿಯಾಯಿತು. ನಮ್ಮದು ದೊಡ್ಡ ಸಂಸಾರ ಹಾಗಿದ್ದು ನನ್ನನ್ನು, ಅಣ್ಣನನ್ನು, ತಮ್ಮನನ್ನು ಸಾಲದಕ್ಕೆ ನಮ್ಮ ಚಿಕ್ಕಪ್ಪನ ಮಕ್ಕಳನ್ನು ಓದಿಸಬೇಕೆಂಬ ಹಂಬಲ. ಆ ಮೂಲಕ ಅವರ ಬದುಕು ಹಸನಾಗಿಸಬೇಕು ಎನ್ನುವ ತವಕ.

ನಾವು ಜಾತಿಯಿಂದ ಹೊಲೆಯರು. ನಮ್ಮವರು ಯಾವುದೇ ಉದ್ಯೋಗ, ವ್ಯಾಪಾರ ಮಾಡಿದರೂ, ಅದರಲ್ಲಿ ಫಲ ಸಾಧ್ಯವಿಲ್ಲ. ಹಿಟ್ಟಿನ ಗಿರಣಿ ಇಟ್ಟರೂ ನಮ್ಮಲ್ಲಿ ಯಾರೂ ಬೀಸಲು ಬರುವುದಿಲ್ಲ, ಕಿರಾಣಿ ಅಂಗಡಿ ಇಟ್ಟರೂ ನಮ್ಮಲ್ಲಿ ಯಾರೂ ದಿನಸಿ ಖರೀದಿ ಮಾಡುವುದಿಲ್ಲ, ಯಾವುದೇ ಹಂತದಲ್ಲಿ ನಾವು ಮುಂದುವರೆಯೋದು ಸಾಧ್ಯವಿಲ್ಲ ಎಂದು ಅಪ್ಪ ಸದಾ ಚಿಂತಿಸುತ್ತಿದ್ದರು. ವ್ಯಾಪಾರ ವ್ಯವಹಾರ ನಮ್ಮವರಿಗೆ ವಗ್ಗಂಗಿಲ್ಲ ಅದಕ್ಕ ಬಾಬಾಸಾಹೇಬರ ಹಾಂಗ ಓದಬೇಕು. ಅವರು ಬಹಳ ದೊಡ್ಡ ವ್ಯಕ್ತಿ. ಅವರ ಹೋರಾಟದ ಫಲ ನಾವಿಂದು ಮೈತುಂಬಾ ಬಟ್ಟೆ ಬರಿ ತೊಡುವಂಗ ಆಗ್ಯಾದ. ಅವರು ತೀರಿಕೊಂಡು ಸುಮಾರು ವರ್ಷಗಳು ಕಳದಾವ. ನನಗೆ ನೆನಪಿದ್ದಾಂಗ ನಮ್ಮ ಮದುವೆ ಆದ ವರ್ಷ ಅವರು ನಮ್ಮನ್ನು ಅಗಲಿದರು. (೧೯೫೬) ಆವತ್ತು ಹೊಲದಲ್ಲಿ ಕಸಾ ತೆಗಿತಿದ್ದೆವು ಸತ್ತ ಸುದ್ದಿ ಕೇಳೀ ನಮಗ ಸೂರ್ಯ ಮುಳಗದಂಗ ಆಯಿತು. ಅವರಿಂದನ ನಾವು ಒಂದಿಷ್ಟು ಎಚ್ಚರ ಆದಾಂಗ ಆಗ್ಯಾದ ಅನ್ನುತ್ತ ತನಗ ತಿಳಿದದ್ದನ್ನ ನನಗೆ ಹೇಳುತ್ತಾ ನನ್ನಲ್ಲಿ ಓದಿನ ಮಹತ್ವ ಬಿತ್ತುತ್ತಿದ್ದರು.

ನನ್ನ ಅವ್ವ ನಡುನಡುವೆ ಬಾಯಿಹಾಕಿ ಓದಿ ನೌಕರಿ ಮಾಡಿ ತಮ್ಮಂದಿರನ್ನು ತಂಗಿಯರನ್ನು ಸಲಹಬೇಕು ಎಂದು ಹೇಳುತ್ತಿದ್ದರು. ವಾರದ ಸಂತಿ ಬಂತೂ ಅಂದರ ನಮಗೆ ಹೆಚ್ಚು ಸಂತೋಷ ಯಾಕೆಂದರೆ ಮನೆಯಲ್ಲಿ ಊಟಕ್ಕೆ ಮಟನ್ ಇರುತ್ತಿತ್ತು. ಸಾಯಂಕಾಲದ ಊಟ ನೆನಪಿಸಿಕೊಂಡು ಖುಷಿ ಪಡುವ ನನಗೆ ಅಪ್ಪ ಹೇಳುವ ಬಾಬಾಸಾಹೇಬ, ಕಲೆಕ್ಟರ್, ವಕೀಲ, ಮಾಮ್ಲೇದಾರ ಇವೆಲ್ಲ ನನ್ನ ತಿಳಿವಳಿಕೆಗೆ ನಿಲುಕದ ವಿಷಯಗಳಾಗದಿದ್ದರೂ ಕ್ರಮೇಣ ಹೆಚ್ಚು ಓದಬೇಕೆಂಬ ಹಂಬಲ ಮೊದಲು ಪ್ರಾರಂಭ ಅಗಿದ್ದು ಮಾತ್ರ ನಿಜ.

ಅಪ್ಪನ ಬಾಯಿಯಿಂದ ಮೇಲಿಂದ ಮೇಲೆ ಬರುವ ಬಾಬಾಸಾಹೇಬರ ಹೆಸರು ನನ್ನನ್ನು ತಟ್ಟಿದ್ದು ಅಸ್ಪಷ್ಟ ಆದರೂ, ಅಂದಿನ ಆ ಮಾತುಗಳು, ಅಣ್ಣನಲ್ಲಿರುವ ಕಾಳಜಿ ಇಂದು ಕೂಡಾ ನನ್ನನ್ನು ಸದಾ ಎಚ್ಚರಿಸುತ್ತಲೇ ಇವೆ.

ನಮ್ಮೂರು ಚಿಕ್ಕದಾಗಿದ್ದರೂ ಗೌಡರ ದರ್ಬಾರಿನ ಊರು. ಕೆಳಜಾತಿಗೆ ಸೇರಿದ ನಾವ್ಯಾರು ಸ್ವೇಚ್ಛೆಯಿಂದ ಬದುಕು ಮಾಡುವಂತಿರಲಿಲ್ಲ. ನಮ್ಮ ದನಕರುಗಳು ಗೌಡರ ಹೊಲದಲ್ಲಿ ಹೋದರೆ ಅವುಗಳನ್ನು ಬಿಡಿಸಿಕೊಂಡು ಬರುವುದು ಅಷ್ಟು ಸುಲಭದ ಮಾತಾಗಿರಲ್ಲಿಲ್ಲ. ನಮ್ಮಾಯಿ ಅವರ ಕಾಲಿಗೆ ಬಿದ್ದು ಅತ್ತು ಕರದೂ ಬಿಡಿಸಿಕೊಂಡು ಬರುತ್ತಿದ್ದಳು.

ನ್ಯಾಯ ಬೆಲೆ ಅಂಗಡಿಯಲ್ಲಿ ಅಕ್ಕಿ, ಸಕ್ಕರಿ, ಗೋಧಿ, ಎಣ್ಣಿ ಅರ್ಧ ಬೆಲೆಗೆ ಕೊಡತಾರಂದರೆ ಹೊಲೆ, ಮಾದಿಗರಿಗೆ ಎಲ್ಲಿಲ್ಲದ

ಸಂಘಟನೆಯ ಅಂಗಳದಲ್ಲಿ ಶೋಷಣೆಯ ಪ್ರಖರತೆ ಅರಿವು ಹೆಚ್ಚಾದಂತೆ ಬೌದ್ಧ ಧರ್ಮ ಅನಿವಾರ್ಯ ಎಂದು ತೋರುತ್ತಿರುವಾಗಲೆ, ಸಂಘಟನೆಯಲ್ಲಿ ಸಮಾಜದಲ್ಲಿ ಎಡಬಲದ ತಳಹದಿಯಲ್ಲಿ ರಾಜ್ಯದಾದ್ಯಂತ ಸಂಘಟನೆ-ಸಮಾಜ ಇಬ್ಭಾವಾಯಿತು. ದಲಿತರ ಬೆಳೆವಣಿಗೆಯ ಕನಸು ಭಗ್ನವಾಯಿತು. ದಲಿತರು ದಲಿತರನ್ನೇ ಹೀಯಾಳಿಸುವುದು ಟೀಕಿಸುವುದು ನಡೆಯು ಆಂತರಿಕ ಕಿತ್ತಾಟದಿಂದ ಅಂಬೇಡ್ಕರ್ ವಾದದ ಕಡೆಗೆ ದಲಿತ ಬುದ್ಧಿಜೀವಿಗಳು ಹರಿಯದೆ ಸ್ವಜಾತಿ ನೆಲೆಯಲ್ಲಿ ಕಾದಾಡುತ್ತಿರುವುದರಿಂದ ಆಶಾಗೋಪುರಗಳು ಕಮರಿದುವು. ದಲಿತರೆಲ್ಲರು ಮತ್ತೊಂದು ಸಾಮೂಹಿಕ ಹೋರಾಟಕ್ಕೆ ಅಣಿಯಾಗಬೇಕು. ಹಿಂದೆ ನಡೆದ ಹೋರಾಟದ ಕದರನ್ನು ನೆನಪಿಸಿಕೊಂಡಾಗ ಬಹುಶಃ ನಾವುಗಳು ಅದರಿಂದ ಪಾಠ ಕಲಿಯಲು ಸಾಧ್ಯ.

ಬುದ್ಧ, ಬಸವ, ಅಂಬೇಡ್ಕರರ ಅನನ್ಯತೆ

ಡಾ|| ಎಚ್.ಟಿ. ಪೋತೆ

ಬಿಷಿ. ಬೆಲ್ಲ ಕಂಡ ನಮಗೆ ಸಕ್ಕರಿ, ಅಕ್ಕಿ ಅಪೂಪರ (ಪ್ರೀತಿ) ಸಕ್ಕರೆ ಎಂದರೆ ಹಬ್ಬದೂಟ. ಅಕ್ಕಿ ಎಂದರೆ ಎಲ್ಲಿಲ್ಲದ ಆನಂದ, ಸದಾ ನುಚ್ಚುಂಡ್ಡ ಅನುಭವವೇ ಹೆಚ್ಚು. ಮುಸ್ಲೀಂ ಸಮಾಜದ ನ್ಯಾಯ ಬೆಲೆ ಅಂಗಡಿ ವ್ಯಾಪ್ತಿಗೆ ನಾವು ಒಳಪಟ್ಟಿರುವುದರಿಂದ ಅವರ ಓಣಿಗೆ ಹೋಗುವುದೆಂದರೆ ಗೌಡರ ಓಣಿಗೆ ಹೋಗುವಷ್ಟು ಅಂಜಿಕೆ, ಆತಂಕ, ನಮಗಿರುತ್ತಿರಲಿಲ್ಲ.

ಅಪ್ಪನೊಂದಿಗೆ ನ್ಯಾಯ ಬೆಲೆ ಅಂಗಡಿಗೆ ಹೋಗಿ ಧಾನ್ಯಗಳನ್ನೆಲ್ಲಾ ಪಡೆದುಕೊಂಡು ಹೊರಡುವಷ್ಟರಲ್ಲಿ ನ್ಯಾಯ ಬೆಲೆ ಅಂಗಡಿಯ ತೂಕುದಾರ ಟೋಪಿಲಾಲ ಅಪ್ಪನನ್ನು ಕರೆದು ಈ ಪುಸ್ತಕ ತಗೊ, ಇಂಡಿ ತಹಶೀಲದಾರ ಪೋಳಸಾಹೇಬರು ಬರದಾರ ಓದು ಎಂದು ಹೇಳಿಕೊಟ್ಟರು. ಆ ಪುಸ್ತಕ ಅಂಬೇಡ್ಕರ್ ಕುರಿತಾಗಿ ಬರೆದದ್ದು ಅನ್ನುವುದು ಅವನಿಗೆ ತಿಳಿದಿರಲಿಲ್ಲ. ಮೂಕನ ಭಾಷಣ ಅನ್ನುವ ತಲೆಬರಹವುಳ್ಳ ಪುಸ್ತಕ ಅದು. ಎಲ್ಲಿಯೋ ಕಳೆದುಕೊಂಡ ನೆನಪು ಮಾತ್ರ ಉಳಿದಿದೆ. ಹೀಗೆ ನನ್ನ ತಂದೆ ನನ್ನಲ್ಲಿ ಓದುವುದನ್ನು ಬೆಳೆಸಿದರು.

ಅಂಬೇಡ್ಕರ್ ಹತ್ತಿರವಾಗುವುದು ಹೀಗೆ....

ಎಪ್ಪತ್ತರ ದಶಕದ ಪ್ರಗತಿಪರವಾದ, ದಲಿತ ಶೋಷಿತ ಪರವಾದ ದಲಿತ ಬಂಡಾಯ ಚಳವಳಿಗಳು ರೂಪುಗೊಳ್ಳುವ ಮೊದಲೆ ಜನಿಸಿದ ನನಗೆ ಇಪ್ಪತ್ತು ವರ್ಷಗಳು ತುಂಬುವಷ್ಟರಲ್ಲಿ ಆ ಸಂದರ್ಭದ ಸಮಾನತೆಯ ಹೋರಾಟ ಒಂದು ಹಂತ ತಲುಪಿತ್ತು. ತೀರ ಹಳ್ಳಿಯಲ್ಲಿ ಓದಿ ಮೆಟ್ರಿಕ್ ಮುಗಿಸಿದ ನಾನು ಕಾಲೇಜು ಅಭ್ಯಾಸಕ್ಕಾಗಿ ದೂರದ ಬಿಜಾಪುರಕ್ಕೆ ಹೋಗಬೇಕಾಯಿತು.

ಈ ಮೊದಲೆ ಸಜ್ಜೆ ಬರದ (೧೯೭೨) ಸಂದರ್ಭದಲ್ಲಿ ಬಿಜಾಪುರದ ಆಶ್ರಮ ಶಾಲೆಯಲ್ಲಿ ನಾಲ್ಕು ವರ್ಷಗಳ ಕಾಲ ಓದಲು ಹೋಗಿದ್ದರೂ, ಅದು ಅನಾಥ ಭಿಕ್ಷುಕ ಮಕ್ಕಳಂತೆ ಕಾಲಕಳೆದ ನನಗೆ ಯಾವುದೇ ರೀತಿಯ ತಿಳುವಳಿಕೆ ಪ್ರಜ್ಞೆ ನನ್ನಲ್ಲಿರಲಿಲ್ಲ.

ಆಶ್ರಮ ಶಾಲೆಯಲ್ಲಿರುವಾಗ ಒಂದು ದಿನ ಸಾಯಂಕಾಲ ಊಟಕ್ಕಾಗಿ ಎಲ್ಲರೂ ಗಡಿಬಿಡಿಯಿಂದ ತಟ್ಟೆಯ ಮುಂದೆ ಕೂತು ಊಟಮಾಡಲು ಸ್ಥಳಾವಕಾಶಕ್ಕಾಗಿ ಹಪಹಪಿಸುತ್ತಿದ್ದವು. ಅಷ್ಟರಲ್ಲಿ ಸಾಂಬಾರ್ ಬೋಗಣಿಯಲ್ಲಿ ಹಲ್ಲಿ ಪತ್ತೆಯಾಯಿತು. ಅದು ನಮಗೆ ಕಾಣದೆ ಹೋಗಿದ್ದರೆ, ನಾವೆಲ್ಲರೂ ಬದುಕಿ ಉಳಿಯುತ್ತಿದ್ದೆವೋ, ಇಲ್ಲವೋ. ಉಳಿಯದಿದ್ದಲ್ಲಿ ಈಗಿನ ಅಂಬೇಡ್ಕರ್ ಯುಗದಲ್ಲಿ ಬದುಕುವ, ಪಾಲ್ಗೊಳ್ಳುವ ಸದಾವಕಾಶ ಬಹುಶಃ ನನಗೆ ಸಿಗುತ್ತಿರಲಿಲ್ಲ. ನನ್ನ ಹಾಗೂ ನನ್ನೆಲ್ಲ ಸ್ನೇಹಿತರನ್ನು ಉಳಿಸಿದ ವಿದ್ಯಾರ್ಥಿ ನಾಯಕನಿಗೆ ಧನ್ಯವಾದಗಳು.

ಹಳ್ಳಿಯಿಂದ ಓದಲು ಹೋದ ದಲಿತ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಅರಿವಿಗೆ ಬರುವ ರೀತಿ ವಿಚಿತ್ರ. ವಸತಿ ನಿಲಯದ ಯಾವುದೋ ಒಂದು ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಸಂದರ್ಭದಲ್ಲಿ ಊಟದ ವ್ಯವಸ್ಥೆ ಹಾಳಾದಾಗ, ವಿದ್ಯಾರ್ಥಿ ನಾಯಕರು ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಾಗ, ಜಿಲ್ಲಾಧಿಕಾರಿಗಳ ಕಛೇರಿಗೆ ಹೋದ ಸಂದರ್ಭದಲ್ಲಿ, ಸಂವಿಧಾನದಲ್ಲಿರುವ ಹಕ್ಕಿನ ಬಗ್ಗೆ ಮಾತನಾಡುವಾಗ ಅಂಬೇಡ್ಕರ್ ಕುರಿತು ನಾಲ್ಕು ಮಾತುಗಳನ್ನು ಹೇಳಿ ನಮ್ಮನ್ನು ಹುರಿದುಂಬಿಸುವಾಗ ಸಹಜವಾಗಿಯೇ ಬಾಬಾಸಾಹೇಬ ಅಂಬೇಡ್ಕರ್ ಹತ್ತಿರವಾಗುತ್ತಿದ್ದರು, ನಮ್ಮ ಅರಿವಿಗೆ ನಿಲುಕುತ್ತಿದ್ದರು.

ಹಳ್ಳಿಗಳಲ್ಲಿ ಹೊಲೆ ಮಾದಿಗರನ್ನು ಬಹಿಷ್ಕಾರ ಹಾಕಿದ ಸುದ್ದಿ ತಿಳಿದ ತಕ್ಷಣ ನಗರದ ದಲಿತ ನಾಯಕರು ವಸತಿ ನಿಲಯಕ್ಕೆ ಬಂದು ನಮ್ಮನ್ನು ಹುರಿದುಂಬಿಸಿ ಹೋರಾಟಕ್ಕೆ ಅಣಿಗೊಳಿಸುತ್ತಿದ್ದರು. ದಲಿತ ಸಂಘರ್ಷ ಸಮಿತಿ ಆಗತಾನೆ ಹೋರಾಟದ ಹೆಡೆ ಬಿಚ್ಚಿಕೊಳ್ಳುತ್ತಲಿತ್ತು.

> **ಸಂಘಟನೆಯ ಅಂಗಳದಲ್ಲಿ ಶೋಷಣೆಯ ಪ್ರಖರತೆ ಅರಿವು ಹೆಚ್ಚಾದಂತೆ ಬೌದ್ಧ ಧರ್ಮ ಅನಿವಾರ್ಯ ಎಂದು ತೋರುತ್ತಿರುವಾಗಲೆ, ಸಂಘಟನೆಯಲ್ಲಿ ಸಮಾಜದಲ್ಲಿ ಎಡಬಲದ ತಳಹದಿಯಲ್ಲಿ ರಾಜ್ಯದಾದ್ಯಂತ ಸಂಘಟನೆ–ಸಮಾಜ ಇಬ್ಭಾವಾಯಿತು. ದಲಿತರ ಬೆಳವಣಿಗೆಯ ಕನಸು ಭಗ್ನವಾಯಿತು. ದಲಿತರು ದಲಿತರನ್ನೇ ಹೀಯಾಳಿಸುವುದು ಟೀಕಿಸುವುದು ನಡೆದು ಆಂತರಿಕ ಕಿತ್ತಾಟದಿಂದ ಅಂಬೇಡ್ಕರ್ ವಾದದ ಕಡೆಗೆ ದಲಿತ ಬುದ್ಧಿಜೀವಿಗಳು ಹರಿಯದೆ ಸ್ವಜಾತಿ ನೆಲೆಯಲ್ಲಿ ಕಾದಾಡುತ್ತಿರುವುದರಿಂದ ಆಶಾಗೋಪುರಗಳು ಕಮರಿದುವು. ದಲಿತರೆಲ್ಲರು ಮತ್ತೊಂದು ಸಾಮೂಹಿಕ ಹೋರಾಟಕ್ಕೆ ಅಣಿಯಾಗಬೇಕು. ಹಿಂದೆ ನಡೆದ ಹೋರಾಟದ ಕದರನ್ನು ನೆನಪಿಸಿಕೊಂಡಾಗ ಬಹುಶಃ ನಾವುಗಳು ಅದರಿಂದ ಪಾಠ ಕಲಿಯಲು ಸಾಧ್ಯ.**

ಆಗಿನ ದಲಿತ ಮುಖಂಡರ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೂಲಕ ಹತ್ತಿರವಾದ ಅಂಬೇಡ್ಕರ್ ವಿಚಾರಧಾರೆಗಳು ಸ್ಪಷ್ಟವಾಗುತ್ತಿದ್ದಂತೆ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕಾರ ಮಾಡಿದ್ದೇಕೆ. ಹಿಂದೂ ಧಾರ್ಮಿಕ ವೈದಿಕ ವ್ಯವಸ್ಥೆಯನ್ನು ಹಿಗ್ಗಾಮುಗ್ಗಾ ಟೀಕಿಸಿದ್ದೇಕೆ ಎನ್ನುವುದು ಓದುತ್ತಾ ಹೋದಂತೆ ಇನ್ನಷ್ಟು ಅಂಬೇಡ್ಕರ್ ದೂರ ದೂರ ಹೋಗುತ್ತಿದ್ದರು. ಕಾರಣ ಅವರ ಬರಹ ಅಧ್ಯಯನ ಸಂಶೋಧನೆ ವಿಚಾರಧಾರೆ ಬಹಳ ಎತ್ತರ ಮಟ್ಟದ್ದಾಗಿರುವುದರಿಂದ ನಮ್ಮಂತಹವರು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿತ್ತು.

ಬಿಜಾಪುರದ ಆ ಸಂದರ್ಭದ ಪ್ರಮುಖ ಭಾಷಣಕಾರರಾದ ಕಕ್ಕಯ್ಯ ಪೊಳ ಪ್ರೊ|| ಸಿದ್ಧಾರ್ಥ ಅರಕೇರಿ, ಯಲ್ಲಡಗಿ ಮಾಸ್ತರ, ಪ್ರೊ|| ಕಲಾಲ, ಅಲ್ಲದೆ ಕಾರ್ಯಾರ್ಥ ಬಂದು ಹೋಗುವ ದಲಿತ ಮಂತ್ರಿ ಬಿ. ಬಸವಲಿಂಗಪ್ಪ ಅವರುಗಳು ಅಂಬೇಡ್ಕರ್ ಕುರಿತು ಮತ್ತು ಬುದ್ಧತ್ವದ, ಬಸವ ತತ್ವದ ಕುರಿತು ಕರಾರುವಾಕ್ಕಾಗಿ ಮಾತನಾಡುವವರಾಗಿದ್ದರು. ಅವರ ವಿಚಾರಗಳಿಗೆ ಪ್ರಭಾವಿತರಾದ ನಾವು ಕೂಡಾ ನಮ್ಮ ಓಣಿಗಳಲ್ಲಿ ಪ್ರಾಣಿಹಿಂಸೆ ಮಾಡುವುದನ್ನು ನಿಲ್ಲಿಸಲು ಪ್ರಯತ್ನ ಮಾಡಿ ಊರಲ್ಲಿ ಬಾಬಾಸಾಹೇಬರ ಜಯಂತಿ ಆಚರಣೆ ಮಾಡುತ್ತಿದ್ದವು. ಆ ಮೂಲಕ ಅನೇಕ ವಿಚಾರವಂತ ಗಣ್ಯರ ಸಂಪರ್ಕದಿಂದಾಗಿ ಹರಿದು ಬಂದ ಹೊಸ ಚಿಂತನೆಗಳಿಂದಾಗಿ ಡಾ|| ಅಂಬೇಡ್ಕರ್, ಬುದ್ಧ, ಬಸವಾದಿ ಶರಣರು ಕಳ್ಳುಬಳ್ಳಿಯಂತಾದರು.

ಈ ಮಹಾನ್ ಸಾಧಕರು ಹತ್ತಿರವಾಗುತ್ತಿದ್ದಂತೆ ಹಿಂದೂ ಧರ್ಮದ ಜಾತಿ ಪದ್ಧತಿ, ಅಸಮಾನತೆಯ ವಿರುದ್ಧ ಬಂಡೇಳಬೇಕೆಂಬ ಹುರುಪು ಹುಮ್ಮಸ್ಸು ತುಂಬಿದ್ದು ಸಂಘರ್ಷ ಸಮಿತಿಯ ಸಂಘಟಕರು ನಾಡಿನಾದ್ಯಂತ ಉಂಟುಮಾಡಿದ ಹೊಸ ಗಾಳಿ ಸಂಚಲನದ ಸ್ಫೂರ್ತಿ ಪ್ರಮುಖವಾಯಿತು.

೧೯೮೮ರಲ್ಲಿ ದಲಿತ ಸಂಘರ್ಷ ಸಮಿತಿಯನ್ನು ಜಿಲ್ಲೆಯಲ್ಲಿ ವಿಧ್ಯುಕ್ತವಾಗಿ ಕಟ್ಟಿ ಹೋರಾಟಕ್ಕೆ ಮುಂದಾಳತ್ವ ವಹಿಸಿದವು. ಎರಡು ವರ್ಷಗಳ ಕಾಲ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದಿದ ನನಗೆ ಗುಲಬರ್ಗಾದ ಹೋರಾಟದ ಗಾಳಿ ನನ್ನ ಮೈಮನ ತುಂಬೆಲ್ಲ ತುಂಬಿಕೊಂಡಿತ್ತು.

ಸಂಘಟನೆಯ ಅಂಗಳದಲ್ಲಿ ಶೋಷಣೆಯ ಪ್ರಖರತೆ ಅರಿವು ಹೆಚ್ಚಾದಂತೆ ಬೌದ್ಧ ಧರ್ಮ ಅನಿವಾರ್ಯ ಎಂದು ತೋರುತ್ತಿರುವಾಗಲೆ, ಸಂಘಟನೆಯಲ್ಲಿ ಸಮಾಜದಲ್ಲಿ ಎಡಬಲದ ತಳಹದಿಯಲ್ಲಿ ರಾಜ್ಯದಾದ್ಯಂತ ಸಂಘಟನೆ–ಸಮಾಜ ಇಬ್ಭಾವಾಯಿತು. ದಲಿತರ ಬೆಳವಣಿಗೆಯ ಕನಸು ಭಗ್ನವಾಯಿತು. ದಲಿತರು ದಲಿತರನ್ನೇ ಹೀಯಾಳಿಸುವುದು ಟೀಕಿಸುವುದು ನಡೆದು ಆಂತರಿಕ ಕಿತ್ತಾಟದಿಂದ ಅಂಬೇಡ್ಕರ್ ವಾದದ ಕಡೆಗೆ ದಲಿತ ಬುದ್ಧಿಜೀವಿಗಳು ಹರಿಯದೆ ಸ್ವಜಾತಿ ನೆಲೆಯಲ್ಲಿ ಕಾದಾಡುತ್ತಿರುವುದರಿಂದ ಆಶಾಗೋಪುರಗಳು ಕಮರಿದುವು.

ದಲಿತರೆಲ್ಲರು ಮತ್ತೊಂದು ಸಾಮೂಹಿಕ ಹೋರಾಟಕ್ಕೆ ಅಣಿಯಾಗಬೇಕು. ಹಿಂದೆ ನಡೆದ ಹೋರಾಟದ ಕದರನ್ನು ನೆನಪಿಸಿಕೊಂಡಾಗ ಬಹುಶಃ ನಾವುಗಳು ಅದರಿಂದ ಪಾಠ ಕಲಿಯಲು ಸಾಧ್ಯ. ೭೦ರ ದಶಕದ ಹೋರಾಟದ ಸ್ವರೂಪ ಮತ್ತು ಪರಿಣಾಮದ ಪರಿಚಯ ಈಗ ನಮ್ಮಲ್ಲಿ ಎಷ್ಟರಮಟ್ಟಿಗೆ ಉಳಿದಿದೆ ಎಂಬುದು ಗಂಭೀರವಾಗಿ ಆಲೋಚಿಸಬೇಕಿದೆ.

ಆ ಹೋರಾಟದಲ್ಲಿ ಅನೇಕ ಹೊಸ ಹೊಳಹುಗಳಿದ್ದವು. ಆ ಸಂದರ್ಭದ ಸಾಮಾಜಿಕ ಸಮಾನತೆಯ ಚಳವಳಿಗೆ ಜ್ಯೋತಿಬಾ ಫುಲೆ, ಪೆರಿಯಾರ್, ನಾರಾಯಣ ಗುರು, ಡಾ|| ಅಂಬೇಡ್ಕರ್ ಮುಂತಾದವರ ಚಿಂತನೆಗಳು ನಾವಿಂದು ಪುನರ್ಮನನ ಮಾಡಿಕೊಳ್ಳಬೇಕಾಗಿದೆ. ಬುದ್ಧ ಬಸವರ ಸಮಾಜೋಧಾರ್ಮಿಕ ಚಳವಳಿಯನ್ನು ಮತ್ತೆ ಮತ್ತೆ ಅರ್ಥೈಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಎಷ್ಟೋ ಆಕಾಂಕ್ಷೆಗಳು ಗುರಿ ಇಟ್ಟ ದಿಕ್ಕಿನಲ್ಲಿ ಸಾಗಿಸಿಕೊಂಡು ಹೋಗಲಾಗಿಲ್ಲ. ಸ್ವಾತಂತ್ರ್ಯದ ಐವತ್ತು ವರ್ಷಗಳ ಅವಧಿಯಲ್ಲಿ ದಲಿತರ ಬದುಕಿನಲ್ಲಿ ಅಲ್ಪ ಪ್ರಮಾಣದ ಭರವಸೆ ಮೂಡಿಸಿ ಕಮರಿ ಹೋಗಿರುವ ಪ್ರಸಂಗಗಳೇ ಹೆಚ್ಚು. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸೂತ್ರಗಳು ಉಳ್ಳವರ ಅಧೀನದಲ್ಲಿದ್ದು ಎಲ್ಲ ವಿಧದಿಂದಲೂ ನಾವಿಂದು ತೀರ ದಿಕ್ಕು ದೆಸೆಯಿಲ್ಲದೆ ಭಿನ್ನ ಭಿನ್ನ ಜಾತಿ ಹಾಗೂ ಉಪಪಂಗಡಗಳ ನೆಲೆಯಲ್ಲಿ ಸಾಗುತ್ತಿರುವುದರಿಂದ ನಿಶ್ಚಿತವಾದ ನೆಲೆ ತಲುಪಲಾಗಿಲ್ಲ. ಈ ಅಪನಂಬಿಕೆ ಆಂತರಿಕ ಜಗಳಗಳು ನಮ್ಮ ಮುಂದಿನ ಬದುಕಿನ ದಾರಿಗೆ ದುರ್ಗಮವಾಗುತ್ತಿದೆ ಎಂದು ಹೆದರಿಕೆ ಉಂಟಾಗುತ್ತಿದೆ.

ದುರ್ಗಮವಾಗಬಹುದಾದ ದಾರಿ ಸುಗಮಗೊಳಿಸುವಲ್ಲಿ ನಿಶ್ಚಿತ ಗುರಿ ಮುಟ್ಟುವಲ್ಲಿ ಈಗಾಗಲೆ ಸವೆಸಿದ ದಾರಿ

ಯನು, ಸಿಂಹಾವಲೋಕನ ಮಾಡುವುದರ ಮೂಲಕ ಅಂಬೇಡ್ಕರರು ಕಂಡುಕೊಂಡ ದಾರಿಯನ್ನು ಹಿಡಿಯ ಬೇಕಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಮತೀಯವಾದ ಹೆಚ್ಚಾಗುತ್ತಿದ್ದು ಎಲ್ಲೆಂದರಲ್ಲಿ ಸ್ವಜಾತಿ ಸ್ವಧರ್ಮ ಪಕ್ಷಪಾತ ಹೆಚ್ಚುತ್ತಿರುವುದು ಸಾಮಾನ್ಯರ ಬದುಕಿಗೆ ಗಂಡಾಂತರವಾಗಿ ನಿಲ್ಲುತ್ತಲಿದೆ. ಈ ದೇಶದ ಹಿಂದೂಗಳೆಂದರೆ ಬ್ರಾಹ್ಮಣರು ಎಂಬುದು ಗುಟ್ಟಾಗಿ ಉಳಿದಿಲ್ಲ. ಅವರಲ್ಲಿರುವ ಹಿಂದೂವಾದಿ ವಿಚಾರ ಅದು ಕೇವಲ ಬ್ರಾಹ್ಮಣೀಕರಣದ ವಾದದ ಮೇಲೆ ನಿಂತಿದೆ. ದಲಿತರನ್ನು ಜೀವಂತ ಸುಟ್ಟರು, ಕಗ್ಗೊಲೆ ಮಾಡಿದರು ಅದು ಸ್ಥಳೀಯ ಸಮಸ್ಯೆ ಎನಿಸಿ ಯಾರ ಗಮನಕ್ಕೂ ಬರದೆ ಹೋಗುತ್ತದೆ. ಮತೀಯವಾದಿ ಸಂಘಟನೆಯವರು ಯಾವುದೇ ಕೃತ್ಯಕ್ಕೆ ಬಲಿಯಾದರೂ ಅದು ರಾಷ್ಟ್ರೀಯ ಅಂತರರಾಷ್ಟ್ರೀಯ ವಿಷಯವಾಗಿ ದೇಶಾದಾದ್ಯಂತ ಗುಲ್ಲೆಬ್ಬಿಸಿ ಕೇಸರೀಕರಣ ಮಾಡಿಬಿಡುತ್ತಾರೆ. ಯಾಕೆಂದರೆ ಅವರಿಗೊಂದು ಸ್ವತಂತ್ರ ಧರ್ಮವಿದೆ.

ದೇವಾಲಯಗಳಲ್ಲಿ ಪ್ರವೇಶ ಕೊಡದೆ ಅಸಮಾನತೆ ಹುಟ್ಟುಹಾಕಿ ವರ್ಣವ್ಯವಸ್ಥೆಯ ನೆಲೆಯಲ್ಲಿ ಶತಶತಮಾನಗಳಿಂದಲೂ ದಲಿತರನ್ನು ಸಾಮಾನ್ಯ ಜನರನ್ನು ಹಿಂಸಿಸಿದ್ದುಂಟು. ಮತ್ತದೆ ಗುಡಿ ದೇವಾಲಯಗಳ ಹೆಸರಿನಲ್ಲಿ ಬ್ರಾಹ್ಮಣರ ಸ್ವಹಿತ ಸಮಸ್ಯೆಯನ್ನು ರಾಷ್ಟ್ರೀಕರಣ ಮಾಡುವುದರ ಮೂಲಕ, ದಲಿತರ ಸಾಮಾನ್ಯರ ಬದುಕು ತ್ರಿಶಂಕು ಸ್ಥಿತಿಗೆ ತಂದು ನಿಲ್ಲಿಸುತ್ತಿದ್ದಾರೆ. ಪರಾಯಣ ಸಂಸ್ಕೃತಿ ಶ್ರಮ ಸಂಸ್ಕೃತಿಯನ್ನು ಅಂಧಕಾರದಲ್ಲಿ ಮುಳುಗಿಸುತ್ತಲಿದೆ. ಭಾರತ ಕೇವಲ ಬ್ರಾಹ್ಮಣ ಮತ್ತು ಮುಸ್ಲಿಮರಿಂದ ಕೂಡಿದ್ದಲ್ಲ. ದಲಿತರು, ಕ್ರೈಸ್ತರು, ಬೌದ್ಧರು, ಜೈನರು, ಅಲ್ಲದೆ ಅನೇಕ ಬುಡಕಟ್ಟು ಸಂಸ್ಕೃತಿಯ ಜನ ಬಹುಸಂಖ್ಯೆಯಲ್ಲಿದ್ದು ಹಿಂದುತ್ವಕ್ಕೊಳಪಡದೇ ಬದುಕುತ್ತಿರುವುದನ್ನು ಕಾಣುತ್ತೇವೆ.

ಕೆಲ ಮುಸ್ಲಿಮ್ ಮತೀಯವಾದಿಗಳ ತಪ್ಪಿನಿಂದಾಗಿ ಅನೇಕ ಮುಗ್ಧ ಮುಸ್ಲಿರು ಇತರ ಮತೀಯವಾದಿಗಳ ಆಯುಧಗಳಿಗೆ ಬಲಿಯಾಗುತ್ತಿದ್ದಾರೆ. ಯಾವುದೇ ಒಂದು ರಾಷ್ಟ್ರದಲ್ಲಿ ನೆಮ್ಮದಿ ಶಾಂತಿ ನೆಲೆಸಬೇಕಾದದ್ದು ಅನಿವಾರ್ಯ. ಒಂದು ಧರ್ಮದವರು ಇನ್ನೊಂದು ಧರ್ಮದವರ ಮೇಲೆ ಆಕ್ರಮಣ ಮಾಡುವುದು ಅಪರಾಧ. ಆ ಮೂಲಕ ವ್ಯಕ್ತಿ ಸ್ವಾತಂತ್ರ್ಯ ಮೊಟಕುಗೊಳಿಸುವುದು ಅನ್ಯಾಯ. ಅವರು ಇವರನ್ನು ಸುಡುವುದು ಇವರು ಅವರನ್ನು ಕೊಚ್ಚಿಹಾಕುವುದು ಮಾನವ ಸಂಸ್ಕೃತಿಗೆ ಕಳಂಕಪ್ರಾಯವಾದುದು.

ಭಾರತದಲ್ಲಿ ಸಾಮೂಹಿಕವಾಗಿ ಕೊಚ್ಚಿಹಾಕುವುದು, ದಹಿಸುವುದು ಬಹಳ ಸುಲಭದ ಕೆಲಸ. ಈ ಉಭಯ ಮತೀಯವಾದಿಗಳು ಅಂತಾರರಾಷ್ಟ್ರೀಯ ನೆಲೆಯಲ್ಲಿ ಪರವಿರೋಧಿ ಬಣಗಳನ್ನು ಹೊಂದಿದ್ದಾರೆ. ಇವರಿಗೆ ರಕ್ಷರು ಇದ್ದಾರೆ. ಅದೇ ರೀತಿಯಲ್ಲಿ ದಲಿತರು ಹಿಂದೂ ಧರ್ಮದ ಹೊರಗಿದ್ದು ಬದುಕಿದ್ದರೂ ಅನೇಕ ಅನ್ಯಾಯ ಅತ್ಯಾಚಾರಗಳಿಗೆ ಬಲಿಯಾಗುತ್ತಿದ್ದರೂ ಕೇಳವವರಿಲ್ಲ. ಅಸ್ಪೃಶ್ಯರ ಸಮಸ್ಯೆ ಅಂತಾರಾಷ್ಟ್ರೀಯ ಸಮುದಾಯದ ಗಮನಕ್ಕೆ ಬರಬೇಕು. ನಮ್ಮ ಮೇಲಾಗುವ ಹಲ್ಲೆಗಳು ಕೂಡ ಅಂತಾರಾಷ್ಟ್ರೀಯ ನೆಲೆಯಲ್ಲಿ ಚರ್ಚೆಯಾಗಬೇಕು. ಹಾಗಾಗಬೇಕಾದರೆ ಒಂದು ಸ್ವತಂತ್ರ ಧರ್ಮ ಹೊಂದ ಬೇಕು. ದಲಿತರು ಧಾರ್ಮಿಕವಾಗಿ ಮುಖ್ಯ ವಾಹಿನಿಗೆ ಬಂದಾಗ ಮಾತ್ರ ಅದು ಸಾಧ್ಯವಾದೀತು. ಆಗ ನಮ್ಮ ಮೇಲೆ ನಡೆಯುವ ದೌರ್ಜನ್ಯ ದಬ್ಬಾಳಿಕೆ ಕಡಿಮೆಯಾಗ ಬಹುದು. ಅದಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬ ಮನುಷ್ಯನಿಗೆ ಧರ್ಮ ಅಗತ್ಯ. ಬಾಬಾಸಾಹೇಬರು ಪೂರ್ವಾಪರ ಆಲೋಚನೆ ಮಾಡಿ ಬೌದ್ಧ ಧರ್ಮದ ಪಥವನ್ನರಿತು ಹಿಂದೂ ಧರ್ಮವನ್ನು ತ್ಯಜಿಸಿದರು. ಡಾ|| ಅಂಬೇಡ್ಕರ್ ಅವರ ದಾರಿಯನ್ನು ನಾವೆಲ್ಲರು ಇಂದು ತುಳಿದು ಪ್ರಪಂಚದಲ್ಲಿ ಇತರರಂತೆ ಸಾವು ನೆಮ್ಮದಿಯಿಂದ ಅವಮಾನ ರಹಿತವಾಗಿ ಬಾಳುವುದು ಅನಿವಾರ್ಯವಾಗಬೇಕು.

ಮಾನವೀಯ ನೆಲೆ

ಬುದ್ಧ. ಈ ನೆಲದ ಸರ್ವಶ್ರೇಷ್ಠ ಶಾಂತಿದೂತ. ವೈಚಾರಿಕ ಪಥವನ್ನು ತುಳಿಯುವುದರ ಮೂಲಕ ಸಾಮಾನ್ಯ ಜನರಲ್ಲಿ ಅರಿವು ಮೂಡಿಸಿದ ಈ ಮಹಾಚೇತನ ಸುಮಾರು ೨೫೦೦ ವರ್ಷಗಳ ಹಿಂದೆ ಕ್ರಿ.ಪೂ. ೫೬೩ರಲ್ಲಿ ಗೌತಮನು ಇಂದಿನ ನೇಪಾಳದ ಲುಂಬಿಣಿಯಲ್ಲಿ ವೈಶಾಖ ಪೂರ್ಣಿಮೆಯಂದು ಶುದ್ಧೋಧನ ಮಾಯಾದೇವಿಯ ಪುತ್ರನಾಗಿ ಜನಿಸಿದನು. ಸಿದ್ಧಾರ್ಥ ಬುದ್ಧನ ಮೊದಲ ಹೆಸರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಸಿದ್ಧಾರ್ಥ ಚಿಕ್ಕಮ್ಮ ಗೌತಮಿಯ ಲಾಲನೆ ಪಾಲನೆಯಲ್ಲಿ ಬೆಳೆಯಬೇಕಾಯಿತು.

ಶಾಂತಿದೂತನ ಚರಿತ್ರೆ ಓದುತ್ತ ಹೋದಂತೆಲ್ಲ ಸಾವು, ಮುಪ್ಪು, ರೋಗ ಈ ಮೂರು ಕಾರಣಗಳಿಂದ ರಾತ್ರೋರಾತ್ರಿ ರಾಜ್ಯವನ್ನು ತೊರೆದು ಕಾಡಿಗೆ ನಡೆದ ಎನ್ನುವುದನ್ನು ಅನೇಕ ಕಡೆ ಉಲ್ಲೇಖಿಸಿರುವುದು ಕಾಣುತ್ತೇವೆ. ಮದುವೆ ವಯಸ್ಸಿಗೆ ಬರುವವರೆಗೆ ಸಾವು ಮುಪ್ಪು ರೋಗಗಳ ಕಲ್ಪನೆ ಬುದ್ಧನಿಗಿರಲಿಲ್ಲವೆ? ಆತನು ಶೀರ ಮುಗ್ಧನಾಗಿದ್ದನೆ? ಈ ಎಲ್ಲ ಪ್ರಶ್ನೆಗಳು ಎದುರಾಗುತ್ತವೆ. ಆದರೆ ಬುದ್ಧ ಕಾಡಿಗೆ ಹೋದ ಕಾರಣವೇ ಬೇರೆ. ಎರಡು ಗುಂಪುಗಳ ನಡುವೆ ರೋಹಿಣಿ ನದಿ ನೀರಿನ ಹಂಚಿಕೆಗಾಗಿ ಯುದ್ಧ ನಡೆದು ಅಶಾಂತಿ, ಅರಾಜಕತೆ ಉಂಟಾಗುವುದನ್ನು ತಡೆಯುವಲ್ಲಿ, ಯುದ್ಧ ವಿರೋಧಿಸಿದ ಕಾರಣಕ್ಕಾಗಿ ತಂದೆ-ತಾಯಿಯರಿಗೆ ಆಗುವ ಶಿಕ್ಷೆಯನ್ನು ತಪ್ಪಿಸುವ ಸಲುವಾಗಿ ಬುದ್ಧ ಕಾಡಿಗೆ ಹೋಗಬೇಕಾಯಿತು.

ದಲಿತರು ಹಿಂದೂ ಧರ್ಮದ ಹೊರಗಿದ್ದು ಬದುಕಿದ್ದರೂ ಅನೇಕ ಅನ್ಯಾಯ ಅತ್ಯಾಚಾರಗಳಿಗೆ ಬಲಿಯಾಗುತ್ತಿದ್ದರೂ ಕೇಳವವರಿಲ್ಲ. ಅಸ್ಪೃಶ್ಯರ ಸಮಸ್ಯೆ ಅಂತಾರಾಷ್ಟ್ರೀಯ ಸಮುದಾಯದ ಗಮನಕ್ಕೆ ಬರಬೇಕು. ನಮ್ಮ ಮೇಲಾಗುವ ಹಲ್ಲೆಗಳು ಕೂಡ ಅಂತಾರಾಷ್ಟ್ರೀಯ ನೆಲೆಯಲ್ಲಿ ಚರ್ಚೆಯಾಗಬೇಕು. ಹಾಗಾಗಬೇಕಾದರೆ ಒಂದು ಸ್ವತಂತ್ರ ಧರ್ಮ ಹೊಂದ ಬೇಕು. ದಲಿತರು ಧಾರ್ಮಿಕವಾಗಿ ಮುಖ್ಯ ವಾಹಿನಿಗೆ ಬಂದಾಗ ಮಾತ್ರ ಅದು ಸಾಧ್ಯವಾದೀತು. ಆಗ ನಮ್ಮ ಮೇಲೆ ನಡೆಯುವ ದೌರ್ಜನ್ಯ ದಬ್ಬಾಳಿಕೆ ಕಡಿಮೆಯಾಗ ಬಹುದು. ಅದಕ್ಕಿಂತ ಮುಖ್ಯವಾಗಿ ಪ್ರತಿಯೊಬ್ಬ ಮನುಷ್ಯನಿಗೆ ಧರ್ಮ ಅಗತ್ಯ. ಬಾಬಾಸಾಹೇಬರು ಪೂರ್ವಾಪರ ಆಲೋಚನೆ ಮಾಡಿ ಬೌದ್ಧ ಧರ್ಮದ ಪಥವನ್ನರಿತು ಹಿಂದೂ ಧರ್ಮವನ್ನು ತ್ಯಜಿಸಿದರು.

ಗೌತಮನು ಬಾಲ್ಯದಿಂದಲೂ ಜೀವಪರ ನಿಲುವಿಗೆ ಬದ್ಧನಾಗಿರುವಂತಹ ವ್ಯಕ್ತಿ. ದುಃಖ ಪೀಡಿತರ ದಮನೀಯ ಸ್ಥಿತಿಯನ್ನು ಕಂಡು ಮರುಗುತ್ತಿದ್ದವನು. ಮಾನವೀಯ ಮೌಲ್ಯಗಳ ರಕ್ಷಕನಾಗಿರುವ ಬುದ್ಧ ಮಾನವ ದುಃಖಕ್ಕೆ ಕಾರಣಗಳೇನು? ಅವುಗಳನ್ನು ಹೇಗೆ ನಿವಾರಿಸಬಹುದು ಎಂಬುದರ ಬಗ್ಗೆ ಜೀವಿತದುದ್ದಕ್ಕೂ ಚಿಂತಿಸಿ ಪರಿಹಾರಗಳನ್ನು ಕಂಡುಹಿಡಿದ ಪ್ರತಿಫಲವೇ ಬೌದ್ಧ ಧಮ್ಮ. ಪ್ರಪಂಚಕ್ಕೆ ಪಂಚಶೀಲಗಳನ್ನು ನೀಡಿದ ಮಹಾಪುರುಷ ಬುದ್ಧನಾಗಿದ್ದಾನೆ.

ಅಂಧಶ್ರದ್ಧೆ ಕಂದಾಚಾರಗಳಿಂದ ಕೂಡಿದ ಸಮಾಜಕ್ಕೆ ಅಷ್ಟಾಂಗ ಮಾರ್ಗವನ್ನು ತುಳಿಯಲು ಬುದ್ಧ ಹೇಳಿದ್ದು ಹೀಗೆ.

* ಸಮ್ಯಕ್ ದೃಷ್ಟಿ-ಶುದ್ಧವಾದ ದೃಷ್ಟಿಕೋನ
* ಸಮ್ಯಕ್ ಸಂಕಲ್ಪ-ಶುದ್ಧವಾದ ಆಶೋತ್ತರ
* ಸಮ್ಯಕ್ ವಾಚಾ-ಶುದ್ಧವಾದ ಮಾತು
* ಸಮ್ಯಕ್ ಕರ್ಮ-ಶುದ್ಧವಾದ ವರ್ತನೆ
* ಸಮ್ಯಕ್ ಜೀವನ-ಶುದ್ಧವಾದ ಜೀವನ
* ಸಮ್ಯಕ್ ವ್ಯಾಯಾಮ- ಶುದ್ಧವಾದ ಪ್ರಯತ್ನ
* ಸಮ್ಯಕ್ ಸ್ಮೃತಿ- ಶುದ್ಧವಾದ ಆಲೋಚನೆ
* ಸಮ್ಯಕ್ ಸಮಾಧಿ-ಶುದ್ಧವಾದ ಉದ್ದೇಶ

ಮಾನವನ ಬುದಕಿನಲ್ಲಿ ಶುದ್ಧವಾದ ದೃಷ್ಟಿಕೋನ ಆಶೋತ್ತರ, ಮಾತು, ವರ್ತನೆ, ಜೀವನ, ಪ್ರಯತ್ನ, ಆಲೋಚನೆ, ಉದ್ದೇಶಗಳು ಹಿಂಸಾರಹಿತವಾಗಿ ನಿಸ್ವಾರ್ಥದ ನೆಲೆಯಲ್ಲಿ ಬೆಳೆದು ಬರಬೇಕು. ಬೌದ್ಧ ಧರ್ಮ ಇತರ ಧರ್ಮಗಳಂತೆ ಸಂಪ್ರದಾಯದ ನೆಲೆಯಲ್ಲಿ ನಿಲ್ಲುವಂತಹದ್ದಲ್ಲ. ಅದೊಂದು ತತ್ವ, ನಿಯಮ, ಅತ್ಯಂತ ವಾಸ್ತವಿಕ ನೆಲೆಯಲ್ಲಿ ವೈಚಾರಿಕ ವೈಜ್ಞಾನಿಕ ಆಲೋಚನೆಗಳ ನಿಜ ಮೊತ್ತ. ಮೂಢನಂಬಿಕೆ ಅಂಧಶ್ರದ್ಧ, ಕಂದಾಚಾರಗಳಿಗೆ ಬೌದ್ಧರಲ್ಲಿ ಅವಕಾಶವಿಲ್ಲ. ಹೀಗಾಗಿ ಬುದ್ಧ ವಿವೇಕಿಗಳಿಗೆ ಆಪ್ತವಾಗುತ್ತಾನೆ.

ಬುದ್ಧ-ಬಸವರ ಸಮಾನ ಆಲೋಚನೆ

ಕ್ರಿ. ಶ. ೬ನೇ ಶತಮಾನದ ಬುದ್ಧ ೧೨ನೇ ಶತಮಾನದ ಅಣ್ಣ ಬಸವಣ್ಣನವರ ತತ್ವಗಳಲ್ಲಿ ಭಿನ್ನತೆ ಕಾಣದು. ಬುದ್ಧ ಸಾಮಾಜಿಕವಾಗಿ ಎತ್ತರದ ಕ್ಷತ್ರಿಯ ಮನೆತನದಿಂದ ಮೂಡಿಬಂದನು. ಬಸವಣ್ಣ ಕೂಡ ಸಾಮಾಜಿಕವಾಗಿ ವಿಪ್ರಮೂಲದಿಂದ ಬಂದವನು. ಪಾರಾಯಣ ಸಂಸ್ಕೃತಿಯ ಜನಿವಾರ ಹರಿದುಹಾಕಿ ಮಾನವೀಯ ಮೌಲ್ಯಗಳಿಗೆ ಮಿಡಿದ ಮಹಾನ್ ಶರಣ.

ಕರ್ಮಸಿದ್ಧಾಂತವನ್ನು ಬಿಟ್ಟು ಕಾಯಕ ಸಿದ್ಧಾಂತದೆಡೆಗೆ ನಡೆದ ಬಸವಣ್ಣ "ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಪ್ರಜ್ಞೆ ಈ ಸಮಾಜವನ್ನು ಎಲ್ಲ ರೀತಿಯಿಂದಲೂ ಮಾನವೀಯಗೊಳಿಸುವ ಪ್ರಜ್ಞೆ, ವಿಶ್ವಕ್ಕೆ ಒಬ್ಬನೇ ದೇವರು ಎಂದು ನಂಬಿ ಜಾತಿಭೇದ, ಲಿಂಗ ಭೇದಗಳನ್ನು ಅಳಿಸಿ ಹಾಕುವುದು. ಬಸವ ಪ್ರಜ್ಞೆ ಎಂದರೆ

ಮನುಧರ್ಮವನ್ನು ಬಿಟ್ಟು ಮಾನವ ಧರ್ಮ ಸ್ವೀಕರಿಸುವುದು. ಬಸವ ಪ್ರಜ್ಞೆ ಎಂದರೆ ನಮ್ಮೊಳಗೆ ಕಟ್ಟಳೆ ಹಾಕಿಕೊಳ್ಳುವುದು. ನಮ್ಮ ತಪ್ಪುಗಳನ್ನು ನಾವೇ ಬಹಿರಂಗಪಡಿಸುವುದು. ಬಸವ ಪ್ರಜ್ಞೆ ಎಂದರೆ, ಕೇಡಿಲ್ಲದ ಸುಲಿಗೆಯಿಲ್ಲದ ಸಮಾಜದ ಬಗ್ಗೆ ಚಿಂತಿಸುವುದು. ಎಲ್ಲ ಸಂಸ್ಕೃತಿ ನಾಗರೀಕತೆ ಮತ್ತು ಧರ್ಮಗಳ ವಿಚಾರಧಾರೆಗಳಲ್ಲಿನ ವೈವಿಧ್ಯದಲ್ಲಿ ಏಕತೆಯನ್ನು ಹುಡುಕುವ ಪ್ರಜಾಪ್ರಭುತ್ವವಾದಿ ಪ್ರಜ್ಞೆ"[೧]

ಬುದ್ಧ ಕರ್ಮಠದ ಯಜ್ಞ, ಯಾಗ, ಕಂದಾಚಾರಗಳನ್ನು ವಿರೋಧಿಸಿದ. ಹಿಂದೂ ಧರ್ಮದ ವೇದಶಾಸ್ತ್ರಗಳನ್ನು ಆಧಾರ ಸಹಿತವಾಗಿ ತಿರಸ್ಕರಿಸಿದ. ಬಸವಣ್ಣ ವೇದಕ್ಕೆ ಒರೆಯಕಟ್ಟುವೆ. ಶಾಸ್ತ್ರಕ್ಕೆ ನಿಗಳನಿಕ್ಕುವೆ, ತರ್ಕಬೆನ್ನು ಬಾರೆತ್ತುವೆ. ಆಗಮದ ಮೂಗ ಕೊಯ್ಯುವೆ ಎನ್ನುವುದರ ಮೂಲಕ ಸಮಾಜದಲ್ಲಿ ಸ್ವೇಚ್ಛೆಯಿಂದ ತೇಲಾಡುತ್ತಿದ್ದ ಲೋಪದೋಷಗಳನ್ನು ಖಂಡಿಸಿದ.

"ಮನುಷ್ಯನ ಆಸೆ, ದುಃಖಗಳಿಗೆ ಬುದ್ಧನ ಸಿದ್ಧಾಂತವೇ ಪರಿಹಾರ. ಇದೇ ವಿಚಾರಗಳನ್ನು ಸರಳವಾಗಿ ಕಾಲಲ್ಲಿ ಕಟ್ಟಿದ ಗುಂಡು ಕೊರಳಲ್ಲಿ ಕಟ್ಟಿದ ಬೆಂಡು, ತೇಲಲೀಯದು ಗುಂಡು, ಮುಳಗಲೀಯದು ಬೆಂಡು. ಇಂತಪ್ಪ ಶರಧಿಯಂ ದಾಂಟಿಸಿ ಕಾಲಾಂತಕನೆ ಕಾಯೋ ಕೂಡಲ ಸಂಗಯ್ಯ" ಎಂದ ಬಸವಣ್ಣ. ಬುದ್ಧನ ತ್ರಿಶರಣದಲ್ಲಿ ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ, ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ ಎಂದಿದೆ. ಅಂದರೆ ಜ್ಞಾನಿಗೆ ಶರಣು, ಸಂಘಕ್ಕೆ ಶರಣು, ಧರ್ಮಕ್ಕೆ ಶರಣು ಎಂದು ಬಸವಣ್ಣ ಗುರುಲಿಂಗ ಜಂಗಮ ಶರಣರ ಅನುಭವ ಮಂಟಪದ ಮಹಾಮನೆಗೆ ಎಂದ. ಧರ್ಮ ಮಾರ್ಗಕ್ಕೆ ಆದ್ಯತೆ ನೀಡಿದ್ದ ಬೌದ್ಧರ ಬುದ್ಧ ಕಲ್ಪನೆ ಸಂಘ ಕಲ್ಪನೆ ಧರ್ಮ ಕಲ್ಪನೆಯನ್ನೇ ಹೋಲುವಂತೆ ಬಸವಣ್ಣನ ಅರಿವಿನ ಮಹಾಮನೆ ಧರ್ಮ ಕಲ್ಪನೆಯಲ್ಲಿ ಸಾಮ್ಯತೆ ಕಾಣಬಹುದು."[೨]

"ಬುದ್ಧನ ಪ್ರಕಾರ ಧರ್ಮವು ಮಾನವನ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕೇ. ಹೊರತು ದೇವರು ಆತ್ಮ, ಸ್ವರ್ಗ, ನರಕ, ಭೂಮಿ, ಆದಿ, ಅಂತ್ಯ ಅಥವಾ ಇತರೆ ವಾದವಿವಾದಗಳಿಗಲ್ಲ. ಧರ್ಮವು ಸತ್ಯ, ಮೈತ್ರಿ, ಶೀಲ, ಕರುಣೆ ನೈತಿಕತೆಯಿಂದ ಕೂಡಿರಬೇಕು. ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು."[೩] ಬುದ್ಧನ ಪ್ರಕಾರ ಹುಟ್ಟು ಶ್ರೇಷ್ಠವಲ್ಲ. ಮಾನವ ಮಾನವರಲ್ಲಿ ಯಾರೂ ಕೀಳಲ್ಲ ಯಾರೂ ಮೇಲಲ್ಲ. ಒಳ್ಳೆಯ ಕಾರ್ಯ ಮಾಡುವುದರಿಂದ ಎಲ್ಲರೂ ಒಳ್ಳೆಯವರಾಗುತ್ತಾರೆ.

ಬುದ್ಧ ಹೇಳಿದ ಪಂಚಶೀಲಗಳನ್ನು ಯಾವ ವ್ಯಕ್ತಿ ಪ್ರಾಮಾಣಿಕವಾಗಿ ಪಾಲಿಸುತ್ತಾನೋ ಅವನು ಬುದ್ಧತ್ವವನ್ನು ಪಡೆಯುತ್ತಾನೆ ಮತ್ತು ಸಮಾಜದ ಶಾಂತಿಗೆ ಕಾರಣೀಭೂತನಾಗುತ್ತಾನೆ.

* ಪ್ರಾಣೀ ಹಿಂಸೆ ಮಾಡಬಾರದು.
* ಕಳ್ಳತನ ಮಾಡಬಾರದು.
* ಸುಳ್ಳು ಹೇಳಬಾರದು.
* ಮದ್ಯಪಾನ ಮಾಡಬಾರದು.
* ಅನೈತಿಕ ಕಾಮ ಸಂಬಂಧ ಹೊಂದಬಾರದು.

ಈ ಮೇಲಿನ ಬುದ್ಧನ "ಪಂಚಶೀಲ" ತತ್ವಗಳನ್ನೇ ಬಸವಣ್ಣ ಕೂಡಾ ಹೇಳಿದ್ದಾನೆ. ಛಲ ಬೇಕು ಶರಣಂಗೆ, ಪರಧನವನೊಲ್ಲೆನೆಂಬ, ಛಲ ಬೇಕು ಶರಣಂಗೆ ಪರಸತಿಯನೆ‌ನ್ನೊಲ್ಲೆನೆಂಬ, ಛಲ ಬೇಕು ಶರಣಂಗೆ ಪರದೈವನೊಲ್ಲೆನೆಂಬ. ಅಣ್ಣನ ಮಾತುಗಳು ಕನ್ನಡ ಸಂಸ್ಕೃತಿಯ ಪ್ರತೀಕ. ಯಾವುದೇ ವ್ಯಕ್ತಿ ಅಥವಾ ಸಮಾಜ ಈ ಇಬ್ಬರು ಮಹಾನ್ ಸಾಧಕರ ವಿಚಾರಗಳನ್ನು ಪಾಲಿಸಿದಲ್ಲಿ ಚಾರಿತ್ರ್ಯವಂತರಾಗುತ್ತಾರೆ. ಸಮಾಜದಲ್ಲಿ ಶಾಂತಿ ನಿರ್ಮಾಣವಾಗುತ್ತದೆ. ದುಃಖ ನಿವಾರಣೆಯಾಗುವಲ್ಲಿ ಸಂದೇಹವಿಲ್ಲ.

> "ಬುದ್ಧನ ಪ್ರಕಾರ ಧರ್ಮವು ಮಾನವನ ಜೀವನ ಸಂಗತಿಗಳಿಗೆ ಸಂಬಂಧಿಸಿರಬೇಕೇ. ಹೊರತು ದೇವರು ಆತ್ಮ, ಸ್ವರ್ಗ, ನರಕ, ಭೂಮಿ, ಆದಿ, ಅಂತ್ಯ ಅಥವಾ ಇತರೆ ವಾದವಿವಾದಗಳಿಗಲ್ಲ. ಧರ್ಮವು ಸತ್ಯ, ಮೈತ್ರಿ, ಶೀಲ, ಕರುಣೆ ನೈತಿಕತೆಯಿಂದ ಕೂಡಿರಬೇಕು. ಮನುಷ್ಯ ಮತ್ತು ನೀತಿ ಧರ್ಮದ ಕೇಂದ್ರವಾಗಿರಬೇಕು."[೩] ಬುದ್ಧನ ಪ್ರಕಾರ ಹುಟ್ಟು ಶ್ರೇಷ್ಠವಲ್ಲ. ಮಾನವ ಮಾನವರಲ್ಲಿ ಯಾರೂ ಕೀಳಲ್ಲ ಯಾರೂ ಮೇಲಲ್ಲ. ಒಳ್ಳೆಯ ಕಾರ್ಯ ಮಾಡುವುದರಿಂದ ಎಲ್ಲರೂ ಒಳ್ಳೆಯವರಾಗುತ್ತಾರೆ. ಬುದ್ಧ ಹೇಳಿದ ಪಂಚಶೀಲಗಳನ್ನು ಯಾವ ವ್ಯಕ್ತಿ ಪ್ರಾಮಾಣಿಕವಾಗಿ ಪಾಲಿಸುತ್ತಾನೋ ಅವನು ಬುದ್ಧತ್ವವನ್ನು ಪಡೆಯುತ್ತಾನೆ ಮತ್ತು ಸಮಾಜದ ಶಾಂತಿಗೆ ಕಾರಣೀಭೂತನಾಗುತ್ತಾನೆ.

"ಬುದ್ಧನ ಅಷ್ಟಾಂಗ ಮಾರ್ಗದಲ್ಲಿ ಹೇಳಿರುವಂತೆ ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಚನ, ಸಮ್ಯಕ್ ಕರ್ಮ, ಸಮ್ಯಕ್ ವಿವೇಕ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿ ವಿಚಾರಗಳು ಬಸವಣ್ಣನ ವಚನಗಳಲ್ಲಿ "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ ಇದಿರು ಹಳಿಯಲು ಬೇಡ ತನ್ನ ಬಣ್ಣಿಸಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ""[೪] ಎನ್ನುವಲ್ಲಿ ಪ್ರತಿಬಿಂಬಿತವಾಗಿದೆ.

ಸಮಾಜದ ಅನಿಷ್ಟವಾದ ಜಾತಿಪದ್ಧತಿಯ ವಿರುದ್ಧ ಹೋರಾಡಿದ ಈ ಮಹಾನ್ ಪುರುಷರು ಸಮಾಜದಲ್ಲಿರುವ ಜಾತ್ಯಾಧಾರಿತ ವಿಪ್ರಪ್ರವೃತ್ತಿಯನ್ನು ಖಂಡಿಸಿದ್ದಾರೆ. "ಜಡೆಯಿಂದಾಗಲೀ ಗೋತ್ರದಿಂದಾಗಲೀ, ಹುಟ್ಟಿನಿಂದಾಗಲೀ ಯಾರೂ ಬ್ರಾಹ್ಮಣರಾಗುವುದಿಲ್ಲ. ಯಾವ ವ್ಯಕ್ತಿಯಲ್ಲಿ ಸತ್ಯ ಮತ್ತು ಧರ್ಮಗಳು ನೆಲೆಗೊಂಡಿವೆಯೋ ಅವನು ಮಾತ್ರ ಪರಿಶುದ್ಧ ವ್ಯಕ್ತಿಯಾಗಲು ಸಾಧ್ಯವಿದೆ ಎಂಬದು ಬುದ್ಧ ಹೇಳಿದರೆ, ಕಾಸಿ ಕಮ್ಮಾರನಾದ ಬಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ ಎಂದು ಬಸವಣ್ಣ ಕಸುಬುಗಳಿಗಿದ್ದ ಕೀಳರಿಮೆಯನ್ನು ಹೋಗಲಾಡಿಸಿದ್ದಲ್ಲದೆ, ಕಸುಬುಗಳನ್ನು ವಂಶ ಪರಂಪರೆಯಿಂದ ಪ್ರತ್ಯೇಕಗೊಳಿಸುವ ಪ್ರಯತ್ನ ಮಾಡಿದ್ದಾನೆ. ಅಲ್ಲದೆ ವಿಪ್ರ ಮೊದಲು ಅಂತ್ಯಜ ಕಡೆಯಾಗಿ, ಶಿವ ಭಕ್ತರೆಲ್ಲರೂ ಒಂದೇ ಎಂಬೆ. ದಾಸಿಪುತ್ರನಾಗಲೀ, ವೇಶ್ಯಾಪುತ್ರನಾಗಲೀ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪಾದೋದಕ ಪ್ರಸಾದ ಕೊಂಬುದೇ ಯೋಗ್ಯ" ಎಂದು ಮಾನವ ಘನತೆಯನ್ನು ಎತ್ತಿಹಿಡಿದಿದ್ದಾನೆ.

ಬುದ್ಧ ತನ್ನ ಬಿಕ್ಕು ಸಂಘದಲ್ಲಿ ಸುನೀತನಂತಹ ಅಸ್ಪೃಶ್ಯರನ್ನು ಮತ್ತು ಆಮ್ರಪಾಲಿಯಂತಹ ವೇಶ್ಯೆಯನ್ನು ಸೇರಿಸಿಕೊಂಡು ಅವರಿಗೆ ನ್ಯಾಯವಾಗಿ ದೊರಕಬೇಕಾದ ಮಾನವ ಗೌರವ ಮತ್ತು ಸಮಾನತೆಯನ್ನು ದೊರಕಿಸಿಕೊಟ್ಟ. ಹಾಗೆಯೇ ಬಸವಣ್ಣ ತನ್ನ ಅನುಭವ ಮಂಟಪದಲ್ಲಿ ಕೆಳವರ್ಗದ ಶರಣರಾದ ಮಾದಾರ ಚೆನ್ನಯ್ಯ, ಧೂಳಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ, ಬಹುರೂಪಿ ಚೌಡಯ್ಯ, ಹಡಪದ ಅಪ್ಪಣ್ಣ, ನಗೆಯ ಮಾರಿತಂದೆ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಸೂಳೆ ಸಂಕವ್ವೆ, ಉರಿಲಿಂಗಪೆದ್ದಿ, ಕಾಳವ್ವೆ, ಕೆಂಬಾವಿ ಭೋಗಣ್ಣ-ಇವರೆಲ್ಲರನ್ನು ಸೇರಿಸಿಕೊಂಡು ಸಮಸಮಾಜದ ಕನಸು ನನಸು ಮಾಡಿದ.

ಮಹಾಕ್ರೂರಿ ಅಂಗುಲಿಮಾಲನನ್ನು ಮನುಷ್ಯನನ್ನಾಗಿಸಿದ ಕಾರ್ಯ ಬುದ್ಧ ಮಾಡಿದರೆ, ಮನೆಗೆ ಬಂದ ಕಳ್ಳನ ಮನೆಗೆ ಬಲುಗಳ್ಳ ಬಂದಿದ್ದಾನೆ ಎಂದು ಅವರನ್ನು ಲಿಂಗ ಧಾರಣ ಮಾಡುವುದರ ಮೂಲಕ ಉನ್ನತೀಕರಿಸಿದ್ದಾನೆ.

ಸ್ತ್ರೀ ಸಮಾನತೆ ಸ್ಥಾಪಿಸಲು ಭಿಕ್ಷು ಸಂಘದಲ್ಲಿ ಸ್ತ್ರೀಯರಿಗೆ ಅವಕಾಶ ನೀಡಿ, ತನ್ನ ತಾಯಿ ಮತ್ತು ಪತ್ನಿಯರನ್ನು ಒಳಗೊಂಡಂತೆ ಅನೇಕ ಮಹಿಳೆಯರನ್ನು ಬುದ್ಧ ಸೇರಿಸಿಕೊಂಡಂತೆ ಬಸವಣ್ಣ ಗಂಗಾಂಬಿಕೆ, ನೀಲಾಂಬಿಕೆ, ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸಂಕವ್ವೆ, ಕಾಳವ್ವೆಯಂತಹ ನೂರಾರುಜನ ಮಹಿಳೆಯರನ್ನು ಅನುಭವ ಮಂಟಪಕ್ಕೆ ಸೇರಿಸಿಕೊಂಡ.

ಬುದ್ಧ ಮೂರ್ತಿಪೂಜೆಯನ್ನು ಧಿಕ್ಕರಿಸಿದ, ಅಣ್ಣ ಬಸವಣ್ಣ ಕೂಡಾ ಹಂತಹಂತವಾಗಿ ಮೂರ್ತಿಪೂಜೆ ವಿರೋಧಿಸಿದ. ಬುದ್ಧನ ಧರ್ಮದ ತಳಹದಿ ಅಹಿಂಸೆ, ಪ್ರೀತಿ, ನೀತಿ, ಬಸವಣ್ಣ ದಯವೇ ಧರ್ಮದ ಮೂಲವಯ್ಯ ಎಂದು ಹೇಳಿದ. ಬಸವ ಬುದ್ಧರಲ್ಲಿ ಅನೇಕ ಸಂದರ್ಭಗಳಲ್ಲಿ ಸಾಮ್ಯತೆ ಕಾಣಬಹುದಾಗಿದೆ.

"ಬುದ್ಧ ಮತ್ತು ಬಸವಣ್ಣ ಇಬ್ಬರ ಕೊನೆಯ ದಿನಗಳೂ ಸಾಮಾಜಿಕ ಕ್ರಾಂತಿಯಲ್ಲಿ ಕೊನೆಗೊಂಡಿವೆ. ಬುದ್ಧನ ಬೋಧನೆಯಿಂದ ಜನ ಬೌದ್ಧ ಧರ್ಮದತ್ತ ವಾಲಿದಾಗ ಹತಾಶಗೊಂಡ ಹಿಂದೂ ಮೂಲಭೂತವಾದಿಗಳು ಹಿಂದೂಕರಣಗೊಳಿಸಿದರು. ಹಾಗೆಯೇ ಅಪಾರ ಜನ ಬೆಂಬಲ ಪಡೆದು ವಿಶೇಷವಾಗಿ ಕೆಳವರ್ಗದ ಕಣ್ಮಣಿಯಾಗಿದ್ದ ಬಸವಣ್ಣನ ಬೆಂಗಾವಲಿನಲ್ಲಿ ಅಂತರ್ ಜಾತಿ ವಿವಾಹ ನಡೆದಾಗ ಮೂಲಭೂತವಾದಿಗಳ ಸಹನೆಯು ಕಟ್ಟೆಯೊಡೆದು ಕುಟಿಲ ತಂತ್ರಗಳ ಮೂಲಕ ಬಸವಣ್ಣನನ್ನು ಕಲ್ಯಾಣದಿಂದ ಉಚ್ಚಾಟಿಸಿದರು. ಕೂಡಲ ಸಂಗಮದಲ್ಲಿ ಬಸವಣ್ಣನ ಅಸಹಜ ಸಾವು ನಡೆಯಿತು. ಇತ್ತ ಕಲ್ಯಾಣದಲ್ಲಿ ರಕ್ತಪಾತವಾಗಿ ಮಹಾಮನೆ ಮಸಣವಾಗಿ ಅಳಿದುಳಿದ ಅವಶೇಷಗಳು ಮೂಲಭೂತವಾದಿಗಳ ತೆಕ್ಕೆಗೆ ಸಿಕ್ಕು ಜಾತೀಕರಣಗೊಂಡವು."[೫]

ಈ ಮಹಾಮಾನವರಿಬ್ಬರ ಜೀವನ ಹಾಗೂ ತತ್ವಗಳಲ್ಲಿ ಹೆಚ್ಚಿನ ಸಾಮ್ಯತೆ ಇದೆ. ಇವರಿಬ್ಬರೂ ಒಂದೇ ವರ್ಗದಲ್ಲಿ ನಡೆದವರು ಇಲ್ಲಿ ಕಾಲಾಂತರ ಮಾತ್ರ ಕಾಣಬಹುದು. ಬುದ್ಧ, ಬಸವ, ಅಂಬೇಡ್ಕರ್ ಈ ಮೂವರು ಮಹಾಮಾನವರು ಹಿಂದೂಧರ್ಮ ತ್ಯಜಿಸಿದರು. ಅಷ್ಟೇ

(ಳಳನೇ ಮಟಕ್ಕೆ)

ಮಾತಿನ ಹಂಗು



ರಹಮತ್ ತರೀಕೆರೆ

ಮನುಷ್ಯರು ಆಯುಧವಾಗುವುದು

ಪವರ್ ಪಾಲಿಟಿಕ್ಸಿನಲ್ಲಿ ಜೀವಂತ ಮನುಷ್ಯರು ಆಯುಧವಾಗಿ ಬಳಕೆಯಾಗುವ ಒಂದು ಪದ್ಧತಿ ಜಾರಿಯಲ್ಲಿದೆ. ಹಾಗೆಂದರೇನು? ಇದರ ವಿಶ್ಲೇಷಣೆಗೆ ಮುನ್ನ ಈಚಿನ ರಾಜಕೀಯದ ಕೆಲವು ಘಟನೆಗಳನ್ನು ಉಲ್ಲೇಖಿಸಬಹುದು.

೧. ಜೆಡಿಎಸ್‌ನವರು ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಬಾರದು ಎಂದು ನಿರ್ಧರಿಸುವಾಗ, ಇದ್ದಕ್ಕಿದ್ದಂತೆ ಮೇರಾಜುದ್ದೀನ್ ಪಟೇಲ್ ಎಂಬುವವರಿಗೆ ಜನತಾದಳದ ಅಧ್ಯಕ್ಷ ಸ್ಥಾನದಲ್ಲಿ ಸ್ಥಾಪಿಸಲಾಯಿತು. ದೆಹಲಿಯಲ್ಲಿ ದೇವೇಗೌಡರು ಪತ್ರಿಕಾಗೋಷ್ಠಿ ಮಾಡುವಾಗಲೂ ಆಗತಾನೇ ನಮಾಜು ಮುಗಿಸಿಬಂದಂತಹ ಒಬ್ಬ ಗಡ್ಡಧಾರಿ ಮುಸ್ಲಿಮರನ್ನು ತಮ್ಮ ಪಕ್ಕದಲ್ಲಿ ಕೂರಿಸಿಕೊಂಡಿದ್ದರು. "ಬಿಜೆಪಿಯವರು ಗುಜರಾತ್ ಪ್ರಯೋಗವನ್ನು ಕರ್ನಾಟಕದಲ್ಲಿ ಮಾಡುವ ಸಂಭವ ಇರುವುದರಿಂದ ಅವರಿಗೆ ಅಧಿಕಾರ ಹಸ್ತಾಂತರ ಮಾಡಲಾಗುತ್ತಿಲ್ಲ" ಎಂದು ಗೌಡರು ಮಾಡಿದ ಹೇಳಿಕೆಗೂ ಚಹರೆಯಿಲ್ಲದ ಈ ಮುಸ್ಲಿಂ ಪ್ರತಿನಿಧಿಗಳನ್ನು ಜತೆಗೆ ಕೂರಿಸಿಕೊಂಡಿರುವುದಕ್ಕೂ ಇರುವ ಸಂಬಂಧ ವಿವರಿಸಬೇಕಿಲ್ಲ. ಆದರೆ ಕರಾವಳಿಯಲ್ಲಿ ಮುಸ್ಲಿಮರನ್ನು ಬಡಿದು ಬೆತ್ತಲೆಗೊಳಿಸಿ ಫೋಟೋ ತೆಗೆಸಿ ಪತ್ರಿಕೆಗಳಿಗೆ ಸಂಘಪರಿವಾರದವರು ಕೊಡುವಾಗ; ಗುಜರಾತ್ ಪ್ರಯೋಗ ಮಾಡಲೆತ್ನಿಸಿದ ಎಲ್ಲ ಸಂಘಪರಿವಾರದವರ ಮೇಲಿನ ಕೇಸುಗಳನ್ನು ಹಿಂತೆಗೆಯುವಾಗ ಗೃಹಖಾತೆ ಜೆಡಿಎಸ್ ವಶದಲ್ಲೇ ಇತ್ತು. ತಮ್ಮ ವಯಸ್ಸಿನ ಪರಿವಿಲ್ಲದೆ ಗುಡಿಗಳನ್ನು ಸುತ್ತುವ ಗೌಡರು, ಕೋಮುವಾದಿಗಳ ಆಕ್ರಮಣಕ್ಕೆ ಒಳಗಾದ ಮುಸ್ಲಿಮರ ಸ್ವಾಂತನಕ್ಕೆ ಹೋಗಿರಲಿಲ್ಲ.

೨. ಬಳ್ಳಾರಿಯ ರಾಜಕೀಯವನ್ನು ತಮ್ಮ ಹತೋಟಿಯಲ್ಲಿ ಇರಿಸಿಕೊಂಡಿರುವ ರೆಡ್ಡಿ ಸೋದರರು ಆಂಧ್ರಮೂಲದವರು. ಅವರು ಇಲ್ಲಿ ಗಣಿ ಉದ್ಯಮದಲ್ಲಿ ಅಪಾರ ಸಂಪತ್ತನ್ನು ಗಳಿಸಿದರು. ಅವರ ಸಂಪತ್ತಿನ ರಕ್ಷಣೆಗೆ ರಾಜಕೀಯ ಬೆಂಬಲಬೇಕಿತ್ತು. ಸಂಪತ್ತನ್ನು ಚೆಲ್ಲಿ ಒಂದೇ ಕುಟುಂಬದಿಂದ ಒಬ್ಬರು ಶಾಸಕರು, ಒಬ್ಬರು ಸಂಸದರು, ಮತ್ತೊಬ್ಬರು ನಗರಸಭೆಯ ಅಧ್ಯಕ್ಷರೂ ಆದರು. ಆದರೆ ರಾಜಕೀಯ ಅಸ್ತಿತ್ವಕ್ಕೆ ಸ್ಥಳೀಯ ಜನಜಾತಿಗಳ ಆಸರೆಬೇಕಿತ್ತು. ಅದಕ್ಕಾಗಿ ಅವರು ಜಿಲ್ಲೆಯ ಪ್ರಭಾವಿ ಜನಾಂಗವಾದ ನಾಯಕರ (ವಾಲ್ಮೀಕಿ ಅಥವಾ ಬೇಡರ) ಪೈಕಿಯಾದ ಶ್ರೀರಾಮುಲು ಅವರನ್ನು ನಿಲ್ಲಿಸಿ ಗೆಲ್ಲಿಸಿ, ಮಂತ್ರಿ ಮಾಡಿದರು. ಗಣಿ ವ್ಯವಹಾರದಲ್ಲಿ ದೇವೇಗೌಡರ ಕುಟಂಬದ ಜತೆ ಘರ್ಷಣೆ ಶುರುವಾದಾಗ, ಅವರು ರಾಮುಲು ಅವರನ್ನು ಛೂಬಿಟ್ಟರು. ಅವರ ಕೈಲಿ ಮುಖ್ಯಮಂತ್ರಿ ಮೇಲೆ ಕೇಸುಹಾಕಿಸಿದರು. ಸಂಘರ್ಷ ವಿಷಮಿಸಿದಾಗ ರಾಮುಲು ಅವರನ್ನು ಹೆಲಿಕ್ಯಾಪ್ಟರ್‌ನಲ್ಲಿ ಕಳಿಸಿ ರಾಜಿನಾಮೆ ಕೊಡಿಸಿದರು.

೩. ಮೂಲತಃ ಬಲಿಷ್ಠ ಜಾತಿ ಮತ್ತು ವರ್ಗಗಳ ಆರ್ಥಿಕ ರಾಜಕೀಯ ಹಿತಾಸಕ್ತಿಗಳನ್ನೂ ಸಾಂಸ್ಕೃತಿಕ ಆಶಯಗಳನ್ನೂ ಪೂರೈಸುವ ಸಂಘಪರಿವಾರಕ್ಕೆ, ತನ್ನ ಸಾಮಾಜಿಕ ಬುನಾದಿಯ ವಿಸ್ತಾರಕ್ಕಾಗಿ ಬಹುಸಂಖ್ಯಾತ ಜಾತಿಗಳ ಬೆಂಬಲ ಬೇಕು. ಅದಕ್ಕಾಗಿ ಅದು ಬ್ರಾಹ್ಮಣ ಅನಂತಕುಮಾರರನ್ನು ಹಿಂದಿಟ್ಟು –ಬಸವಣ್ಣನ ತತ್ವಚಿಂತನೆ ತನಗೆ ವಿರುದ್ಧವಾಗಿದ್ದರೂ–ಬಲಿಷ್ಠ ಕೋಮಿನ ಯಡಿಯೂರಪ್ಪನವರನ್ನು ಮುಂದಿಟ್ಟಿತು. ಯಡಿಯೂರಪ್ಪ ಕಷ್ಟಪಟ್ಟು ತಾವೂ ಬೆಳೆದು, ಪಕ್ಷವನ್ನೂ ಬೆಳೆಸಿದರು. ಅವರಿಗೆ ಅಧಿಕಾರ ಸಿಗುವ ಹೊತ್ತಿನಲ್ಲಿ ಸಿಗದಂತೆ ಮಾಡುವಲ್ಲಿ ಸಂಘಪರಿವಾರದವರ ಕೈವಾಡವೂ ಇದೆಯೆಂಬ ವರದಿಗಳಿವೆ. ಉಮಾಭಾರತಿಯನ್ನು ಕೂಡ ಹೀಗೆ ವಂಚಿಸಲಾಯಿತು ಎನ್ನಲಾಗುತ್ತದೆ. ಮುಸ್ಲಿಮರನ್ನು ಕಾಂಗ್ರೆಸ್ಸು ಒಂದು ಮತಬ್ಯಾಂಕಾಗಿ ಮಾತ್ರ ನೋಡುತ್ತ ಬಂದಿದೆ ಎಂದು ಹೇಳುವ ಪಕ್ಷವು ಮಾಡಿದ್ದು ಇದೇ ತಾನೇ?

೪. ಒಂದೇ ಸಮುದಾಯದಲ್ಲಿಯೂ ಅದರ ನಾಯಕ ವರ್ಗವು ತನ್ನದೇ ಜನರನ್ನು ಆಯುಧವಾಗಿ ಬಳಸುವುದುಂಟು. ಬೆಂಗಳೂರಿನ ಶಿವಾಜಿನಗರದಲ್ಲಿ ನಡೆದ ಸದ್ದಾಂ ಕೊಂದದ್ದರ ವಿರುದ್ಧ ಮಾಡಲಾದ ಪ್ರತಿಭಟನ ಕಾರ್ಯಕ್ರಮವನ್ನು ಗಮನಿಸಿ. ಅಲ್ಲಿ ಅಮಾಯಕ ಮುಸ್ಲಿಮರು ಸತ್ತರು. ಈ ಕಾರ್ಯಕ್ರಮವು ಇಲ್ಲಿನ ಚಲಾವಣೆ ಕಳೆದುಕೊಂಡ ಮುಸ್ಲಿಂ ರಾಜಕಾರಣಿಗಳು ಹೈಕಮಾಂಡಿಗೆ ತಮ್ಮ ಅಸ್ತಿತ್ವ ಸಾಬೀತು ಪಡಿಸುವ ತಾಲೀಮಿನ ಭಾಗವಾಗಿತ್ತು. ಹಿಂದೆ ಪೈಗಂಬರ್ ವಿರುದ್ಧ ಕತೆಪ್ರಕಟವಾದಾಗ ಎದ್ದ ದಂಗೆಗಳಲ್ಲೂ ಇದೇ ರಾಜಕಾರಣಿಗಳಿದ್ದರು. ಬಡಪಾಯಿ ಮುಸ್ಲಿಮರು ಪ್ರಾಣ ಕಳೆದುಕೊಂಡರು. ತನ್ನ ಹಗೆಗಳಾದ ಅಲ್‌ಖಾಯದದವರನ್ನು ಹಿಡಿಯಲು ಅಮೆರಿಕವು ಪಾಕಿಸ್ತಾನದ ಮಿಲಿಟರಿ ಸರ್ಕಾರವನ್ನು ಒಂದು ಆಯುಧದಂತೆ ಬಳಸುತ್ತಿರುವುದು; ಬಂಡವಾಳಶಾಹಿಗಳು ಹಾಗೂ ಕೋಮುವಾದಿಗಳು ತಮ್ಮ ಉದ್ದೇಶಕ್ಕೆ ಡೆಮಾಕ್ರಸಿಯನ್ನು ಒಂದು ಉಪಕರಣದಂತೆ ಬಳಸುತ್ತಿರುವುದು; ಅಮೆರಿಕ ಮುಂತಾದ ಮಿಲಿಟರಿ ದೇಶಗಳು ವಿಶ್ವಸಂಸ್ಥೆಯನ್ನು ತಮಗೆ ಬೇಡವಾದ ದೇಶಗಳನ್ನು ಶಿಕ್ಷಿಸಲು ಉಪಕರಣದಂತೆ ಬಳಸುತ್ತಿರುವುದು; ತಮ್ಮ ಶಸ್ತ್ರಮಾರಾಟಕ್ಕೆ ದೇಶದೇಶಗಳನ್ನೇ ಮಾರುಕಟ್ಟೆಯನ್ನಾಗಿ ಮಾಡಿಕೊಳ್ಳುವುದು – ಇವೆಲ್ಲ ನಮ್ಮ ಕಣ್ಮುಂದೆ ನಡೆಯುತ್ತಿವೆ. ಹೀಗೆಯೇ ನಿದರ್ಶನಗಳನ್ನು ಕೊಡುತ್ತಾ ಹೋಗಬಹುದು. ಒಂದು ಜಾತಿ ಅಥವಾ ಧಾರ್ಮಿಕ ಸಮುದಾಯವನ್ನು, ಒಂದು ಧರ್ಮ, ದೇಶ ಅಥವಾ ಸಂಸ್ಥೆಯನ್ನು ಆಳುವ ವರ್ಗಗಳು ತಮ್ಮ ಹಿತಾಸಕ್ತಿಗಾಗಿ ಒಂದು ಆಯುಧವಾಗಿ ಉಪಕರಣವಾಗಿ ಬಳಸುವುದು ನಡೆದುಬಂದಿದೆ.

ರಾಜಪ್ರಭುತ್ವ ಅಥವಾ ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಜನ ಆಯುಧವಾಗುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಪ್ರಜೆಗಳೇ ಪ್ರಭುಗಳಾಗಿರಬೇಕಾದ ರಾಜಕೀಯ ವ್ಯವಸ್ಥೆಯಲ್ಲಿ, ರಾಜಕೀಯ ವ್ಯವಸ್ಥೆಯನ್ನು ತಮ್ಮ ಅಭಿವೃದ್ಧಿಯ ಉಪಕರಣ ಮಾಡಿಕೊಳ್ಳಬೇಕಾದ ಜಾಗದಲ್ಲಿ, ಜನರು ತಾವೇ ಒಂದು ಉಪಕರಣದಂತೆ ಬಳಕೆಯಾಗುವುದು ಒಂದು ವೈರುಧ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹಿಡಿಯಲು ಸಂಖ್ಯಾಬಲವು ನಿರ್ಣಾಯಕ. ಈ ಬಲ ದೊರಕಿಸಿಕೊಡಬಲ್ಲ ಜಾತಿ ಧರ್ಮಗಳನ್ನು ಸಹಜವಾಗಿ ಆಯುಧವೊ ಉಪಕರಣವೋ ಆಗುತ್ತವೆ. ಜಾಣ್ಮೆ ಯುದ್ಧತಂತ್ರ ಯೋಜನೆ ಇರುವ ಅಲ್ಪಸಂಖ್ಯಾತ ಅಧಿಕಾರಸ್ಥರು ದೊಡ್ಡಸಂಖ್ಯೆಯಲ್ಲಿರುವ ವೈಚಾರಿಕ ಪ್ರಜ್ಞೆಯಿರದ ಸಮುದಾಯಗಳನ್ನು ಹೀಗೆ ಚರಿತ್ರೆಯಲ್ಲಿ ಬಳಸಿಕೊಳ್ಳುತ್ತಲೇ ಬಂದಿದ್ದಾರೆ.

ಆಯುಧದ ಸ್ವರೂಪವೇ ಹೀಗೆ. ಅದಕ್ಕೆ ಅಪಾರ ಶಕ್ತಿಯಿದೆ.

ರಾಜಪ್ರಭುತ್ವ ಅಥವಾ ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಜನ ಆಯುಧವಾಗುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಪ್ರಜೆಗಳೇ ಪ್ರಭುಗಳಾಗಿರಬೇಕಾದ ರಾಜಕೀಯ ವ್ಯವಸ್ಥೆಯಲ್ಲಿ, ರಾಜಕೀಯ ವ್ಯವಸ್ಥೆಯನ್ನು ತಮ್ಮ ಅಭಿವೃದ್ಧಿಯ ಉಪಕರಣ ಮಾಡಿಕೊಳ್ಳಬೇಕಾದ ಜಾಗದಲ್ಲಿ, ಜನರು ತಾವೇ ಒಂದು ಉಪಕರಣದಂತೆ ಬಳಕೆಯಾಗುವುದು ಒಂದು ವೈರುಧ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹಿಡಿಯಲು ಸಂಖ್ಯಾಬಲವು ನಿರ್ಣಾಯಕ. ಈ ಬಲ ದೊರಕಿಸಿಕೊಡಬಲ್ಲ ಜಾತಿ ಧರ್ಮಗಳನ್ನು ಸಹಜವಾಗಿ ಆಯುಧವೊ ಉಪಕರಣವೋ ಆಗುತ್ತವೆ. ಜಾಣ್ಮೆ ಯುದ್ಧತಂತ್ರ ಯೋಜನೆ ಇರುವ ಅಲ್ಪ ಸಂಖ್ಯಾತ ಅಧಿಕಾರಸ್ಥರು ದೊಡ್ಡಸಂಖ್ಯೆಯಲ್ಲಿರುವ ವೈಚಾರಿಕ ಪ್ರಜ್ಞೆಯಿರದ ಸಮುದಾಯಗಳನ್ನು ಹೀಗೆ ಚರಿತ್ರೆಯಲ್ಲಿ ಬಳಸಿಕೊಳ್ಳುತ್ತಲೇ ಬಂದಿದ್ದಾರೆ.

ಆದರೆ ಸ್ವಾತಂತ್ರ್ಯವಿಲ್ಲ. ಶಕ್ತಿ ಮತ್ತು ಸ್ವಾತಂತ್ರ್ಯಗಳು ಜತೆಗೆ ಹೋಗದ ವಿಚಿತ್ರವಿದು. ಅದು ತನ್ನ ಹಿಡಿದವರಿಗೆ ದೊಡ್ಡ ಶಕ್ತಿಯನ್ನು ಧೈರ್ಯವನ್ನು ಸಾಹಸವನ್ನು ಧಾರೆಯೆರೆಯ ಬಲ್ಲದು. ಆದರೆ ಸ್ವತಃ ಚಿಂತನೆ ಮಾಡುವುದು, ತೀರ್ಮಾನ ಮಾಡುವುದು ಮತ್ತು ಕ್ರಿಯಾಶೀಲವಾಗುವುದು ಅದಕ್ಕೆ ಸಾಧ್ಯವಿಲ್ಲ. ಆಯುಧಗಳ ಕೆಲಸವೇ ತನ್ನನ್ನು ಧಾರಣ ಮಾಡಿದವರ ಇಷ್ಟಾನಿಷ್ಟ ಪೂರೈಸುವುದು. ಆಯುಧಗಳು ಅದನ್ನು ಮನುಷ್ಯರ ತಲೆ ಕಡಿಯಲು ಬಳಸಬಹುದು. ಗಿಡದ ಟೊಂಗೆಯನ್ನು ಕಡಿಯಲು ಮುಳ್ಳುಗಿಡವನ್ನು ತೆಗೆಯಲು ಬಳಸಬಹುದು. ಆಯುಧ ಹಳತಾದರೆ ಬದಲಿಸಬಹುದು. ಕೆಲಸವಿಲ್ಲದಾಗ ಒರೆಯಲ್ಲಿಡಬಹುದು. ಸವೆದರೆ ಕುಲುಮೆಯಲ್ಲಿ ಮುರಿಸಿ ಕುಳವನ್ನೊ ಕುಡುಗೋಲನ್ನೋ ಮಾಡಬಹುದು. ಇದೇ ತರಹ ಉಪಕರಣ. ಅದು ತನ್ನನ್ನು ಬಳಸುವವರ ಉದ್ದೇಶವನ್ನು ಈಡೇರಿಸುತ್ತದೆ. ಬಳಿಕ ತನ್ನ ಅಗತ್ಯ ಬೀಳುವ ತನಕ ಉಪಕರಣಗಳ ಪೆಟ್ಟಿಗೆಯಲ್ಲಿ ಇಡಲ್ಪಡುತ್ತದೆ. ತೆಪ್ಪ ಕೂಡ ಹೀಗೇ. ಅದಕ್ಕೆ ಚಲನೆಯಿದೆ. ದಿಸೆಯಿಲ್ಲ. ದಿಸೆಯನ್ನು ಹುಟ್ಟುಹಾಕುವವರೇ ಕೊಡಬೇಕು. ಅದರ ಮೇಲೆ ಕುಳಿತು ದಡ ದಾಟುವವರು ಬಳಿಕ ಅದನ್ನು ನೆನೆಯಬೇಕೆಂಬ ನಿಯಮವಿಲ್ಲ. ತನ್ನನ್ನು ಬಳಸುವವರು ಇಲ್ಲದಾಗ ತೀರದಲ್ಲಿ ಅದು ಸುಮ್ಮನೆ ನಿಂತು ಕಾಯುತ್ತಿರಬೇಕು.

ಬಹುಶಃ ಎಲ್ಲ ವಾಹನಗಳ ಪಾಡುಕೂಡ ಇದುವೇ. ತನ್ನೊಳಗೆ ಅಪಾರ ಬಲವಿದ್ದರೂ ತನ್ನತಾನರಿವ ಪ್ರಜ್ಞೆಯಿಲ್ಲದೆ ಮತ್ತೊಬ್ಬರ ಆಯುಧವಾಗುವ ದೊಡ್ಡ ವಾಹನ ರೂಪಕವೆಂದರೆ ಸಾಕಾನೆ. ಅದರ ದೈಹಿಕ ಬಲಕ್ಕಿಂತ ಅದನ್ನು ಬಳಸುವ ಮನುಷ್ಯರ ಬುದ್ಧಿಬಲ ದೊಡ್ಡದು. ಎಂತಲೇ ಅದು ತನಗಿಂತ ದುರ್ಬಲರಾದ ಮನುಷ್ಯರು ಹೇಳಿದ ಕೆಲಸ ಮಾಡುತ್ತದೆ. ಹೆಚ್ಚೆಂದರೆ ಮದಬಂದಾಗ ಅದು ಮಾವುತನನ್ನೊ ತನ್ನ ಬಳಿಬಂದವರನ್ನೊ ಸೊಂಡಿಲಲ್ಲಿ ಎತ್ತಿಹಾಕುವ ಬಂಡುಕೋರತನ ತೋರಬಹುದು. ಉಳಿದಂತೆ ಅದು ಬಂಧನದಲ್ಲಿ ಬದುಕುತ್ತದೆ. ದೇವಳಗಳ ಆನೆಗಳಂತೂ ಚಿಲ್ಲರೆ ಕಾಸನ್ನು ತಮ್ಮ ದಪ್ಪ ಸೊಂಡಿಲಲ್ಲಿ ಹೇಗೋ ನೆಲದಿಂದ ಎತ್ತಿ ಮಾವುತನಿಗೆ ಕೊಡುವಲ್ಲಿ ಕುಶಲತೆಯನ್ನು ಪಡೆದಿವೆ. ರಾಜಕೀಯದಲ್ಲಿ ಆಯುಧ ಗುರಾಣಿಗಳಾಗಿ ಬಳಕೆಯಾಗುವ ಜನ ಸಮುದಾಯಗಳ ಪಾಡು ಇದಕ್ಕಿಂತ ಬೇರೆಯಲ್ಲ.

ಬಳ್ಳಾರಿ ಕೊಪ್ಪಳ ಗದಗ ಗುಲಬರ್ಗ ರಾಯಚೂರು ಚಿತ್ರದುರ್ಗ ಈ ಭಾಗದಲ್ಲಿ ನಾಯಕ ಜನಾಂಗದವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹಿಂದೆ ಚರಿತ್ರೆಯಲ್ಲಿ ಅವರು ಇಲ್ಲಿದ್ದ ವಿಜಯನಗರವೇ ಮುಂತಾದ ರಾಜಪ್ರಭುತ್ವಗಳಲ್ಲಿ ಸೈನಿಕಸೇವೆ ಸಲ್ಲಿಸಿದವರು. ಬೇಡರನ್ನು ಹೊರತುಪಡಿಸಿ ಮಧ್ಯಯುಗದ ಸಾಮ್ರಾಜ್ಯಗಳನ್ನು ಕಲ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಬೇಡರಪಡೆಯನ್ನು ಬಳಸಿ ವಿಜಯನಗರದವರು ದೂರದ ರಾಜ್ಯಗಳನ್ನು ಸೋಲಿಸಿ ಚಕ್ರಾಧಿಪತ್ಯ ಕಟ್ಟಿದರು. ಅಪಾರ ಸಂಪತ್ತನ್ನು ರಾಶಿಹಾಕಿದರು. ಮುತ್ತು ರತ್ನಗಳನ್ನು ಬಳ್ಳದಿಂದ ಅಳೆದುಮಾರಿದರು. ಈ ಸಾಮ್ರಾಜ್ಯಗಳು ಅಳಿದ ಬಳಿಕ ಈ ಜನ ಹೇಗೆ ತಮ್ಮ ವೃತ್ತಿಗಳನ್ನು ಹುಡುಕಿಕೊಂಡರೊ ತಿಳಿಯದು. ಬಹುಶಃ ಪಶುಪಾಲನೆ ಮತ್ತು ರೈತಾಪಿ ಕೆಲಸ ಮಾಡಿಕೊಂಡು ಉಳಿದರು. ಈಗಲೂ ಅವರ ಸ್ಥಿತಿ ಬಹಳ ಉತ್ತಮವಾಗೇನಿಲ್ಲ.

ಅದು ಗಂಡಸರನ್ನು ಸೈನಿಕರನ್ನಾಗಿ ಮಾತ್ರ ಬಳಸಿಲ್ಲ. ಅವರ ಮಹಿಳೆಯರನ್ನು ವಸ್ತುವನ್ನಾಗಿಯೂ ಬಳಸಿದೆ. ಹಂಪಿ ಭಾಗದಲ್ಲಿ ವ್ಯಾಪಕವಾಗಿರುವ ದೇವದಾಸಿ ಪದ್ಧತಿಯನ್ನು ಗಮನಿಸಿದರೆ, ಅದು ಚಾರಿತ್ರಿಕ ಪಳೆಯುಳಿಕೆಯಂತೆ ತೋರುತ್ತದೆ. ಅಪಾರ ಸಂಖ್ಯೆಯ ಸೈನಿಕರು ಯುದ್ಧಗಳಲ್ಲಿ ಮಡಿಯುವ ಕಾಲಘಟ್ಟದಲ್ಲಿಯೇ ಬಹುಶಃ ದೇವದಾಸಿ ಪದ್ಧತಿಯಂತಹವು ಹುಟ್ಟಿಕೊಂಡಿರಬೇಕು. ಕೆಲವು ತಿಂಗಳ ಹಿಂದೆ ಈ ಭಾಗದ ದೇವದಾಸಿಯವರು ತಮಗೆ ಸರ್ಕಾರ ಪುನರ್‌ವಸತಿ ಸೌಲಭ್ಯ ಒದಗಿಸಬೇಕೆಂದು ಧರಣಿ ಮಾಡಿದರು. ಬಳ್ಳಾರಿ ರಾಯಚೂರು ಚಿತ್ರದುರ್ಗ ಕೊಪ್ಪಳ ಜಿಲ್ಲೆಗಳಲ್ಲಿ ಸಾವಿರಾರು ಪಟ್ಟಣ ಹಳ್ಳಿಗಳಲ್ಲಿ ಧರಣಿ ಕಾರ್ಯಕ್ರಮ ನಡೆದವು. ಈ ಧರಣಿಯ ಫೋಟೊಗಳು ಒಂದು ವಾರಕಾಲ ಪತ್ರಿಕೆಗಳಲ್ಲಿ ಬಂದವು. ಪ್ರತಿಧರಣಿಯಲ್ಲೂ ನೂರಾರು ಮಹಿಳೆಯರು. ಅವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆಂದು ಊಹೆಕೂಡ ನನಗಿರಲಿಲ್ಲ. ಪತ್ರಿಕಾ ವರದಿಗಳನ್ನು ನಂಬುವುದಾದರೆ, ಈ ಭಾಗದಲ್ಲಿ ಲಕ್ಷಾಂತರ ಜನ ದೇವದಾಸಿಯರು ಇದ್ದಾರೆ. ಅವರಲ್ಲಿ ಶೇಕಡ ೮೦ರಷ್ಟು ಮಹಿಳೆಯರು ದಲಿತರು ಮತ್ತು ನಾಯಕರು. ಈ ಸಮುದಾಯಗಳ ಮಹಿಳೆಯರನ್ನು ಇಷ್ಟುದೊಡ್ಡ ಪ್ರಮಾಣದಲ್ಲಿ ಈ ವೃತ್ತಿಯಲ್ಲಿ ತೊಡಗಿಸಿರುವವರು ಯಾರು? ಮಹಿಳೆಯನ್ನು ಒಂದು ಆಯುಧವಾಗಿ ಬಳಸುವ ವ್ಯವಸ್ಥೆ ತಾನೇ? ರಾಮ ತನ್ನ ರಾಜ್ಯಭ್ರಷ್ಟನಾಗಿ ಕಾಡಲ್ಲಿ ಅಲೆಯುತ್ತ ಇರುವಾಗ ಅವನ ಮಡದಿಯ ಅಪಹರಣವಾಗುತ್ತದೆ.

ತನ್ನ ಎದುರಾಳಿ ರಾವಣನನ್ನು ಸೋಲಿಸಲು ಅವನಿಗೆ ದೊಡ್ಡ ಸಂಖ್ಯೆಯಲ್ಲಿರುವ ಒಂದು ಜನಾಂಗದ ನೆರವು ಬೇಕು. ಅದನ್ನು ಅವನು ವಾನರರನ್ನು (ವಿದ್ವಾಂಸರು ಊಹಿಸಿರುವಂತೆ ಕೋತಿಯನ್ನು ಕುಲಚಿಹ್ನೆಯಾಗಿರುವ ಸಮುದಾಯವನ್ನು) ಹಿಡಿಯುತ್ತಾನೆ. ಅವರಲ್ಲಿದ್ದ ಒಳಸಂಘರ್ಷವನ್ನು ಬಳಸಿಕೊಂಡು ಅಣ್ಣತಮ್ಮಂದಿರ ನಡುವೆ ಕದನಮಾಡಿಸಿ, ಅಣ್ಣನನ್ನು ಕೊಂದು ತಮ್ಮನಿಗೆ ಪಟ್ಟಕಟ್ಟಿ, ಅವನ ಮೂಲಕ ಇಡೀ ಸಮುದಾಯವನ್ನು ಆಯುಧವನ್ನಾಗಿ ಮಾಡಿಕೊಳ್ಳುತ್ತಾನೆ. ರಾಮಾಯಣದ ಯುದ್ಧಮುಗಿದ ಬಳಿಕ ರಾಮನ ಕೆಲಸ ಮುಗಿಯಿತು. ಬಳಿಕ ವಾನರ ಸೈನ್ಯದ ಪಾಡೇನು? ಬಹುಶಃ ಅದರ ಪಾಲಿಗೆ ಸಿಕ್ಕಿದ್ದು ರಾಮನಾಮ ಜಪಿಸುವ ಕೆಲಸ. ಆಳುವ ವರ್ಗಗಳು ಜನರನ್ನು ಬಳಸಿಕೊಳ್ಳುವ ಈ ಮಾದರಿ ರಾಮಾಯಣಕ್ಕೆ ನಿಂತಿಲ್ಲ. ಇದೇ ರಾಮನ ಮಾದರಿಯಲ್ಲಿ ಸಂಘಪರಿವಾರವು ಕೆಳಜಾತಿಯ ತರುಣರೇ ಇರುವ ಸೈನ್ಯವನ್ನು ಬೀದಿಕಾಳಗಕ್ಕಾಗಿ ಕಟ್ಟಿತು. ಅದುವೇ ಭಜರಂಗದಳ. ಭಜರಂಗದಳ ಎಂದರೆ ವಾನರಸೇನೆ ಎಂದು ಅರ್ಥ. ಅದರ ಮೊದಲ ಅಧ್ಯಕ್ಷ ವಿನಯ ಕಟಿಯಾರ್ ಕೆಳಜಾತಿಗೆ ಸೇರಿದವರು ಎಂಬುದು ಗಮನಾರ್ಹ. ಕರ್ನಾಟಕದಲ್ಲೂ ಅದರ ನಾಯಕ ಭಿಲ್ಲವ ಜಾತಿಗೆ ಸೇರಿದವರು. ಭಾರತದ ಕೆಳ ಮತ್ತು ಹಿಂದುಳಿದ ಜಾತಿಯ ತರುಣರು ಈಗ ಈ ಸೇನೆಯಲ್ಲಿ ಸೇರಿ ತಮ್ಮಂತೆ ಬಡ ಮತ್ತು ಕೆಳ ವರ್ಗದ ವಿರುದ್ಧ ಕಾಳಗ ಮಾಡುತ್ತಿದ್ದಾರೆ.

ಚರಿತ್ರೆಯ ಉದ್ದಕ್ಕೂ ಸಮುದಾಯಗಳು ಬೇರೆ ಬೇರೆ ರಾಜಕೀಯ ಪ್ರಭುತ್ವಗಳ ಆಯುಧವಾಗುತ್ತ ಬಂದಿವೆ. ಅದರಲ್ಲೂ ಸ್ವತಃ ಆಯುಧಗಳನ್ನು ಬಳಸುವ ಬೇಡರು ತಾವೇ ಜೀವಂತ ಆಯುಧವಾಗಿ ಬದಲಾಗುವುದು ಒಂದು ವ್ಯಂಗ್ಯ. ಅವರನ್ನು ಆಯುಧವಾಗಿಸಿದ ಬಳಿಕ ಅವರಲ್ಲಿ ನಿಷ್ಠೆ ತುಂಬಬೇಕು. ಅದಕ್ಕಾಗಿ ಒಬ್ಬ ಅಧಿಕಾರಸ್ಥ ವ್ಯಕ್ತಿಗೆ ಅಡಿಯಾಳಾಗಿರುವ ವಿಧೇಯತೆಯನ್ನೂ ತುಂಬಬೇಕು. ಚರಿತ್ರೆಯಲ್ಲಿ ರಾಮ ಹೀಗೆ ವಿಧೇಯತೆಯನ್ನು ಒಪ್ಪಿಸಿಕೊಳ್ಳುವ ಸಂಕೇತವಾದರೆ, ಆಧುನಿಕ ರಾಜಕಾರಣದಲ್ಲಿ ಬೇರೆಬೇರೆ ಅಧಿಕಾರಸ್ಥರು ಸಂಕೇತಗಳಾಗುತ್ತಾರೆ. ಈ ವಿಧೇಯತೆಯು ಮನುಷ್ಯರನ್ನು ಆಯುಧವಾಗಿಸುವ ಭೂಗತಲೋಕದಲ್ಲಿ ತೀವ್ರವಾಗಿರುತ್ತದೆ,

(ಉಳಿದದ್ದು ಮುಂದಿನ ಪುಟಕ್ಕೆ)



ರಾಮ ಸೇತು-ಕೋಮುವಾದದ ಮತ್ತೊಂದು ಆಯಾಮ

ಬಂಗಾಳ ಕೊಲ್ಲಿಯ ಆಗ್ನೇಯ ದಿಕ್ಕಿನ ಸಮುದ್ರ ತಟದ ಮೇಲ್ಪದರದಲ್ಲಿ ೧೬೭ ಕಿಲೋ ಮೀಟರ್ ಉದ್ದದ, ೩೦೦ ಮೀಟರ್ ಅಗಲವಿರುವ ೧೨ ಮೀಟರ್ ಆಳದ ಕಾಲುವೆಯನ್ನು ನಿರ್ಮಿಸಿ ಹತ್ತರಿಂದ ಹನ್ನೆರಡು ಟನ್ ಭಾರ ಹೊರುವ ಹಡಗುಗಳ ಚಲನೆಗೆ ದಾರಿ ಮಾಡಿಕೊಡುವುದು ಈ ಯೋಜನೆಯ ಮೂಲ ಉದ್ದೇಶ. ಇದಕ್ಕೆ ರಾಮ ಸೇತು ಅಥವಾ ಅಡಮ್ಸ್ ಬ್ರಿಡ್ಜ್ ಎಂದು ಹೇಳಲಾಗುವ ಮಣ್ಣಿನ ಸೇತುವೆಯಲ್ಲಿ ಹೂಳೆತ್ತುವುದು ಅವಶ್ಯವಾಗುತ್ತದೆ. ರಾಮೇಶ್ವರದ ದಕ್ಷಿಣ ತುದಿಯಿಂದ ಶ್ರೀಲಂಕಾ ವಾಯುವ್ಯ ದಿಕ್ಕಿನಲ್ಲಿರುವ ತಲ್ಮೈಮನ್ನಾರ್ ಪ್ರದೇಶದ ನಡುವೆ ಇರುವ ೩೦ ಕಿಲೋಮೀಟರ್ ಉದ್ದದ ರಾಮ ಸೇತು ಪಾಕ್ ಬೇ ಮತ್ತು ಮನ್ನರ್ ಕೊಲ್ಲಿಗಳ ನಡುವೆ ಇದೆ. ಈ ಮಾರ್ಗದಲ್ಲಿ ಹಡಗುಗಳು ಚಲಿಸಲು ಸಾಧ್ಯವಿಲ್ಲವಾದ್ದರಿಂದ ಭಾರತದ ಪಶ್ಚಿಮ ಕರಾವಳಿಯಿಂದ ಪೂರ್ವ ಕರಾವಳಿಗೆ ೪೦೦ ಕಿ.ಮೀ. ಹೆಚ್ಚುವರಿ ಹಾದಿಯನ್ನು ಕ್ರಮಿಸಬೇಕಾಗುತ್ತದೆ.

ನಾಡಿ ಬಂಗಾರಪೇಟೆ

ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿರುವ ಸುದ್ದಿಗಳನ್ನು ನೋಡಿದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸಮ್ಮಿಶ್ರ ಸರ್ಕಾರಗಳನ್ನು, ಎಡ ಪಕ್ಷಗಳು ನಿಯಂತ್ರಿಸುತ್ತಿವೆ ಎಂದೆನಿಸುತ್ತದೆ. ಭಾರತ ಅಮೆರಿಕಾ ೧೨೩ ಒಪ್ಪಂದದ ಹಿನ್ನೆಲೆಯಲ್ಲಿನ ಬೆಳವಣಿಗೆಗಳು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತವೆ. ಆದರೆ ಕೇಂದ್ರ ಸಮ್ಮಿಶ್ರ ಸರ್ಕಾರವನ್ನು ಸಮರ್ಥವಾಗಿ ನಿಯಂತ್ರಿಸುತ್ತಿರುವುದು ಹಿಂದೂ ಪರ ಸಂಘಟನೆಗಳಾದ ವಿಶ್ವ ಹಿಂದು ಪರಿಷತ್ (ವಿಹಿಂಪ) ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.) ಎಂಬ ಅಂಶವನ್ನು ಮಾಧ್ಯಮಗಳು ಗಮನಿಸುತ್ತಿಲ್ಲವೆಂದೇ ಹೇಳಬಹುದು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಪ್ರಧಾನಿಯಾಗುವುದನ್ನು ತಪ್ಪಿಸಿದ್ದು, ಯು.ಪಿ.ಎ ಸರ್ಕಾರದ ಭಯೋತ್ಪಾದನಾ ವಿರೋಧಿ ನೀತಿಗಳಿಗೆ ಇಸ್ಲಾಂ ವಿರೋಧೀ ಮಾರ್ಗವನ್ನು ಸೂಚಿಸುತ್ತಿರುವುದು, ಸಾಚಾರ್ ಸಮಿತಿ ವರದಿಯ ಅನುಷ್ಠಾನಕ್ಕೆ ಅಡ್ಡಿಮಾಡುತ್ತಿರುವುದು, ಮುಂಬೈ ಗಲಭೆಗಳನ್ನು ಕುರಿತ ಶ್ರೀ ಕೃಷ್ಣ ಸಮಿತಿ ವರದಿಯ ಪ್ರಕಾರ ಕ್ರಮ ಕೈಗೊಳ್ಳದಂತೆ ತಡೆ ಹಿಡಿದಿರುವುದು ಈ ಎಲ್ಲಾ ಬೆಳವಣಿಗೆಗಳ ಹಿಂದೆ ಈ ಎರಡು ಹಿಂದೂ ಮೂಲಭೂತವಾದಿ ಸಂಘಟನೆಗಳ ಪ್ರತ್ಯೇಕ ಮತ್ತು ಪರೋಕ್ಷ ಕೈವಾಡವಿರುವುದು ಸ್ಪಷ್ಟವಾಗಿದೆ.

ರಾಮಸೇತು ವಿವಾದದಲ್ಲೂ ಸಹ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ವಿಹಿಂಪದ ಕೆಲವು ಗೂಂಡಾಗಳಿಗೆ ಹೆದರಿ ಪುರಾತತ್ವ ಇಲಾಖೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮುಚ್ಚಳಿಕೆ ಪತ್ರವನ್ನು ಹಿಂದೆಗೆದುಕೊಂಡಿದೆ. ಹಿಂದೂಗಳ ಮನ ನೋಯಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಹೇಳುವ ಮೂಲಕ, ಸೇತು ಸಮುದ್ರಂ ಯೋಜನೆಯಿಂದ ಇಡೀ ಹಿಂದೂಗಳ ಭಾವನೆಗೆ ಧಕ್ಕೆಯಾಗಿದೆ ಎಂಬ ಆರ್.ಎಸ್.ಎಸ್. ವಾದವನ್ನೇ ಕಾಂಗ್ರೆಸ್ ಸರ್ಕಾರ ಪುಷ್ಟೀಕರಿಸುವುದು ಸ್ಪಷ್ಟವಾಗಿದೆ. ತನ್ನ ರಾಜಕೀಯ ಕೈಂಕರ್ಯಗಳಿಗೆ ಹಿಂದೂ ಸಮುದಾಯದ ಭಾವನೆಗಳನ್ನೇ ದಾಳಗಳನ್ನಾಗಿ ಉಪಯೋಗಿಸುವ ಹಿಂದೂ ಸಂಘಟನೆಗಳಿಗೆ ಮತ್ತು ಭಾ.ಜ.ಪಕ್ಕೆ ಅಯೋಧ್ಯೆಯ ನಂತರ ರಾಮಸೇತು ಪುನರ್ಜನ್ಮ ನೀಡಿದೆ.

ಸೇತು ಸಮುದ್ರಂ ಯೋಜನೆ ಮತ್ತು ರಾಮಸೇತು

ಬಂಗಾಳ ಕೊಲ್ಲಿಯ ಆಗ್ನೇಯ ದಿಕ್ಕಿನ ಸಮುದ್ರ ತಟದ ಮೇಲ್ಪದರದಲ್ಲಿ ೧೬೭ ಕಿಲೋ ಮೀಟರ್ ಉದ್ದದ, ೩೦೦ ಮೀಟರ್ ಅಗಲವಿರುವ ೧೨ ಮೀಟರ್ ಆಳದ ಕಾಲುವೆಯನ್ನು ನಿರ್ಮಿಸಿ ಹತ್ತರಿಂದ ಹನ್ನೆರಡು ಟನ್ ಭಾರ ಹೊರುವ ಹಡಗುಗಳ ಚಲನೆಗೆ ದಾರಿ ಮಾಡಿಕೊಡುವುದು ಈ ಯೋಜನೆಯ ಮೂಲ ಉದ್ದೇಶ. ಇದಕ್ಕೆ ರಾಮ ಸೇತು ಅಥವಾ ಅಡಮ್ಸ್ ಬ್ರಿಡ್ಜ್ ಎಂದು ಹೇಳಲಾಗುವ ಮಣ್ಣಿನ ಸೇತುವೆಯಲ್ಲಿ ಹೂಳೆತುವುದು ಅವಶ್ಯವಾಗುತ್ತದೆ.

ರಾಮೇಶ್ವರದ ದಕ್ಷಿಣ ತುದಿಯಿಂದ ಶ್ರೀಲಂಕಾದ ವಾಯುವ್ಯ ದಿಕ್ಕಿನಲ್ಲಿರುವ ತಲೈಮನ್ನಾರ್ ಪ್ರದೇಶದ ನಡುವೆ ಇರುವ ೩೦ ಕಿಲೋ ಮೀಟರ್ ಉದ್ದದ ರಾಮ ಸೇತು ಒಂದು ಮಣ್ಣಿನ ದಿಬ್ಬವಾಗಿದ್ದು ಪಾಕ್ ಬೇ ಮತ್ತು ಮನ್ನರ್ ಕೊಲ್ಲಿಗಳ ನಡುವೆ ಇರುತ್ತವೆ. ಈ ಮಾರ್ಗದಲ್ಲಿ ಹಡಗುಗಳು ಚಲಿಸಲು ಸಾಧ್ಯವಿಲ್ಲವಾದ್ದರಿಂದ ಭಾರತದ ಪಶ್ಚಿಮ ಕರಾವಳಿಯಿಂದ ಪೂರ್ವ ಕರಾವಳಿಗೆ ಚಲಿಸಲು ಹಡಗುಗಳು ಶ್ರೀಲಂಕಾವನ್ನು ಸುತ್ತುವರೆದು, ೪೦೦ ಕಿ.ಮೀ. ಹೆಚ್ಚುವರಿ ಹಾದಿಯನ್ನು ಕ್ರಮಿಸಬೇಕಾಗುತ್ತದೆ.

ರಾವಣನ ಲಂಕಾ ಪಟ್ಟಣಕ್ಕೆ ಕ್ರಮಿಸಲು ರಾಮನ ಭಂಟರಾದ ವಾನರ ಸೈನ್ಯ ಸಮುದ್ರಕ್ಕೆ ಅಡ್ಡಲಾಗಿ ಒಂದು ಸೇತುವೆಯನ್ನು ನಿರ್ಮಿಸುವುದು ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖವಾಗಿದೆ. ಹಾಗಾಗಿ ಹಿಂದೂ ಸಮುದಾಯದಲ್ಲಿ ಈ ಸೇತುವೆಯನ್ನು ವಾನರ ಸೈನ್ಯ ನಿರ್ಮಿಸಿದ್ದೆಂಬ ನಂಬಿಕೆ ಬಲವಾಗಿದೆ. ಅದೇ ರೀತಿ ಇಸ್ಲಾಂನ ಪುರಾಣಗಳ ಪ್ರಕಾರ ಅಡಮ್ ಶ್ರೀಲಂಕಾದಲ್ಲಿನ ಅಡಮ್ಸ್ ಪೀಕ್ ತಲುಪಲು ಈ ಸೇತುವೆಯ ಮೇಲೆಯೇ ನಡೆದು ಹೋಗಿ ಅಲ್ಲಿ ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದನೆಂದು ಹೇಳಲಾಗುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಇದನ್ನು ಸೇತು ಸಮುದ್ರಂ ಎಂದು ಕರೆಯಲಾ

ಗಿದೆ. ಹಾಗಾಗಿಯೇ ಈ ಯೋಜನೆಗೂ ಅದೇ ಹೆಸರನ್ನಿಡಲಾಗಿದೆ.

ಈ ಕಾಲುವೆಯ ನಿರ್ಮಾಣದ ಯೋಜನೆಗೆ ಒಂದು ಶತಮಾನದ ಇತಿಹಾಸವಿದೆ. ಪ್ರಪ್ರಥಮವಾಗಿ ೧೮೬೦ರಲ್ಲಿಯೇ ಇದನ್ನು ಆಯೋಜಿಸಲಾಗಿತ್ತು. ಅಂದಿನಿಂದ ೧೯೨೨ರವರೆಗೆ ಒಂಭತ್ತು ವಿವಿಧ ಪ್ರಸ್ಥಾವನೆಗಳನ್ನು ನೀಡಲಾಗಿದ್ದು ಯಾವುದೂ ಅಂಗೀಕರವಾಗಿರಲಿಲ್ಲ. ೧೮೬೦ರಲ್ಲಿ ಬ್ರಿಟೀಷ್ ನೌಕಾಪಡೆಯ ಕಮಾಂಡರ್ ಟೇಲರ್ ಈ ಪ್ರಸ್ಥಾವನೆಯನ್ನು ಮುಂದಿಟ್ಟಿದ್ದು ದಾಖಲಾಗಿದೆ. ದೋಣಿತುರ್ರೈ ಪರ್ಯಾಯ ದ್ವೀಪದ ಮೂಲಕ ಹಾದು ಹೋಗಬೇಕಿದ್ದ ಈ ಯೋಜನೆಯನ್ನು ಕೈ ಬಿಡಲಾಯಿತು. ನಂತರದಲ್ಲಿ ಇಂಗ್ಲೆಂಡಿನ ಟೌನ್‌ಶೆಡ್ ಎಂಬಾತ ರಾಮೇಶ್ವರದ ಬಳಿ ಇರುವ ಪಂಬನ್ ಕಾಲುವೆಯನ್ನು ಇನ್ನೂ ಆಳ ಮಾಡುವ ಯೋಜನೆಯನ್ನು ಪಶ್ಚಿಮಕ್ಕೆ ಒಂದು ಕಿಲೋಮೀಟರ್ ದೂರದಲ್ಲಿ ಕಾಲುವೆ ನಿರ್ಮಿಸಲು ನಿರ್ಧರಿಸಿತು. ೧೮೬೩ರಲ್ಲಿ ಮದ್ರಾಸ್ ಪ್ರಾಂತ್ಯದ ಗವರ್ನರ್ ಆಗಿದ್ದ ವಿಲಿಯಮ್ಸ್ ಡೆನ್ನಿಸನ್ ಪಂಬನ್ ಕಾಲುವೆಗೆ ಭೇಟಿ ನೀಡಿ ಮತ್ತೊಂದು ಯೋಜನೆಯನ್ನು ರೂಪಿಸಿದ್ದರು. ೧೮೮೪ರಲ್ಲಿ ಜ಼ಾನ್ ಕೋಡ್ ಎಂಬ ತಜ್ಞರು ಒಂದು ಹೊಸ ಕಾಲುವೆಯನ್ನೇ ನಿರ್ಮಿಸಲು ಪ್ರಸ್ಥಾಪಿಸಿದ್ದರು. ನಂತರ ೧೯೦೨ರಲ್ಲಿ ದಕ್ಷಿಣ ಭಾರತ ರೈಲ್ವೆ ಈ ಯೋಜನೆಯನ್ನು ಬೆಂಬಲಿಸಿ ಒಂದು ವರದಿಯನ್ನೂ ನೀಡಿತ್ತು. ೧೯೨೨ರಲ್ಲಿ ಈ ಎಲ್ಲಾ ಯೋಜನೆಗಳನ್ನೂ ಬದಿಗಿರಿಸಿ ರಾಬರ್ಟ್ ಬ್ರಿಸ್ಟೊ ಎಂಬ ನೌಕಾ ಇಂಜಿನಿಯರ್ ಹೊಸದಾದ ಯೋಜನೆಯನ್ನೇ ರೂಪಿಸಿದ್ದರು. ಆದರೆ ಅದನ್ನೂ ಸಹ ಅನುಷ್ಠಾನಗೊಳಿಸಲಾಗದೆ ಸೇತು ಸಮುದ್ರ ಯೋಜನೆ ನೆನೆಗುದಿಗೆ ಬಿದ್ದಿತ್ತು.

ಸ್ವಾತಂತ್ರ್ಯಾನಂತರದಲ್ಲೂ ಈ ಯೋಜನೆಗೆ ಬಲವಾದ ಬೆಂಬಲ ವ್ಯಕ್ತವಾಗಿದ್ದು ಅನೇಕ ರಾಜಕೀಯ ಪಕ್ಷಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ೧೯೫೫ರಲ್ಲಿ ಕೇಂದ್ರ ಸರ್ಕಾರವು ಡಾ|| ಎ. ರಾಮಸ್ವಾಮಿ ಮೊದಲಿಯಾರ್ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಿದ್ದು ಈ ಸಮಿತಿಯೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಶಿಫಾರಸ್ಸು ಮಾಡಿತ್ತು. "ಸೇತು ಸಮುದ್ರಂ ಯೋಜನೆ ಮತ್ತು ತೂತ್ತುಕುಡಿ ಬಂದರು ಯೋಜನೆಗಳು ಪರಸ್ಪರ ಸಂಬಂಧಿತವಾದ್ದರಿಂದ ಎರಡೂ ಯೋಜನೆಗಳನ್ನು ಒಂದೇ ಎಂದು ಪರಿಗಣಿಸಿ, ಎರಡನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿಯೇ ಪೂರ್ಣಗೊಳಿಸತಕ್ಕದ್ದು" ಎಂಬ ಈ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದ ಕಾರಣ ಯೋಜನೆ ನಿರ್ಲಕ್ಷಕ್ಕೊಳಗಾಗಿತ್ತು. ನಂತರ ನಾಲ್ಕನೆ ಪಂಚ ವಾರ್ಷಿಕ ಯೋಜನೆಯಲ್ಲಿ ತೂತ್ತುಕುಡಿ ಬಂದರು ಯೋಜನೆಗೆ ಅಂಗೀಕಾರ ದೊರೆತ ನಂತರ ಸೇತು ಸಮುದ್ರಂ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿತ್ತು. ೧೯೮೧ರಲ್ಲಿ ನೇಮಿಸಲಾದ ನಾಗೇಂದ್ರ ಸಿಂಗ್ ಸಮಿತಿಯೂ ಸಹ ಎರಡೂ ಯೋಜನೆಗಳನ್ನು ಒಟ್ಟಾಗಿ ಪೂರ್ಣಗೊಳಿಸಲು ಶಿಫಾರಸ್ಸು ಮಾಡಿ, ರಾಮೇಶ್ವರ ಪಟ್ಟಣದ ಮೂಲಕವೇ ಕಾಲುವೆ ಹಾದು ಹೋಗುವಂತೆ ನಿರ್ಮಿಸಲು ಪ್ರಸ್ತಾವನೆ ನೀಡಿತ್ತು. ಅದಾಗ್ಯೂ ಐದನೆಯ ಪಂಚವಾರ್ಷಿಕ ಯೋಜನೆಯನ್ನು ಅನುಷ್ಠಾನಗೊಳಿಸುವ ಒಕ್ಕೊರಲಿನ ನಿರ್ಣಯವನ್ನು ಕೈಗೊಂಡಿತ್ತು. ನಂತರ ೨೦೦೫ ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್‌ರವರು ಉದ್ಘಾಟನೆ ಮಾಡುವ ಮೂಲಕ ಈ ಯೋಜನೆಗೆ ವಿದ್ಯುಕ್ತವಾಗಿ ಚಾಲನೆ ದೊರೆಯಿತೆಂದು ಹೇಳಬಹುದು. ೨೪೨೭ ಕೋಟಿ ರೂಗಳ ಈ ಕಾಲುವೆಯ ನಿರ್ಮಾಣವನ್ನು ತೂತ್ತುಕುಡಿ ಬಂದರು ಟ್ರಸ್ಟ್‌ನ ಮೇಲ್ವಿಚಾರಣೆಯಲ್ಲಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ. ಸ್ವಾತಂತ್ರೋತ್ತರದಲ್ಲಿ ಮಂಡಿಸಲಾದ ಅನೇಕ ಪ್ರಸ್ಥಾವನೆಗಳಲ್ಲಿ ಆರು ಬಾರಿ ಕಾಲುವೆ ಮಾರ್ಗವನ್ನು ಬದಲಾಯಿಸಲಾಗಿದ್ದು, ಪ್ರಸ್ತುತ ವಿವಾದಾಸ್ಪದ ಮಾರ್ಗವು ರಾಮ ಸೇತುವಿನ ಮೇಲೆ ೩೫ ಕಿ. ಮೀ., ಪಾಕ್ ಸ್ಟ್ರೇಟ್‌ನಲ್ಲಿ ೫೪ ಕಿ.ಮೀ., ಮತ್ತು ಪಾಕ್ ಕೊಲ್ಲಿಯಲ್ಲಿ ೭೮ ಕಿ.ಮೀ ಕ್ರಮಿಸುತ್ತದೆ. ಇದರಲ್ಲಿ ಪಾಕ್ ಬೇನಲ್ಲಿ ಹೂಳೆತುವ ಕಾರ್ಯ ನಡೆಸಲಾಗುವುದಿಲ್ಲ.

೨೦೦೨ರಲ್ಲಿ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ಸೇತು ಸಮುದ್ರಂ ಯೋಜನೆಗೆ ಅಂತಿಮ ಸ್ವರೂಪ ನೀಡಲಾಗಿತ್ತು. ಈಗ ಆಯ್ಕೆ ಮಾಡಲಾಗಿರುವ ಮಾರ್ಗವನ್ನು ಆಗಲೇ ನಿರ್ಧರಿಸಲಾಗಿತ್ತು. ಆಗ ಸಂಘ ಪರಿವಾರದಿಂದ ಯೋಜನೆಗೆ ಯಾವುದೇ ರೀತಿಯ ವಿರೋಧ ವ್ಯಕ್ತವಾಗಿರಲಿಲ್ಲ. ಆದರೆ ೨೦೦೨ ರಲ್ಲೇ ಅಮೆರಿಕಾದ ಸಂಸ್ಥೆಯಾದ National Aeronautics and Space Administration (ನಾಸಾ)ನ ಉಪಗ್ರಹಗಳು ಸೆರೆಹಿಡಿದ ಚಿತ್ರವೊಂದರಲ್ಲಿ ರಾಮಸೇತುವನ್ನೂ ಸೆರೆ ಹಿಡಿಯಲಾಗಿತ್ತು. ಈ ಚಿತ್ರವನ್ನು ವಿಶ್ವದಾದ್ಯಂತ ಅನೇಕ ಅಂತರ್ಜಾಲಗಳಲ್ಲಿ ಪ್ರಕಟಿಸಲಾಗಿತ್ತು. ಅಯೋಧ್ಯಾ ವಿವಾದದ ದಿನಗಳಿಂದಲೂ ರಾಮನನ್ನು ತಮ್ಮ ರಾಜಕೀಯದ ಸ್ಥಿರ ಬಂಡವಾಳವನ್ನಾಗಿ ಉಪಯೋಗಿಸುತ್ತಿರುವ ಸಂಘ ಪರಿವಾರ ಮತ್ತು ಭಾ.ಜ.ಪ.ಕ್ಕೆ ರಾಮನಿಗೆ ಪುನರ್ಜನ್ಮ ನೀಡಲು ಇದು ಸದವಕಾಶವಾಗಿ ಪರಿಣಮಿಸಿತು. ನಾಸಾ ಸೆರೆ ಹಿಡಿದ ಈ ಚಿತ್ರವನ್ನು ಆಧರಿಸಿ, ರಾಮಾಯಣದ ಕಾಲದಲ್ಲಿ ವಾನರ ಸೇನೆ ನಿರ್ಮಿಸಿದ ಸೇತುವೆ ಇಂದಿಗೂ ಇದೆ ಎಂದು ಪ್ರಚಾರ ಮಾಡಲಾರಂಭಿಸಿತು. ಅಷ್ಟೇ ಅಲ್ಲದೆ ನಾಸಾ ಈ ಸೇತುವೆಯನ್ನು ಮಾನವ ನಿರ್ಮಿತ ಎಂದು ದಾಖಲಿಸಿದೆಯೆಂದೂ, ೧೭ ಲಕ್ಷ ಐವತ್ತು ಸಾವಿರ ವರ್ಷಗಳ ಹಿಂದೆ ನಡೆದಿದೆಯೆನ್ನಲಾದ ರಾಮಾಯಣದ ಸೇತುವೆಗೂ, ಈ ಸೇತುವೆಗೂ ಹೋಲಿಕೆ ಇರುವುದರಿಂದ, ಇದೇ ವಾನರಸೇನೆ ನಿರ್ಮಿಸಿದ ಸೇತುವೆ ಎಂದು ಪ್ರಚಾರ ಮಾಡಲಾರಂಭಿಸಿತು. ಶ್ರೀ ರಾಮನ ಪಾವಿತ್ರ್ಯತೆಯನ್ನು ರಕ್ಷಿಸಲು ರಾಮಸೇತುವೆಯನ್ನು ರಕ್ಷಿಸಬೇಕೆಂದು ಹೋರಾಟ ಪ್ರಾರಂಭಿಸಿತು.

ಇದಕ್ಕೆ ಪ್ರತಿಯಾಗಿ ನಾಸಾದ ಅಧಿಕಾರಿಗಳು ತಮ್ಮದೇ ಆದ ವ್ಯಾಖ್ಯಾನ ನೀಡಿ, ತಾವು ಎಲ್ಲಿಯೂ ಇದನ್ನು ಮಾನವ ನಿರ್ಮಿತ ಎಂದು ಹೇಳಿಲ್ಲವೆಂದು ಹೇಳಿದರೂ, ಸಂಘಪರಿವಾರದ ಪ್ರಚಾರಕ್ಕೆ ಅದು ಅಡ್ಡಿಯಾಗಲಿಲ್ಲ. "ಉಪಗ್ರಹಗಳ ಮೂಲಕ ನಾವು ಸೆರೆಹಿಡಿಯುವ ಯಾವುದೇ ಭೂ ಭಾಗದ ಚಿತ್ರಗಳನ್ನು ಆಧರಿಸಿ, ಅದರ ಕಾಲ ಮತ್ತಿತರ ಲಕ್ಷಣಗಳನ್ನು ಹೇಳಲಾಗುವುದಿಲ್ಲ. ಭೂ ಕಕ್ಷೆಯ ಹೊರಗಿನಿಂದ ತೆಗೆದ ಈ ಚಿತ್ರಗಳನ್ನಾಧರಿಸಿ ಯಾವುದೇ ಸ್ಥಾವರ–ಕಟ್ಟಡ–ಸೇತುವೆಗಳನ್ನು ಮಾನವ ನಿರ್ಮಿತ ಎಂದೂ ಹೇಳಲಾಗುವುದಿಲ್ಲ. ಹಾಗಾಗಿ ನಾಸಾದ ವಿಜ್ಞಾನಿಗಳು ಎಲ್ಲಿಯೂ ಖಚಿತವಾಗಿ ಈ ಸೇತುವೆಯ ಬಗ್ಗೆ ಉಲ್ಲೇಖಿಸಿಲ್ಲ" ಎನ್ನುತ್ತಾರೆ ನಾಸಾದ ಅಧಿಕಾರಿ ಮಾರ್ಕ್ಸ್ ಹೆಸ್ಸ್.

ಆದರೆ ಯಾವುದು ತಮ್ಮ ಮತೀಯ ರಾಜಕಾರಣಕ್ಕೆ ವೈಜ್ಞಾನಿಕ ಸತ್ಯಗಳಿಗಿಂತಲೂ ಸಾಮಾನ್ಯ ಜನರ ನಂಬಿಕೆಯೇ ಉತ್ತಮ ಸಾಧನ ಎಂಬ ಚಾಣಕ್ಯ ತಂತ್ರವನ್ನು ಅರಿತಿರುವ ಸಂಘ ಪರಿವಾರ, ಶ್ರೀಲಂಕಾದಲ್ಲಿ ೧೭ ಲಕ್ಷ ೫೦ ಸಾವಿರ ವರ್ಷಗಳ ಹಿಂದೆಯೇ ಮಾನವರು ಜೀವಿಸುತ್ತಿದ್ದರು, ರಾಮಾಯಣ ಆ ಕಾಲಾವಧಿಯಲ್ಲೇ ನಡೆದಿದೆ, ಹಾಗಾಗಿ ರಾಮಸೇತು ಮಾನವ ನಿರ್ಮಿತವೇ (ವಾನರ ನಿರ್ಮಿತ ಎಂದು ಎಲ್ಲಿಯೂ ಹೇಳುವುದಿಲ್ಲ) ಎಂದು ಪ್ರಚಾರ ಮಾಡಲಾರಂಭಿಸಿತು. ತನ್ನ ವಾದವನ್ನು ಪುಷ್ಟೀಕರಿಸಲು ಸಂಘ ಪರಿವಾರವು ಮೇ ತಿಂಗಳಿನಲ್ಲಿ ತನೇಜಾ ಎಂಬಾತನನ್ನು ಬಾಹ್ಯಾಕಾಶ ವಿಜ್ಞಾನಿ ಎಂದು ಪರಿಚಯಿಸಿ ಸೇತು ಸಮುದ್ರಂ ಯೋಜನೆಯ ಬಗ್ಗೆ ಸಂಶೋಧನೆ ನಡೆಸಲು ನೇಮಿಸಿತ್ತು. ತಾನೊಬ್ಬ ಹಿರಿಯ ಸಂಶೋಧನಾ ವಿಜ್ಞಾನಿಯಾಗಿದ್ದು ಬಾಹ್ಯಾಕಾಶ ಇಲಾಖೆಯಲ್ಲಿರುವುದಾಗಿ ಹೇಳಿಕೊಂಡಿದ್ದ ತನೇಜಾ ಕ್ರಮೇಣ ಆರ್.ಎಸ್.ಎಸ್. ಪ್ರಚಾರಕನಾಗಿ ನೇಮಕಗೊಂಡಿದ್ದರು. ತನೇಜಾ ಹೊಸದಾದ ಯಾವುದೇ ಸಂಶೋಧನೆ ನಡೆಸದೆ ವಿಹಿಂಪ ಮಂಡಿಸುತ್ತಿದ್ದ ವಾದವನ್ನೇ ಪುನರುಚ್ಚರಿಸುತ್ತಿದ್ದರೆಂದು ಸಂಘ ಪರಿವಾರದವರೇ ಹೇಳುತ್ತಾರೆ.

ನಾಸಾದ ಚಿತ್ರಣಗಳು, ಸೇತುವೆಯ ವಿಶಿಷ್ಟ ವಕ್ರ ಪರಮಾಣು (Curvature) ಮತ್ತು ಸಂಯೋಜನೆಗಳು ರಾಮಸೇತುವನ್ನು ಮಾನವ ನಿರ್ಮಿತ ಎಂದು ಸಾಬೀತು ಪಡಿಸುತ್ತವೆ, ಎಂಬ ವಾದವನ್ನು ಧೃಢಪಡಿಸಲು ತನೇಜಾ ಆಗಾಗ್ಗೆ ಕೆಲವು ತಾಂತ್ರಿಕ ಅಂಶಗಳನ್ನೂ ಪ್ರಸ್ತುತ ಪಡಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೆ ಜೂನ್ ತಿಂಗಳ ವೇಳೆಗೆ ತನೇಜಾನ ನೈಜ ಸ್ವರೂಪದ ಬಗ್ಗೆ ಅನೇಕ ಆಕ್ಷೇ

೨೦೦೨ರಲ್ಲಿ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ಸೇತು ಸಮುದ್ರಂ ಯೋಜನೆಗೆ ಅಂತಿಮ ಸ್ವರೂಪ ನೀಡಲಾಗಿತ್ತು. ಈಗ ಆಯ್ಕೆ ಮಾಡಲಾಗಿರುವ ಮಾರ್ಗವನ್ನು ಆಗಲೇ ನಿರ್ಧರಿಸಲಾಗಿತ್ತು. ಆಗ ಸಂಘ ಪರಿವಾರದಿಂದ ಯೋಜನೆಗೆ ಯಾವುದೇ ರೀತಿ ವಿರೋಧ ವ್ಯಕ್ತವಾಗಿರಲಿಲ್ಲ. ಆದರೆ ೨೦೦೨ರಲ್ಲೇ ಅಮೆರಿಕಾದ ನಾಸಾ ಉಪಗ್ರಹಗಳು ಸೆರೆಹಿಡಿದ ಚಿತ್ರವೊಂದರಲ್ಲಿ ರಾಮಸೇತುವನ್ನೂ ಸೆರೆ ಹಿಡಿಯಲಾಗಿತ್ತು. ಈ ಚಿತ್ರವನ್ನು ವಿಶ್ವದಾದ್ಯಂತ ಅನೇಕ ಅಂತರ್ಜಾಲಗಳಲ್ಲಿ ಪ್ರಕಟಿಸಲಾಗಿತ್ತು. ಅಯೋಧ್ಯಾ ವಿವಾದದ ದಿನಗಳಿಂದಲೂ ರಾಮನನ್ನು ತಮ್ಮ ರಾಜಕೀಯದ ಸ್ಥಿರ ಬಂಡವಾಳವನ್ನಾಗಿ ಉಪಯೋಗಿಸುತ್ತಿರುವ ಸಂಘ ಪರಿವಾರ ಮತ್ತು ಭಾ.ಜ.ಪ.ಕ್ಕೆ ರಾಮನಿಗೆ ಪುನರ್ಜನ್ಮ ನೀಡಲು ಇದು ಸದವಕಾಶವಾಗಿ ಪರಿಣಮಿಸಿತು.

ಪಗಳು ಬರಲಾರಂಭಿಸಿದಾಗ ಸಂಘ ಪರಿವಾರಕ್ಕೆ ತಲೆಬೇನೆ ಆರಂಭಗೊಂಡಿತ್ತು. ಆತ ಬಾಹ್ಯಾಕಾಶ ವಿಜ್ಞಾನಿಯೇ ಅಲ್ಲ ಎಂಬ ಅಂಶ ಗೊತ್ತಾಗುವ ವೇಳೆಗೆ ಸಂಘ ಪರಿವಾರ ಅವರ ಸಂಶೋಧನೆಯ ನಾಟಕವನ್ನು ನಂಬಿ ಸಾಕಷ್ಟು ಪ್ರಚಾರ ಕಾರ್ಯ ಪ್ರಾರಂಭಿಸಿತ್ತು. ನಂತರ ತಲೆಮರೆಸಿಕೊಂಡಿರುವ ತನೇಜಾನನ್ನು ಆರ್.ಎಸ್.ಎಸ್. ವಜಾ ಮಾಡಿತೆಂದು ವರದಿಯಾಗಿದೆ. ಈ ತನೇಜಾ ವಿಹಿಂಪ ನಾಯಕ ಅಶೋಕ್ ಸಿಂಘಾಲರ ಶಿಷ್ಯ ಎಂಬ ಅಂಶ ಇಲ್ಲಿ ಗಮನಾರ್ಹ.

ಸಂಘ ಪರಿವಾರದ ಪ್ರಚಾರವನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಭೂ ಮಾಪನ ಇಲಾಖೆ ಮತ್ತು ಭಾರತೀಯ ಬಾಹ್ಯಾಕಾಶ ಸಂಸ್ಥೆ ನಡೆಸಿದ ಸಮೀಕ್ಷೆ ರಾಮಸೇತುವಿನ ಬಗ್ಗೆ ವೈಜ್ಞಾನಿಕ ಗ್ರಹಿಕೆಯನ್ನು ಒದಗಿಸುತ್ತದೆ. ಕುತೂಹಲಕಾರಿ ಅಂಶವೆಂದರೆ ನಾಸಾದ ಚಿತ್ರಗಳು ಬಿಡುಗಡೆಯಾದ ಕೂಡಲೆ ಅಂದಿನ ಕಲ್ಲಿದ್ದಲು ಮತ್ತು ಗಣಿ ಇಲಾಖೆಯ ಕೇಂದ್ರ ಮಂತ್ರಿಯಾಗಿದ್ದ ಉಮಾಭಾರತಿಯವರು ಭೂ ಮಾಪನ ಇಲಾಖೆಯ ಮೂಲಕ ಅಧ್ಯಯನ ಮಾಡಲು ಆದೇಶಿಸಿದ್ದರು. ತನ್ನ ಸಂಶೋಧನಾ ಕಾರ್ಯ ಪೂರ್ಣಗೊಂಡ ನಂತರದಲ್ಲಿ ಇಲಾಖೆಯ ಸ್ಪಷ್ಟ ಅಭಿಪ್ರಾಯ ನೀಡಿತ್ತು. ಅವುಗಳ ವಿವರ ಹೀಗಿದೆ:

ಇಂದಿನ ಸಮುದ್ರ ತಟದಲ್ಲಿಯಾಗಲಿ, ಧನುಷ್ಕೋಟಿ ಮತ್ತು ರಾಮಸೇತುವಿನ ನಡುವೆ ಇರುವ ದ್ವೀಪಗಳಲ್ಲಾಗಲೀ, ಯಾವುದೇ ಮಾನವ ನಿರ್ಮಿತ ಸ್ಥಾವರಗಳು ಕಂಡುಬರುವುದಿಲ್ಲ. ರಾಮೇಶ್ವರಂ ದ್ವೀಪವು ೧ಲಕ್ಷ ೨೫ ಸಾವಿರ ವರ್ಷಗಳ ಹಿಂದೆ ರೂಪುಗೊಂಡಿತ್ತು. ಮಂಟಪಂ, ರಾಮೇಶ್ವರ ಮತ್ತು ರಾಮಸೇತುವಿನ ಸುತ್ತಲು ಇರುವ ಪ್ರದೇಶಗಳು ಸಾವಿರಾರು ವರ್ಷಗಳ ಭೂತಳ ಸಂಘರ್ಷಗಳಿಂದ ಮತ್ತು ಭೂ ರಚನೆಯ ಚಲನೆಯಿಂದ ಉಂಟಾಗಿರಬಹುದಾದ ನೈಸರ್ಗಿಕ ಕ್ರಿಯೆಯಿಂದ ರೂಪಗೊಂಡಿವೆ. ಇದರ ಪರಿಣಾಮವಾಗಿಯೇ ಕಡಲ ದಂಡೆಯ ಬಂಡೆಗಳು, ಹವಳ ದ್ವೀಪಗಳು, ಮರಳಿನ ದಿಬ್ಬಗಳು, ಹಲವಾರು ದ್ವೀಪಗಳು, ನಡುಗಟ್ಟೆಗಳು, ರೂಪುಗೊಂಡಿವೆ. ಹಾಗಾಗಿ ಈ ಮರಳಿನ ದಿಬ್ಬಗಳು ಮಾನವ ನಿರ್ಮಿತವಾಗಿರದೆ ಸಾವಿರಾರು ವರ್ಷಗಳ ಹಿಂದೆ ಸಮುದ್ರದ ಆಳ ಕಡಿಮೆಯಾಗಿದ್ದ ಅವಧಿಯಲ್ಲಿ ನಿರ್ಮಿತವಾಗಿರಬಹುದಾದ ನೈಸರ್ಗಿಕ ಸ್ಥಾವರಗಳಿರಬಹುದೆಂದು ಹೇಳಲಾಗುತ್ತದೆ.

ಈ ವರದಿ ಮತ್ತು ಪುರಾತತ್ವ ಇಲಾಖೆಯಲ್ಲಿ ಲಭ್ಯವಿರುವ ವೈಜ್ಞಾನಿಕ ಮಾಹಿತಿಗಳ ಆಧಾರದ ಮೇಲೆ ಪುರಾತತ್ವ ಮಾಪನ ಇಲಾಖೆಯ ಸರ್ವೋಚ್ಚ ನ್ಯಾಯಾಲಯದಲ್ಲಿ ತನ್ನ ಮುಚ್ಚಳಿಕೆ ಪತ್ರವನ್ನು ಸಲ್ಲಿಸಿತ್ತು. ಜನತಾ ಪಕ್ಷದ ಅಧ್ಯಕ್ಷ ಮತ್ತು ಸಂಘ ಪರಿವಾರದ ದಕ್ಷಿಣ ಭಾರತದ ಮುಖವಾಣಿ ನಾಯಕರಾದ ಸುಬ್ರಮಣ್ಯ ಸ್ವಾಮಿಯವರು ಸೇತು ಸಮುದ್ರಂ ಯೋಜನೆಯ ವಿರುದ್ಧ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರದಿಂದ ತನ್ನ ವಾದಗಳ ಪುಷ್ಟೀಕರಣಕ್ಕೆ ಸಮಜಾಯಿಷಿ ಕೇಳಿತ್ತು. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಯು ನ್ಯಾಯಾಲಯಕ್ಕೆ ತನ್ನ ಮುಚ್ಚಳಿಕೆ ಪತ್ರವನ್ನು ಸಲ್ಲಿಸಿ, ರಾಮ ಸೇತು ಮಾನವ ನಿರ್ಮಿತ ಅಲ್ಲ ಎಂಬ ವಾದವನ್ನ ಸಮರ್ಥಿಸಿಕೊಳ್ಳಲು ವೈಜ್ಞಾನಿಕ ಕಾರಣಗಳನ್ನೂ ನೀಡಿತ್ತು. ಈ ಮುಚ್ಚಳಿಕೆ ಪತ್ರದ ೨೦ನೆಯ ಪ್ಯಾರಾದಲ್ಲಿ ಹೀಗೆ ಹೇಳಲಾಗಿದೆ:

"ಅರ್ಜಿದಾರರು ಸೇತು ಸಮುದ್ರಂ ಯೋಜನೆಯನ್ನು ವಿರೋಧಿಸಲು ವಾಲ್ಮೀಕಿ ರಾಮಾಯಣ, ತುಳಸಿದಾಸರ ರಾಮಚರಿತಮಾನಸ ಮತ್ತಿತರ ಪೌರಾಣಿಕ ಕೃತಿಗಳನ್ನು ಆಧರಿಸಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಈ ಪುರಾಣ ಕೃತಿಗಳು ಭಾರತೀಯ ಪ್ರಾಚೀನ ಸಾಹಿತ್ಯದಲ್ಲಿ ತಮ್ಮದೇ ಆದ ಮೌಲ್ಯಗಳನ್ನು ಮಹತ್ವವನ್ನೂ ಹೊಂದಿವೆ. ಆದರೆ ಈ ಕೃತಿಗಳನ್ನು ಆಧರಿಸಿ ಅದರಲ್ಲಿ ಬರುವ ಪಾತ್ರಧಾರಿಗಳ ಮತ್ತು ಸನ್ನಿವೇಶಗಳ ಐತಿಹಾಸಿಕ ಸತ್ಯವನ್ನು ನಿರೂಪಿಸಲಾಗುವುದಿಲ್ಲ. ಹಿಂದೂ ಸಮುದಾಯವು ಈ ಕೃತಿಗಳ ಬಗ್ಗೆ ತಳೆದಿರುವ ಗೌರವಯುತ ಭಾವನೆಗಳನ್ನು ಮತ್ತು ನಂಬಿಕೆಗಳನ್ನು ಇಲಾಖೆಯು ಗೌರವಿಸುತ್ತದೆ. ಆದರೆ ಮಾನವನ ಇತಿಹಾಸದ ಅಧ್ಯಯನದಲ್ಲಿ ತೊಡಗಿರುವ ಇಲಾಖೆಯು, ಇತರ ವೈಜ್ಞಾನಿಕ ಕ್ಷೇತ್ರಗಳಂತೆ, ತನ್ನ ಅಭಿಪ್ರಾಯಗಳನ್ನು ವೈಜ್ಞಾನಿಕ ತಳಹದಿಯ ಮೇಲೆಯೇ ಪ್ರತಿಪಾದಿಸಬೇಕಾಗುತ್ತದೆ. ಹಾಗಾಗಿ ಯಾವುದೇ ಸ್ಪಷ್ಟ ಆಧಾರವಿಲ್ಲದೆ ಇಲಾಖೆಯು ನಿರ್ಧಾರವನ್ನು ತಾಳಲಾಗುವುದಿಲ್ಲ".

ಈ ಮುಚ್ಚಲಿಕೆಯಲ್ಲಿ ಪ್ರಾರಂಭದಲ್ಲಿ ಬರುವ ಕೆಲವು ಪ್ರತಿವಾದಗಳು ಅವಶ್ಯವೇ ಎನಿಸಿದಲ್ಲಿ, ಅದಕ್ಕೆ ಸುಬ್ರಮಣ್ಯ ಸ್ವಾಮಿಯವರು ಮೇ ೨೦೦೭ರಲ್ಲಿ ಸಲ್ಲಿಸಿದ್ದ ಅರ್ಜಿಯೇ ಕಾರಣ ಎಂದು ಹೇಳಬಹುದು. ಸ್ವಾಮಿಯವರು ತಮ್ಮ ಅರ್ಜಿಯಲ್ಲಿ ರಾಮಸೇತುವನ್ನು ಒಂದು ಪಾರಂಪರಿಕ ಸ್ಥವರವನ್ನಾಗಿ ಪರಿಗಣಿಸಿ, ಸಂವಿಧಾನದ ವಿಧಿ ೪೯ರ ಅನ್ವಯ ಯಾವುದೇ ಪಾರಂಪರಿಕ ಕಟ್ಟಡ ಅಥವಾ ದೇವಾಲಯಗಳಿಗೆ ನೀಡುವ ರಕ್ಷಣೆಯನ್ನು ರಾಮಸೇತುವಿಗೂ ಒದಗಿಸಬೇಕೆಂದು ಆಗ್ರಹಿಸಿದ್ದರು. ಪೌರಾಣಿಕ ಘಟನಾವಳಿಗಳಿಗೆ ಐತಿಹಾಸಿಕ ಸ್ವರೂಪ ನೀಡುವ ಸಂಘ ಪರಿವಾರದ ಕುತಂತ್ರವನ್ನು ಇಲ್ಲಿ ಗ್ರಹಿಸಬಹುದಾಗಿದೆ.

ಇಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆಯೆಂದರೆ, ಪುರಾಣ ಮತ್ತು ಇತಿಹಾಸಗಳ ನಡುವೆ ಇರುವ ವ್ಯತ್ಯಾಸ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆ ಸರಿಯಾದ ಕ್ರಮ ಕೈಗೊಂಡಿದ್ದನ್ನು ಇಲ್ಲಿ ಗಮನಿಸಬಹುದು. ಸಾಮಾನ್ಯ ಜನರ ನಂಬಿಕೆಯ ಪ್ರಕಾರ ರಾಮ ಐತಿಹಾಸಿಕ ವ್ಯಕ್ತಿಯಾಗಿದ್ದರೂ, ರಾಮಾಯಣ ನೈಜ ಘಟನೆಯಾಗಿದ್ದರೂ, ಇದುವರೆವಿಗೂ ವೈಜ್ಞಾನಿಕವಾಗಿ ಅದನ್ನು ನಿರೂಪಿಸುವ ಯಾವುದೇ ಪುರಾವೆಗಳು ದೊರೆಯದಿರುವುದರಿಂದ, ರಾಮಾಯಣ ಕಾವ್ಯಕ್ಕೆ ಸಂಬಂಧಿಸಿದ ಯಾವುದೇ ನಂಬಿಕೆಗಳಿಗೆ ಐತಿಹಾಸಿಕ ಸ್ವರೂಪ ನೀಡಲಾಗುವುದಿಲ್ಲ. ರಾಮಸೇತುವಿಗೂ ಈ ನೀತಿ ಅನ್ವಯಿಸುತ್ತದೆ. ಇಲ್ಲಿ ಪುರಾಣ ಮತ್ತು ಇತಿಹಾಸಗಳನ್ನು ನೈಜತೆ–ಅಸಂಬದ್ಧತೆಗಳಿಗೆ ಸೀಮಿತಗೊಳಿಸಲಾಗುವುದಿಲ್ಲ. ಮಾನವ ಸಮಾಜವು ಪುರಾಣ–ಮಿಥ್ಯೆಗಳ ಮೂಲಕವೇ ವಾಸ್ತವತೆಯನ್ನು ಗ್ರಹಿಸುವುದರಲ್ಲಿ ತೊಡಗಿರುತ್ತದೆ. ಆದರೆ ಅದು ವಾಸ್ತವತೆಯ ಗ್ರಹಿಕೆಯಾಗಿರುವುದೇ ಹೊರತು ಐತಿಹಾಸಿಕ ವ್ಯಕ್ತಿಯನ್ನಾಗಿ ಅಲ್ಲ. ಪುರಾತತ್ವ ಇಲಾಖೆಯ ಮುಚ್ಚಲಿಕೆ ಪತ್ರದಲ್ಲೂ ಇದನ್ನೇ ಹೇಳಲಾಗಿದ್ದನ್ನು ಇಲ್ಲಿ ಗಮನಿಸಬಹುದು.

ಈ ಹಿನ್ನೆಲೆಯಲ್ಲಿ ನೋಡಿದಾಗ ರಾಮಸೇತು ಅಥವಾ ಸೇತು ಸಮುದ್ರವನ್ನು ರಾಮಾಯಣದ ಪೌರಾಣಿಕ ಪಾತ್ರಗಳ ಸಂದರ್ಭದಲ್ಲಿ ವ್ಯಾಖ್ಯಾನಿಸಬಹುದಾಗಿದೆ. ಸೇತು ಬಂಧನವು ರಾಮನ ಮತ್ತು ರಾಮಾಯಣ ಮಹಾಕಾವ್ಯದ ಹಲವಾರು ಕಾವ್ಯಾತ್ಮಕ ಲಕ್ಷಣಗಳನ್ನು ಮೈದಳೆದ ಒಂದು ಪೌರಾಣಿಕ ಸನ್ನಿವೇಶವೆಂದು ಇಲ್ಲಿ ಹೇಳಬಹುದು. ಹಾಗಾಗಿ ಸೇತು ಬಂಧನ ರಾಮನ ದೈವೀ ಶಕ್ತಿಯಿಂದ ನಿರ್ಮಿತವಾದ ಒಂದು ಸೇತುವೆ ಎಂದು ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ರಾಮಾಯಣದಲ್ಲೇ ಬರುವ ಸೇತುವೆ ನಿರ್ಮಾಣದ ಸಂದರ್ಭವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಒಂದು ರಾಮಾಯಣದಲ್ಲಿ ಸೇತು ಬಂಧನವನ್ನು ಹೀಗೆ ವಿವರಿಸಲಾಗಿದೆ:

"ನಿರ್ಮಾಣದ ಮೊದಲ ದಿನ ವಾನರ ಸೇನೆಯು ೧೨೦ ಮೈಲುಗಳಷ್ಟು ಜೋಡಿಸಿದ್ದು ಅದು ಸಮುದ್ರದ ಮೇಲೆ ತೇಲುತ್ತಿತ್ತು. ಶೀಘ್ರವಾಗಿ ಕಾರ್ಯ ನಿರ್ವಹಿಸಿದ ಕಪಿಸೇನೆ ಸೇತುವೆ ಒಂದು ಹದಕ್ಕೆ ಬಂದಿದ್ದನ್ನು ನೋಡಿ ಸಂತುಷ್ಟವಾಗಿತ್ತು. ಎರಡನೇ ದಿನ ೧೬೦ ಮೈಲಿ, ಮೂರನೆಯ ದಿನ ೧೬೮ ಮೈಲಿ, ನಾಲ್ಕನೆಯ ದಿನ ೧೭೬ ಮೈಲಿ ಸೇತುವೆ ನಿರ್ಮಿಸಿದ ನಂತರ ವಾನರ ಸೇನೆಯು ಐದನೆಯ ದಿನದಂದು ೧೮೪ ಮೈಲಿ ದೂರದ ಸೇತುವೆಯನ್ನು ನಿರ್ಮಿಸಿ ಶ್ರೀಲಂಕಾದ ಉತ್ತರ ತೀರದ ಸುವಾಲ ಪರ್ವತವನ್ನು ತಲುಪಿದ್ದವು. ಪೂರ್ಣಗೊಂಡ ನಂತರದಲ್ಲಿ ಎಂಬತ್ತು ಅಡಿ ಅಗಲ ಮತ್ತು ೮೦೦ ಮೈಲಿ ಉದ್ದದ ಸೇತು ಬಂಧನ ಸಿದ್ಧಗೊಂಡಿತ್ತು".

ಈ ಮಟ್ಟದ ನಿರ್ಮಾಣವನ್ನು ವಾನರ ಸೇನೆ ನಿರ್ವಹಿಸಲು ಸಾಧ್ಯವೇ ಎಂಬ ಮೂಲಭೂತ ಪ್ರಶ್ನೆಯನ್ನು ಬದಿಗಿಟ್ಟು ಒಂದು ಪೌರಾಣಿಕ ಮಿಥ್ಯ ಹೇಗೆ ರಾಮನ ದೈವೀ ಗುಣಗಳನ್ನು ವೈಭವೀಕರಿಸುತ್ತದೆ ಎಂಬ ಅಂಶವನ್ನು ಇಲ್ಲಿ ಪರಿಗಣಿಸಬೇಕಾಗುತ್ತದೆ. ಈ ಮಿಥ್ಯೆಗಳು ನಂಬಿಕೆಯ ಪ್ರಶ್ನೆಯಾದಾಗ ಅದನ್ನು ವಿವಿಧ ರೂಪಗಳಲ್ಲಿ ಸಂದರ್ಭಕ್ಕನುಸಾರವಾಗಿ ಉಪಯೋಗಿಸುವುದು ಸಾಧ್ಯವಾಗುತ್ತದೆ. ಅದನ್ನು ಸಂಘ ಪರಿವಾರ ಅನೇಕ ಸಂದರ್ಭಗಳಲ್ಲಿ ನಿರೂಪಿಸಿದೆ.

ರಾಜಕೀಯ ರಾಮಬಾಣ

ಅಯೋಧ್ಯೆ, ಬಾಬಾಬುಡನ್‌ಗಿರಿ ಮತ್ತು ನರೇಂದ್ರ ಮೋದಿಯವರ ಗುಜರಾತ್ ಪ್ರಯೋಗ ಶಾಲೆಗಳಲ್ಲಿ ಕಳೆದುಕೊಂಡದ್ದನ್ನು ಸಂಘ ಪರಿವಾರ ರಾಮಸೇತುವಿನಲ್ಲಿ ಕಂಡುಕೊಂಡಿದೆ. ದಕ್ಷಿಣ ಭಾರತದಲ್ಲಿ ಭದ್ರ ನೆಲೆ ಸ್ಥಾಪಿಸಲು ಎಲ್ಲಾ ಪ್ರಾದೇಶಿಕ ಪಕ್ಷಗಳೊಡನೆ ಮೈತ್ರಿ ಸಾಧಿಸಿ ಕೈಸುಟ್ಟುಕೊಂಡಿರುವ ಭಾ.ಜ.ಪಕ್ಕೆ ತನ್ನ ಕೋಮುವಾದಿ ನೀತಿಗಳನ್ನು ರಾಜಕೀಯ ದಾಳಗಳಾಗಿ ಬಳಸಿಕೊಳ್ಳುವುದು

ಬಹುತೇಕ ಅಸಾಧ್ಯವಾಗುತ್ತಿದೆ. ಮಾಜಿ ಪ್ರಧಾನಿ ದೇವೇಗೌಡರ ಕೃಪೆಯಿಂದ ಕರ್ನಾಟಕದಲ್ಲಿಯಾದರೂ ಕೆಲವು ಕಾಲ ಅಧಿಕಾರ ನಡೆಸಬಹುದೆಂಬ ಭಾ.ಜ.ಪದ ಆಸೆ ಕೈಗೂಡದೆ ಹೋಗಿದೆ. ಒಂದೆಡೆ ನೇರವಾಗಿ ಅಲ್ಪಸಂಖ್ಯಾತರ ವಿರುದ್ಧ ಕಿಡಿಕಾರುವ ಭಾ.ಜ.ಪ ಮತ್ತೊಂದೆಡೆ ಪರೋಕ್ಷವಾಗಿ ದಲಿತ ಮತ್ತು ಹಿಂದುಳಿದವರ ವಿರುದ್ಧ ಕಾರ್ಯ ನಿರ್ವಹಿಸುವುದು ಸಾಮಾನ್ಯ ಜನತೆಯಲ್ಲಿ ಗುಟ್ಟಿನ ವಿಷಯವಾಗೇನೂ ಉಳಿದಿಲ್ಲ. ಹಾಗಾಗಿ ತನ್ನದೇ ಆದ ಒಂದು ನೆಲೆ ಕಂಡುಕೊಳ್ಳಲು ಅವಶ್ಯವಾದ ಸಾಮಾಜಿಕ ನ್ಯಾಯ, ಸೆಕ್ಯುಲಾರ್ ತತ್ವಗಳನ್ನು ಭಾ.ಜ.ಪ ತನ್ನದಾಗಿಸಿಕೊಳ್ಳಲು ಹೆಣಗಾಡುತ್ತಿದೆ. ದಕ್ಷಿಣ ಭಾರತದ ಪ್ರಾದೇಶಿಕ ಪಕ್ಷಗಳು ಈಗಾಗಲೇ ಈ ಅಸ್ತ್ರಗಳನ್ನು ತಮ್ಮ ಬತ್ತಳಿಕೆಯಲ್ಲಿ ಭದ್ರವಾಗಿ ಇಟ್ಟುಕೊಂಡಿರುವುದರಿಂದ ಭಾ.ಜ.ಪ. ಮತ್ತು ಸಂಘ ಪರಿವಾರಕ್ಕೆ ತನ್ನ ಪ್ರಬಲ ಅಸ್ತ್ರವಾದ ಹಿಂದೂ ಮೂಲಭೂತವಾದವೇ ಆಶ್ರಯವಾಗಿದೆ. ಈ ನಿಟ್ಟಿನಲ್ಲಿ ರಾಮಸೇತು ವಿವಾದವನ್ನು ತನ್ನ ರಾಜಕೀಯ ಲಾಭಗಳಿಗಾಗಿ ಉಪಯೋಗಿಸಿಕೊಳ್ಳಲು ಹವಣಿಸುತ್ತಿರುವ ಭಾ.ಜ.ಪ ಮತತು ಸಂಘ ಪರಿವಾರಕ್ಕೆ ತಮಿಳು ನಾಡು ಮುಖ್ಯ ಮಂತ್ರಿ ಕರುಣಾನಿಧಿಯವರ ವಿವಾದಸ್ಪದ ಹೇಳಿಕೆ ಒಂದು ರೀತಿಯ ವರದಾನವಾಗಿ ಪರಿಣಮಿಸಿದೆ.

ಭಾ.ಜ.ಪದ ಮೂಲಭೂತವಾದಿ ಸಂಗೀತದ ತಾಳಕ್ಕೆ ಹೆಜ್ಜೆ ಹಾಕಲು ಸದಾ ಕಾಯುತ್ತಿರುವ ಕಾಂಗ್ರೆಸ್ ಪಕ್ಷವು, ಕೆಲವು ವಿಹಿಂಪ ಕಾರ್ಯಕರ್ತರು ನಡೆಸಿದ ಪ್ರತಿಭಟನೆಗೆ ಹೆದರಿ, ಸರ್ವೋಚ್ಚ ನ್ಯಾಯಾಲಯದಲ್ಲಿ ಪುರಾತತ್ವ ಇಲಾಖೆ ಸಲ್ಲಿಸಿದ್ದ ಮುಚ್ಚಳಿಕೆ ಪತ್ರವನ್ನು ಹಿಂದೆಗೆದುಕೊಂಡಿದ್ದು ಸಂಘ ಪರಿವಾರಕ್ಕೆ ಗರಿ ಮೂಡಿದಂತಾಗಿದೆ. ೧೯೮೬ರಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ಬಾಬ್ರಿ ಮಸೀದಿಯ ಗೇಟಿನ ಬೀಗ ತೆಗೆಯುವಂತೆ ಸೂಚಿಸಿದ ಮತ್ತು ಶಹಬಾನೋ ಪ್ರಕರಣದಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೆ ಮಣಿಯಲು ಪ್ರೋತ್ಸಾಹಿಸಿದ ಕೇಂದ್ರ ಕಾನೂನು ಮಂತ್ರಿ ಹೆಚ್.ಆರ್. ಭಾರದ್ವಾಜ್‌ರವರೇ ಈಗಲೂ ಸಹ ಮುಚ್ಚಳಿಕೆ ಪತ್ರವನ್ನು ಹಿಂಪಡೆಯುವಲ್ಲಿ ಸರ್ಕಾರವನ್ನು ಒತ್ತಾಯಿಸಿರುವುದು, ಕಾಕತಾಳೀಯವಷ್ಟೆ. ಆದರೆ ಆಗ ತಮ್ಮ ಕೃತ್ಯದಿಂದ ಹಿಂದೂ ಮತ್ತು ಮುಸ್ಲಿಂ, ಎರಡೂ ಸಮುದಾಯಗಳ ಬೆಂಬಲ ಕಳೆದುಕೊಂಡ ಕಾಂಗ್ರೆಸ್ ಪಕ್ಷ ಪುನಃ ಅದೇ ಸನ್ನಿವೇಶವನ್ನು ಎದುರಿಸುತ್ತಿದೆ. ದುರಂತವೆಂದರೆ ಕಾಂಗ್ರೆಸ್ ಪಕ್ಷದ ಈ ತೀರ್ಮಾನದಿಂದ ಧಾರ್ಮಿಕ ಅಂಧ ವಿಶ್ವಾಸಗಳು ವೈಜ್ಞಾನಿಕ ಪುರಾವೆಗಳ ವಿರುದ್ಧ ಮೇಲುಗೈ ಸಾಧಿಸಿದಂತಾಗಿದೆ.

ಸೇತುಸಮುದ್ರಂ ಯೋಜನೆ ಭಾ.ಜ.ಪಕ್ಕೆ ಧಾರ್ಮಿಕ ನಂಬಿಕೆಗಳ ಪ್ರಶ್ನೆಯಾಗಿದ್ದರೆ, ಡಿ.ಎಂ.ಕೆ ಮತ್ತಿತರ ಪಕ್ಷಗಳಿಗೆ ಪ್ರಗತಿಯ ಸಂಕೇತವಾಗಿ ಕಂಡುಬರುತ್ತಿರುವುದು ಪ್ರಸ್ತುತ ಸಂಘರ್ಷದ ಕೇಂದ್ರ ಬಿಂದುವಾಗಿದೆ. ದ್ರಾವಿಡ ಪಕ್ಷಗಳಿಗೆ ಸೇತು ಸಮುದ್ರ ಯೋಜನೆ ದ್ರಾವಿಡ ಜನಸಮುದಾಯದ ಪ್ರತಿಷ್ಠೆಯ ಸಂಕೇತವಾಗಿರುವುದನ್ನು "ದ್ರಾವಿಡ ಚಳವಳಿಯನ್ನು ಹತ್ತಿಕ್ಕುವ ಹುನ್ನಾರವನ್ನು ಸೇತುಸಮುದ್ರಂ ವಿರೋಧಿಗಳು ನಡೆಸುತ್ತಿದ್ದಾರೆ" ಎಂಬ ಕರುಣಾನಿಧಿಯವರ ಹೇಳಿಕೆಯಲ್ಲಿ ಕಾಣಬಹುದು. ಈ ನಿಟ್ಟಿನಲ್ಲಿ ಕರುಣಾನಿಧಿಯವರ "ಯಾರು ಈ ರಾಮ, ಆತ ಯಾವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದಿದ್ದ, ಯಾವಾಗ ಈ ಸೇತುವೆ ನಿರ್ಮಿಸಿದ, ಏನಾದರೂ ಪುರಾವೆ ಇದೆಯೇ" ಎಂಬ ಕಿಡಿ ನುಡಿಗಳು ಸಂಘ ಪರಿವಾರದವರನ್ನು ರೊಚ್ಚಿಗೆಬ್ಬಿಸಲು ಸಾಕಷ್ಟು ನೆರವಾಗಿವೆ. ಕರುಣಾನಿಧಿಯವರ ಮಾತುಗಳು ಕೊಂಚ ಸಿನಿಮೀಯ ಶೈಲಿಯೆಂದು ಹೇಳಬಹುದಾದರೂ, ಅವರ ಪ್ರಶ್ನೆಗಳಿಗೆ ಸಾಕ್ಷಾಧಾರಗಳ ಮೂಲಕ ಉತ್ತರಿಸುವ ವ್ಯವಧಾನ ಸಂಘ ಪರಿವಾರಕ್ಕಿದೆಯೇ ಎಂಬುದು ಮೂಲ ಪ್ರಶ್ನೆಯಾಗುತ್ತದೆ. ಇಡೀ ಸನ್ನಿವೇಶವನ್ನು ನೋಡಿದಾಗ ಎಲ್ಲಾ ರಾಜಕೀಯ ಪಕ್ಷಗಳೂ ಸೇತು ಸಮುದ್ರವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಆದರೆ ಈ ಸನ್ನಿವೇಶದಲ್ಲಿ ರಾಮೇಶ್ವರಂ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ನೂರಾರು ವರ್ಷಗಳಿಂದ ಮೀನುಗಾರಿಕೆಯನ್ನೇ ತಮ್ಮ ಜೀವನಾಧಾರವನ್ನಾಗಿ ಮಾಡಿಕೊಂಡಿರುವ ಜನಗಳ ದನಿ ಯಾರಿಗೂ ಕೇಳದಿರುವುದು ವಿಷಾದನೀಯ. ೨೦೦೫ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್‌ರವರು ಸೇತು ಸಮುದ್ರಂ ಯೋಜನೆಯನ್ನು ಉದ್ಘಾಟಿಸಿದ ಸಂದರ್ಭದಲ್ಲೇ ಅಲ್ಲಿನ ಮೀನುಗಾರರು ಯೋಜನೆಯ ವಿರುದ್ಧ ಪ್ರತಿಭಟನೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಹೋರಾಡಲು ಬೀದಿಗಿಳಿದ ಮೀನುಗಾರ ಕುಟುಂಬಗಳು ತಮ್ಮ ಮನೆಗಳ ಮೇಲೆ ಕಪ್ಪುಬಾವುಟ ಹಾರಿಸಿದ್ದಲ್ಲದೆ, ರಾಮನಾಥಪುರಂನ ತೀರದಲ್ಲಿ ನೂರು ದೋಣಿಗಳಲ್ಲಿ ಕಪ್ಪುಬಾವುಟ ಹೊತ್ತು ಪ್ರತಿಭಟನೆ ನಡೆಸಿದ್ದರು. ಮೀನುಗಾರರಲ್ಲಿಯೂ ಭಿನ್ನಾಭಿಪ್ರಾಯಗಳಿದ್ದು ಕೆಲವರು ಈ ಯೋಜನೆಯನ್ನು ಸಮರ್ಥಿಸುತ್ತಾರೆ. ಈ ಯೋಜನೆ ಪೂರ್ಣಗೊಂಡರೆ ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾಗಳ ಕರಾವಳಿಗಳಲ್ಲಿನ ಸಣ್ಣ ಪುಟ್ಟ ಬಂದರುಗಳಿಗೆ ಪಯಣ ಸುಲಭವಾಗುತ್ತದೆ. ಮತ್ತು ಮೀನುಗಾರಿಕೆಯನ್ನು ನಡೆಸಬಹುದೆಂದೂ ಇವರು ಹೇಳುತ್ತಾರೆ. ತೂತ್ತುಕುಡಿಯ ಬಂದರಿನ ಬೆಳವಣಿಗೆಯಿಂದ ಇಡೀ ಪ್ರದೇಶವೇ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತದೆ ಎಂದು ಇವರ ವಾದ. ಆದರೆ ಯೋಜನೆಯನ್ನು ವಿರೋಧಿಸುವವರ ಕಾಳಜಿ ತಮ್ಮ ಜೀವನ ಮಾತ್ರವಲ್ಲದೆ ಪರಿಸರ ರಕ್ಷಣೆಯೂ ಆಗಿರುವುದು ಸ್ಪಷ್ಟವಾಗಿದೆ. ದಕ್ಷಿಣ ದಿಕ್ಕಿನಲ್ಲಿ ಮೀನುಗಾರಿಕೆಗೆ ತೆರಳಲು ಭಾರಿ ಗಾತ್ರದ ದೋಣಿ–ಹಡಗುಗಳ ಅವಶ್ಯಕತೆ ಉಂಟಾಗುವುದರಿಂದ ಸಣ್ಣ ಪುಟ್ಟ ಮೀನುಗಾರರು ಈ ಯೋಜನೆಯಿಂದ ಮೂಲೆಗುಂಪಾಗುತ್ತಾರೆ ಎಂದು ಯೋಜನೆಯ ವಿರೋಧಿಗಳು ಪ್ರತಿಪಾದಿಸುತ್ತಾರೆ. ಹೂಳೆತ್ತುವ ಕಾರ್ಯ ನಿರಂತರವಾದ ಪ್ರಕ್ರಿಯೆಯಾದ್ದರಿಂದ ಯಂತ್ರಗಳು ಉಂಟುಮಾಡುವ ಶಬ್ದ ಮಾಲಿನ್ಯ ಮತ್ತು ಪ್ರಹಾರದಿಂದ ಮೀನುಗಳು ಮಾತ್ರವಲ್ಲದೆ ಅನೇಕ ರೀತಿಯ ಜಲಚರಗಳು ನಾಶವಾಗುತ್ತವೆ.

ಹಾಗಾಗಿ ಸೇತು ಸಮುದ್ರಂ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಜನರ ಧಾರ್ಮಿಕ ನಂಬಿಕೆಗಿಂತಲೂ, ಈ ಯೋಜನೆಯಿಂದ ಪರಿಸರಕ್ಕೆ ಉಂಟಾಗುವ ಹಾನಿಯ ಬಗ್ಗೆ ಯೋಚಿಸುವುದು ಸರ್ಕಾರದ ಜವಾಬ್ದಾರಿಯಾಗಬೇಕಿದೆ. ಈ ಯೋಜನೆಯಿಂದ, ಸೇತು ಸಮುದ್ರವನ್ನು ಹೂಳೆತ್ತುವ ಕ್ರಿಯೆಯ ಮೂಲಕ ಧ್ವಂಸ ಮಾಡಿದಲ್ಲಿ, ನೈಸರ್ಗಿಕ ಸಮತೋಲನಕ್ಕೆ ಅಪಾಯ ಉಂಟಾಗುವುದೇ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಇದರ ಪರಿಣಾಮವಾಗಿ ಭಾರತದ ಕರಾವಳಿ ಮತ್ತು ಕಡಲ ತೀರಗಳು ಮುಂಬರುವ ತೀವ್ರತರವಾದ ಸುನಾಮಿಗಳಿಗೆ ತುತ್ತಾಗುವುದೇ ಎಂಬ ಶಂಕೆ ಅನೇಕ ಪರಿಸರ ವಿಜ್ಞಾನಿಗಳನ್ನು ಕಾಡುತ್ತಿದೆ. ಈ ಯೋಜನೆಯಿಂದ ಯಾವ ಪ್ರಮಾಣದ ಆರ್ಥಿಕ ಮತ್ತು ವಾಣಿಜ್ಯ ಪ್ರಗತಿ ಸಾಧ್ಯ ಎಂಬ ಪ್ರಶ್ನೆ ಅರ್ಥಶಾಸ್ತ್ರಜ್ಞರನ್ನು ಕಾಡುತ್ತಿದೆ. ಈ ಯೋಜನೆ ಪ್ರಗತಿಯ ಸಂಕೇತ ಎನ್ನುವುದಾದಲ್ಲಿ ಇದರಿಂದ ಸಾಮಾನ್ಯ ಜನತೆಗೆ ಯಾವ ರೀತಿ ಉಪಯೋಗವಾಗಲಿದೆ ಎಂಬ ಮೂಲಭೂತ ಪ್ರಶ್ನೆ ಕಾಡುತ್ತಿದೆ. ಏಕೆಂದರೆ ಜಾಗತೀಕರಣ ಯುಗದಲ್ಲಿ ಪ್ರಗತಿ ಎಂದರೆ ಉಳ್ಳವರಿಗಾಗಿ ಕೈಗೊಳ್ಳುವ ಕಾರ್ಯಕ್ರಮ ಮಾತ್ರವಾಗಿದೆ. ವಿಶೇಷ ಆರ್ಥಿಕ ವಲಯ, ಬಯೋಟೆಕ್ನಾಲಜಿ, ಕಾರಿಡಾರ್ ರಸ್ತೆಗಳು, ಮೇಲು ಸೇತುವೆಗಳು, ಅಮ್ಯೂಸ್‌ಮೆಂಟ್ ಪಾರ್ಕುಗಳು ಇತ್ಯಾದಿ ನಿದರ್ಶನಗಳಷ್ಟೆ. ಸೇತು ಸಮುದ್ರಂ ಯೋಜನೆಯ ಮೂಲಕ ಕಾರ್ಪೋರೇಟ್ ಶಕ್ತಿಗಳು, ಬಹುರಾಷ್ಟ್ರೀಯ ಕಂಪನಿಗಳು ದೇಶವನ್ನು ಲೂಟಿ ಮಾಡಲು ಹವಣಿಸಿದ್ದಲ್ಲಿ ಅದನ್ನು ವಿರೋಧಿಸುವುದು ಅಗತ್ಯವಾಗುತ್ತದೆ. □

ಭಾ.ಜ.ಪದ ಮೂಲಭೂತವಾದಿ ಸಂಗೀತದ ತಾಳಕ್ಕೆ ಹೆಜ್ಜೆ ಹಾಕಲು ಸದಾ ಕಾಯುತ್ತಿರುವ ಕಾಂಗ್ರೆಸ್ ಪಕ್ಷವು, ಕೆಲವು ವಿಹಿಂಪ ಕಾರ್ಯಕರ್ತರು ನಡೆಸಿದ ಪ್ರತಿಭಟನೆಗೆ ಹೆದರಿ, ಸರ್ವೋಚ್ಚ ನ್ಯಾಯಾಲಯದಲ್ಲಿ ಪುರಾತತ್ವ ಇಲಾಖೆ ಸಲ್ಲಿಸಿದ್ದ ಮುಚ್ಚಳಿಕೆ ಪತ್ರವನ್ನು ಹಿಂದೆಗೆದುಕೊಂಡಿದ್ದು ಸಂಘ ಪರಿವಾರಕ್ಕೆ ಗರಿ ಮೂಡಿದಂತಾಗಿದೆ. ೧೯೮೬ರಲ್ಲಿ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ಬಾಬ್ರಿ ಮಸೀದಿಯ ಗೇಟಿನ ಬೀಗ ತೆಗೆಯುವಂತೆ ಸೂಚಿಸಿದ ಮತ್ತು ಶಹಬಾನೋ ಪ್ರಕರಣದಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೆ ಮಣಿಯಲು ಪ್ರೋತ್ಸಾಹಿಸಿದ ಕೇಂದ್ರ ಕಾನೂನು ಮಂತ್ರಿ ಹೆಚ್.ಆರ್. ಭಾರದ್ವಾಜ್‌ರವರೇ ಈಗಲೂ ಸಹ ಮುಚ್ಚಳಿಕೆ ಪತ್ರವನ್ನು ಹಿಂಪಡೆಯುವಲ್ಲಿ ಸರ್ಕಾರವನ್ನು ಒತ್ತಾಯಿಸಿರುವುದು, ಕಾಕತಾಳೀಯವಷ್ಟೆ. ಆದರೆ ಆಗ ತಮ್ಮ ಕೃತ್ಯದಿಂದ ಹಿಂದೂ ಮತ್ತು ಮುಸ್ಲಿಂ, ಎರಡೂ ಸಮುದಾಯಗಳ ಬೆಂಬಲ ಕಳೆದುಕೊಂಡ ಕಾಂಗ್ರೆಸ್ ಪಕ್ಷ ಪುನಃ ಅದೇ ಸನ್ನಿವೇಶವನ್ನು ಎದುರಿಸುತ್ತಿದೆ. ದುರಂತವೆಂದರೆ ಕಾಂಗ್ರೆಸ್ ಪಕ್ಷದ ಈ ತೀರ್ಮಾನದಿಂದ ಧಾರ್ಮಿಕ ಅಂಧ ವಿಶ್ವಾಸಗಳು ವೈಜ್ಞಾನಿಕ ಪುರಾವೆಗಳ ವಿರುದ್ಧ ಮೇಲುಗೈ ಸಾಧಿಸಿದಂತಾಗಿದೆ.

೧೨೩ ಪರಮಾಣು ಒಪ್ಪಂದ

ನಾ. ದಿವಾಕರ

ಚೀನಾದೊಡಗಿನ ೧೨೩ ಒಪ್ಪಂದದಲ್ಲಿ, ಯಾವುದೇ ರಾಷ್ಟ್ರವು ತನ್ನ ಆಂತರಿಕ ಕಾನೂನುಗಳನ್ನು ಆಧರಿಸಿ, ಒಪ್ಪಂದವನ್ನು ಉಲ್ಲಂಘಿಸುವಂತಿಲ್ಲ. ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ಸೂಕ್ಷ್ಮವಾದ ಅಂಶ ಭಾರತದ ಒಪ್ಪಂದದಲ್ಲಿ ಇಲ್ಲದಿರುವುದು ಚಿಂತೆಗೀಡು ಮಾಡುವ ವಿಷಯವಾಗಿದೆ. ಇದೇ ನೆಪದಲ್ಲಿ ಹೈಡ್ ಕಾಯ್ದೆಯನ್ನಾಧರಿಸಿ ಅಮೆರಿಕಾ ಭಾರತದೊಡಗಿನ ಒಪ್ಪಂದವನ್ನು ರದ್ದುಪಡಿಸಬಹುದಾಗಿದೆ. ಭಾರತ ಸರ್ಕಾರದ ವಕ್ತಾರರ ಒತ್ತಾಯದ ಮೇರೆಗೆ, ಅಂತಾರಾಷ್ಟ್ರೀಯ ಕಾಯ್ದೆಗಳ ನಿಯಮಗಳಿಗನುಸಾರವಾಗಿ ಒಪ್ಪಂದವನ್ನು ಜಾರಿಗೊಳಿಸಲಾಗುವುದು ಎಂಬ ಅಂಶವನ್ನು ಉಲ್ಲೇಖಿಸಲಾಗಿದೆಯಾದರೂ, ಈ ಅಂತಾರಾಷ್ಟ್ರೀಯ ಕಾಯ್ದೆ ಎಂದರೆ ವಿಯೆನ್ನಾ ಒಡಂಬಡಿಕೆಗಳೆಂದೇ ಅರ್ಥೈಸಬಹುದು.

(ಕಳೆದ ಸಂಚಿಕೆಯಿಂದ)

ಭಾರತ ಅಮೆರಿಕಾ ಪರಮಾಣು ಸಹಕಾರ ಒಪ್ಪಂದವು ಇಡೀ ಪರಮಾಣು ಇಂಧನ ವ್ಯೂಹವನ್ನು ಒಳಗೊಳ್ಳುವುದರ ಬಗ್ಗೆ ತಮ್ಮದೇ ಆದ ಸಂದೇಹವನ್ನು ವ್ಯಕ್ತಪಡಿಸುವ ಎಡ ಪಕ್ಷಗಳು ಈ ಒಪ್ಪಂದದಲ್ಲಿ ಇಂಧನ ಸಂಪದ್ಭರಿತತೆ, ಪುನಸ್ಸಂಸ್ಕರಣೆ ಮತ್ತು ಭಾರ ಜಲ ಉತ್ಪಾದನಾ ತಂತ್ರಜ್ಞಾನಗಳಿಗೆ ಯಾವುದೇ ರೀತಿಯ ಸಹಕಾರವನ್ನು ಅಮೆರಿಕಾದಿಂದ ಅಪೇಕ್ಷಿಸಲಾಗುವುದಿಲ್ಲ ಎಂದು ಪ್ರತಿಪಾದಿಸುತ್ತವೆ. ಹೈಡ್ ಕಾಯ್ದೆಯಲ್ಲಿ ದಹನಕೂಲಿ ಸಾಮಗ್ರಿ (Fissile material) ಒಪ್ಪಂದದ ಬಗ್ಗೆ ಇರುವ ಅಂಶಗಳು ಒಪ್ಪವಂತಹುದಲ್ಲವೆಂದು ಹೇಳಲಾಗುತ್ತದೆ. ಅಮೆರಿಕಾದ ಅಣು ಪ್ರಸರಣ ವಿರೋಧಿ ನೀತಿಗೆ ಪೂರಕವಾಗಿ ಭಾರತದೊಡನೆ ಸಹಕಾರ ಬೆಳೆಸುವುದೇ ಅಮೆರಿಕಾದ ಉದ್ದೇಶವೆಂಬ ಬರ್ನ್ಸ್‌ರವರ ಹೇಳಿಕೆ ಇಲ್ಲಿ ಗಮನಾರ್ಹ.

ಚೀನಾದೊಡಗಿನ ೧೨೩ ಒಪ್ಪಂದದಲ್ಲಿ, ಯಾವುದೇ ರಾಷ್ಟ್ರವು ತನ್ನ ಆಂತರಿಕ ಕಾನೂನುಗಳನ್ನು ಆಧರಿಸಿ, ಒಪ್ಪಂದವನ್ನು ಉಲ್ಲಂಘಿಸುವಂತಿಲ್ಲ. ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ಸೂಕ್ಷ್ಮವಾದ ಅಂಶ ಭಾರತದ ಒಪ್ಪಂದದಲ್ಲಿ ಇಲ್ಲದಿರುವುದು ಚಿಂತೆಗೀಡು ಮಾಡುವ ವಿಷಯವಾಗಿದೆ. ಇದೇ ನೆಪದಲ್ಲಿ ಹೈಡ್ ಕಾಯ್ದೆಯನ್ನಾಧರಿಸಿ ಅಮೆರಿಕಾ ಭಾರತದೊಡಗಿನ ಒಪ್ಪಂದವನ್ನು ರದ್ದುಪಡಿಸಬಹುದಾಗಿದೆ. ಭಾರತ ಸರ್ಕಾರದ ವಕ್ತಾರರ ಒತ್ತಾಯದ ಮೇರೆಗೆ, ಅಂತಾರಾಷ್ಟ್ರೀಯ ಕಾಯ್ದೆಗಳ ನಿಯಮಗಳಿಗನುಸಾರವಾಗಿ ಒಪ್ಪಂದವನ್ನು ಜಾರಿಗೊಳಿಸಲಾಗುವುದು ಎಂಬ ಅಂಶವನ್ನು ಉಲ್ಲೇಖಿಸಲಾಗಿದೆಯಾದರೂ, ಈ ಅಂತಾರಾಷ್ಟ್ರೀಯ ಕಾಯ್ದೆ ಎಂದರೆ ವಿಯೆನ್ನಾ ಒಡಂಬಡಿಕೆಗಳೆಂದೇ ಅರ್ಥೈಸಬಹುದು. ಈ ನಿಯಮದಡಿಯಲ್ಲಿ ಭಾರತಕ್ಕೆ ಸೂಕ್ತ ರಕ್ಷಣೆ ದೊರೆಯಬಹುದಾದರೂ, ಅಮೆರಿಕಾಗೆ ಒದಗಿರುವ, ರಫ್ತು ಮಾಡಿದ ಪರಮಾಣು ಪದಾರ್ಥಗಳನ್ನು ಹಿಂಪಡೆಯುವ ಹಕ್ಕನ್ನು ಅಮೆರಿಕಾ ಸಮಯ ಬಂದಾಗ ಉಪಯೋಗಿಸಿಕೊಳ್ಳುವ ಸಾಧ್ಯತೆಗಳೂ ಇರುತ್ತವೆ.

ಒಪ್ಪಂದದ ವಿಧಿ ೧೪ರ ಅಡಿಯಲ್ಲಿ ಭಾರತಕ್ಕೆ ಸೂಕ್ತ ರಕ್ಷಣೆ ದೊರೆಯುವುದಾದರೂ, ತನ್ನದೇ ಆದ ಆಂತರಿಕ ಕಾನೂನುಗಳಿಂದ ಭದ್ರತೆಯನ್ನು ಧೃಡಪಡಿಸಿಕೊಳ್ಳುವುದು ಸೂಕ್ತವೆಂದು ಎಡ ಪಕ್ಷಗಳು ಪ್ರತಿಪಾದಿಸುತ್ತವೆ. ಉದಾಹರಣೆಗೆ ೧೯೬೨ರ ಪರಮಾಣು ಶಕ್ತಿ ಕಾಯ್ದೆ ಮತ್ತು ವಿಶೇಷ ರಸಾಯನಿಕಗಳು, ಜೀವಾಣುಗಳು, ಸಲಕರಣೆಗಳು, ವಸ್ತುಗಳು ಮತ್ತು ತಂತ್ರಜ್ಞಾನಗಳನ್ನು ನಿಯಂತ್ರಿಸುವ ಕಾಯ್ದೆಯನ್ನು (SCOMET) ತಿದ್ದುಪಡಿ ಮಾಡುವ ಮೂಲಕ ಭಾರತ ಸರ್ಕಾರವು ಪರಮಾಣು ಪದಾರ್ಥಗಳನ್ನು ಮತ್ತು ಸಲಕರಣೆಗಳನ್ನು ರಫ್ತು ಮಾಡುವುದರ ವಿರುದ್ಧ ಸೂಕ್ತ ಶಾಸನವನ್ನು ಜಾರಿಗೊಳಿಸಬಹುದು. ಇದರಿಂದ ನಮ್ಮ ದೇಶದ ಪವರ್ ರಿಯಾಕ್ಟರುಗಳು ನಿರಂತರವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಅದೇ ರೀತಿ ಬದಲಿ ಇಂಧನದ ಪುನಸ್ಸಂಸ್ಕರಣಕ್ಕೆ ಅವಕಾಶ ನೀಡದ ಯಾವುದೇ ರಿಯಾಕ್ಟರುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಪರಮಾಣು ಶಕ್ತಿ ಕಾಯ್ದೆಗೆ ತಿದ್ದುಪಡಿ ತರಬಹುದಾಗಿದೆ.

ಅಮೆರಿಕಾ ಏಷ್ಯಾ ಖಂಡದಲ್ಲಿ ಸ್ಥಾಪಿಸಲೆತ್ನಿಸುತ್ತಿರುವ ತನ್ನ ಅಧಿಪತ್ಯಕ್ಕೆ ಒಂದು ಸಾಧನಹವಾಗಿ ಭಾರತವನ್ನು ಉಪಯೋಗಿಸುವ ದೃಷ್ಟಿಯಿಂದ ಭಾರತದೊಡನೆ ರಣತಾಂತ್ರಿಕ ಸಂಬಂಧವನ್ನು ಬೆಳೆಸಲು ಯತ್ನಿಸುತ್ತಿರುವುದು ಸ್ಪಷ್ಟವಾಗಿ ಕಾಣಬಹುದಾಗಿದೆ. ೧೯೭೪ರಲ್ಲಿ ಭಾರತ ಪರಮಾಣು ಪರೀಕ್ಷೆ ನಡೆಸಿದ ನಂತರದಲ್ಲಿ ಭಾರತಕ್ಕೆ ತಂತ್ರಜ್ಞಾನ ಸರಬರಾಜು ಮಾಡಕೂಡದೆಂಬ ಉದ್ದೇಶದಿಂದಲೇ ೪೫ ರಾಷ್ಟ್ರಗಳ ಪರಮಾಣು ಸಾಮಗ್ರಿ ಸರಬರಾಜು ಗುಂಪನ್ನು ಅಮೆರಿಕಾ ತನ್ನ ನೇತೃತ್ವದಲ್ಲಿ ಸ್ಥಾಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಇಂದು ಅದೇ ಅಮೆರಿಕಾ ಸರ್ಕಾರ ಭಾರತದೊಡನೆ ಅಣು ವ್ಯಾಪಾರ ನಡೆಸುವ ಸಲುವಾಗಿ ಈ ಗುಂಪನ್ನು ಮುಕ್ತಗೊಳಿಸಲು ಯತ್ನಿಸುತ್ತಿದೆ.

ಜುಲೈ ೨೦೦೫ರಲ್ಲಿ ಏರ್ಪಟ್ಟ ಭಾರತ ಅಮೆರಿಕಾ ನಡುವಿನ



ರಕ್ಷಣಾ ಚೌಕಟ್ಟಿನ ಒಪ್ಪಂದವನ್ನೂ ಸಹ ಎಡ ಪಕ್ಷಗಳು ಪ್ರಾರಂಭದಿಂದಲೇ ವಿರೋಧಿಸುತ್ತಾ ಬಂದಿವೆ. ಈ ಒಪ್ಪಂದದ ಪ್ರಕಾರ ಭಾರತ ಸರ್ಕಾರವು "ಅಂತರ್‌ಕಾರ್ಯಾಚರಣೆಯ ನೆಪದಲ್ಲಿ ಭಾರತ ಮತ್ತು ಅಮೆರಿಕಾದ ಸೇನೆಗಳು ಜಂಟಿಯಾಗಿ ಕಾರ್ಯ ನಿರ್ವಹಿಸುತ್ತವೆ" ತದನಂತರದಲ್ಲಿ ನಡೆದ ಅನೇಕ ಜಂಟಿ ಸೇನಾ ಕಾರ್ಯಾಚರಣೆಗಳು ಇದಕ್ಕೆ ನಿದರ್ಶನವಷ್ಟೆ. ಈಗ ಈ ಜಂಟಿ ಕಾರ್ಯಾಚರಣೆಯನ್ನು ವಿಸ್ತರಿಸಿ, ಜಪಾನ್, ಆಸ್ಟ್ರೇಲಿಯಾಗಳನ್ನೂ ಸೇರಿಸಿಕೊಳ್ಳಲಾಗುತ್ತಿದೆ. ಈ ರೀತಿಯ ಒಪ್ಪಂದಗಳ ಮೂಲಕ ಅಮೆರಿಕಾ ಸರ್ಕಾರವು ಭಾರತಕ್ಕೆ ಪರಮಾಣು ರಿಯಾಕ್ಟರುಗಳನ್ನು ಸರಬರಾಜು ಮಾಡುವುದರೊದಿಗೇ, ಯುದ್ಧ ವಿಮಾನಗಳು, ನೌಕಾ ಹಡಗುಗಳು ರಾಡಾರ್‌ಗಳು, ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಪ್ರೇರೇಪಿಸುತ್ತಿರುವುದು ಸ್ಪಷ್ಟವಾಗುತ್ತಿದೆ.

೧೨೩ ಒಪ್ಪಂದಕ್ಕೆ ಮೂಲ ಕಾರಣ ಭಾರತದಲ್ಲಿ ದಿನೇ ದಿನೇ ಏರುತ್ತಿರುವ ವಿದ್ಯುತ್ ಶಕ್ತಿಯ ಬೇಡಿಕೆಯನ್ನು ಪೂರೈಸುವುದೇ ಆಗಿದೆ ಎಂದು ಹೇಳಲಾಗುತ್ತದೆ. ಆದರೆ ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಅಣು ವಿದ್ಯುತ್ ಶಕ್ತಿಯ ಪಾಲು ಶೇ ಮೂರರಷ್ಟಿದ್ದು, ೨೦೨೦ ವೇಳೆಗೆ ಶೇ ೭ ರಷ್ಟಾಗುವ ಸಾಧ್ಯತೆಗಳಿವೆ. ಈ ಅಲ್ಪ ಸಾಧನೆಗಾಗಿ ಭಾರತದ ಸಾರ್ವಭೌಮತೆಯನ್ನೇ ಒತ್ತೆ ಇಡುವುದು ಸಮರ್ಥನೀಯವಲ್ಲವೆಂದೇ ಹೇಳಬಹುದು. ಎಡ ಪಕ್ಷಗಳ ವಿರೋಧವೂ ಇದನ್ನೇ ಪ್ರತಿಪಾದಿಸುತ್ತದೆ.

ಭಾ.ಜ.ಪದ ರಾಜಕೀಯ

೧೨೩ ಒಪ್ಪಂದದ ವಿರುದ್ಧ ಸಂಸತ್ತಿನಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಭಾ.ಜ.ಪದ ಪಾತ್ರ ಹಲವಾರು ದ್ವಂದ್ವಗಳಿಂದ ಕೂಡಿರುವುದು ಸ್ಪಷ್ಟವಾಗಿದೆ. ಒಂದೆಡೆ ಪಕ್ಷದ ತಾತ್ವಿಕ-ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಅಮೆರಿಕಾದೊಡನೆ ಮೈತ್ರಿ ಸಾಧಿಸುವ ಪರಂಪರೆಗೆ ನಾಂದಿ ಹಾಡಿದ ಪಕ್ಷ ಇಂದು ೧೨೩ ಒಪ್ಪಂದವನ್ನು ವಿರೋಧಿಸುತ್ತಿದ್ದರೆ ಅದರ ಹಿಂದೆ ತಾಂತ್ರಿಕ ಅಂಶಗಳಿಗಿಂತಲೂ, ರಾಜಕೀಯ ಉದ್ದೇಶವೇ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ. ೧೨೩ ಒಪ್ಪಂದದ ವಿರುದ್ಧ ಎಡ ಪಕ್ಷಗಳು ನಡೆಸುತ್ತಿರುವ ಪ್ರಚಾರಾಂದೋಲನದಿಂದ ಭಾ.ಜ.ಪ ಹಿಂದೆ ಸರಿಯಲು ಕಾರಣವೆಂದರೆ ಸರ್ಕಾರವು ಇಡೀ ಒಪ್ಪಂದದ ಪ್ರಕ್ರಿಯೆಯಲ್ಲಿ ಭಾ.ಜ.ಪದ ಸಲಹೆ ಮತ್ತು ನೆರವನ್ನು ಪಡೆದಿತ್ತು. ಭಾ.ಜ.ಪದ ಕೆಲವು ಸಂಸದರು ಅನೇಕ ಸಂದರ್ಭಗಳಲ್ಲಿ ಈ ಒಪ್ಪಂದದ ಸಾಧಕ ಬಾಧಕಗಳನ್ನು ಕಾಂಗ್ರೆಸ್ ನಾಯಕರೊಡನೆ ಚರ್ಚಿಸಿರುವುದನ್ನೂ ಹಿರಿಯ ಮಂತ್ರಿಯೊಬ್ಬರು ದೃಢಪಡಿಸುತ್ತಾರೆ. ಜಾಗತೀಕರಣ ಪ್ರಕ್ರಿಯೆಗೆ ಒಂದು ತೀವ್ರತೆಯನ್ನು ತಂದುಕೊಟ್ಟ ನಂತರದಲ್ಲಿ ವಾಜಪೇಯಿ ನೇತೃತ್ವದ ಸರ್ಕಾರ ಕೈಗೊಂಡ ಮೊದಲ ಮಹತ್ವದ ನಿರ್ಧಾರವೆಂದರೆ ಅಮೆರಿಕಾದೊಡನೆ ಭಾರತದ ಸಂಬಂಧಗಳನ್ನು ಸುಧಾರಿಸುವುದೇ ಆಗಿತ್ತು. ಈ ನಿಟ್ಟಿನಲ್ಲೇ ೧೯೯೮ರಲ್ಲೇ ವಾಜಪೇಯಿ ಸರ್ಕಾರವು ಅಮೆರಿಕಾದೊಡನೆ ಪರಮಾಣು ಸಹಕಾರ ಮತ್ತು ಒಪ್ಪಂದಗಳಿಗೆ ನಾಂದಿ ಹಾಡಿತ್ತು. ಅಂದಿನ ವಿದೇಶಾಂಗ ಮಂತ್ರಿ ಜಸ್ವಂತ್ ಸಿಂಗ್ ಮತ್ತು ಅಮೆರಿಕಾದ ಅಂದಿನ ಅಧ್ಯಕ್ಷ ಬಿಲ್ ಕ್ಲಿಂಟನ್‌ರವರ ಸಹ ಕಾರ್ಯದರ್ಶಿ ಟಲ್‌ಬೋಟ್‌ರವರ ನಡುವೆ ನಡೆದ ೧೪ ಸುತ್ತಿನ ಮಾತುಕತೆಗಳಲ್ಲಿ ಎರಡೂ ರಾಷ್ಟ್ರಗಳ ನಡುವಿನ ರಣತಾಂತ್ರಿಕ-ರಾಜತಾಂತ್ರಿಕ ಸಂಬಂಧಗಳನ್ನು ಸುಧಾರಿಸುವ ಮತ್ತು ಅಭಿವೃದ್ಧಿಪಡಿಸುವ ಬಗ್ಗೆಯೇ ಹೆಚ್ಚು ಚರ್ಚೆ

೧೨೩ ಒಪ್ಪಂದಕ್ಕೆ ಮೂಲ ಕಾರಣ ಭಾರತದಲ್ಲಿ ದಿನೇ ದಿನೇ ಏರುತ್ತಿರುವ ವಿದ್ಯುತ್ ಶಕ್ತಿಯ ಬೇಡಿಕೆಯನ್ನು ಪೂರೈಸುವುದೇ ಆಗಿದೆ ಎಂದು ಹೇಳಲಾಗುತ್ತದೆ. ಆದರೆ ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಅಣು ವಿದ್ಯುತ್ ಶಕ್ತಿಯ ಪಾಲು ಶೇ ಮೂರರಷ್ಟಿದ್ದು, ೨೦೨೦ ವೇಳೆಗೆ ಶೇ ೭ ರಷ್ಟಾಗುವ ಸಾಧ್ಯತೆಗಳಿವೆ. ಈ ಅಲ್ಪ ಸಾಧನೆಗಾಗಿ ಭಾರತದ ಸಾರ್ವಭೌಮತೆಯನ್ನೇ ಒತ್ತೆ ಇಡುವುದು ಸಮರ್ಥನೀಯವಲ್ಲವೆಂದೇ ಹೇಳಬಹುದು. ಎಡ ಪಕ್ಷಗಳ ವಿರೋಧವೂ ಇದನ್ನೇ ಪ್ರತಿಪಾದಿಸುತ್ತದೆ.

ನಡೆದಿತ್ತು. ವಾಜಪೇಯಿ ಸರ್ಕಾರವು CTBTಗೆ ಸಹಿ ಮಾಡುವ ನಿರ್ಧಾರ ಕೈಗೊಂಡಿದ್ದೂ, ಈ ಸಂಬಂಧಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದಲೇ ಆಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದು. ಈ ವಾದವನ್ನು ಭಾ.ಜ.ಪ ತಾತ್ವಿಕವಾಗಿ ಒಪ್ಪುವುದಿಲ್ಲವಾದರೂ, ಎನ್.ಡಿ.ಎ ಮಿತ್ರ ಪಕ್ಷಗಳಲ್ಲಿ ಅನೇಕ ನಾಯಕರು ಇದನ್ನು ಅನುಮೋದಿಸುತ್ತಾರೆ. ಜಸ್ವಂತ್ ಸಿಂಗ್‌ರವರ ಅವಧಿಯ ವಿದೇಶಾಂಗ ನೀತಿಗಳಿಗೂ, ಇಂದಿನ ಕಾಂಗ್ರೆಸ್ ಪಕ್ಷದ ನೀತಿಗಳಿಗೂ ಅಷ್ಟೇನೂ ವ್ಯತ್ಯಾಸ ಕಂಡುಬರುವುದಿಲ್ಲ ಎಂಬ ಅಂಶವನ್ನು ಅಲ್ಲಗಳೆಯಲಾಗುವುದಿಲ್ಲ.

ಇಲ್ಲಿ ಎಡ ಪಕ್ಷಗಳ ಮತ್ತು ಭಾ.ಜ.ಪದ ಸೈದ್ಧಾಂತಿಕ ಭಿನ್ನತೆಗಳನ್ನೂ ಸ್ಪಷ್ಟವಾಗಿ ಗುರುತಿಸಬಹುದು. ಭಾ.ಜ.ಪ. ತನ್ನ ಜನಸಂಘದ ಅವತಾರದ ಕಾಲದಿಂದಲೂ ಭಾರತದ ವಿದೇಶಾಂಗ ನೀತಿಯನ್ನು ಅಮೆರಿಕಾ ಪರವಾಗಿಯೇ ಪಾಲಿಸಬೇಕೆಂದು ಪ್ರತಿಪಾದಿಸುತ್ತಾ ಬಂದಿದೆ. ನೆಹರೂ ಕಾಲದಿಂದಲೂ ಅನುಸರಿಸುತ್ತಿದ್ದ ಸೋವಿಯತ್ ಪರ ಅಥವಾ ಅಮೆರಿಕಾ ವಿರೋಧಿ ವಿದೇಶಾಂಗ ನೀತಿಗೆ ತಿಲಾಂಜಲಿ ಹಾಡಲು ಭಾ.ಜ.ಪ ತನ್ನ ಆಡಳಿತಾವಧಿಯಲ್ಲಿ ಯತ್ನಿಸಿರುವುದು ಸ್ಪಷ್ಟವಾಗಿದೆ. ದೇಶದ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವುದಕ್ಕಾಗಿ ತಮ್ಮ ವಿರೋಧವಿದೆ ಎಂಬ ಭಾ.ಜ.ಪ ನಾಯಕರ ಹೇಳಿಕೆ ಪಕ್ಷದ ವಿದೇಶಾಂಗ ನೀತಿಯ ಹಿನ್ನೆಲೆಯಲ್ಲಿ ಬಾಲಿಶವೆನಿಸುತ್ತದೆ. ಭಾ.ಜ.ಪ ಈ ಒಪ್ಪಂದಕ್ಕೆ ತನ್ನ ವಿರೋಧ ಸೂಚಿಸಲು ಪ್ರಮುಖ ಕಾರಣವೆಂದರೆ, ಒಂದು ವೇಳೆ ಈ ಒಪ್ಪಂದದ ವತಿಯಿಂದ ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಲಾಗದಿದ್ದಲ್ಲಿ ಕ್ಷಿಪಣಿಗಳನ್ನು, ಹೈಡ್ರೋಜನ್ ಬಾಂಬುಗಳನ್ನು, ಪರಮಾಣು ಬಾಂಬುಗಳನ್ನು ತಯಾರಿಸಲಾಗುವುದಿಲ್ಲ.

ತಮ್ಮ ಕನಸಿನ ಕೂಸಾದ ಪ್ರಬಲ, ಶಕ್ತಿಯುತ ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಇದು ಅಡ್ಡಿಯಾಗುವ ಸಾಧ್ಯತೆಗಳಿವೆ. ಮತ್ತೊಂದು ಕಾರಣವೆಂದರೆ ಹೈಡ್ ಕಾಯ್ದೆಯ ಸೆಕ್ಷನ್ ೧೦೨(೭)ರ ಪ್ರಕಾರ ಅಮೆರಿಕಾ ಸರ್ಕಾರವು ಭಾರತ ಮತ್ತು ಪಾಕಿಸ್ತಾನವನ್ನು ಸಮಾನ ಶಕ್ತಿಯುತ ರಾಷ್ಟ್ರಗಳೆಂದೇ ವ್ಯಾಖ್ಯಾನಿಸಿದೆ. ಒಂದೆಡೆ ಭಾರತಕ್ಕೆ ಪರಮಾಣು ರಾಷ್ಟ್ರ ಎಂಬ ಪಟ್ಟ ನೀಡದಿರುವುದು, ಇನ್ನೊಂದೆಡೆ ಪಾಕಿಸ್ತಾನದೊಡನೆ ಇದೇ ರೀತಿಯ ಒಪ್ಪಂದಕ್ಕೆ ಬರುವುದು, ಭಾ.ಜ.ಪ ಪಾಳಯದಲ್ಲಿ ಗೊಂದಲ ಮೂಡಿಸಿರುವುದು ಸ್ಪಷ್ಟವಾಗಿದೆ. ಇನ್ನೊಂದೆಡೆ ಎಡ ಪಕ್ಷಗಳು ತಾತ್ವಿಕವಾಗಿ ಅಣು ಒಪ್ಪಂದವನ್ನೇ ವಿರೋಧಿಸುತ್ತಲೇ, ಅಮೆರಿಕಾದೊಡನೆ ಯಾವುದೇ ರೀತಿಯ ರಾಜತಾಂತ್ರಿಕ, ರಣ ತಾಂತ್ರಿಕ ಮತ್ತು ಮಿಲಿಟರಿ ಒಪ್ಪಂದಗಳನ್ನು ತೀವ್ರವಾಗಿ ವಿರೋಧಿಸುತ್ತವೆ. ಪರಮಾಣು ಕ್ಷೇತ್ರದಲ್ಲಿ ಭಾರತ ತನ್ನ ಸಾರ್ವಭೌಮತ್ವವನ್ನು, ಸ್ವಂತಿಕೆಯನ್ನೂ ಕಾಪಾಡಿಕೊಳ್ಳಬೇಕೆಂದು ವಾದಿಸುವಲ್ಲಿ, ಮುಂಬರುವ ದಿನಗಳಲ್ಲಿ ಭಾರತದ ಅಣ್ವಸ್ತ್ರ ಪರೀಕ್ಷೆಯನ್ನು ಸಮರ್ಥಿಸುವ ಅಪಾಯ ಕಂಡು ಬರುವುದಾದರೂ, ಸದ್ಯದ ಪರಿಸ್ಥಿತಿಯಲ್ಲಿ ಅಮೆರಿಕಾದ ಹಿಡಿತದಿಂದ ತಪ್ಪಿಸಿಕೊಳ್ಳುವುದೇ ಭಾರತಕ್ಕೆ ಪ್ರಮುಖ ಧ್ಯೇಯವಾಗಬೇಕಾಗಿದೆ. ಹಾಗಾಗಿ ಎಡ ಪಕ್ಷಗಳ ನಿಲುವು ದೇಶದ ಸಾಮಾನ್ಯ ಜನತೆಯ ದೃಷ್ಟಿಯಿಂದ ಸಮರ್ಥನೀಯವೆಂದೇ ಹೇಳಬಹುದು. ಹೇಳಬಹುದು.

ಅಮೆರಿಕಾದ ಸಾಮ್ರಾಜ್ಯಶಾಹಿ ರಾಜಕೀಯ

ಈ ಮೊದಲೇ ಹೇಳಿದಂತೆ ೧೨೩ ಒಪ್ಪಂದವನ್ನು ಭಾರತ ಅಂಗೀಕರಿಸಿ, ಕಾರ್ಯಗತಗೊಳಿಸಿದಲ್ಲಿ ಭಾರತ ಮತ್ತು ಅಮೆರಿಕಾ ದೇಶಗಳ ಸಂಬಂಧಗಳು ಒಂದು ಹೊಸ ಸ್ವರೂಪವನ್ನೇ ಪಡೆದುಕೊಳ್ಳುತ್ತವೆ. ಒಪ್ಪಂದಕ್ಕೆ ಸಮ್ಮತಿ ದೊರೆಯುತ್ತದೆ ಎಂಬ ಭರವಸೆಯಲ್ಲಿ ಈಗಾಗಲೇ ಭಾರತ-ಅಮೆರಿಕಾ-ಜಪಾನ್-ಆಸ್ಟ್ರೇಲಿಯಾದ ನಾಲ್ಕು ದೇಶಗಳ ನೌಕಾ ಚಟುವಟಿಗಳು ಬಂಗಾಲ ಕೊಲ್ಲಿಯಲ್ಲಿ ಪ್ರಾರಂಭವಾಗಿದೆ. ಅಂಡಮಾನಿನ ಸಾಗರ ಪ್ರದೇಶದಲ್ಲಿ ಈ ನಾಲ್ಕೂ ದೇಶಗಳ ನೌಕಾ ಪಡೆಗಳು ಯುದ್ಧ ತಯಾರಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದು ಸಿಂಗಾಪೂರ ಸಹ ಸೇರಿಕೊಳ್ಳುವ ಸಾಧ್ಯತೆಗಳಿವೆ ಈಗಾಗಲೇ ಅಮೆರಿಕಾದಿಂದ ೧೭೦ ಯುದ್ಧ ವಿಮಾನಗಳನ್ನು ಹೊತ್ತ ಎರಡು ನೌಕೆಗಳು, ಕ್ಷಿಪಣಿ ನಾಶಗೊಳಿಸುವ ಸಾದನಗಳು, ಅಣು ಸಬ್ ಮೆರಿನ್‌ಗಳು, ಮತ್ತು ಭಾರತದಿಂದ ೧೭ ಯುದ್ಧ ನೌಕೆಗಳು ಅಲ್ಲಿ ಬೀಡು ಬಿಟ್ಟಿವೆ. ೨೦೦೫ರಲ್ಲಿ ಏರ್ಪಟ್ಟ ಭಾರತ ಅಮೆರಿಕಾ ರಕ್ಷಣಾ ಚೌಕಟ್ಟಿನ ಒಪ್ಪಂದದನ್ವಯ ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಈ ಮಿಲಿಟರಿ ಕಾರ್ಯಾಚರಣೆಗಳು ಮತ್ತು ಶಸ್ತ್ರಾಭ್ಯಾಸಗಳು ನಿರಂತರವಾಗಿ ನಡೆಯುವುದು ಶತಸಿದ್ಧವೆಂದೇ ಹೇಳಬಹುದು. ೧೨೩ ಒಪ್ಪಂದವನ್ನು ಭಾರತ ಒಪ್ಪಿದಲ್ಲಿ, ಈ ಮಿಲಿಟರಿ ಶಸ್ತ್ರಾಭ್ಯಾಸಕ್ಕೆ ಮುಕ್ತ ಪರವಾನಗಿ ನೀಡಿದಂತೆಯೇ ಆಗುತ್ತದೆ.

ಅಮೆರಿಕಾದ ರಣತಾಂತ್ರಿಕ ಮತ್ತು ಅಂತಾರಾಷ್ಟ್ರೀಯ ಅಧ್ಯಯನ ಕೇಂದ್ರ, ಜಪಾನಿನ ಅಂತಾರಾಷ್ಟ್ರೀಯ ವ್ಯವಹಾರಗಳ ಸಂಸ್ಥೆ ಮತ್ತು ಭಾರತದ ಕೈಗಾರಿಕೋದ್ಯಮಗಳ ಮಹಾ ಒಕ್ಕೂಟ, ಈ ಮೂರು ಸಂಸ್ಥೆಗಳು ಸಿದ್ಧಪಡಿಸಿದ ಒಂದು ವರದಿಯಲ್ಲಿ ಪರ್ಷಿಯಾದ ಕೊಲ್ಲಿ ಕ್ಷೇತ್ರದಲ್ಲಿ ಸ್ಥಿರತೆ ಸ್ಥಾಪಿಸಲು ಮೂರೂ ರಾಷ್ಟ್ರಗಳ ನಡುವೆ ಸಹಕಾರ ಏರ್ಪಡುವ ಅವಶ್ಯಕತೆಯನ್ನು ಉಲ್ಲೇಖಿಸಲಾಗಿದೆ. "ಅಮೆರಿಕಾ-ಭಾರತ-ಜಪಾನ್ ಒಂದು ಹೊಸ ತ್ರಿಪಕ್ಷೀಯ ಸಹಕಾರದೆಡೆಗೆ" ಎಂಬ ಶೀರ್ಷಿಕೆಯ ಈ ವರದಿಯ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಭಾರತದ ಪ್ರತಿನಿಧಿಗಳೂ ಇದ್ದರೆಂಬುದು ಗಮನಾರ್ಹ. ಪಶ್ಚಿಮ ಏಷ್ಯಾದಲ್ಲಿ ಇರಾನನ್ನು ನಿಯಂತ್ರಿಸುವುದನ್ನೇ ತನ್ನ ಪ್ರಮುಖ ಧ್ಯೇಯವನ್ನಾಗಿರಿಸಿಕೊಂಡಿರುವ

ಅಮೆರಿಕಾದ ನೀತಿಗಳಿಗೆ ಜಪಾನ್ ಸದಾ ಕಾಲವೂ ಬೆಂಬಲ ಸೂಚಿಸುತ್ತಿದ್ದು, ಇತ್ತೀಚೆಗೆ ಭಾರತವೂ ಈ ಗುಂಪಿಗೆ ಸೇರ್ಪಡೆಯಾಗಿದೆ. ಇರಾನ್‌ನೊಡನೆ ಯಾವುದೇ ರೀತಿಯ ವ್ಯಾಪಾರ ಸಂಬಂಧಗಳನ್ನು ಬೆಳೆಸಲೂ ಅಮೆರಿಕಾ ಅಡ್ಡಗಾಲು ಹಾಕುತ್ತಿರುವುದು ಸ್ಪಷ್ಟವಾಗಿದೆ. ಈ ಮೂರು ರಾಷ್ಟ್ರಗಳು ತ್ರಿಪಕ್ಷೀಯ ಒಪ್ಪಂದದ ಪ್ರಕಾರ ಮುಂಬರುವ ವರ್ಷಗಳಲ್ಲಿ ಶಾಂತಿ ಪಾಲನೆ, ತಂತ್ರಜ್ಞಾನ ಸಹಕಾರ ಮತ್ತು ಬೇಹುಗಾರಿಕೆ ಸಹಕಾರಗಳನ್ನು ಪ್ರಮುಖ ಕಾರ್ಯಕ್ರಮಗನ್ನಾಗಿ ಹಮ್ಮಿಕೊಳ್ಳಲಾಗಿದೆ. ಅಮೆರಿಕಾದ ದೃಷ್ಟಿಯಲ್ಲಿ ಶಾಂತಿಪಾಲನೆ ಎಂದರೆ ಕೊಲ್ಲಿ ರಾಷ್ಟ್ರಗಳ ವಿರುದ್ಧ ಯುದ್ಧ ಮಾಡಿ, ಅಲ್ಲಿನ ತೈಲ ಸಂಪನ್ಮೂಲಗಳನ್ನು ಲಪಟಾಯಿಸುವುದೇ ಆಗಿದೆ ಎಂದು ಹೇಳಬೇಕಿಲ್ಲ.

ಅಮೆರಿಕಾ-ಭಾರತ-ಜಪಾನ್-ಆಸ್ಟ್ರೇಲಿಯಾ ದೇಶಗಳ ಒಕ್ಕೂಟವನ್ನು ಉಪಯೋಗಿಸಿಕೊಂಡು, ಸಿರಿಯಾ, ಇರಾನ್ ಮತ್ತು ಉತ್ತರ ಕೊರಿಯಾ ದೇಶಗಳ ವಿರುದ್ಧ ಕತ್ತಿ ಮಸೆಯಲು ಈ ವರದಿ ಸ್ಪಷ್ಟವಾಗಿ ಸೂಚಿಸುತ್ತದೆ. ಅಂತಿಮವಾಗಿ ಈ ಗುಂಪಿನ ಧ್ಯೇಯ ಚೀನಾ ದೇಶವೇ ಆಗಿರುವುದೂ ಊಹೆಯೇನಲ್ಲ. ಈ ಹಿನ್ನೆಲೆಯಲ್ಲೇ ಭಾರತದಲ್ಲಿ ಕಾಂಗ್ರೆಸ್ ಮತ್ತು ಭಾ.ಜ.ಪದ ನಾಯಕರು, ಎಡಪಕ್ಷಗಳ ವಿರೋಧವನ್ನು ಚೀನಾ ಪರ ಎಂದು ಅರ್ಥೈಸುತ್ತಿರುವುದನ್ನು ಇಲ್ಲಿ ಗಮನಿಸಬಹುದು. ಈ ನಾಲ್ಕು ದೇಶಗಳ ವೇದಿಕೆಯನ್ನು, ಏಷ್ಯದಲ್ಲಿ North Arlantic Treaty Organisation (NATO) ಸ್ಥಾಪಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಒಂದು ವೇದಿಕೆಯೆಂದೇ ಪರಿಗಣಿಸಲಾಗುತ್ತಿದೆ.

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೋಡಿದಾಗ, ೧೨೩ ಒಪ್ಪಂದಕ್ಕೆ ಸಹಿ ಹಾಕುವ ಅಮೆರಿಕಾದ ತೀರ್ಮಾನದ ಹಿನ್ನೆಲೆಯಲ್ಲಿ ದಕ್ಷಿಣ ಏಷಿಯಾದಲ್ಲಿ ರಣ ತಾಂತ್ರಿಕ ನೆಲೆ ಕಂಡುಕೊಳ್ಳುವ ದುರುದ್ದೇಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ೨೦೦೫ರಿಂದ, ಇರಾಕ್‌ನ ವೈಫಲ್ಯದ ಹಿನ್ನೆಲೆಯಲ್ಲಿ, ತನ್ನ ಏಕಾಧಿಪತ್ಯಕ್ಕೆ ಸಂಚಕಾರ ಬರುತ್ತಿರುವುದನ್ನು ಗಮನಿಸುತ್ತಿರುವ ಅಮೆರಿಕಾ ಸರ್ಕಾರಕ್ಕೆ, ಈ ಸಂಚಕಾರಕ್ಕೆ ಕಾರಣೀಭೂತರಾದ ರಷ್ಯಾ ಮತ್ತು ಚೀನಾಗಳನ್ನು ಎದುರಿಸಲು ಭಾರತದ ನೆರವು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಭಾರತದ ಬೆಂಬಲ ಪಡೆಯಲು ಚೀನಾ ಮತ್ತು ರಷ್ಯಗಳೂ ತಮ್ಮದೇ ಆದ ರೀತಿಯಲ್ಲಿ ಪ್ರಯತ್ನ ನಡೆಸಿವೆ. ಏಷ್ಯಾದಲ್ಲಿ NATO ನೆಲೆ ಊರುವುದನ್ನು ತಪ್ಪಿಸುವ ಉದ್ದೇಶದಿಂದಲೇ ಸ್ಥಾಪಿಸಲಾಗಿರುವ ಶಾಂಗಾಯಿ ಸಹಕಾರ ಸಂಘಟನೆಯಲ್ಲಿ ಭಾರತವನ್ನು ತೊಡಗಿಸಲು ಎರಡೂ ರಾಷ್ಟ್ರಗಳೂ ಶತ ಪ್ರಯತ್ನ ಮಾಡುತ್ತಿವೆ. ಈ ನಿಟ್ಟಿನಲ್ಲಿ ೨೦೦೬ರಲ್ಲಿ ಚೀನಾ ಅಧ್ಯಕ್ಷ ಮತ್ತು ೨೦೦೭ರ ಜನವರಿಯಲ್ಲಿ ರಷ್ಯಾದ ಅಧ್ಯಕ್ಷರು ಭಾರತಕ್ಕೆ ಭೇಟಿ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೂ ಈ ಎರಡೂ ರಾಷ್ಟ್ರಗಳು ೧೨೩ ಒಪ್ಪಂದ ಅನುಷ್ಠಾನಗೊಳ್ಳುವುದನ್ನೇ ಕಾಯುತ್ತಿವೆ. ಏಕೆಂದರೆ ಈ ಒಪ್ಪಂದದ ನಂತರದಲ್ಲಿ ಭಾರತದೊಡನೆ ಈ ರಾಷ್ಟ್ರಗಳ ವ್ಯಾಪಾರ ವಹಿವಾಟು ತೀವ್ರಗತಿಯಲ್ಲಿ ವೃದ್ಧಿಸುತ್ತವೆ.

ಭಾರತದಲ್ಲಿರುವಂತೆಯೇ ಅಮೆರಿಕಾದಲ್ಲೂ ೧೨೩ ಒಪ್ಪಂದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಬುಷ್ ಆಡಳಿತವು ಭಾರತ ಸರ್ಕಾರವನ್ನು ಸಂತೈಸುವುದರಲ್ಲಿ ತಮ್ಮ ದೇಶದ ಸಾಂಪ್ರದಾಯಿಕ ವಿದೇಶಾಂಗ ನೀತಿಗಳನ್ನು ಬಲಿ ಕೊಡುತ್ತಿದೆ ಎಂದು ಅಲ್ಲಿನ ಅನೇಕ ಸಂಸದರು ಆರೋಪಿಸುತ್ತಿದ್ದಾರೆ. ಒಂದು ವೇಳೆ ಭಾರತ ಪರಮಾಣು ಪರೀಕ್ಷೆ ನಡೆಸಿದಲ್ಲಿ ಮೊದಲಿನಂತೆ ಉಗ್ರ ಕ್ರಮ ಕೈಗೊಳ್ಳಲು ಅಮೆರಿಕಾಗೆ ಸಾಧ್ಯವಿಲ್ಲ ಎಂಬ ಕೂಗು ಸಹ ಅಲ್ಲಿ ಕೇಳಿ ಬರುತ್ತಿದೆ. ಹೈಡ್ ಕಾಯ್ದೆಯನ್ನು ಅಂಗೀಕರಿಸಿದ ನಂತರದಲ್ಲಿ, ಈ ಕಾಯ್ದೆಯ ಮೂಲಕ ಭಾರತಕ್ಕೆ ಅನೇಕ ಸವಲತ್ತುಗಳನ್ನು, ರಿಯಾಯಿತಿಗಳನ್ನು ನೀಡಲಾಗಿದೆ ಎಂದು ಅಮೆರಿಕಾದ ತಜ್ಞರು ಪ್ರತಿಪಾದಿಸುತ್ತಿದ್ದಾರೆ. ಉದಾಹರಣೆಗೆ ಇಂಧನ ಪೂರೈಕೆಯ ವಿಷಯದಲ್ಲಿ, ಹೈಡ್ ಕಾಯ್ದೆಯಲ್ಲಿ "ಯಾವುದೇ ಕಾರಣಕ್ಕೂ ನಾಗರಿಕ ಪರಮಾಣು ಸಹಕಾರದಿಂದ ಭಾರತದ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಬೆಂಬಲ ನೀಡಿವುದಿಲ್ಲ" ಎಂದು ಹೇಳಲಾಗಿದೆ. ಅಮೆರಿಕಾದ ಸೆನೆಟ್‌ನಲ್ಲಿ ನಡೆದ ಚರ್ಚೆಯಲ್ಲೂ ಸಹ ಅಲ್ಲಿನ ಸೆನೆಟ್ ಸದಸ್ಯ ಲೂಗಾರ್‌ರವರು ಇದೇ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.

ಆದರೆ ೧೨೩ ಒಪ್ಪಂದದಲ್ಲಿ ಇದೇ ವಿಷಯದ ಬಗ್ಗೆ ವಿಭಿನ್ನವಾಗಿ ವ್ಯಾಖ್ಯಾನಿಸಲಾಗಿದ್ದು, ಒಂದು ವೇಳೆ ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಿದ್ದೇ ಆದಲ್ಲಿ, ಅದರಿಂದ ಉಂಟಾಗಬಹುದಾದ ಇಂಧನ ಪೂರೈಕೆಗೆ ಅಡ್ಡಿಯಾಗದಂತೆ ನಿರಂತರವಾಗಿ ಇಂಧನ ಪೂರೈಕೆ ಮಾಡುವ ಆಶ್ವಾಸನೆಯನ್ನು ಅಮೆರಿಕಾ ನೀಡುತ್ತದೆ. ಹಾಗೆಯೇ ತಂತ್ರಜ್ಞಾನ ಪೂರೈಕೆಯ ವಿಷಯದಲ್ಲೂ ಇದೇ ದ್ವಂದ್ವವನ್ನು ಕಾಣಬಹುದಾಗಿದೆ. ಹೈಡ್ ಕಾಯ್ದೆಯಲ್ಲಿ "೧೨೩ ಒಪ್ಪಂದಕ್ಕೆ ಬದ್ಧವಾಗಿ, ಪರಮಾಣು ಸರಬರಾಜು ಗುಂಪಿನ ನಿಯಮಗಳಿಗೆ ಮೀರಿ, ಯಾವುದೇ ವಸ್ತುವನ್ನು ಭಾರತಕ್ಕೆ ಪೂರೈಸುವಂತಿಲ್ಲ" ಎಂದು ಹೇಳಲಾಗಿದ್ದು, ಸೆನೆಟ್‌ನಲ್ಲಿಯೂ ಸಹ ಈ ನಿಯಮವನ್ನು ಸಮರ್ಥಿಸಲಾಗಿದೆ. ಯುರೇನಿಯಂ ಸಂಪದ್ಯುಕ್ತತೆ, ಬದಲಿ ಇಂಧನದ ಪುನಸ್ಸಂಸ್ಕರಣ, ಭಾರ ಜಲ ಉತ್ಪಾದನೆ ಇವುಗಳಿಗೆ ಸಂಬಂಧಿಸಿದ ಯಾವುದೇ ಸೂಕ್ಷ್ಮ ಪರಮಾಣು ತಂತ್ರಜ್ಞಾನಗಳನ್ನು ಭಾರತಕ್ಕೆ ನೀಡಲಾಗುವುದಿಲ್ಲ ಎಂದು ಸೆನೆಟ್‌ನಲ್ಲಿ ಆಶ್ವಾಸನೆ ನೀಡಲಾಗಿತ್ತು. ಆದರೆ ೧೨೩ ಒಪ್ಪಂದದಲ್ಲಿ "ಈ ಒಪ್ಪಂದಕ್ಕೆ ತಿದ್ದುಪಡಿ ತರುವ ಮೂಲಕ ಸೂಕ್ಷ್ಮ ಪರಮಾಣು ತಂತ್ರಜ್ಞಾನಗಳನ್ನು ಭಾರತಕ್ಕೆ ಪೂರೈಸಬಹುದು" ಎಂದು ಹೇಳಲಾಗಿದೆ. ಈ ದ್ವಂದ್ವಗಳ ಮೂಲಕವೇ ಬುಷ್‌ರವರು ತಮ್ಮ ಕುಸಿಯುತ್ತಿರುವ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲು, ೧೨೩ ಒಪ್ಪಂದವನ್ನು ಒಂದು ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಅಮೆರಿಕಾದಲ್ಲಿ ಹೇಳಲಾಗುತ್ತಿದೆ.

ಭಾರತದಲ್ಲಿರುವಂತೆಯೇ ಅಮೆರಿಕಾದಲ್ಲೂ ೧೨೩ ಒಪ್ಪಂದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಬುಷ್ ಆಡಳಿತವು ಭಾರತ ಸರ್ಕಾರವನ್ನು ಸಂತೈಸುವುದರಲ್ಲಿ ತಮ್ಮ ದೇಶದ ಸಾಂಪ್ರದಾಯಿಕ ವಿದೇಶಾಂಗ ನೀತಿಗಳನ್ನು ಬಲಿ ಕೊಡುತ್ತಿದೆ ಎಂದು ಅಲ್ಲಿನ ಅನೇಕ ಸಂಸದರು ಆರೋಪಿಸುತ್ತಿದ್ದಾರೆ. ಒಂದು ವೇಳೆ ಭಾರತ ಪರಮಾಣು ಪರೀಕ್ಷೆ ನಡೆಸಿದಲ್ಲಿ ಮೊದಲಿನಂತೆ ಉಗ್ರ ಕ್ರಮ ಕೈಗೊಳ್ಳಲು ಅಮೆರಿಕಾಗೆ ಸಾಧ್ಯವಿಲ್ಲ ಎಂಬ ಕೂಗು ಸಹ ಅಲ್ಲಿ ಕೇಳಿ ಬರುತ್ತಿದೆ. ಹೈಡ್ ಕಾಯ್ದೆಯನ್ನು ಅಂಗೀಕರಿಸಿದ ನಂತರದಲ್ಲಿ, ಈ ಕಾಯ್ದೆಯ ಮೂಲಕ ಭಾರತಕ್ಕೆ ಅನೇಕ ಸವಲತ್ತುಗಳನ್ನು, ರಿಯಾಯಿತಿಗಳನ್ನು ನೀಡಲಾಗಿದೆ ಎಂದು ಅಮೆರಿಕಾದ ತಜ್ಞರು ಪ್ರತಿಪಾದಿಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಭಾರತ ಸರ್ಕಾರದ ಪರಮಾಣು ಶಕ್ತಿ ನಿಯಂತ್ರಣಾ ಮಂಡಳಿಯ ಮಾಜಿ ಅಧ್ಯಕ್ಷ ಡಾ॥ ಎ.ಕೆ. ಗೋಪಾಲಕೃಷ್ಣನ್‌ರವರ ಅಭಿಪ್ರಾಯಗಳು ಮಹತ್ತರ ಒಳನೋಟ ನೀಡುತ್ತದೆ. ಶ್ರೀಯುತರು ಪ್ರಧಾನಿ ಮನಮೋಹನ್‌ಸಿಂಗ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ. ನಾರಾಯಣನ್‌ರವರನ್ನು ಸುಳ್ಳು ಹೇಳಿಕೆ ನೀಡಿರುವುದಾಗಿ ದೂಷಿಸುತ್ತಾರೆ. ಅಮೆರಿಕಾ ಯಾವುದೇ ಸಂದರ್ಭದಲ್ಲೂ ನಿರಂತರವಾಗಿ ಇಂಧನ ಪೂರೈಕೆ ಮಾಡುವ ವಾಗ್ದಾನ ಮಾಡಿಲ್ಲವೆಂದೂ, ಈ ವಿಷಯದಲ್ಲಿ ಅಮೆರಿಕಾದ ಆಡಳಿತಕ್ಕೂ ಸಂಪೂರ್ಣ ಹಕ್ಕು ಇರುವುದಿಲ್ಲವೆಂದೂ ಶ್ರೀಯುತರು ಪ್ರತಿಪಾದಿಸುತ್ತಾರೆ. ಈ ಶಿಫಾರಸ್ಸನ್ನು ಅಮೆರಿಕಾದ ಸಂಸತ್ತಿನಲ್ಲಿ ಮಂಡಿಲಾಗುವುದು, ಅಲ್ಲಿ ಒಪ್ಪಿಗೆ ದೊರೆತರೆ ಇಂಧನ ಪೂರೈಕೆ ಸಾಧ್ಯ ಎಂದು ಒಪ್ಪಂದದಲ್ಲಿ ಹೇಳಲಾಗಿದೆ. ಎಂಟು ತಿಂಗಳ ಹಿಂದೆ ಇದೇ ರೀತಿಯ ಶಿಫಾರಸ್ಸನ್ನು ಅಮೆರಿಕಾ ಸಂಸತ್ತು ತಿರಸ್ಕರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಒಂದು ವೇಳೆ ಭಾರತ ಅಮೆರಿಕಾದಿಂದ ಮೂವತ್ತು ಮೆಗಾವಾಟ್ ಸಾಮರ್ಥ್ಯದ ರಿಯಾಕ್ಟರನ್ನು ಆಮದು ಮಾಡಿಕೊಂಡಲ್ಲಿ, ಅದರ ಸಂಪೂರ್ಣ ವೆಚ್ಚ ಹದಿನೈದು ಲಕ್ಷ ಕೋಟಿ ರೂ. ಗಳಷ್ಟಾಗುತ್ತದೆ. ಒಂದು ವೇಳೆ ಭಾರತ ಮುಂಬರುವ ವರ್ಷಗಳಲ್ಲಿ ಪರಮಾಣು ಪರೀಕ್ಷೆ ನಡೆಸಿ, ಇಂಧನ ಪೂರೈಕೆಯಲ್ಲಿ ಏರುಪೇರಾದರೆ, ಇಡೀ ಬಂಡವಾಳ ನೀರುಪಾಲುಗುವುದು ಖಚಿತವಾಗುತ್ತದೆ. ಇಷ್ಟು ಭಾರಿ ಬಂಡವಾಳ ಹೂಡಿದ ನಂತರದಲ್ಲಿ, ಒಂದು ವೇಳೆ ಪರಮಾಣು ಪರೀಕ್ಷೆಯ ನೆಪದಲ್ಲಿ ಅಮೆರಿಕಾ ಒಪ್ಪಂದವನ್ನು ರದ್ದುಪಡಿಸಲು ಯೋಜಿಸಿದರೆ ಅಮೆರಿಕಾವನ್ನು ಧಿಕ್ಕರಿಸಲು ಭಾರತಕ್ಕೆ ಸಾಧ್ಯವೇ? ಎಂದು ಗೋಪಾಲಕೃಷ್ಣನ್ ಪ್ರಶ್ನಿಸುತ್ತಾರೆ. ಈ ಅಂಶಗಳನ್ನೆಲ್ಲಾ ಪರಿಗಣಿಸಿದಾಗ ೧೨೩ ಒಪ್ಪಂದದ ಹಿಂದಿನ ಸಾಮ್ರಾಜ್ಯಶಾಹಿ ನೀತಿಗಳನ್ನು ಗ್ರಹಿಸಬಹುದಾಗಿದೆ.

ಅಂತಿಮವಾಗಿ ತನ್ನ ಪ್ರಾರಂಭದ ಹಂತದಿಂದಲೂ ಭಾರತ ಅಮೆರಿಕಾ ಪರಮಾಣು ಒಪ್ಪಂದವು ಭಾರತದ ಸಾರ್ವಭೌಮತೆಗೆ ಧಕ್ಕೆ ತರುವಂತಾಗಿದ್ದು, ದಕ್ಷಿಣ ಏಷಿಯಾದಲ್ಲಿ ಅಮೆರಿಕಾದ ರಣ ತಂತ್ರಗಳಿಗೆ ನೆಲಮಾಡಿಕೊಡಲು, ಭಾರತವನ್ನು ಬಲಿಪಶುವನ್ನಾಗಿ ಉಪಯೋಗಿಸಿಕೊಳ್ಳುವ ಅಮೆರಿಕಾದ ತಂತ್ರಗಾರಿಕೆಗೆ ವೇದಿಕೆಯಾಗಿದೆ. ಭಾರತ ಸರ್ಕಾರವು IAEA ಸಭೆಯಲ್ಲಿ ಇರಾನ್ ವಿರುದ್ಧ ಮತ ಚಲಾಯಿಸಿದ್ದೇ ಇದಕ್ಕೆ ಸ್ಪಷ್ಟ ನಿದರ್ಶನವೆಂದು ಹೇಳಬಹುದು. ಹಾಗಾಗಿ ಹೈಡ್ ಕಾಯ್ದೆಯ ಕರಾಳ ಛಾಯೆಯಲ್ಲಿ ರೂಪಿತವಾಗಿರುವ ೧೨೩ ಒಪ್ಪಂದವು ಭಾರತವನ್ನು ಗುಲಾಮಗಿರಿಗೆ ತಳ್ಳುವ ಕುತಂತ್ರವೆಂದೇ ಹೇಳಬಹುದಾಗಿದೆ. ಪರಮಾಣು ಶಕ್ತಿ ಮತ್ತು ಅಣ್ವಸ್ತ್ರಗಳ ಪರ

ವಹಿಸುವವರು ಈ ಒಪ್ಪಂದವನ್ನು ಚಾರಿತ್ರಿಕ ಅವಕಾಶ, ಐತಿಹಾಸಿಕ ವಿಜಯ ಎಂದು ಬಣ್ಣಿಸುತ್ತಲೇ, ಇದನ್ನು ವಿರೋಧಿಸುವ ಎಡ ಪಕ್ಷಗಳನ್ನು ಚೀನೀಪರ, ರಾಷ್ಟ್ರ ವಿರೋಧಿ ಎಂದು ದೂಷಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಇದು ಜನತೆಯನ್ನು ಹಾದಿ ತಪ್ಪಿಸುವ ತಂತ್ರಗಾರಿಕೆ ಎಂದಷ್ಟೇ ಹೇಳಬಹುದು.

ನಮ್ಮ ದೇಶದ ವಿದೇಶಾಂಗ ನೀತಿ ಮತ್ತು ಇತರ ರಾಷ್ಟ್ರಗಳೊಡಗಿನ ಸಂಬಂಧಗಳನ್ನು ಅಮೆರಿಕಾದ ಹೈಡ್ ಕಾಯ್ದೆ ನಿರ್ಧರಿಸುವುದಾದರೆ ಅದನ್ನು ನಾವು ಒಪ್ಪಬೇಕೇ? ಈ ಒಡಂಬಡಿಕೆಗಳನ್ನು ಭಾರತ ಒಪ್ಪಲೇ ಬೇಕೆಂದಿಲ್ಲ ಎಂದು ಹೇಳಬಹುದಾದರೂ, ಅಮೆರಿಕಾದ ಎದುರು ಸೆಟೆದು ನಿಂತು ಧಿಕ್ಕರಿಸುವ ಶಕ್ತಿ ಭಾರತೀಯ ಆಳುವ ವರ್ಗಗಳಿಗೆ ಇದೆಯೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಇರಾನ್ ವಿರುದ್ಧ ಮತ ಚಲಾವಣೆ ಮಾಡಿದ್ದು, ಅಮೆರಿಕಾದ ಯುದ್ಧ ನೌಕೆ ನಿಮಿಟ್ಸ್‌ಗೆ ಭಾರತ ಕೊಲ್ಲಿಯಲ್ಲಿ ತಂಗಲು ಅವಕಾಶ ಮಾಡಿಕೊಟ್ಟಿದ್ದು, ಭಾರತದ ನಿಲುವಿನ ಪ್ರತೀಕವಾಗಿದೆ. ಪ್ರಧಾನಿ ಮನಮೋಹನ ಸಿಂಗ್‌ರವರು "ಭಾರತದಲ್ಲಿನ ದಾರಿದ್ರ್ಯತೆ ಮತ್ತು ಬಡತನವನ್ನು ನಿವಾರಿಸುವ ನಿಟ್ಟಿನಲ್ಲಿ ವಿದ್ಯುತ್ ಉತ್ಪಾದನೆ ಅವಶ್ಯಕ ಹಾಗಾಗಿ ಈ ಒಪ್ಪಂದದ ಮೂಲಕ ಭಾರತ ಮುಂಬರುವ ದಿನಗಳಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಬಹುದು" ಎಂದು ಹೇಳುತ್ತಾರೆ. ಆದರೆ ಸತ್ಯಾಂಶವೆಂದರೆ ಭಾರತ ಉತ್ಪಾದಿಸುವ ವಿದ್ಯುತ್ ಶಕ್ತಿಯಲ್ಲಿ ಕೇವಲ ಶೇ ೩ರಷ್ಟನ್ನು ಮಾತ್ರ ಅಣು ಸ್ಥಾವರಗಳಲ್ಲಿ ಉತ್ಪಾದಿಸಲಾಗುತ್ತಿದೆ. ೧೨೩ ಒಪ್ಪಂದದ ನಂತರ ೨೦೨೦ರ ವೇಳೆಗೆ ಇದರ ಪ್ರಮಾಣ ಶೇ ೭ರಷ್ಟಾಗುತ್ತದೆ.

ಪರಮಾಣು ವಿದ್ಯುತ್ತಿಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಹಾಗೂ ಕಡಿಮೆ ವೆಚ್ಚದಲ್ಲಿ ಉತ್ಪಾದಿಸಬಹುದಾದ ಹೈಡೆಲ್, ಥರ್ಮಲ್, ಗ್ಯಾಸ್‌ಗಳ ಮೂಲಕ ವಿದ್ಯುತ್ ಉತ್ಪಾದನೆ ಮಾಡಬಹುದಲ್ಲವೆ. ಒಂದು ವೇಳೆ ಭಾರತಕ್ಕೆ ಪರಮಾಣು ಶಕ್ತಿ ಅನಿವಾರ್ಯವೆನಿಸಿದಲ್ಲಿ, ಥೋರಿಯಮ್ ಆಧಾರಿತ ವಿದ್ಯುತ್ ಬಳಸಬಹುದಲ್ಲವೇ, ಯುರೇನಿಯಂನ ಮೇಲೇ ಏಕೆ ಅವಲಂಬಿಸಬೇಕು?೧೯೭೪ರ ಪರಮಾಣು ಪರೀಕ್ಷೆಯ ನಂತರದಲ್ಲಿ ಅಮೆರಿಕಾ ತಾರಾಪುರ ಸ್ಥಾವರಕ್ಕೆ ಯುರೇನಿಯಂ ಸರಬರಾಜು ನಿಲ್ಲಿಸಿದ ಮೇಲೆ, ಭಾರತೀಯ ಅಣು ವಿಜ್ಞಾನಿಗಳು ಥೊರಿಯಂ ರಿಯಾಕ್ಟರುಗಳನ್ನು ಅಭಿವೃದ್ಧಿಪಡಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ನಮ್ಮ ಮೂರು ಹಂತದ ಪರಮಾಣು ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರೈಸಿದಲ್ಲಿ ಭಾರತಕ್ಕೆ ಯುರೇನಿಯಂ ಆಮದು ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಭಾರತದಲ್ಲೇ ಥೋರಿಯಂ ಹೇರಳವಾಗಿ ದೊರೆಯುತ್ತದೆ, ಒಂದು ಅಂದಾಜಿನ ಪ್ರಕಾರ ೩ ಲಕ್ಷ ಟನ್ ಥೋರಿಯಂ ನಮ್ಮಲ್ಲಿ ಲಭ್ಯವಿದ್ದು, ವಿಶ್ವದಲ್ಲೇ ಅತಿ ಹೆಚ್ಚು ಪ್ರಮಾಣದ ಥೋರಿಯಂ ಹೊಂದಿದೆ ಎಂದು ಹೇಳಲಾಗುತ್ತದೆ. ಅನೇಕ ವಿಜ್ಞಾನಿಗಳು ಯುರೇನಿಯಂಗೆ ಬದಲಾಗಿ ಥೋರಿಯಂ ಬಳಸಿಯೇ ವಿದ್ಯುತ್ ಉತ್ಪಾದನೆ ಮಾಡಬಹುದು ಎಂದು ಹೇಳುತ್ತಿರುವಾಗ ಭಾರತ ಸರ್ಕಾರ ಅಮೆರಿಕಾದ ಹಿಂದೆ ಕೈ ಚಾಚಿ ನಿಲ್ಲುವುದು ಅನಗತ್ಯವೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ಎಡ ಪಕ್ಷಗಳು ೧೨೩ ಒಪ್ಪಂದವನ್ನು ವಿರೋಧಿಸುತ್ತಿರುವುದು ಸಮರ್ಥನೀಯವಾಗಿದೆ. ಭಾರತದ ಸಾರ್ವಭೌಮತೆಯನ್ನು ಕಾಪಾಡಬೇಕಾದಲ್ಲಿ ಈ ಅಣು ಒಪ್ಪಂದವನ್ನು ತಿರಸ್ಕರಿಸುವುದು ಸಾಮಾನ್ಯ ಜನತೆಯ ಆದ್ಯ ಕರ್ತವ್ಯವಾಗಬೇಕಾಗಿದೆ.



ನಮ್ಮ ದೇಶದ ವಿದೇಶಾಂಗ ನೀತಿ ಮತ್ತು ಇತರ ರಾಷ್ಟ್ರಗಳೊಡಗಿನ ಸಂಬಂಧಗಳನ್ನು ಅಮೆರಿಕಾದ ಹೈಡ್ ಕಾಯ್ದೆ ನಿರ್ಧರಿಸುವುದಾದರೆ ಅದನ್ನು ನಾವು ಒಪ್ಪಬೇಕೇ? ಈ ಒಡಂಬಡಿಕೆಗಳನ್ನು ಭಾರತ ಒಪ್ಪಲೇ ಬೇಕೆಂದಿಲ್ಲ ಎಂದು ಹೇಳಬಹುದಾದರೂ, ಅಮೆರಿಕಾದ ಎದುರು ಸೆಟೆದು ನಿಂತು ಧಿಕ್ಕರಿಸುವ ಶಕ್ತಿ ಭಾರತೀಯ ಆಳುವ ವರ್ಗಗಳಿಗೆ ಇದೆಯೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ.

ಪರಮಾಣು ಇಂಧನ ವ್ಯೂಹದ ರಚನೆ

ಪರಮಾಣು ಇಂಧನವನ್ನು ಬಳಸಿ ಅಣು ವಿದ್ಯುತ್ ಉತ್ಪಾದಿಸುವ ಒಂದು ಸಂಪೂರ್ಣ ಪ್ರಕ್ರಿಯೆಗೆ ಪರಮಾಣು ಇಂಧನ ವ್ಯೂಹ (Nuclear Fuel Cycle) ಎಂದು ಕರೆಯುತ್ತಾರೆ. ಈ ವ್ಯೂಹದಲ್ಲಿ ಹತ್ತು ಹಂತಗಳಿದ್ದು ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

೧. ಮೊದಲನೆಯ ಹಂತದಲ್ಲಿ ಪರಮಾಣು ಅದಿರುಗಳ ಪರಿಶೋಧನೆ ಮತ್ತು ಸಂಶೋಧನಾ ನಿರ್ದೇಶನಾಲಯವು (ಎ.ಎಂ.ಡಿ) ಭಾರತ ಸರ್ಕಾರದ ಪರಮಾಣು ಶಕ್ತಿ ವಿಭಾಗದ ಪರಿಧಿಯಲ್ಲಿ ಕಾರ್ಯ ನಿರ್ವಹಿಸುತ್ತಾ, ದೇಶದೆಲ್ಲೆಡೆ ಪರಿಶೋಧನೆ ನಡೆಸಿ, ಪರಮಾಣು ಶಕ್ತಿಯ ಉತ್ಪಾದನೆಗೆ ಅವಶ್ಯವಾದ ಯುರೇನಿಯಂ, ಥೋರಿಯಂ, ಬೆರಿಯಲಿಯಮ್, ಟಿಟಾನಿಯಮ್ ಮುಂತಾದ ಹಲವಾರು ಅದಿರು ನಿಕ್ಷೇಪಗಳನ್ನು ಕಂಡು ಹಿಡಿಯುತ್ತದೆ. ಜಾರ್ಖಂಡ್, ಮೇಘಾಲಯ, ಆಂಧ್ರಪ್ರದೇಶ, ಕರ್ನಾಟಕದ ಗುಲ್ಬರ್ಗ ಮತ್ತು ರಾಜಸ್ಥಾನಗಳಲ್ಲಿ ಈ ನಿಕ್ಷೇಪಗಳನ್ನು ಈ ಸಂಸ್ಥೆ ಕಂಡುಹಿಡಿದಿದೆ. ಇಂಡಿಯನ್ ರೇರ್ ಅರ್ಥ್ ಲಿಮಿಟೆಡ್ ಎಂಬ ಸಂಸ್ಥೆಯೂ ಸಹ ಈ ಅದಿರುಗಳನ್ನು ವಿಭಜಿಸುವ ಮತ್ತು ಹೊಸ ಅದಿರುಗಳ ನಿಕ್ಷೇಪಗಳನ್ನು ಗುರುತಿಸುವ ಕಾರ್ಯ ನಿರ್ವಹಿಸುತ್ತದೆ.

೨. ಎರಡನೇ ಹಂತದಲ್ಲಿ ಎ.ಎಂ.ಡಿ. ಸಂಸ್ಥೆಯು ನೈಸರ್ಗಿಕ ಯುರೇನಿಯಂ ಇರುವ ನಿಕ್ಷೇಪಗಳನ್ನು ಗುರುತಿಸಿದ ನಂತರದಲ್ಲಿ ಯುರೇನಿಯಂ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಯು.ಸಿ.ಐ.ಎಲ್.) ಎಂಬ ಸಂಸ್ಥೆಯು ಗಣಿಗಾರಿಕೆಯನ್ನು ಪ್ರಾರಂಭಿಸುತ್ತದೆ. ಜಾದುಗುಡಾ, ಭಾತಿನ್, ನರ್ವಾಪಹಾರ್, ತುರಮ್‌ದಿಹ್ ಮತ್ತು ಬಂದುಹುರಂಗ್ ಪ್ರದೇಶಗಳಲ್ಲಿ ಈ ಗಣಿಗಾರಿಕೆ ನಡೆಯುತ್ತಿದೆ.

೩. ಮೂರನೆಯ ಹಂತವಾಗಿ, ಯು.ಸಿ.ಐ.ಎಲ್ ಸಂಸ್ಥೆಯು ನೈಸರ್ಗಿಕ ಯುರೇನಿಯಂ ಅನ್ನು ಸಂಸ್ಕರಣ ಪ್ರಕ್ರಿಯೆಗೆ ಒಳಪಡಿಸುವ ಕಾರ್ಯ ನಿರ್ವಹಿಸತ್ತದೆ. ಈ ಪ್ರಕ್ರಿಯೆ ಮೂರು ಹಂತಗಳಲ್ಲಿ ನಡೆಯುತ್ತದೆ. ಮೂರು ಹಂತಗಳಲ್ಲಿ ಯುರೇನಿಯಂ ಅದಿರನ್ನು ಜಜ್ಜಿ ಪುಡಿ ಮಾಡಿದ ನಂತರ, ಎರಡು ಹಂತಗಳಲ್ಲಿ ಅದನ್ನು ವದ್ದೆ ಮಾಡಿ ಅರೆಯಲಾಗುತ್ತದೆ. ನಂತರ ಅದನ್ನು ಗಂಧಕಾಮ್ಲ (Sulphuric Acid) ಉಪಯೋಗಿಸಿ ಪ್ರತ್ಯೇಕಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತಯಾರಾಗುವ ಯುರೇನಿಯಂ ದ್ರವನ್ನು ಫಿಲ್ಟರ್ ಮಾಡಿ ಶುದ್ಧೀಕರಿಸಿ, ಹಳದಿ ಬಣ್ಣದ ಬಿಲ್ಲೆಗಳನ್ನಾಗಿ ಮಾಡಲಾಗುತ್ತದೆ. ಈ ಬಿಲ್ಲೆಗಳನ್ನು ತೊಳೆದು, ದಪ್ಪಗಾಗಿ ಮಾಡಿ, ಒಣಗಿಸಿ, ಡ್ರಮ್‌ಗಳಲ್ಲಿ ಪ್ಯಾಕ್ ಮಾಡಲಾಗುತ್ತದೆ. ಈ ಡ್ರಮ್‌ಗಳನ್ನು ಹೈದರಾಬಾದಿನಲ್ಲಿರುವ ಪರಮಾಣು ಇಂಧನ ಸಂಕೀರ್ಣ (Nuclear Fuel Complex) ಕ್ಕೆ ಕಳುಹಿಸಲಾಗುತ್ತದೆ.

೪. ನಾಲ್ಕನೆಯ ಮತ್ತು ಐದನೆಯ ಹಂತವಾಗಿ ಹೈದರಾಬಾದಿನ ಪರಮಾಣು ಇಂಧನ ಸಂಕೀರ್ಣದಲ್ಲಿ ಈ ಬಿಲ್ಲೆಗಳನ್ನು ಇಂಧನದ ಉಂಡೆಗಳನ್ನಾಗಿ ಪರಿವರ್ತಿಸಿ ಅದನ್ನು ನೈಟ್ರಿಕಾಮ್ಲ (Nitric Acid) ದಲ್ಲಿ ಕರಗಿಸಿ ಶುದ್ಧೀಕರಿಸಿದ ನಂತರ ಅಮೋನಿಯಮ್ ಡ್ಯೂರನೇಟನ್ನು ಪಡೆಯಲಾಗುತ್ತದೆ. ನಂತರ ನ್ಯೂಕ್ಲಿಯರ್ ಪ್ಯೂರ್ ಯುರೇನಿಯಮ್ ಡೈಆಕ್ಸೈಡ್ (UO_2) ತಯಾರಿಸಲಾಗುತ್ತದೆ. ಈ (UO_2) ನಿಂದ ತೀವ್ರ ಸಾಂದ್ರತೆಯುಳ್ಳ ಸಿಲಿಂಡರ್ ಆಕಾರದ ಇಂಧನ ಉಂಡೆಗಳನ್ನು ಪಡೆಯಲಾಗುತ್ತದೆ. ಈ ಉಂಡೆಗಳನ್ನು ಝಿರ್ಕೋನಿಯಮ್‌ನಿಂದ ತಯಾರಿಸಲಾದ ಕೊಳವೆಗಳಲ್ಲಿ ಅಳವಡಿಸಲಾಗುತ್ತದೆ. ಈ ಕೊಳವೆಗಳ ತುದಿಗಳನ್ನು ವೆಲ್ಡಿಂಗ್ ಮಾಡಿ ಮುಚ್ಚಲಾಗಿರುತದೆ. ಈ ಬಂಧಿತ ಕೊಳವೆಗಳನ್ನು ಇಂಧನ ಪಿನ್‌ಗಳೆಂದು (Fuel pins) ಕರೆಯಲಾಗುತ್ತದೆ. ಈ ಇಂಧನ ಪಿನ್‌ಗಳನ್ನು ಒಂದೆಡೆ ಸೇರಿಸಿ ಪರಮಾಣು ರಿಯಾಕ್ಟರುಗಳಲ್ಲಿ ಬಳಸಲು ಎಲ್ಲಾ ರಿಯಾಕ್ಟರುಗಳಿಗೆ ಸರಬರಾಜು ಮಡಲಾಗುತ್ತದೆ. ಭಾರತದ ಒತ್ತಡವಿರುವ ಭಾರ ಜಲ ರಿಯಾಕ್ಟರುಗಳಲ್ಲಿ (Pressurised Heavy Water Reactors) ಈ ಪಿನ್‌ಗಳನ್ನು ಉಪಯೋಗಿಸಲಾಗುತ್ತಿದೆ.

೬. ಆರನೆಯ ಹಂತದಲ್ಲಿ ಭಾರತದಲ್ಲಿನ ಒತ್ತಡವಿರುವ ದೇಶೀಯ ಭಾರ ಜಲ ರಿಯಾಕ್ಟರುಗಳಿಗೆ ಭಾರ ಜಲವು ನಿಯಂತ್ರಕವಾಗಿ ಮತ್ತು ಉಷ್ಣ ನಿವಾರಕವಾಗಿ ಕಾರ್ಯ ನಿರ್ವಹಿಸುತ್ತದೆ. ಭಾರ ಜಲವನ್ನು ಉತ್ಪಾದಿಸುವ ಘಟಕಗಳನ್ನು ಪರಮಾಣು ಶಕ್ತಿ ವಿಭಾಗವು ನಿರ್ಮಿಸುತ್ತದೆ. ಭಾರತದಲ್ಲಿ ಒಟ್ಟು ಆರು ಘಟಕಗಳಿದ್ದು, ತೂತ್ತುಕುಡಿ, ಮನಗೂರು, ಥಾಲ್, ಹಜೀರ, ಬರೋಡ ಮತ್ತು ರಾವತ್‌ಭಟ್ಟಗಳಲ್ಲಿ ಸ್ಥಾಪಿತಗೊಂಡಿವೆ.

೭ ಏಳನೆಯ ಹಂತದಲ್ಲಿ ಪರಮಾಣು ಶಕ್ತಿ ಘಟಕಗಳಿಗೆ ಸ್ಥಳ ಹುಡುಕುವುದು ಪ್ರಮುಖ ಕಾರ್ಯವಾಗಿರುತ್ತದೆ. ಭಾರತೀಯ ಪರಮಾಣು ಶಕ್ತಿ ಕಾರ್ಪೋರೇಷನ್ ಈ ಕಾರ್ಯವನ್ನು ಇತರ ತಂತ್ರಜ್ಞರೊಂದಿಗೆ ಸೇರಿ ನಿಭಾಯಿಸುತ್ತದೆ. ಇದುವರೆವಿಗೂ ಈ ಸಂಸ್ಥೆ ೧೫ ಭಾರ ಜಲ ರಿಯಾಕ್ಟರುಗಳನ್ನು ನಿರ್ಮಿಸಿದ್ದು, ಅಮೆರಿಕಾ ಸಹಾಯ

ದಿಂದ ಎರಡು ಲಘು ಜಲ ರಿಯಾಕ್ಟರುಗಳನ್ನು (Light water Reactor) ಸ್ಥಾಪಿಸಿದೆ. ಈಗ ಈ ಸಂಸ್ಥೆಯು ರಷ್ಯಾದ ಸಹಕಾರದೊಂದಿಗೆ ಎರಡು ಲಘು ಜಲ ರಿಯಾಕ್ಟರುಗಳು, ಮತ್ತು ದೇಶೀ ತಂತ್ರಜ್ಞಾನದೊಂದಿಗೆ ಮೂರು ಭಾರ ಜಲ ರಿಯಾಕ್ಟರುಗಳನ್ನು ನಿರ್ಮಿಸುತ್ತಿದೆ.

೭. ಎಂಟನೆಯ ಹಂತದಲ್ಲಿ ಈ ಭಾರಜಲ ರಿಯಾಕ್ಟರುಗಳಿಂದ ಬರುವ ಉಪಯೋಗಿಸಿದ ಇಂಧನ ಅಥವಾ ಬದಲಿ ಇಂಧನವನ್ನು ಪುನಸ್ಸಂಸ್ಕರಿಸಲು, ತಾರಾಪುರ, ಕಲ್ಪಾಕ್ಕಮ್, ಮತ್ತು ಟ್ರಾಂಬೇದಲ್ಲಿ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಪ್ಲುಟೋನಿಯಮ್ ಮತ್ತು ನಿಷ್ಕಾಸಗೊಳಿಸಲಾದ ಯುರೇನಿಯಂ (Depleted uranium) ಪಡೆಯಲಾಗುತ್ತದೆ. ಈ ತಂತ್ರಜ್ಞಾನವನ್ನು ೧೯೬೪ ರಲ್ಲೇ ಭಾರತ ಕರಗತಮಾಡಿಕೊಂಡಿತ್ತು.

೮. ಒಂಭತ್ತನೆಯ ಹಂತದಲ್ಲಿ ಈ ಪುನಸ್ಸಂಸ್ಕರಣದಿಂದ ಹೊರಬರುವ ವಿಕಿರಣ ತ್ಯಾಜ್ಯವನ್ನು ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತದೆ. ಉನ್ನತ ಮಟ್ಟದ ತ್ಯಾಜ್ಯವನ್ನು ಗಾಜಿಗೆ ಪರಿವರ್ತಿಸಲಾಗುತ್ತದೆ. ಈ ಗಾಜಿನ ದ್ರವವನ್ನು ಸಣ್ಣ ಡಬ್ಬಿಗಳಲ್ಲಿ ಶೇಖರಿಸಿದ ನಂತರ ಅದು ಗಟ್ಟಿಯಾಗುತ್ತದೆ. ಇಂತಹ ಮೂರು ಡಬ್ಬಿಗಳನ್ನು ಒಂದು ಸ್ಟೀಲ್ ಡಬ್ಬದಲ್ಲಿ ಇರಿಸಲಾಗುತ್ತದೆ. ಇವುಗಳನ್ನು ತಾರಾಪುರ ಸ್ಥಾವರದಲ್ಲಿ ಮೂವತ್ತು ವರ್ಷಗಳ ಕಾಲ ಸುರಕ್ಷಿತವಾಗಿ ಹವಾನಿಯಂತ್ರಿತ ಕೊಠಡಿಯಲ್ಲಿ ಇರಿಸಲಾಗುತ್ತದೆ. ನಂತರ ಇವುಗಳನ್ನು ಭೂಮಿಯ ಆಳದಲ್ಲಿ ಹುದುಗಿ ನಾಶಮಾಡಲಾಗುತ್ತದೆ.

೯. ಕಡೆಯ ಹಂತವೆಂದರೆ, ಪ್ಲುಟೋನಿಯಮ್ ಮತ್ತು ನಿಷ್ಕಾಸಗೊಳಿಸಲಾದ ಯುರೇನಿಯಂಗಳನ್ನು Fast Breeder Reactor ಗಳಲ್ಲಿ ಇಂಧನದ ರೂಪದಲ್ಲಿ ಉಪಯೋಗಿಸಲಾಗುತ್ತದೆ. ಭಾರತದ ಪರಮಾಣು ಕಾರ್ಯಕ್ರಮದಲ್ಲಿ ಒತ್ತಡವಿರುವ ಭಾರ ಜಲ ರಿಯಾಕ್ಟರುಗಳು ಪ್ರಥಮ ಹಂತವಾದರೆ, Fast Breeder Reactor ಗಳು ಎರಡನೆಯ ಹಂತವಾಗಿರುತ್ತದೆ. ಈ FBR ಗಳಿಗೆ ಥೋರಿಯಂನ ಹೊದಿಕೆ ಇದ್ದು ಅದರಲ್ಲಿ ಪ್ಲುಟೋನಿಯಂ ಮತ್ತು ಯುರೇನಿಯಂ ಆಮ್ಲಗಳಿರುತ್ತವೆ. ಕ್ರಮೇಣವಾಗಿ ಈ ಥೋರಿಯಂ ಹೊದಿಕೆ ಯುರೇನಿಯಂ-೨೩೩ ಆಗಿ ಪರಿವರ್ತಿತವಾಗುತ್ತದೆ. ಭಾರತದ ಪರಮಾಣು ಕಾರ್ಯಕ್ರಮದ ಮೂರನೆಯ ಹಂತದಲ್ಲಿ ಥೋರಿಯಂ ಮತ್ತು ಈ ಯುರೇನಿಯಂ-೨೩೩ನ್ನು ಇಂಧನವನ್ನಾಗಿ ಬಳಸಲಾಗುತ್ತದೆ. ವಿಶ್ವದಲ್ಲೇ ಅತಿ ಹೆಚ್ಚು ಪ್ರಮಾಣದ ಥೋರಿಯಂ ಭಾರತದಲ್ಲಿ ಲಭ್ಯವಿದ್ದು, ಬಹುತೇಕ ಪ್ರಮಾಣವು ತಮಿಳು ನಾಡಿನಲ್ಲಿ ಕಂಡುಬರುತ್ತದೆ. (ಮುಗಿಯಿತು)

ಮನುಷ್ಯರು ಆಯುಧವಾಗುವುದು

(೩೨ನೇ ಪುಟದಿಂದ)

ಆದ್ದರಿಂದಲೇ ಕೆಳಜಾತಿಗಳು ತಮ್ಮ ಸಾಮಾಜಿಕ ಚಲನಶೀಲತೆಗಾಗಿ ಪುರಾಣ ಚರಿತ್ರೆಯಿಂದ ಸಾಂಸ್ಕೃತಿಕ ನಾಯಕರನ್ನು ಆರಿಸಿಕೊಂಡು ಸಂಕೇತ ಮಾಡಿಕೊಳ್ಳುವಾಗ ಯಾರನ್ನು ಆರಿಸಿಕೊಳ್ಳುತ್ತಾರೆ ಎಂಬುದು ಮಹತ್ವದ ವಿಚಾರ. ವಿದ್ಯೆಕಲಿಯುವ ಹಕ್ಕಿಗಾಗಿ ವರ್ಣವ್ಯವಸ್ಥೆಯ ವಿರುದ್ಧ ಹೋರಾಡುವ ಶಂಬೂಕ ಮುಂತಾದವರು ಸಂಕೇತವಾದರೆ ಒಂದು ಅರ್ಥ ಬರುತ್ತದೆ; ತನ್ನ ಧಣಿಗೆ ಪ್ರಶ್ನಾತೀತವಾಗಿ ಮಂಡಿಯೂರಿ ಅರ್ಪಿಸಿಕೊಳ್ಳುವ ಆಂಜನೇಯ, ಗುಹಾ, ಮುಂತಾದವರು ಸಂಕೇತವಾದರೆ ಇನ್ನೊಂದು ಅರ್ಥ ಬರುತ್ತದೆ.

ಕರ್ನಾಟಕದಲ್ಲಿ ಇರುವ ಬಹುತೇಕ ಹನುಮಂತನ ಗುಡಿಗಳಲ್ಲಿ ನಿಂತನಿಲುವಿನ ಸ್ವತಂತ್ರ ಮೂರ್ತಿಗಳಿವೆ. ಕಳೆದ ೧೫-೨೦ ವರ್ಷಗಳಲ್ಲಿ ಈ ಸ್ವತಂತ್ರ ಹನುಮಂತನ ಗುಡಿಗಳ ಮೇಲೆ ರಾಮನು ಬೇಡರ ಕುಲದ ಗುಹನನ್ನು ಅಥವಾ ಆಂಜನೇಯನನ್ನು ಅಪ್ಪಿಕೊಂಡಿರುವ ಕಾಂಕ್ರೀಟಿನ ಶಿಲ್ಪಗಳು ಸ್ಥಾಪನೆಯಾಗಿವೆ. ಕೆಲವು ಕಡೆ ಆಂಜನೇಯನು ರಾಮನ ಪದತಲದಲ್ಲಿ ಕೂತಿರುವ ಹೊಸ ಗಾರೆಯ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಇವನನು ಯಾರು ಮತ್ತು ಯಾಕಾಗಿ ಸ್ಥಾಪಿಸಿದರು? ಸ್ವತಂತ್ರ ದೈವವನ್ನು ಇನ್ನೊಂದರ ಅಡಿಯಾಳಾಗಿಸುವ ಈ ಆಶಯದ ಹಿಂದಿರುವ ಸೋಶಿಯಲ್ ಇಂಜಿನಿಯರಿಂಗ್ ಯಾವುದು? ಮನುಷ್ಯರನ್ನು ಆಯುಧವಾಗಿಸಿಕೊಳ್ಳುವುದು ತಾನೇ?

ಬಹುಶಃ ಜಗತ್ತಿನ ಎಲ್ಲ ಸೈನಿಕ ಪದ್ಧತಿಯಲ್ಲೇ ಮನುಷ್ಯರನ್ನು ಶಸ್ತ್ರಗಳನ್ನಾಗಿಸುವ ಪ್ರಕ್ರಿಯೆಯಿದೆ. ಸಾಮಾನ್ಯವಾಗಿ ಸೈನ್ಯಕ್ಕೆ ಸೇರುವುದು ಉಳ್ಳವರ ಮಕ್ಕಳಲ್ಲ. ರೈತಾಪಿ ಬಡ ಮತ್ತು ಕೆಳಮಧ್ಯಮ ವರ್ಗದ ಮಕ್ಕಳು. ಅವರನ್ನು ರಾಜ್ಯವಿಸ್ತರಣೆ ಮತ್ತು ದೇಶರಕ್ಷಣೆಯ ಹೆಸರಲ್ಲಿ ಪ್ರಭುತ್ವಗಳು ಬಳಸುತ್ತ ಬಂದಿವೆ. ಸೈನಿಕ ಪದ್ಧತಿಯಲ್ಲಿ ಇರುವ ಇನ್ನೊಂದು ಕ್ರೌರ್ಯವೆಂದರೆ, ಒಂದು ವರ್ಗದ ಜನರ ಮೂಲಕ ಅದೇ ವರ್ಗದ ಜನರನ್ನು ಕೊಲ್ಲಿಸುವುದು. ಆಂಗ್ಲರು ಬಡ ಭಾರತೀಯರನ್ನು ಸೈನಿಕರನ್ನಾಗಿ ನೇಮಿಸಿಕೊಂಡು ತಮ್ಮ ಆಳ್ವಿಕೆ ವಿರುದ್ಧ ದಂಗೆಯೆದ್ದ ಭಾರತೀಯರನ್ನೇ ದಮನಿಸಿದರು. ಆಧುನಿಕ ಕ್ರಾಂತಿಕಾರಿ ಚಳವಳಿಗಳಲ್ಲೂ ಜನರ ಕೈಗೆ ಆಯುಧಕೊಟ್ಟು ಆಯುಧವಾಗಿಸಿಕೊಳ್ಳುವ ಪ್ರಕ್ರಿಯೆಯಿದೆ. ಆದರೆ ಅಲ್ಲಿ ಕ್ರಾಂತಿಕಾರಿ ಸೈನಿಕ ವರ್ಗದ ಜನರ ವಿಮೋಚನೆ ಮುಖ್ಯ ಉದ್ದೇಶವಾಗಿರುತ್ತದೆ. ಆದರೆ ರಾಜಪ್ರಭುತ್ವದ ಸೈನಿಕ ವ್ಯವಸ್ಥೆಯಲ್ಲಿ ಮತ್ತು ಆಧುನಿಕ ರಾಜಕಾರಣದಲ್ಲಿ ಜನ ಆಯುಧವಾಗುವಾಗ ಅವರ ಹಿತಸಾಧನೆ ಕಡಿಮೆ. ಅವರ ಧಣಿಗಳ ಹಿತಸಾಧನೆ ಹೆಚ್ಚು.

ಮನುಷ್ಯರನ್ನು ಆಯುಧ, ವಸ್ತು ಅಥವಾ ಸಾಧನವಾಗಿಸಿಕೊಳ್ಳುವ ಈ ಪರಿಯು ನಮ್ಮ ಸಮಾಜದಲ್ಲಿ ಬಹುಸೂಕ್ಷ್ಮವಾಗಿ ಅನೇಕ ರೂಪಗಳಲ್ಲಿ ಅಡಗಿದೆ. ಮಹಿಳೆಯನ್ನು ದೇಹಪ್ರದಾನ ಸೌಂದರ್ಯ ಮೀಮಾಂಸೆ ಕೂಡ ಬಳಕೆದಾರ ಮನೋಧರ್ಮದಿಂದ ಕೂಡಿದೆ. ಹೆಣ್ಣನ್ನು ತನ್ನ ವಂಶ ಅಥವಾ ಕುಲದ ಮುಂದುವರಿಕೆಗಾಗಿ ಮಕ್ಕಳನ್ನು ಹಡೆದುಕೊಡುವ ಮಾಧ್ಯಮವೆಂದು ತಿಳಿಯುವ ಸಾಂಪ್ರದಾಯಕ ಚಿಂತನೆಗಳಿಂದ ಹಿಡಿದು, ದಷ್ಟಪುಷ್ಟ ಕರಿಯರನ್ನು ತಮ್ಮ ದೇಶಕ್ಕೆ ಒಲಂಪಿಕ್ ಪದಕ ತಂದುಕೊಡುವ ಸಾಧನಗಳು ಎಂದು ಭಾವಿಸಿರುವ ಅಮೆರಿಕೆಯ ತನಕ ಈ 'ಅಮಾನುಷ ಮನೋಭಾವ ಹರಡಿದೆ. 'ಮನುಷ್ಯ'ರನ್ನು ಮನುಷ್ಯರನ್ನಾಗಿ ನೋಡದ ಕಾರಣಕ್ಕಾಗಿ ಅದು 'ಅಮಾನುಷ'ವಾಗಿದೆ. □

ಬುದ್ಧ, ಬಸವ, ಅಂಬೇಡ್ಕರರ ಅನನ್ಯತೆ

(೩೩ನೇ ಪುಟದಿಂದ)

ಅಲ್ಲ ಅಧಿಕಾರವನ್ನು ಸಹ ಧಿಕ್ಕರಿಸಿದವರು.

ಪ್ರಸ್ತುತ ಸಂದರ್ಭದಲ್ಲಿ ದಲಿತ ವರ್ಗದಿಂದ ಬಂದ ಅನೇಕರು ಬೌದ್ಧ ಧರ್ಮದೆಡೆಗೆ ನಡೆದಿದ್ದಾರೆ. ವೀರಶೈವ ಧರ್ಮ ನಮ್ಮವರಿಗೆ ತೀರ ಹತ್ತಿರವಾಗಿದ್ದರೂ ಪ್ರಬಲ ಕೋಮಿನ ಜನರ ಹಿಡಿತದಲ್ಲಿ ಸಿಕ್ಕ ಬಸವನ ವಿಚಾರಗಳು ಸಾರ್ವಜನಿಕರಿಗೆ ಮುಟ್ಟದ ಕಾರಣ ವೀರಶೈವ ಧರ್ಮ ಸಾಮಾನ್ಯರಿಂದ ದೂರ ಸರಿದಿದೆ.

ಡಾ॥ ಅಂಬೇಡ್ಕರ್ ಜೀವಿತದ ಸಂದರ್ಭದಲ್ಲಿ ಹಿಂದೂ ಆಗಿ ಹುಟ್ಟಿದ್ದೇನೆ ಅದು ನನ್ನ ಕೈಯಲ್ಲಿ ಇರಲಿಲ್ಲ. ಆದರೆ ಸಾಯುವುದು ನನ್ನ ಕೈಯಲ್ಲಿದೆ ಹೀಗಾಗಿ ನಾನು ಹಿಂದೂ ಆಗಿ ಸಾಯಲಾರೆ ಎಂದು ಹೇಳಿ ಅದರಂತೆ ನಡೆದು ಬೌದ್ಧಧರ್ಮ ಸ್ವೀಕಾರ ಮಾಡಿ ದಲಿತರಿಗೊಂದು ಧಾರ್ಮಿಕ ತಳಹದಿಯನ್ನೊದಗಿಸಿದರು.

ಬೌದ್ಧಧರ್ಮ ಈ ಮಣ್ಣಿನ ಧರ್ಮ. ಪ್ರೀತಿ ಕರುಣೆ ನೀತಿ ನಿಂತಂತಹ ಧರ್ಮ. ಪಂಚಶೀಲಗಳನ್ನು ಹೊಂದಿದ ಧರ್ಮ. ಹೀಗಾಗಿ ದಲಿತರು ಬೌದ್ಧ ಧರ್ಮ ಸ್ವೀಕರಿಸುವುದರ ಮೂಲಕ ನಾವು ಭಾರತೀಯತೆ ಪ್ರದರ್ಶನ ಮಾಡಬೇಕಾಗಿದೆ. ಪ್ರಜ್ಞೆ ಶೀಲ ಕರುಣೆ ತತ್ವದಡಿಯಲ್ಲಿ ಪ್ರಪಂಚದಾದ್ಯಂತ ಬೌದ್ಧಧರ್ಮ ತನ್ನ ಅಸ್ತಿತ್ವ ಹೊಂದಿದೆ. ಹಿಂದೂ ಮುಸ್ಲೀಮ್ ಮತೀಯವಾದಿಗಳ ಕಾರಣದಿಂದ ದೇಶ ಅಶಾಂತಿಯಿಂದ ಭುಗಿಲೆದ್ದಿದೆ. ದೇಶಕ್ಕೆ ಶಾಂತಿ ಬೇಕೆಂದರೆ ಬೌದ್ಧ ಧರ್ಮ ಅನಿವಾರ್ಯ. ದಲಿತರು ವ್ಯಸನಗಳಿಂದ ದೂರಾಗಬೇಕಾದರೆ ಬದುಕಿನಲ್ಲಿ ಹೊಸತನ ಕಾಣಬೇಕಾದರೆ ಬುದ್ಧನೆಡೆಗೆ ನಾವು ಸಾಗಲೇಬೇಕಾಗುತ್ತದೆ. ಬಾಬಾಸಾಹೇಬರು ಕಂಡುಕೊಂಡ ದಾರಿ ತುಳಿಯದೆ ಗತ್ಯಂತರವಿಲ್ಲ. ಹಿಂದೂ ಧರ್ಮದಲ್ಲಿ ಉಳಿದು ಅತಂತ್ರವಾಗಿರುವುದಕ್ಕಿಂತ ಬೌದ್ಧ ಧರ್ಮ ಸ್ವೀಕರಿಸುವುದರ ಮೂಲಕ ಸ್ವತಂತ್ರರಾಗಿ ಉಳಿಯುವುದು ಗೌರವ. ಹಿಂದೂ ಧರ್ಮ ಕಲ್ಲು ಮಣ್ಣನ್ನು ಪ್ರೀತಿಸುವ ಕಂದಾಚಾರ, ಮೌಢ್ಯತೆ, ಸಂಪ್ರದಾಯ ಇದರ ಮೂಲಮಂತ್ರ ಲಂಕೇಶ್ ಹೇಳಿದಂತೆ ಇವರಿಗೆ ಜೀವ ಪವಿತ್ರವಲ್ಲ ಇಟ್ಟಿಗೆ ಪವಿತ್ರ, ಅನ್ನ ಕೊಡದ ಶಾಂತಿ ನೀಡದ ಗುಡಿಗುಂಡಾರಗಳ ಅವಶ್ಯಕತೆ ನಮಗ್ಯಾಕೆ? ಪ್ರಜ್ಞೆ, ಕರುಣೆ, ನೀತಿಬೋಧೆ ಮಾಡುವ ಬೌದ್ಧ ಧರ್ಮದೆಡೆಗೆ ಹೋಗುವುದು ಅವಶ್ಯವಲ್ಲವೆ?

ಆಕರಗಳು

೧. ರಂಜಾನ್ ದರ್ಗಾ: ಸಂ. ನಾಗತಿಹಳ್ಳಿ ರಮೇಶ್, ಬುದ್ಧ ಕೆ.ಎಚ್. ರಂಗನಾಥ ಅಭಿನಂದನಾ ಗ್ರಂಥ.

೨. ದೇವೇಂದ್ರ ಹೆಗ್ಗಡೆ: 'ಬುದ್ಧ, ಬಸವ ಇಬ್ಬರ ಹಾದಿ ಒಂದೆ', ಬೌದ್ಧಧರ್ಮದ ಕುರಿತು ನಾಲ್ಕು ಕಿರುಲೇಖನಗಳು, ಸಂಬುದ್ಧ ಪ್ರಕಾಶನ.

೩. ಎಚ್. ರಾಚಪ್ಪ: ಬುದ್ಧ ಮತ್ತು ಬೌದ್ಧ ಧರ್ಮ, ಬೌದ್ಧ ಧರ್ಮದ ಕುರಿತು ನಾಲ್ಕು ಕಿರುಲೇಖನಗಳು, ಸಂಬುದ್ಧ ಪ್ರಕಾಶನ.

೪. ಅದೇ ಪುಟ

೫. ಅದೇ ಪುಟ

□

ಝೆನ್ ಗಜಲುಗಳು

೧

ಮಾತು, ದ್ವಂದ್ವಗಳಿಲ್ಲದೆ ಕ್ಷಣ ಬದುಕಲಾಗದು
ಎಲ್ಲಾ ಬಿಟ್ಟು ಒಂದು ಕ್ಷಣ ಬದುಕಿ ತೋರಿಸು
ಒಂಟಿ ಕೈಯ ಚಪ್ಪಾಳೆ ಆಗ ಕೇಳಿಸುವುದು
'ಸತೋರಿ' ಅರಿವಿನ ಅರಿವೆ ಮನಕೆ ಉಡಿಸು

೨

ಮಾತೆಂಬುದು ನಾಲಿಗೆಯ ನುಡಿಯಾಗಬೇಕಿಲ್ಲ
ಅಂತರಂಗಕೆ ಕೂಡ ನಾಲಿಗೆಯುಂಟು,
ಮಾತುಂಟು
ಜ್ಞಾನ ಬೆಳದಿಂಗಳಚಂದಿರ ಜಂಗಮವಾದಾಗ
ಜನಾಬ್ಧಿಗಳು ಒಳಗೊಳಗೆ ಉಕ್ಕಿ
ಬರುವುದುಂಟು
ರಾತ್ರಿ-ಹಗಲುಗಳು ಕಣ್‌ರೆಪ್ಪೆ ಮೀಟಿದಾಗ
ಅನಿಮಿಷ, ನಿಮಿಷ ಕೂಡ
ಕಾವ್ಯವಾಗುವುದುಂಟು
ಬುದ್ಧ, ಪ್ರಬುದ್ಧ, ಸಂಬುದ್ಧ ಕಾಲಾತೀತ
ಅರಿವಿನ ಆಕಾಶದಲಿ ಬುದ್ಧನ ಕರುಣೆ
ಕಿರಣಗಳುಂಟು
ಮರೆತಾಗ ಅಮಾನುಷ, ಅರಿತಾಗ ಮನುಷ್ಯ
ಪ್ರಕೃತಿಯ ಮಾನದಂಡ ಮಾನವ, ಜಗ
ಬೆಳಗುವುದುಂಟು

೩

ಬುದ್ಧ ನಿನ್ನ ಪಾದವು, ಧರ್ಮ ಪಾದವು
ಜ್ಞಾನವೇ ಮೂರ್ತಿವೆತ್ತ ದಮ್ಮ ಪದವು
ಹೆಜ್ಜೆ ಇಟ್ಟಲ್ಲೆಲ್ಲಾ ಜ್ಞಾನೋದಯವು
ಕತ್ತಲೆಯಿದ್ದಲ್ಲೆಲ್ಲಾ ಅರುಣೋದಯವು
ಕಣ ಕಣವೆಲ್ಲಾ ಬುದ್ಧ ವಿಹಾರವು
ಜನವನ್ನಾವರಿಸಿದೆ ಬುದ್ಧ ಅರಿವು

೪

ಎಲ್ಲೆಡೆ ಮನಸೆಳೆಯುವ ಕಾಮನೆಯ
ಕಾಮಗಾರಿ–
ಹಾಸಿದೆ ಬೆಳದಿಂಗಳು, ಬೀಸಿದೆ ತಂಗಾಳಿ
ವಸಂತ ಒಳಸುಳಿದು ಮೈಮನ ಕಚಗುಳಿ
ಮದಿರೆ ಬಟ್ಟಲು ಹಿಡಿದ ಮನದನ್ನೆನಿನ್ನ ಬಳಿ
ಬಾ, ಹೀರು ಎನ್ನುತ್ತಿದೆ ಬಟ್ಟಲೊಳಗಿನ ಸುಳಿ
ಇವುಗಳ ಮಧ್ಯೆಯಿದ್ದು,
ಇಲ್ಲದಂತಿರುವೆಯಾದರೆ
ಬುದ್ಧ, ಸಂಬುದ್ಧ, ಪ್ರಬುದ್ಧ ನಿನ್ನ
ಬಳಿಯಿರುವನು ತಿಳಿ

೫

ಖಾಲಿ ಎಂದರೂ ಇದು ಖಾಲಿಯಲ್ಲವಲ್ಲ
ಬರಿದು ಎಂದರೂ ಇದು ಬರಿದಾಗಲಿಲ್ಲವಲ್ಲ
ಹೊಸತು ತುಂಬಲು ಹಳೆಯದು
ಖಾಲಿಯಾಗಬೇಕು
ಹಳೆಯ ಹಳವಂಡ ತುಂಬಿ ಹೃದಯ
ಗೋಜಲಾಯಿತಲ್ಲ
ಕೂಡಿಸುವುದರಲಿ ಕಳೆಯುವುದು,
ಕಳೆಯುವುದರಲಿ ಕೂಡಿಸುವುದು
ಈ ಲೆಕ್ಕಕ್ಕೆ ಯಾವ ಲೆಕ್ಕ ಪತ್ರಗಳಿಲ್ಲವಲ್ಲ

೬

ರಾಕೆಟ್ಟು ಅಂತರದ ಅಂತರಿಕ್ಷಕೆ ಹಾರಿದೆ
ಚಾಲನಾಶಕ್ತಿಯ ಉಪಕರಣ ಉದುರಿದೆ
ಗುರುತ್ವಾಕರ್ಷಣೆಯ ಮೇರೆ ಮೀರಲು ಮನ
ಅಂತರಿಕ್ಷದಲ್ಲಿ ಮನಸು ಹಾಯಾಗಿ ತೇಲಿದೆ

○ ಜಂಬಣ್ಣ ಅಮರ ಚಿಂತ

ತಡೆಯುವ ಅಗತ್ಯವಿಲ್ಲ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಚರಿತ್ರೆ ಕೆಲವೊಮ್ಮೆ ತನ್ನ ಹಾದಿಯನ್ನು ತಾನೇ ಹಿಡಿಯುತ್ತದೆ. ಅಂದರೆ ಅದು ಮರುಕಳಿಸಲು ತೊಡಗುತ್ತದೆ. ಕೆಲವೊಮ್ಮೆ ಚರಿತ್ರಾಗಾರರಿಗೆ ಉಸಿರಾಡಲೂ ಸಹ ಅವಕಾಶ ಕೊಡದೆ ಅದು ತನ್ನೆಲ್ಲಾ ಕ್ರೌರ್ಯದೊಡನೆ ಮುಂದಡಿಯಿಡುತ್ತಿರುತ್ತದೆ. ಇಂದು ಜಾಗತೀಕರಣ ಅಥವಾ ಜನರ ಬಂಡವಾಳಶಾಹಿ ವ್ಯವಸ್ಥೆ ಅಂಥದ್ದೇ ಚಾಲನೆಯಲ್ಲಿದ್ದು ಬಂಡವಾಳಶಾಹಿಯ ಏಕಸಾಮ್ಯತೆಯನ್ನು ಛಿದ್ರಗೊಳಿಸುತ್ತಿದ್ದು ಯಾವುದೇ ಸಾಂಪ್ರದಾಯಿಕ ಥಿಯರಿಗಳು ಅದನ್ನು ಗ್ರಹಿಲು ಸಿದ್ಧವಿದ್ದಂತೆ ಕಾಣುತ್ತಿಲ್ಲ.

ಭಾರತ-ಅಮೆರಿಕಾ ಭಾಗಿದಾರ ಒಪ್ಪಂದಗಳನ್ನು ವಿರೋಧಿಸುತ್ತಿರುವ ನಮ್ಮ ಎಡರಂಗದ ಹಳೆಯ ಚಾಳಿಯನ್ನು ಪರಿಗಣಿಸುವವರಂತೆ ತೋರುವ, ಏಕಸ್ವಾಮ್ಯ ಬಂಡವಾಳಶಾಹಿಯನ್ನು ಸಮರ್ಥಿಸುತ್ತಿರುವ ಹಳೆಯ ಗ್ರಹೀತಗಳೆಲ್ಲಾ ತುಕ್ಕುಹಿಡಿದಂತೆ ಕಾಣುತ್ತಿವೆಯೇ?

೨೦ನೇ ಶತಮಾನದ ಜಗತ್ತಿನಾದ್ಯಂತ ಇದ್ದ ಕಮ್ಯುನಿಸ್ಟರೆಲ್ಲಾ ಲಿನಿನ್‌ನ 'ಫೈನಾನ್ಸ್ ಕ್ಯಾಪಿಟಲಿಸಂ' (೧೯೧೬) ಅಥವಾ 'ಬಂಡವಾಳಶಾಹಿಯ ಉನ್ನತ ಸ್ಥಿತಿಯೇ ಸಾಮ್ರಾಜ್ಯಶಾಹಿ' ಎಂಬ ಥಿಯರಿಗಳಲ್ಲಿ ಖುಷಿಯಿಂದ ಸುಖಿಸಿದ್ದರು. ಅದರ ಪ್ರಕಾರ ಬಂಡವಾಳಶಾಹಿ ತನ್ನ ಉನ್ನತ ಸ್ಥಿತಿಯಲ್ಲಿ ಕೈಗಾರಿಕೋದ್ಯಮಿಗಳನ್ನು ಸಣ್ಣ ಕೈಗಾರಿಕೆಗಳ ವಿರುದ್ಧ, ಬಂಡವಾಳಶಾಹಿ ರಾಷ್ಟ್ರಗಳು ವಸಾಹತುಗಳ ಶತ್ರು ಎಂಬಂತೆ ತೋರಿಸಲಾಗುತ್ತಿತ್ತು.

ರಾಜ್ಯಾಂಗವು ದೊಡ್ಡ ಉದ್ಯಮಗಳ ಪರವಾಗಿ ನೀತಿಗಳನ್ನು ರೂಪಿಸುತ್ತದೆ. ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಬಲಿಪಶು ರಾಷ್ಟ್ರಗಳ ವಿರುದ್ಧವಿರುತ್ತದೆ. ಈ ಎಲ್ಲಾ ವೈರುಧ್ಯಗಳ ನಡುವೆ ಆಂತರಿಕವಾಗಿ ಮತ್ತು ಬಾಹ್ಯದಲ್ಲಿ ನವಬಂಡವಾಳಶಾಹಿ ರಾಷ್ಟ್ರಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ವಸಾಹತು ರಾಷ್ಟ್ರಗಳಿಗೆ ರವಾನೆ ಮಾಡುತ್ತಿವೆ.

ಆದ್ದರಿಂದ ಇಂದಿಗೂ ಮಾರ್ಕ್ಸ್‌ನ ಪರಿಭಾಷೆಯಲ್ಲಿ ಲೆನಿನ್‌ನ ಬಂಡವಾಳಶಾಹಿಯ ಏಕಸ್ವಾಮ್ಯ ಸಿದ್ಧಾಂತವು ತನ್ನ ನೆಲೆಯನ್ನು ಕಳೆದುಕೊಂಡಿಲ್ಲ. ಆದರೆ ಅಮೆರಿಕಾವು ಈ ಸಿದ್ಧಾಂತವನ್ನು ಪೂರ್ಣವಾಗಿ ಪರಿವರ್ತಿಸಲು ನಿಚ್ಚಯಿಸಿದಂತೆ ನಮಗೆ ತೋರುತ್ತದೆ.

ಅಮೆರಿಕಾ ಪ್ರಾರಂಭಿಸಿದ ಜಾಗತೀಕರಣವು ದೊಡ್ಡ ಉದ್ಯಮಗಳು ಸಣ್ಣ ಸಣ್ಣ ಉದ್ಯಮಗಳಿಗೆ ಎಡೆಮಾಡಿಕೊಡುವಂತೆ ಒತ್ತಡವನ್ನು ಹೇರಿಬಿಟ್ಟಿದೆ. ಆದ್ದರಿಂದ ಇಂದು ದೊಡ್ಡ ಮತ್ತು ಸಣ್ಣ ಬಂಡವಾಳಿಗರ ನಡುವೆ ಸಂಘರ್ಷ ಏರ್ಪಡುವ ಬದಲು ಹೊಂದಾಣಿಕೆ ಆರಂಭವಾಗಿದೆ. ಅವರಿಬ್ಬರೂ ಸಹ ಸಕ್ರಿಯವಾಗಿ ಉತ್ಪಾದನೆಯಲ್ಲಿ ತೊಡಗಿದ್ದಾರೆ. ಅನೇಕ ದೊಡ್ಡ ಕಂಪನಿಗಳು ಹೊಸ ಉದ್ಯಮಶೀಲರಿಗೆ ಹೊರಗುತ್ತಿಗೆಯನ್ನು ನೀಡುತ್ತಿವೆ.

ಉದಾಹರಣೆಗೆ ಅಮೆರಿಕಾದಲ್ಲಿ ಸಣ್ಣ ಉದ್ಯಮಗಳ ಆರಂಭ ಕ್ರಾಂತಿಕಾರಕ ಸ್ವರೂಪವನ್ನು ಪಡೆದುಕೊಂಡಿದೆ. ದೇಶದ ಒಟ್ಟು ಆದಾಯಕ್ಕೆ ಈ ಸಣ್ಣ ವ್ಯಾಪಾರದ ಕೊಡುಗೆ ಶೇ.೫೦ ರಷ್ಟು ಇದೆ. ಅಲ್ಲದೆ ಶೇ.೭೫ ರಷ್ಟು ಉದ್ಯೋಗವು ಈ ಕ್ಷೇತ್ರದಲ್ಲೇ ಸೃಷ್ಟಿಯಾಗುತ್ತಿದೆ. ಸುಮಾರು ೨೪ ಮಿಲಿಯನ್ ಅಂಥ ಸಣ್ಣ ಉದ್ಯಮಗಳು ಶೇ.೩೯.೧ರಷ್ಟು ತಂತ್ರಜ್ಞರನ್ನು ತಮ್ಮಲ್ಲಿ ತೊಡಗಿಸಿಕೊಂಡಿವೆ. ಹೀಗೆ ದೊಡ್ಡ ಕಂಪನಿಗಳಿಗಿಂತ ೧೪ ಪಟ್ಟು ಹೆಚ್ಚು ಪೇಟೆಂಟನ್ನು ಈ ಸಣ್ಣ ಕಂಪನಿಗಳೇ ರೂಢಿಸಿಕೊಂಡಿವೆ.

ಈ ಏಕಸ್ವಾಮ್ಯ ಕುಸಿದುಬಿದ್ದ ಪರಿಣಾಮ ೧೯೭೭ರಲ್ಲಿ ೧೪.೭ ಮಿಲಿಯನ್‌ಗಳಿದ್ದ ಈ ಸಣ್ಣ ಕಂಪನಿಗಳು ೨೦೦೭ರಲ್ಲಿ ೩೨ ಮಿಲಿಯನ್‌ಗಳಷ್ಟಾಗಿವೆ. ಬೈಲರ್ ವಿಶ್ವವಿದ್ಯಾಲಯವು ಮಾಡಿರುವ ಅಧ್ಯಯನದ ಪ್ರಕಾರ ೧೯೮೦ರಿಂದ ಸುಮಾರು ೫ ಮಿಲಿಯನ್ ಉದ್ಯೋಗಗಳು ಫಾರ್ಚುನ್ ೫೦೦ಕಂಪನಿಗಳಿಂದ ಮುಳುವಾದವು. ಆದರೆ ಅದೇ ಸಮಯದಲ್ಲಿ ಸಣ್ಣ ಕಂಪನಿಗಳು ೩೪ ಮಿಲಿಯನ್ ಉದ್ಯೋಗಗಳನ್ನು ಸೃಷ್ಟಿಸಿದವು. ಮಿಲಿಯಗಟ್ಟಳೆ ಜನ ಯಾವುದೇ ಹಿನ್ನೆಲೆ ಇಲ್ಲದೆ ಹೊಸ ಉದ್ಯಮಗಳನ್ನು ಸ್ಥಾಪಿಸಿದರು. ಅಮೆರಿಕಾದಲ್ಲಿ ಪ್ರತಿ ೧೨ ಮಂದಿಯಲ್ಲಿ ಒಬ್ಬರು ಒಂದು ಉದ್ಯಮವನ್ನು ಆರಂಭಿಸುತ್ತಾರೆ. ಅಲ್ಲದೆ, ೧೮-೨೯ರ ನಡುವಿನ ವಯಸ್ಕರಲ್ಲಿ ಶೇ.೬೦ರಷ್ಟು ಮಂದಿ ಸ್ವಂತ ವಹಿವಾಟನ್ನು ಹೊಂದಲು ಆಸಕ್ತರಾಗಿದ್ದಾರೆ. ಈ ವಿದ್ಯಮಾನದಿಂದ ಅಧಿಕ ಪ್ರಯೋಜನ ಪಡೆಯುವವರೆಂದರೆ ಆಫ್ರಿಕಾ ಮೂಲದ ಅಮೆರಿಕನ್ನರೇ ಆಗಿದ್ದಾರೆ.

ಈ ಅಮೆರಿಕಾದ ಮಾದರಿಯನ್ನು ಭಾರತವು ಅನುಸರಿಸಿದಲ್ಲಿ ಏನಾಗಬಹುದು? ಏಕಸ್ವಾಮ್ಯ ಹೊಂದಿರುವ ಬಂಡವಾಳಿಗರು ತಮ್ಮ ವಾಣಿಜ್ಯ-ವಹಿವಾಟುಗಳಲ್ಲಿ ಪಾಲುದಾರಿಕೆಗೆ ಬಂದಲ್ಲಿ ದಲಿತರನ್ನು ಒಳಗೊಂಡಂತೆ ಅನೇಕ ಹೊಸಬರು ಉದ್ಯಮಗಳನ್ನು ಆರಂಭಿಸಬಹುದಲ್ಲವೇ.

ಭಾರತದಲ್ಲಿ ಈಗಾಗಲೇ ಆ ಪ್ರಕ್ರಿಯೆ ಆರಂಭವಾಗಿದೆ. ವಾಣಿಜ್ಯ ರಂಗದಲ್ಲಿ ಯಾವುದೇ ಚಾರಿತ್ರಿಕ ಹಿನ್ನೆಲೆ ಇಲ್ಲದೆ ಇರುವ ದಲಿತರನ್ನೊಳಗೊಂಡಂತೆ ಮಿಲಿಯಗಟ್ಟಳೆ ಜನ ಇಂದು ಉದ್ಯಮಶೀಲರಾಗಿ ಬದಲಾಗುತ್ತಿದ್ದಾರೆ. ೧೯೯೧ ರ ಜನಗಣತಿಯ ಪ್ರಕಾರ ೧.೨ ಮಿಲಿಯನ್ ದಲಿತರು ತಮ್ಮದೇ ಆದ ಗೃಹ ಉದ್ಯಮಗಳನ್ನು ಹೊಂದಿದ್ದು ಮಾರುಕಟ್ಟೆಯಲ್ಲಿ ತಮ್ಮ ತಯಾರಿಕೆಗಳನ್ನು ಮಾರುತ್ತಿದ್ದರು. ಆದರೆ ೨೦೦೧ರಲ್ಲಿ ಆ ಸಂಖ್ಯೆ ೨.೬೨ ಅಂದರೆ ಶೇ.೧೦೦ ರಷ್ಟು ಅಧಿಕಗೊಂಡಿತ್ತು.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಜಾಗತಿಕ ಬಂಡವಾಳಶಾಹಿ ನಾಯಕ ಪಟ್ಟವನ್ನು ಹೊಂದಿರುವ ಅಮೆರಿಕಾವು ಏಕಸ್ವಾಮ್ಯ ಬಂಡವಾಳಶಾಹಿಯ ವಿರುದ್ಧ ಸಮರ ಸಾರಿದ್ದು ಬಂಡವಾಳಶಾಹಿ ವ್ಯವಸ್ಥೆ ಜನರತ್ತ ಮುಖಮಾಡುತ್ತಿದೆ.

ಹಿಂದೆ ಯಾವ ರಾಷ್ಟ್ರಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿದ್ದವೋ ಆ ರಾಷ್ಟ್ರಗಳು ತಮ್ಮ ವಸಾಹತುಗಲಾಗಿದ್ದ ರಾಷ್ಟ್ರಗಳಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಆಮದು ಮಾಡಿಕೊಳ್ಳುತ್ತಿದ್ದು ಹೊಸ ಶಕೆಯನ್ನು ಆರಂಭಿಸಿದಂತಾಗಿದೆ. ಭಾರತದಲ್ಲಿ ವಾಣಿಜ್ಯ ಉದ್ಯಮಗಳನ್ನು ಒಂದು ಸಾಮಾಜಿಕ ವರ್ಗವಾಗಿರುವ ವೈಶ್ಯ ಜಾತಿ ತನ್ನ ಏಕ ಸ್ವಾಮ್ಯವನ್ನು ಹೊಂದಿದೆ. ಇಂದು ಭಾರತಕ್ಕೆ ಅಧಿಕ ವಾಣಿಜ್ಯ ಗುಂಪುಗಳು ಅಗತ್ಯವಾಗಿವೆ. ಅಂದರೆ ಭಾರತದ ಬಂಡವಾಳಶಾಹಿ ವ್ಯವಸ್ಥೆಯು ಬಹುವಾಗಿ ವಿಕೇಂದ್ರೀಕೃತ ಬಂಡ

ಹಿಂದೆ ಯಾವ ರಾಷ್ಟಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿದ್ದವೋ ಆ ರಾಷ್ಟಗಳು ತಮ್ಮ ವಸಾಹತುಗಲಾಗಿದ್ದ ರಾಷ್ಟಗಳಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಆಮದು ಮಾಡಿಕೊಳ್ಳುತ್ತಿದ್ದು ಹೊಸ ಶಕೆಯನ್ನು ಆರಂಭಿಸಿದಂತಾಗಿದೆ. ಭಾರತದಲ್ಲಿ ವಾಣಿಜ್ಯ ಉದ್ಯಮಗಳನ್ನು ಒಂದು ಸಾಮಾಜಿಕ ವರ್ಗವಾಗಿರುವ ವೈಶ್ಯ ಜಾತಿ ತನ್ನ ಏಕ ಸ್ವಾಮ್ಯವನ್ನು ಹೊಂದಿದೆ. ಇಂದು ಭಾರತಕ್ಕೆ ಅಧಿಕ ವಾಣಿಜ್ಯ ಗುಂಪುಗಳು ಅಗತ್ಯವಾಗಿವೆ. ಅಂದರೆ ಭಾರತದ ಬಂಡವಾಳಶಾಹಿ ವ್ಯವಸ್ಥೆಯು ಬಹುವಾಗಿ ವಿಕೇಂದ್ರೀಕೃತ ಬಂಡವಾಳದತ್ತ ಸಾಗುತ್ತಿದೆ. ದಲಿತರನ್ನೊಳಗೊಂಡಂತೆ ವೈಶ್ಯರಲ್ಲದವರೂ ಸಹ ಇಂದು ವಾಣಿಜ್ಯ ಉದ್ಯಮಗಳನ್ನು ಆರಂಭಿಸಬಹುದಾಗಿದೆ. ಇದು ಇನ್ನು ಸ್ವಲ್ಪ ಮುಂದುವರಿದರೆ ಅಮೆರಿಕಾದ ಮಾದರಿ ಇಲ್ಲಿಯೂ ಸಾಧ್ಯವಾಗುತ್ತದೆ.

ಅನು : ಡೊಮಿನಿಕ್. ಡಿ

ವಾಳದತ್ತ ಸಾಗುತ್ತಿದೆ. ದಲಿತರನ್ನೊಳಗೊಂಡಂತೆ ವೈಶ್ಯರಲ್ಲದವರೂ ಸಹ ಇಂದು ವಾಣಿಜ್ಯ ಉದ್ಯಮಗಳನ್ನು ಆರಂಭಿಸಬಹುದಾಗಿದೆ. ಇದು ಇನ್ನು ಸ್ವಲ್ಪ ಮುಂದುವರಿದರೆ ಅಮೆರಿಕಾದ ಮಾದರಿ ಇಲ್ಲಿಯೂ ಸಾಧ್ಯವಾಗುತ್ತದೆ.

ಹಾಗಾದರೆ ಲೆನಿನ್ ಹೇಳಿದ ಏಕಸ್ವಾಮ್ಯ ಬಂಡವಾಳಶಾಹಿಯ ವಿರುದ್ಧ ಅಮೆರಿಕಾ ಆರಂಭಿಸಿರುವ ಜಾಗತೀಕರಣವು ಸಮರಹೂಡಿರುವಾಗ ಎಡಪಂಥಿಯರೇಕೆ ಭಾರತ-ಅಮೆರಿಕಾ ಪಾಲುದಾರಿಕೆಗೆ ತಡೆಗೋಡೆಗಳನ್ನು ನಿರ್ಮಿಸುತ್ತಿದ್ದಾರೆ?

ಈ ಅಂಕಣದ ಪ್ರಕಾರ ಭಾರತ-ಅಮೆರಿಕಾದ ಪರಮಾಣು ಒಪ್ಪಂದ ಕುರಿತಂತೆ ಎಡಪಂಥೀಯರ ನಿಲುವು ಆ ಒಪ್ಪಂದದ ಬಗ್ಗೆಯೇನೂ ಅಲ್ಲ. ಅದರ ಬಗೆಗಿನ ಅವರ ನಿಲುವು ಕೇವಲ ಆಕಸ್ಮಿಕ ಅಷ್ಟೆ. ಕೋಕ್ ಮತ್ತು ಅಮೆರಿಕಾ, ಆಸ್ಟ್ರೇಲಿಯಾ, ಜಪಾನ್ ಮತ್ತು ಸಿಂಗಾಪುರ ದೇಶಗಳು ನಡೆಸಲು ಉದ್ದೇಶಿಸಿದ ನೌಕಾಪಡೆಯ ಅಭ್ಯಾಸಗಳ ವಿರುದ್ಧವು ಸಹ ಎಡಪಂಥೀಯರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಕೊಲ್ಕೊತ್ತಾದ ದಿ ಟೆಲಿಗ್ರಾಫ್ ಪತ್ರಿಕೆಯ ಪ್ರಕಾರ ಇಂಗ್ಲೆಂಡ್‌ನ ರಿಟೈಲ್ ಕಂಪನಿಗಳಾದ ವಾಲ್‌ಮಾರ್ಟ್, ಕಾರ್ರೆಫೋರ್ ಮತ್ತು ಟೆಸ್ಕೊ ಭಾರತದಲ್ಲಿ ತಮ್ಮಶಾಖೆಗಳನ್ನು ಹೊಂದುವುದನ್ನೂ ಸಹ ಎಡಪಂಥೀಯರು ಒಪ್ಪುವುದಿಲ್ಲ. ಕಾರಣ ಸ್ಥಳೀಯ ಕಿರಣ್ ಮಾಲೀಕತ್ವದ ಶಾಖೆಗಳನ್ನು ಆ ವಿದೇಶಿ ಕಂಪನಿಗಳು ಮುಳುಗಿಸಿಬಿಡುತ್ತವೆಯಂತೆ.

ಜಾಗತಿಕ ಬಂಡವಾಳಶಾಹಿಯನ್ನು ತಿರಸ್ಕರಿಸುತ್ತಾರೆ. ಆದ್ದರಿಂದ ಅಮೆರಿಕಾ ಮತ್ತದರ ಮಿತ್ರ ರಾಷ್ಟ್ರಗಳಾದ ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಸಿಂಗಾಪೂರ, ದಕ್ಷಿಣ ಕೋರಿಯಾ ಮತ್ತು ಆಸ್ಟ್ರೇಲಿಯಾಗಳನ್ನು ಎಡಪಂಥೀಯರು ವಿರೋಧಿಸುತ್ತಾರೆ.

ಎಡಪಂಥಿಯರ ಈ ನಿಲುವು ಮುಂದುವರೆದರೆ ಭಾರತವು ಮೇಲಿನ ರಾಷ್ಟ್ರಗಳ ಸ್ನೇಹದಿಂದ ಹೊರಬೀಳುತ್ತದೆ. ಅದೇನಾದರೂ ಆದಲ್ಲಿ ಭಾರತೀಯ ಬಡಜನರ ಮೇಲಿನ ಅದರ ಪರಿಣಾಮ ಏನಾಗಬಹುದು? ಅಮೆರಿಕಾ ಮತ್ತು ಯೂರೋಪ್‌ಗೆ ದುಡಿಯುತ್ತಿರುವ ಭಾರತದ ಒಂದು ಮಿಲಿಯನ್‌ನಷ್ಟಿರುವ ಐಟಿ ಮತ್ತು ಬಿಪಿಓ ತಂತ್ರಜ್ಞರನ್ನು ಯೋಚಿಸುವುದು ಬೇಡ. ಅವರೆಲ್ಲಾ ಬೂರ್ಸ್ವಾ ಜನರ ಮಕ್ಕಳಾಗಿರುವುದರಿಂದ ಅವರಿಗೆ ಸುಖದ ಹಕ್ಕಿಲ್ಲ. ಐಶಾರಾಮಿ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿರುವ ಭಾರತೀಯ ಬೂರ್ಸ್ವಾಗಳ ಬಗ್ಗೆಯೂ ಸಹ ಚಿಂತಿಸುವ ಅಗತ್ಯವಿಲ್ಲ. ಎಡಪಂಥಿಯರ ಪ್ರಕಾರ ಈ ಬೂರ್ಸ್ವಾಗಳು ಹಸಿವನ್ನು ಅನುಭವಿಸಬೇಕು. ಆದ್ದರಿಂದ ಈ ದೇಶದ ಬಡಜನರಿಗೆ ಏನಾಗುತ್ತದೆ ಎನ್ನುವುದನ್ನು ಸ್ವಲ್ಪ ಗಮನಿಸೋಣ.

ಜಾಗತಿಕ ಮಾರುಕಟ್ಟೆಯಲ್ಲಿ ಶೇ.೧೮.೫ರಷ್ಟು ಬೇಡಿಕೆಯನ್ನು ಹೊಂದಿರುವ ಭಾರತೀಯ ವಜ್ರ ಮತ್ತು ರತ್ನಗಳ ಉದ್ಯಮವು ಸುಮಾರು ೮ ಲಕ್ಷ ಮಂದಿ ಕೆಲಸಗಾರರನ್ನು ಅಹಮದಾಬಾದ್, ಸೂರತ್, ಭಯ್ನಾಗರ್, ನವಾಸರಿ ಮತ್ತು ಮುಂಬೈನಲ್ಲಿ ಕಾಣಬಹುದು. ಪರೋಕ್ಷವಾಗಿ ಇನ್ನೆರಡು ಲಕ್ಷ ಜನ ಇದೇ ಉದ್ಯಮದಿಂದ ಉದ್ಯೋಗವನ್ನು ಪಡೆದಿದ್ದಾರೆ. ಈ ವಲಯದಲ್ಲಿರುವ ಸುಮಾರು ಒಂದು ಮಿಲಿಯನ್ ಶ್ರಮಿಕರು ಶೇ.೧೫ರಷ್ಟು

ಎಡಪಂಥೀಯರ ಹಿಂದೂ ವಿಧಿವಾದ

ಒಂದು ಬಿಲಿಯನ್‌ಷ್ಟಿರುವ ಸಶಕ್ತ ಶ್ರಮಿಕರು ಯಾರಿಗಾಗಿ ದುಡಿಯುತ್ತಿದ್ದಾರೆ? ದೇಶದ ಒಳಗೆ ಮಾರಾಟವಾಗುವ ಈ ವಜ್ರ ಕೇವಲ ೩.೬ ಮಿಲಿಯನ್ ಡಾಲರ್ ವಹಿವಾಟನ್ನಷ್ಟೇ ಹೊಂದಿದೆ. ವಾಣಿಜ್ಯ ಅಂಕಿ ಅಂಶಗಳು ತೋರಿಸುವಂತೆ ೧/೩ ರಷ್ಟು ವಜ್ರ ಅಮೆರಿಕಾ ಒಂದಕ್ಕೇ ರಫ್ತು ಮಾಡಲಾಗುತ್ತಿದೆ. ಈ ಕಾರ್ಮಿಕರ ಮೂರು ಲಕ್ಷ ಮಂದಿ ಮಕ್ಕಳು ಬೂರ್ಸ್ವಾ, ರಾಜಮನೆತನ ಮತ್ತು ಹಿಂದಿನ ಭೂಮಾಲೀಕ, ಸಾಫ್ಟ್‌ವೇರ್, ವೃತ್ತಿಪರ, ಸಂಪಾದಕೀಯ, ಅಂಕಣಕಾರ ಮತ್ತು ಪರಿಸರವಾದಿ ಗುಂಪುಗಳಿಗೆ ಸೇರಿದವರೇ? ಬೆಳೆಯುತ್ತಿರುವ ಭಾರತೀಯ ಟೆಕ್ಸ್‌ಟೈಲ್ ಉದ್ಯಮ ೪೦ ಬಿಲಿಯನ್ ಮೌಲ್ಯವನ್ನು ಹೊಂದಿದೆ. ಸುಮಾರು ೩೫ ಮಿಲ್ಲಯನ್ ಭಾರತೀಯರು ಈ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಕಳೆದ ವರ್ಷ ಈ ಉದ್ಯಮದಿಂದ ೧೮.೧೧ ಬಿಲಿಯನ್ ಡಾಲರ್ ಆದಾಯ ರಫ್ತಿನಿಂದ ಬಂದಿದೆ. ಅಂಕಿ ಅಂಶಗಳು ತೋರಿಸುವಂತೆ ವಿದೇಶಿ ಗ್ರಾಹಕರಿಗಾಗಿ ಈ ಉದ್ಯಮದಲ್ಲಿ ೧೭ ಮಿಲಿಯನ್ ಜನ ದುಡಿಯುತ್ತಿದ್ದಾರೆ. ಹಾಗಾದರೆ ಆ ಗ್ರಾಹ ಕರು ಯಾರು? ವಾಣಿಜ್ಯ ಅಂಕಿ ಅಂಶಗಳ ಪ್ರಕಾರ ಶೇ. ೭೫ರಷ್ಟು ಟೆಕ್ಸ್‌ಟೈಲ್ ಉತ್ಪಾದನೆಯನ್ನು ಅಮೆರಿಕಾ ಮತ್ತು ಯೂರೋಪಿಯನ್ ಯೂನಿಯನ್ ಆಮದು ಮಾಡಿಕೊಳ್ಳುತ್ತಿವೆ. ಅಂದರೆ ಸುಮಾರು ೬೦ ಲಕ್ಷ ಕಾರ್ಮಿಕರು ಈ ಉದ್ಯಮದಲ್ಲಿ ದುಡಿಯುತ್ತಿರುವುದರಿಂದ ರಫ್ತು ಸಾಧ್ಯವಾಗಿದೆ. ಈ ೬೦ ಲಕ್ಷ ಮಂದಿ ಯಾವ ವರ್ಗಕ್ಕೆ ಸೇರಿದ್ದಾರೆ?

ಆದಾಯವನ್ನು ದೇಶದ ರಫ್ತು ವಹಿವಾಟಿಗೆ ನೀಡುತ್ತಿದ್ದಾರೆ. ಈ ನಾಜೂಕಿ ವಜ್ರ ಸುಮಾರು ೧೭.೧ ಬಿಲಿಯನ್ ಡಾಲರ್‌ನ್ನು ಅಂದರೆ ಮೌರಿಷಿಯಸ್‌ನ ವಾರ್ಷಿಕ ತಲಾದಾಯದಷ್ಟನ್ನು ಹೊಂದಿದೆ. ಈ ಒಂದು ಬಿಲಿಯನ್‌ಷ್ಟಿರುವ ಸಶಕ್ತ ಶ್ರಮಿಕರು ಯಾರಿಗಾಗಿ ದುಡಿಯುತ್ತಿದ್ದಾರೆ? ದೇಶದ ಒಳಗೆ ಮಾರಾಟವಾಗುವ ಈ ವಜ್ರ ಕೇವಲ ೩.೬ ಮಿಲಿಯನ್ ಡಾಲರ್ ವಹಿವಾಟನ್ನಷ್ಟೇ ಹೊಂದಿದೆ. ವಾಣಿಜ್ಯ ಅಂಕಿ ಅಂಶಗಳು ತೋರಿಸುವಂತೆ ೧/೩ ರಷ್ಟು ವಜ್ರ ಅಮೆರಿಕಾ ಒಂದಕ್ಕೇ ರಫ್ತು ಮಾಡಲಾಗುತ್ತಿದೆ.

ಈ ಕಾರ್ಮಿಕರ ಮೂರು ಲಕ್ಷ ಮಕ್ಕಳು ಬೂರ್ಸ್ವಾ, ರಾಜಮನೆತನ ಮತ್ತು ಹಿಂದಿನ ಭೂಮಾಲೀಕ, ಸಾಫ್ಟ್‌ವೇರ್, ವೃತ್ತಿಪರ, ಸಂಪಾದಕೀಯ, ಅಂಕಣಕಾರ ಮತ್ತು ಪರಿಸರವಾದಿ ಗುಂಪುಗಳಿಗೆ ಸೇರಿದವರೇ?

ಬೆಳೆಯುತ್ತಿರುವ ಭಾರತೀಯ ಟೆಕ್ಸ್‌ಟೈಲ್ ಉದ್ಯಮ ೪೦ ಬಿಲಿಯನ್ ಮೌಲ್ಯವನ್ನು ಹೊಂದಿದೆ. ಸುಮಾರು ೩೫ ಮಿಲಿಯನ್ ಭಾರತೀಯರು ಈ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಕಳೆದ ವರ್ಷ ಈ ಉದ್ಯಮದಿಂದ ೧೮.೧೧ ಬಿಲಿಯನ್ ಡಾಲರ್ ಆದಾಯ ರಫ್ತಿನಿಂದ ಬಂದಿದೆ. ಅಂಕಿಅಂಶಗಳು ತೋರಿಸುವಂತೆ ವಿದೇಶಿ ಗ್ರಾಹಕರಿಗಾಗಿ ಈ ಉದ್ಯಮದಲ್ಲಿ ೧೭ ಮಿಲಿಯನ್ ಜನ ದುಡಿಯುತ್ತಿದ್ದಾರೆ.

ಹಾಗಾದರೆ ಆ ಗ್ರಾಹಕರು ಯಾರು? ವಾಣಿಜ್ಯ ಅಂಕಿ ಅಂಶಗಳ ಪ್ರಕಾರ ಶೇ.೭೫ರಷ್ಟು ಟೆಕ್ಸ್‌ಟೈಲ್ ಉತ್ಪಾದನೆಯನ್ನು ಅಮೆರಿಕಾ ಮತ್ತು ಯೂರೋಪಿಯನ್ ಯೂನಿಯನ್ ಆಮದು ಮಾಡಿಕೊಳ್ಳುತ್ತಿವೆ. ಅಂದರೆ ಸುಮಾರು ೬೦ ಲಕ್ಷ ಕಾರ್ಮಿಕರು ಈ ಉದ್ಯಮದಲ್ಲಿ ದುಡಿಯುತ್ತಿರುವುದರಿಂದ ರಫ್ತು ಸಾಧ್ಯವಾಗಿದೆ. ಈ ೬೦ ಲಕ್ಷ ಮಂದಿ ಯಾವ ವರ್ಗಕ್ಕೆ ಸೇರಿದ್ದಾರೆ?

ಭಾರತೀಯ ಚರ್ಮ ಕೈಗಾರಿಕೆಯಲ್ಲಿ ೨೫ ಲಕ್ಷ ಕಾರ್ಮಿಕರು ತೊಡಗಿಕೊಂಡಿದ್ದಾರೆ. ಚೀನಾ ದೇಶದ ನಂತರ ಎರಡನೆಯ ಸ್ಥಾನವನ್ನು ಭಾರತ ಈ ಚರ್ಮ ಕೈಗಾರಿಕೆಯಲ್ಲಿ ಪಡೆದಿದೆ. ಭಾರತೀಯ ರಫ್ತು ವಸ್ತುಗಳಲ್ಲಿ ಚರ್ಮದ ಸಿದ್ಧವಸ್ತುಗಳು ಮಹತ್ವದ ಸ್ಥಾನವನ್ನು ಪಡೆದಿದೆ. ೨೦೦೬-೨೦೦೭ರ ಅವಧಿಯಲ್ಲಿ ಭಾರತವು ಸುಮಾರು ೨.೩೮ ಬಿಲಿಯನ್ ಡಾಲರ್ ಮೌಲ್ಯದ ಚರ್ಮದ ವಸ್ತುಗಳನ್ನು ರಫ್ತುಮಾಡಿತು. ಯಾವ ದೇಶಗಳಿಗೆ ಈ ವಸ್ತುಗಳು ರಫ್ತಾಗುತ್ತಿವೆ ಎಂದು ಎಡಪಂಥಿಯರು ಹೇಳಬಹುದೇ? ಚೀನಾ, ಇರಾನ್ ಅಥವಾ ರಷ್ಯಾಗಳಿಗೆ ರಫ್ತಾಗುತ್ತಿವೆಯಾ?

ಭಾರತದ ಚರ್ಮ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿರುವ ಮೂರನೇ ದೊಡ್ಡ ರಾಷ್ಟ್ರವೆಂದರೆ ಅಮೆರಿಕಾವೇ ಆಗಿದೆ. ಅಮೆರಿಕಾ ಮತ್ತು ಯೂರೋಪಿಯನ್ ಯೂನಿಯನ್ ಶೇ.೭೪ರಷ್ಟು ಚರ್ಮ ವಸ್ತುಗಳನ್ನು ಭಾರತದಿಂದ ಆಮದು ಮಾಡಿಕೊಳ್ಳುತ್ತಿವೆ. ಈ ಉದ್ಯಮದಲ್ಲಿ ದುಡಿಯುತ್ತಿರುವ ೨೫ ಲಕ್ಷ ಕಾರ್ಮಿಕರು ಯಾರು? ಅವ

ರಲ್ಲಿ ಬಹುಪಾಲು ಮಂದಿ ಈ ವಿದೇಶಿ ಗ್ರಾಹಕರಿಗಾಗಿ ದುಡಿಯುತ್ತಿದ್ದಾರೆ. ಯಾವ ರಾಷ್ಟ್ರ ತಾನೆ ಅಮೆರಿಕಾ, ಕೆನಡಾ, ಯುಕೆ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಸಿಂಗಪೂರ, ದಕ್ಷಿಣ ಕೊರಿಯ ಮತ್ತು ಆಸ್ಟ್ರೇಲಿಯಾದಿಂದ ಬೇರ್ಪಡಿಸಿಕೊಂಡು ಬದುಕಬಲ್ಲುದು ಮತ್ತು ಬೆಳೆಯಬಲ್ಲುದು?

ಎಲ್ಲಾ ಲೆಕ್ಕಾಚಾರದಿಂದಲೂ ಎಡಪಂಥೀಯರು ಹಿಂದೂ ವಿಧಿವಾದವನ್ನು ಆಚರಿಸುತ್ತಿದ್ದಂತೆ ಕಾಣುತ್ತಿದೆ. ಇದು ನಿರ್ಧಾರವಾದ ಮತ್ತು ಸೋಲುಗುಳಿತನವನ್ನಷ್ಟೇ ಪ್ರತಿಪಾದಿಸುತ್ತದೆ. ಯಾವುದೇ ಮಾನವ ಪ್ರಯತ್ನವನ್ನು ಹಿಂದೂ ಧರ್ಮ ಒಪ್ಪದೆ ಅದನ್ನು ವಿಧಿಯಾಟಕ್ಕೆ ನೇತು ಹಾಕಿಬಿಡುತ್ತದೆ.

ಹಿಂದೂ ಧರ್ಮದ ಆಚರಣಾ ಸ್ವರೂಪವನ್ನು ಸಂಘಪರಿವಾರ ಪ್ರತಿನಿಧಿಸಿದರೆ ಎಡಪಂಥ ಹಿಂದೂ ಧರ್ಮದ ಬೌದ್ಧಿಕತೆ ಇಲ್ಲದ ಆಧ್ಯಾತ್ಮವನ್ನು ಪ್ರತಿನಿಧಿಸುತ್ತದೆ. ಈ ಎಡಪಂಥಿಯರ ಹಿಂದೂ ಆಧ್ಯಾತ್ಮವಾದದಿಂದ ಸಾಮಾನ್ಯ ಭಾರತೀಯರು ಏಕೆ ನೋವನ್ನು ಅನುಭವಿಸಬೇಕು?

ಭಾರತದಂಥ ದೇಶಗಳೂ ಸಹ ಕೈಗಾರಿಕೀಕರಣದಲ್ಲಿ ಬೆಳೆಯಬೇಕಾಗಿದೆ. ಕೈಗಾರಿ ಕೀಕರಣದಲ್ಲಿ ಈ ಮಾಲ್ ಸಂಸ್ಕೃತಿಯು ಮಹತ್ವದ ಪಾತ್ರವಹಿಸುತ್ತದೆ. ಆದರೂ ಸಂಪ್ರದಾಯವಾದಿ ಆರ್ಥಿಕ ಬುದ್ಧಿಜೀವಿ ಗಳು ಅದನ್ನು ವಿರೋಧಿಸುತ್ತಿದ್ದಾರೆ. ನಿಜವಾಗಿ ವಾಸ್ತವದಲ್ಲಿ ಒಂದು ಸಮಾಜ ಯಾವಾಗ ಬದಲಾವಣೆಯನ್ನು ಬಯಸುತ್ತದೋ ಆಗ ಸನಾತನಿ ಶಕ್ತಿಗಳು ಅಂಥ ಬದಲಾವಣೆಯನ್ನು ತಡೆಯುತ್ತವೆ. ಇದೇ ಯೂರೋಪಿನಲ್ಲೂ ನಡೆದಿದೆ.

ಕಳೆದ ತಿಂಗಳು ಉತ್ತರ ಪ್ರದೇಶದಲ್ಲಿ ತರಕಾರಿ ಮಾರುವವರು ರಿಲಯನ್ಸ್ ಫ್ರೆಶ್ ಶಾಖೆಗಳನ್ನು ಧ್ವಂಸ ಗೈದರು. ಅಶಾಂತ ಸ್ಥಿತಿಯ ಮಧ್ಯೆ ಸರ್ಕಾರ ತಂದ ಹೊಸ ಕೃಷಿ ನೀತಿಯನ್ನು ಸರ್ಕಾರವೇ ಹಿಂತೆಗೆದುಕೊಂಡಿತು. ಆದರೆ ಇದಕ್ಕೆ ಕೃಷಿಯನ್ನು ಕೈಗಾರಿಕೀಕರಣಗೊಳಿಸುವ ಸಾಮರ್ಥ್ಯವಿತ್ತು. ರಿಲಯನ್ಸ್ ಫ್ರೆಶ್ ಶಾಖೆಗಳನ್ನು ಮುಚ್ಚಲಾಯಿತು. ಹಾಗೆಯೇ ಇತರೆಡೆಗಳಲ್ಲಿ ಇದ್ದ ರಿಲಯನ್ಸ್ ಶಾಖೆಗಳನ್ನೂ ಸಹ ಧ್ವಂಸಗೊಳಿಸಲಾಯಿತು.

ಕಳೆದ ಜುಲೈನಲ್ಲಿ ದಿನೇಶ್ ಮೋನಿ ಎನ್ನುವ ಸಿ.ಪಿ.ಎಂ ಶಾಸಕರೋರ್ವರು ಕೇರಳದಲ್ಲಿ ರಿಲಯನ್ಸ್ ಫ್ರೆಶ್‌ನ್ನು ಉದ್ಘಾಟಿಸಿದರು. ತನ್ನ ಕಾಂಮ್ರೆಡರಿಂದ ಅದರ ವಿರುದ್ಧ ಕೂಗು, ಖಂಡನೆ ಮತ್ತು ಪ್ರತಿಭಟನೆ ಆರಂಭವಾದಾಗ ಮೋನಿ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ. ಆಗಸ್ಟ್ ೨೭, ೨೦೦೭ರಂದು ಕೊಲ್ಕತ್ತಾದ ಗಿರೀಶ್ ಪಾರ್ಕ್‌ನಲ್ಲಿ ಇನ್ನೇನು ಆರಂಭವಾಗಬೇಕಿದ್ದ ರಿಲಯನ್ಸ್ ಫ್ರೆಶ್ ಶಾಪ್‌ಗೆ ನುಗ್ಗಿದ ಬಿಜೆಪಿ ಕಾರ್ಯಕರ್ತರು ಧಾಂದಲೆ ನಡೆಸಿದರು. ಟೆಲಿಗ್ರಾಫ್‌ನ ವರದಿ ಪ್ರಕಾರ ಬಿಜೆಪಿಯ ರಾಜ್ಯ ಕಾರ್ಯದರ್ಶಿ ರಾಹುಲ್ ಸಿನ್ಹಾ ಇಂಥ ಪ್ರತಿಭಟನೆಗಳು ರಾಷ್ಟ್ರಾದ್ಯಂತ ಹಮ್ಮಿಕೊಳ್ಳಲಾಗುವುದೆಂದು ಹೇಳಿದ್ದ. ಇದರಿಂದ ರಿಲಯನ್ಸ್ ಫ್ರೆಶ್ ಬಂಗಾಳವನ್ನು ತೊರೆಯುತ್ತದೆಂದು ಪತ್ರಿಕೆ ವರದಿ ಮಾಡಿತ್ತು.

“ಮರಳಿ ಹೊರಡು ವಾಲ್‌ಮಾರ್ಟ್, ನಮ್ಮಲ್ಲಿ ರಿಟೈಲ್ ವ್ಯಾಪಾರ ನಡೆಸುವುದಕ್ಕೆ ನಿನಗೆ ಪ್ರವೇಶವಿಲ್ಲ” ಎಂದು ಸ್ವದೇಶಿ ಜಾಗರಣ ಮಂಚ್‌ನಿಂದ ಪ್ರೇರಣೆಗೊಂಡ ಆರ್‌ಎಸ್‌ಎಸ್ ಗುಂಪು ಕಳೆದ ಮೇನಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿತ್ತು. “ಈ ಒಪ್ಪಂದದಿಂದ ಕೇವಲ ಅಮೆರಿಕಾದ ಪರಮಾಣು ರಿಯಾಕ್ಟರ್‌ಗಳನ್ನು ಮಾತ್ರ ಭಾರತ ಆಮದು ಮಾಡಿಕೊಳ್ಳುವುದಿಲ್ಲ. ಅದರೊಡನೆ ವಾಲ್‌ಮಾರ್ಟ್ ಸಹ ಬರುತ್ತದೆ. ಅದು ಇಲ್ಲಿರುವ ಲಕ್ಷಗಟ್ಟಳೆ ಸಣ್ಣ ಅಂಗಡಿಕಾರರನ್ನು ಹಾಗೂ ರಿಟೈಲ್ ವ್ಯಾಪಾರಸ್ಥರನ್ನು ನಾಶಮಾಡುತ್ತದೆ” ಎಂದು ಹೇಳಿದ್ದು ಪ್ರಕಾಶ್ ಕಾರಟ್.

ಅಂದರೆ ಸಿಪಿಎಂ ಮತು ಆರ್‌ಎಸ್‌ಎಸ್ ಭಾರತ ಮತ್ತು ಅಮೆರಿಕಾದ ಪರಮಾಣು ಒಪ್ಪಂದವನ್ನು ವಿರೋದಿಸಿದ್ದು ಕಾಕತಾಳೀಯವಷ್ಟೆ. ಅವರಿಬ್ಬರೂ ಸಹ ವಾಲ್ ಮಾರ್ಟ್‌ನ ವಿರುದ್ಧವೂ ಇದ್ದಾರೆ. ಅವರಿಬ್ಬರಿಗೂ ಅಮೆರಿಕಾದ ಸಾಮ್ರಾಜ್ಯವಾದ ಸಮಸ್ಯೆ ಎನ್ನುವುದಕ್ಕಿಂತಲೂ ಈ ದೇಶದಲ್ಲೇ ಬೆಳೆದ ಇಂದು ಸ್ಥಳೀಯ ಬಂಡವಾಳಶಾಹಿಯಾಗಿರುವ ರಿಲಯನ್ಸ್ ಫ್ರೆಶ್ ಸಹ ಸಮಸ್ಯೆಯಾಗಿಬಿಟ್ಟಿದೆ.

ಅಮೆರಿಕಾ ವಿರೋಧವನ್ನು ಸಿಪಿಎಂ/ಆರ್‌ಎಸ್‌ಎಸ್ ಗಳೆರಡೂ ಸಂಭ್ರಮಿಸುತ್ತಿವೆ. ಕಾರಣ ಅವು ಬಂಡವಾಳ ಶಾಹಿ ಸಮಾಜವನ್ನು ತಿರಸ್ಕರಿಸುತ್ತವೆ. ಮಿಲಿಯಗಟ್ಟಲೆ ಸಣ್ಣ ವ್ಯಾಪಾರಸ್ಥರು ಮತ್ತು ಮಾರಾಟಗಾರರು ನಿರುದ್ಯೋಗಿಗಳಾಗಿಬಿಡುತ್ತಾರೆ ಎನ್ನುವ ಕಾರಣಗಳನ್ನು ಅವೆರಡೂ ನೀಡಿ ವಾಲ್‌ಮಾರ್ಟ್ ಮತ್ತು ರಿಲಯನ್ಸ್ ಫ್ರೆಶ್‌ಗಳನ್ನು ವಿರೋಧಿಸುತ್ತಿದ್ದಾರೆ. ಆದರೆ ಇವರಲ್ಲಿ ಯಾರಾದರೂ ಸಹ ಮೈಕ್ರೋಸಾಫ್ಟ್‌ನ್ನು ವಿರೋಧಿಸಿದ್ದಾರೆಯೇ? ಮೈಕ್ರೋಸಾಫ್ಟ್ ಮಿಲಿಯಗಟ್ಟಲೆ ಟೈಪಿಸ್ಟ್‌ಗಳನ್ನು ನಿರಾಶ್ರಿತರನ್ನಾಗಿ ಮಾಡಿಲ್ಲವೇ? ರಿಲಯನ್ಸ್‌ನ ವಿಮಲ್ ಶೂಟಿಂಗ್ಸ್ ಅನೇಕ ಸಣ್ಣ ಉಡುಪು ತಯಾರಕರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ್ದನ್ನು ಇವರು ವಿರೋಧಿಸಲಿಲ್ಲ ಏಕೆ?

ವಾಸ್ತವ ಎಂಬಂತೆ ಸಿಪಿಎಂ ಹಾಗೂ ಅದರ ಐಡಿಯಾಲಜಿಕಲ್ ಸಹ-ಕುಲಬಾಂಧವರಾದ ಆರ್‌ಎಸ್‌ಎಸ್ ಮಾಲ್-ಸಂಸ್ಕೃತಿಗೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ. ಭಾರತೀಯ ಮಧ್ಯಮವರ್ಗಗಳು ಹಣವನ್ನು ಉಳಿತಾಯ ಮಾಡುವ ಬದಲು ಅದನ್ನು ಖರ್ಚುಮಾಡುವಂತೆ ಈ ಮಾಲ್-ಸಂಸ್ಕೃತಿ ಅವರನ್ನು ಪ್ರೇರೇಪಿಸುತ್ತಿದೆ. ಹೀಗೆ ಈ ಮಧ್ಯಮವರ್ಗಗಳು ಇಂದು ಶಕ್ತಿಯುತ ಗ್ರಾಹಕರಾಗಿದ್ದು ಅಧಿಕ ಬೇಡಿಕೆಯನ್ನು ಸೃಷ್ಟಿಸುತ್ತಿದ್ದಾವೆ. ಅಧಿಕ ಬೇಡಿಕೆ ಎಂದರೆ ಹೆಚ್ಚು ಉತ್ಪಾದನೆಯಾಗಬೇಕು. ಅಂದರೆ ಅದು ಮತ್ತಷ್ಟು ಕೈಗಾರಿಕೀಕರಣಕ್ಕೆ ಉತ್ತೇಜನ ನೀಡುತ್ತದೆ.

ಎರಡನೇ ಮಹಾಯುದ್ಧದ ನಂತರದ ಆರ್ಥಿಕ ವ್ಯವಸ್ಥೆಗಳು ಜಗತ್ತಿನಾದ್ಯಂತ ಪಲ್ಲಟಗೊಂಡಿದ್ದು ಸೇವಾ ವಲಯವನ್ನು ಹುಟ್ಟುಹಾಕಿದೆ. ಮಾಲ್-ಸಂಸ್ಕೃತಿ ಎನ್ನುವುದು ಈ ವಲಯಕ್ಕೆ ಸೇರಿದ್ದಾಗಿದೆ. ಅಮೆರಿಕಾದ ತಲಾ ಆದಾಯಕ್ಕೆ ಶೇ.೭೮.೬ರಷ್ಟು ಕೊಡುಗೆಯನ್ನು ಈ ಸೇವಾ ವಲಯ ನೀಡುತ್ತಿದ್ದು, ೬೯.೧ರಷ್ಟು ಅಮೆರಿಕಾ ಶ್ರಮಶಕ್ತಿಯನ್ನು ಇದು ತನ್ನಲ್ಲಿ ಸೇರಿಸಿಕೊಂಡಿದೆ. ಹಾಗೆಯೇ ಜಪಾನಿನಲ್ಲೂ ಈ ಸೇವಾವಲಯವು ದೇಶದ ತಲಾ ಆದಾಯಕ್ಕೆ ಶೇ.೭೩.೧ ರಷ್ಟು ಕೊಡುಗೆಯನ್ನು ನೀಡುತ್ತಿದೆ. ಅದೇ ರೀತಿ ಇಂಗ್ಲೆಂಡ್‌ನಲ್ಲೂ ಅದರ ಕೊಡುಗೆ ಶೇ. ೭೩.೪ ರಷ್ಟಿದ್ದು, ಶೇ.೮೦.೪ರಷ್ಟು ಉದ್ಯೋಗಿಗಳನ್ನು ಹೊಂದಿದೆ.

ಭಾರತದಂಥ ದೇಶಗಳೂ ಸಹ ಕೈಗಾರಿಕೀಕರಣದಲ್ಲಿ ಬೆಳೆಯಬೇಕಾಗಿದೆ. ಕೈಗಾರಿಕೀಕರಣದಲ್ಲಿ ಈ ಮಾಲ್ ಸಂಸ್ಕೃತಿಯು ಮಹತ್ವದ ಪಾತ್ರವಹಿಸುತ್ತದೆ. ಆದರೂ ಸಂಪ್ರದಾಯವಾದಿ ಆರ್ಥಿಕ ಬುದ್ಧಿಜೀವಿಗಳು ಅದನ್ನು ವಿರೋಧಿಸುತ್ತಿದ್ದಾರೆ. ನಿಜವಾಗಿ ವಾಸ್ತವದಲ್ಲಿ ಒಂದು ಸಮಾಜ ಯಾವಾಗ ಬದಲಾವಣೆಯನ್ನು ಬಯಸುತ್ತದೋ ಆಗ ಸನಾತನಿ ಶಕ್ತಿಗಳು ಅಂಥ ಬದಲಾವಣೆಯನ್ನು ತಡೆಯುತ್ತವೆ. ಇದೇ ಯೂರೋಪಿನಲ್ಲೂ ನಡೆದಿದೆ. ಜಗತ್ತಿನಾದ್ಯಂತ ಆರ್ಥಿಕ ಚರಿತ್ರಾಗಾರರು ಒಪ್ಪುವುದೇನೆಂದರೆ ಮೂರು ಮುಖ್ಯ ಆವಿಷ್ಕಾರಗಳು ಕೈಗಾರಿಕೀಕರಣವನ್ನು ಪ್ರಚೋದಿಸಿದವು: ಜೇಮ್ಸ್ ಹಾರ್ಗ್ರೀವ್ಸ್‌ನ ಸ್ಪಿನ್ನಿಂಗ್ ಜನ್ನಿ (೧೭೬೯), ಜೇಮ್ಸ್ ವಾಟ್ಸ್‌ನ ಹಬೆ ಯಂತ್ರ (೧೭೬೯) ಮತ್ತು ಸ್ಯಾಮುವೇಲ್ ಕ್ರಾಮ್ಟನ್‌ನ ಸ್ಪಿನ್ನಿಂಗ್ ಮ್ಯೂಲ್.

ಕುಶಲಕರ್ಮಿ ಕಾರ್ಮಿಕರು ಹಾರ್ಗ್ರೀವ್ಸ್‌ನ ಸ್ಪಿನ್ನಿಂಗ್ ಜನ್ನಿ ಯಂತ್ರವನ್ನು ಧ್ವಂಸಗೊಳಿಸಿದ್ದರು. ಹಾಗೆಯೇ ಕ್ರಾಮ್ಟನ್‌ನ ಯಂತ್ರಕ್ಕೂ ಆಯಿತು. ಅಲ್ಲದೆ, ೧೯ನೇ ಶತಮಾನದ ಕೊನೆಯಲ್ಲಿ ಪವರ್ ಲ್ಯೂಮ್ ಹ್ಯಾಡ್ ಲ್ಯೂಮ್‌ನ್ನು ಪಲ್ಲಟಗೊಲಿಸಿದಾಗ ಯಂತ್ರ ಧ್ವಂಸ ಎಂಥ ವಿಕೋಪಕ್ಕೆ ಹೋಯಿತೆಂದರೆ ಇಂಗ್ಲೆಂಡ್, ಜರ್ಮನಿ ಮತ್ತು ಫ್ರಾನ್ಸ್ ದೇಶಗಳಲ್ಲಿ ನಾಗರಿಕ ಅವ್ಯವಸ್ಥೆಗೆ ಕಾರಣವಾಯಿತು. ಸುಮಾರು ೧೧೮ ಮಂದಿ ಕಾರ್ಮಿಕರನ್ನು ನೇಣಿಗೇರಿಸಲಾಯಿತು. ೬೦೦ ಕ್ಕಿಂತಲೂ ಅಧಿಕ ಮಂದಿ ಭದ್ರತಾ ಸಿಬ್ಬಂದಿಯವರಿಂದ ಹತ್ಯೆಗೊಳಗಾದರು ಮತ್ತು ಸಾವಿರಾರು ಮಂದಿ ಯೂರೋಪಿನಿಂದ ಗಡಿಪಾರಾದರು.

೧೮೧೧ರ ವೇಳೆಗೆ ಯಂತ್ರ ಧ್ವಂಸಮಾಡುವುದು ಕೈಗಾರಿಕೀಕರಣದ ವಿರುದ್ಧ ಧಂಗೆಯ ಸ್ವರೂಪ ಪಡೆಯಿತು. ಇಂಗ್ಲೆಂಡ್‌ನಲ್ಲಿ ೧೮ನೇ ಶತಮಾನದ ಆದಿಯಲ್ಲಿ ಅಂಥ ಯಂತ್ರ ಧ್ವಂಸ ಮಾಡಿದ ದಂತಕಥೆಯಾಗಿರುವ ಮೊದಲಿಗನೆಂದರೆ ನೆಡ್ ಲ್ಯೂಡ್ ಎನ್ನುವಾತ. ಹೀಗೆ ಲ್ಯೂಡ್ ಚಳುವಳಿ ಯಂತ್ರದ ಬದಲು ಕೈಯನ್ನು, ಆಧುನಿಕತೆಯ ಬದಲು ಪರಂಪರೆಯನ್ನು, ಹಾಗೂ ಬಂಡವಾಳಶಾಹಿ ಬದಲು ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರತಿಪಾದಿಸಲು ತೊಡಗಿತು. ಆದರೆ ಈ ಲ್ಯೂಡಿಸ್ಟರ ಚಳುವಳಿಯು ಯಂತ್ರದ ಎದುರು ಸೋತುಹೋಯಿತು. ಬಂಡವಾಳಶಾಹಿ ವ್ಯವಸ್ಥೆ ಊಳಿಗಮಾನ್ಯ ಪದ್ಧತಿಯನ್ನು ನಾಶ

ಮರಳಿ ಬಂದ ಲ್ಯೂಡೈಟರು

ಪರಂಪರೆಯ ನಾಶ

ಮಾಡಿತು. ಆಧುನಿಕತೆ ಪರಂಪರೆಯನ್ನು ಪಲ್ಲಟಗೊಳಿಸಿತಲ್ಲದೆ, ಕೈಗಾರಿಕಾ ಕ್ರಾಂತಿಗೆ ನಾಂದಿಯಾಯಿತು.

ಹಾಗೆಯೇ ಈ ಲ್ಯೂಡಿಸ್ಟರು ಭಾರತದಲ್ಲಿ ಮತ್ತೆ ಕಾಣಿಸಿಕೊಂಡು ರಸ್ತೆ ತಡೆಯೊಡ್ಡುತ್ತಿದ್ದಾರೆ. ಅಪೇಕ್ಷಿತವೆಂಬಂತೆ ಈ ಲ್ಯೂಡಿಸ್ಟರು ಸೋತು ಸಂಪ್ರದಾಯ-ಪರಂಪರೆಯಿಂದ ನಮಗೆ ಬಿಡುಗಡೆ ಸಿಗುತ್ತದೆಯೆಂದು ಆಶಿಸೋಣ.

ಜೇಮ್ಸ್ ಹಾರ್ಗ್ರೀವ್ಸ್, ರಿಚರ್ಡ್ ಆರ್ಕ್ರೈಟ್, ಸ್ಯಾಮುವೇಲ್ ಕ್ರಾಮ್ಟನ್ ಮತ್ತು ಜೇಮ್ಸ್ ವ್ಯಾಟ್ ಇವರು ಇಂಗ್ಲೆಂಡ್‌ನಲ್ಲಿ ಯಂತ್ರಗಳ ಮುನ್ನಡೆಗೆ ಕಾರಣಕರ್ತರಾದರೆಂದು ಭಾವಿಸಲಾಗಿದೆ. ಆದರೆ **ವೆಲ್ತ್ ಆಫ್ ನೇಶನ್ಸ್** (೧೭೭೬) ಕೃತಿಕಾರನಾದ ಆ್ಯಡಮ್ ಸ್ಮಿತ್‌ನಿಗಾಗಲೀ ಅಥವಾ ಲಂಡನ್‌ನಲ್ಲಿ ಆರಂಭವಾದ ಸ್ಟಾಕ್ ಎಕ್ಸೇಂಜ್ (೧೮೦೧) ಆ ಗೌರವಕ್ಕೆ ಪಾತ್ರರಾಗಲಿಲ್ಲ.

೧೮ನೇ ಶತಮಾನದ ಕೊನೆಭಾಗ ಕೈಗಾರಿಕಾ ಕ್ರಾಂತಿಗೆ ಅಗತ್ಯವಾದ ಇಂಧನವನ್ನೊದಗಿಸಿತು. ಆ ಹಂತದಲ್ಲಿ ಹ್ಯಾಂಡ್‌ಲ್ಯೂಮ್ ಮತ್ತು ಪವರ್ ಲ್ಯೂಮ್‌ಗಳ ನಡುವೆ ಸಂಘರ್ಷವನ್ನು ನೋಡಬಹುದಾಗಿತ್ತು. ಯಂತ್ರದ ಜಯಭೇರಿಯು ಅನೇಕ ಸಂಗತಿಗಳಿಂದ ಸಾಧ್ಯವಾದುದು. ಅದಕ್ಕೆ ಅಗತ್ಯವಾದ ಬೌದ್ಧಿಕ ತಳಪಾಯವನ್ನು ಆ್ಯಡಮ್ ಸ್ಮಿತ್ ಒದಗಿಸಿದರೆ, ಲಂಡನ್‌ನ ಸ್ಟಾಕ್ ಎಕ್ಸೇಂಜ್ ಹಣಕಾಸಿನ ವಿಚಾರದಲ್ಲಿ ಶಿಸ್ತನ್ನು ಕಲಿಸಿತು.

ವಿವಾದಾತೀತವಾಗಿ ಹೇಳುವುದಾದರೆ ಬಂಡವಾಳಶಾಹಿಗೆ ಮೊದಲ ತಾತ್ವಿಕ ಸ್ವರೂಪ ನೀಡಿದ ಆ್ಯಡಂ ಸ್ಮಿತ್ ತನ್ನ ಕೃತಿಯಲ್ಲಿ ಬಂಡವಾಳಶಾಹಿ ಸಮಾಜ ವ್ಯವಸ್ಥೆಗೆ ಅಗತ್ಯವಾದ ಸಮಾಜೋ-ಆರ್ಥಿಕ ತರ್ಕವನ್ನು ನೀಡಿದ. ಲಂಡನ್ ಸ್ಟಾಕ್ ಎಕ್ಸೇಂಜ್ ಬಂಡವಾಳಕ್ಕೆ ಅಗತ್ಯಯವಾದ ಸಾಂಸ್ಥಿಕ ಅಧಿಕಾರವನ್ನು ನೀಡಿತು.

ಆ್ಯಡಮ್ ಸ್ಮಿತ್ ಮತ್ತು ಲಂಡನ್‌ನ ಸ್ಟಾಕ್ ಎಕ್ಸೇಂಜ್ ಇಲ್ಲವಾಗಿದ್ದಲ್ಲಿ ಕೈಗಾಕಾರಿಕ ಕ್ರಾಂತಿಯ ಎಲ್ಲಾ ಡಿಸ್ಕೋರ್ಸ್‌ಗಳು ಸಹ ತಮ್ಮ ಜಾಗವನ್ನು ಖಾಲಿಮಾಡಬೇಕಾಗುತ್ತಿತ್ತು. ಇವೆರಡು ಇಲ್ಲದಿದ್ದಲ್ಲಿ ಯಂತ್ರ ತನ್ನಷ್ಟಕ್ಕೇ ಯಾವುದೇ ಧ್ಯೇಯವನ್ನು ಹೊಂದಲಾಗುತ್ತಿರಲಿಲ್ಲ. ಆದರೆ ಮತ್ತೊಂದೆಡೆ ಸ್ವ ಭ್ರಾಂತಿಗೊಳಗಾದ ಲ್ಯೂಡಿಸ್ಟರು ಸಂಘಟನಾ ಚಾತುರ್ಯವನ್ನು ಪ್ರದರ್ಶಿಸಿದ್ದರು. ಆದ್ದರಿಂದ ಅವರು ಯಂತ್ರದ ವಿರುದ್ಧ ಸುಸಜ್ಜಿತವಾದ ಹೋರಾಟ ನಡೆಸಿದ್ದರು.

ಅಮೆರಿಕಾದ ಪತ್ರಕರ್ತ ಮತ್ತು ಲೇಖಕ ಲ್ಯೂಡೈಟ್‌ರ ಸೈದ್ಧಾಂತಿಕತೆಯ ಬಗ್ಗೆ ಜೋನಾಥನ್ ಕಾಟ್ಜ್ HotWired //www.wired.com// ಎನ್ನುವ ಆನ್‌ಲೈನ್ ಮ್ಯಾಗಜಿನ್‌ನಲ್ಲಿ ಹೀಗೆ ಬರೆದಿದ್ದಾನೆ, "ಲ್ಯೂಡೈಟರು ನಿಜವಾಗಿಯು ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಅಕ್ಷರತಃ ಹೋರಾಟ ನಡೆಸಿದ್ದರು. ಪ್ರಾಚೀನ ಕಣಿವೆಗಳಲ್ಲಿ ಅವರು ಸಣ್ಣ ಗ್ರಾಮಗಳನ್ನು ರಚಿಸಿಕೊಂಡು ಶತಮಾನಗಳಿಂದಲೂ ಅವರು ಸರಳವಾದ ಯಂತ್ರಗಳನ್ನು ಬಳಸುತ್ತಾ ತಮ್ಮ ಬದುಕನ್ನು ಕಟ್ಟಿಕೊಂಡಿದ್ದರು. ದೊಡ್ಡ ಯಂತ್ರಗಳು ಮತ್ತು ಕಾರ್ಖಾನೆಗಳ ಸ್ಥಾಪನೆ ಎಂದರೆ ಅವರ ಸಾಮಾಜಿಕ ಸಂಪ್ರದಾಯ, ಸಮುದಾಯ, ವ್ಯಕ್ತಿ ಸ್ಥಾನಮಾನ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೇ ಆಗಿತ್ತು. ತಮ್ಮದೇ ಆದ ತೋಟಗಳಲ್ಲಿ ಸ್ವತಂತ್ರವಾಗಿ ದುಡಿದು ಬದುಕುತ್ತಿದ್ದ ಅವರು ಸಂಕೀರ್ಣ ಮತ್ತು ಅಪಾಯಕಾರಿ ಯಂತ್ರಗಳ ಸದ್ದುಗದ್ದಲದೊಡನೆ, ಗಬ್ಬುನಾತಬೀರುವ ಕಾರ್ಖಾನೆಗಳ ನಡುವೆ, ವಾರದ ಏಳುದಿನಗಳೂ ಸಹ ಗುಲಾಮಿ ಕೂಲಿಗಾಗಿ ದುಡಿಯುವ ಒತ್ತಡಕ್ಕೊಳಗಾದರು. ಶತಮಾನಗಳ ಕಾಲ ರೂಢಿಸಿಕೊಂಡಿದ್ದ ಸುಗ್ಗಿಯಾಚರಣೆಗಳು ಅವಸಾನ ತಲುಪಿದ್ದವು. ಗಂಡಸರು ತಮ್ಮ ಪತ್ನಿ ಮತ್ತು ಮಕ್ಕಳನ್ನು ಬಿಟ್ಟು ದೂರ ಉಳಿದುಕೊಳ್ಳುವಂತಾಯಿತು. ಈ ಹೊಸ ದುಡಿಮೆಯು ಕಾಲದ ಪರಿಕಲ್ಪನೆಯನ್ನು ಬದಲಾಯಿಸಿಲ್ಲದೆ, ಕೆಲಸದ ವೇಳೆ ಮತ್ತು ಕೂಲಿಯನ್ನು ಅವಧಿಗೆ ಬಗ್ಗಿಸಿತು. ಶೇರ್‌ವುಡ್ ಅರಣ್ಯವನ್ನೊಳಗೊಂಡಂತೆ ಅದು ಇಡೀ ಭೌಗೋಳಿಕ ಪ್ರದೇಶದ ಸ್ವರೂಪವನ್ನೇ ಬದಲಾಯಿಸಿಬಿಟ್ಟಿತು".

ಭಾರತೀಯ ಪರಂಪರೆಯ ವಿರುದ್ಧ ಯಂತ್ರಗಳು ಜಯಶಾಲಿಯಾದಲ್ಲಿ ಏನಾಗುತ್ತದೆ? ಬಂಡವಾಳಶಾಹಿಯು ಭಾರತೀಯ ಸಾಮಾಜಿಕ ಸಂಪ್ರದಾಯಗಳನ್ನು ಮತ್ತು ಸಾಮುದಾಯಿಕ ಬದುಕನ್ನು ಪಲ್ಲಟಗೊಳಿಸಿದರೆ ಏನಾದೀತು? ಕೈಗಾರಿಕಾ ಕ್ರಾಂತಿಯು ಭಾರತೀಯ ಕೃಷಿಕ ಪರಂಪರೆಯನ್ನು ಮೆಟ್ಟಿನಿಂತಲ್ಲಿ ಏನಾದೀತು? ೨೫೦ ವರ್ಷಗಳ ಹಿಂದೆ ಸ್ಪಿನ್ನಿಂಗ್ ಜನ್ನಿ, ವಾಟರ್ ಪ್ರೇಮ್, ಸ್ಪಿನ್ನಿಂಗ್ ಮ್ಯೂಲ್ ಹಾಗೂ ಹಬೆ ಯಂತ್ರಗಳು ಯೂರೋ ಪಿಗೆ ಏನಾದವೋ ಹಾಗೆಯೇ ಭಾರತಕ್ಕೆ ಮಾಲ್‌ಗಳು, ಅಣು ಸ್ಥಾವರಗಳ ವಿದ್ಯುತ್ ಉತ್ಪಾದನೆ ಮತ್ತು ಸಮೂಹ ಬಂಡವಾಳಗಳೂ ಸಹ ಪರಿಣಾಮ ವನ್ನುಂಟುಮಾಡುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ೧೮ನೇ ಶತಮಾನದ ಕೊನೆ ಮತ್ತು ೧೯ನೇ ಶತಮಾನದ ಆರಂಬದಲ್ಲಿ ಯೂರೋಪಿ ನಲ್ಲಿ ಯಂತ್ರಗಳು ಏನು ಮಾಡಿದವೂ ಅದೇ ಹೊಸ ಯಂತ್ರಯುಗ ಭಾರತದಲ್ಲಿ ಆರಂಬಗೊಂಡಿದೆ.

ಹೀಗೆ ಯಂತ್ರದ ದಾಳಿಯಿಂದಾಗಿ ಹ್ಯಾಂಡ್ ಲೂಮ್ ಕಾರ್ಮಿಕರು ಕೆಲಸ ಕಳೆದುಕೊಳ್ಳುವುದಲ್ಲದೆ ಕೈಗಾರಿಕಾ ಸಂಸ್ಕೃತಿಯು ಪಾರಂಪರಿಕ ಸಾಮಾಜಿಕ ಮತ್ತು ಸಾಮುದಾಯಿಕ ನಂಬಿಕೆಗಳು ಸರ್ವನಾಶವಾಗುವುದರ ಭಯ ಅಧಿಕವಾಗಿ ಅವರನ್ನು ಕಾಡಿತ್ತು.

ಯೂರೋಪ್ ತನ್ನ ಪರಂಪರೆಯನ್ನು ಬೇಗನೆ ಕಳೆದುಕೊಂಡಿತು. ಅಂದರೆ ಊಳಿಗಮಾನ್ಯ ವ್ಯವಸ್ಥೆಯನ್ನು ಬಂಡವಾಳಶಾಹಿಯು ಹೊರತಳ್ಳಿತು. ಪ್ರಜಾಪ್ರಭುತ್ವ ಬರುವುದರ ಮೂಲಕ ಚಕ್ರವರ್ತಿ ಮಾಯವಾದ. ತನ್ನ ದಾಸ್ ಕ್ಯಾಪಿಟಲ್ ಕೃತಿಯಲ್ಲಿ ಕಾರ್ಲ್‌ಮಾರ್ಕ್ಸ್ ಸಹ ಯಂತ್ರಯುಗವನ್ನು ಸ್ವಾಗತಿಸಿದ್ದ.

ವಾಸ್ತವವಾಗಿ, ಪರಂಪರೆಯ ಮೇಲೆ ದಾಳಿಯಿಟ್ಟ ಯಂತ್ರಗಳ ಮುನ್ನಡೆ, ಊಳಿಗಮಾನ್ಯ ವ್ಯವಸ್ಥೆಯ ಮೇಲೆ ಸವಾರಿಮಾಡಿದ ಬಂಡವಾಳಶಾಹಿ, ಚಕ್ರವರ್ತಿಯನ್ನು ಪಲ್ಲಟಗೊಳಿಸಿದ ಪ್ರಜಾಪ್ರಭುತ್ವ – ಇವುಗಳನ್ನು ಬೇರ್ಪಡಿಸಿ ನೋಡಲಾಗದು. ಆ್ಯಡಂ ಸ್ಮಿತ್‌ನ ಬಂಡವಾಳಶಾಹಿವಾದ ಯಂತ್ರಗಳು ಲಾಭವನ್ನು ವೃದ್ಧಿಗೊಳಿಸುವಂತೆ ಮಾಡಿತು. ಬಂಡವಾಳಶಾಹಿಯು ತನ್ನ ಅಸ್ತಿತ್ವಕ್ಕಾಗಿ ಕೃಷಿ ಬದುಕನ್ನು ಸಾಯಿಸುತ್ತದೆ. ಬೇಸಾಯ ಮತ್ತು ಕೈಗಾರಿಕೀಕರಣ ಪರಸ್ಪರ ಒಟ್ಟಾಗಿ ಸಾಗಲಾರವು.

ಭಾರತೀಯ ಪರಂಪರೆಯ ವಿರುದ್ಧ ಯಂತ್ರಗಳು ಜಯಶಾಲಿಯಾದಲ್ಲಿ ಏನಾಗುತ್ತದೆ? ಬಂಡವಾಳಶಾಹಿಯು ಭಾರತೀಯ ಸಾಮಾಜಿಕ ಸಂಪ್ರದಾಯಗಳನ್ನು ಮತ್ತು ಸಾಮುದಾಯಿಕ ಬದುಕನ್ನು ಪಲ್ಲಟಗೊಳಿಸಿದರೆ ಏನಾದೀತು? ಕೈಗಾರಿಕಾ ಕ್ರಾಂತಿಯು ಭಾರತೀಯ ಕೃಷಿಕ ಪರಂಪರೆಯನ್ನು ಮೆಟ್ಟಿನಿಂತಲ್ಲಿ ಏನಾದೀತು? ೨೫೦ ವರ್ಷಗಳ ಹಿಂದೆ ಸ್ಪಿನ್ನಿಂಗ್ ಜನ್ನಿ, ವಾಟರ್ ಪ್ರೇಮ್, ಸ್ಪಿನ್ನಿಂಗ್ ಮ್ಯೂಲ್ ಹಾಗೂ ಹಬೆ ಯಂತ್ರಗಳು ಯೂರೋಪಿಗೆ ಏನಾದವೋ ಹಾಗೆಯೇ ಭಾರತಕ್ಕೆ ಮಾಲ್‌ಗಳು, ಅಣು ಸ್ಥಾವರಗಳ ವಿದ್ಯುತ್ ಉತ್ಪಾದನೆ ಮತ್ತು ಸಮೂಹ ಬಂಡವಾಳಗಳೂ ಸಹ ಪರಿಣಾಮವನ್ನುಂಟುಮಾಡುತ್ತವೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ೧೮ನೇ ಶತಮಾನದ ಕೊನೆ ಮತ್ತು ೧೯ನೇ ಶತಮಾನದ ಆರಂಭ'ದಲ್ಲಿ ಯೂರೋಪಿನಲ್ಲಿ ಯಂತ್ರಗಳು ಏನು ಮಾಡಿದವೋ ಅದೇ ಹೊಸ ಯಂತ್ರಯುಗ ಭಾರತದಲ್ಲಿ ಆರಂಭ'ಗೊಂಡಿದೆ. ಅದು ಮನುವಿನ ಸಾಮಾಜಿಕ ಕಟ್ಟುಪಾಡುಗಳಿಗೆ ಶವಪೆಟ್ಟಿಗೆಯನ್ನು ಸಿದ್ದ ಮಾಡುತ್ತದೆ. ಮನಿವಿನ ಪ್ರಕಾರ ಅಸ್ಪೃಶ್ಯರು ಅಥವಾ ಜಾತಿಹೀನರು ಅಥವಾ ದಲಿತರು ವಸತಿ ಪ್ರದೇಶದ ಹೊರಗೆ ಜೀವಿಸಿ ಸಮಾಜಕ್ಕೆ ಅಗತ್ಯವಾದ ಸೇವೆಯನ್ನು ಒದಗಿಸಬೇಕು.

ಯಂತ್ರ ಆಧಾರಿತ ಆರ್ಥಿಕ ಚಟುವಟಿಕೆಯಲ್ಲಿ ದಲಿತ-ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಒಟ್ಟಾಗಿ, ಒಂದೇ ವೇತನಕ್ಕೆ ದುಡಿಯುತ್ತಾರೆ.

ದಲಿತ ಮತ್ತು ದಲಿತೇತರರು ಪಾರಂಪರಿಕ ಆರ್ಥಿಕ ಚಟುವಟಿಕೆಯಲ್ಲಿ ಒಂದಾಗಿ ದುಡಿಯುವುದನ್ನು ಯಾರಾದರೂ ಕಂಡಿದ್ದಾರೆಯೇ? ಮನುವಿನ ಸಾಮಾಜಿಕ ಅಜೆಂಡಾವನ್ನು ಕಿತ್ತೊಗೆಯುವ ಯಂತ್ರಗಳ ಮುನ್ನಡೆಯನ್ನು ತಡೆಯುತ್ತಿರುವ ಸಿಪಿಎಂ ಮತ್ತು ಆರ್‌ಎಸ್‌ಎಸ್ ನಡಾವಳಿ ವಿಚಿತ್ರ ಎನಿಸುವುದಿಲ್ಲವೇ? □

ಬುದ್ಧಾಯಣ

೨೨

ಒಮ್ಮೆ ಬುದ್ಧನನ್ನು ಕಂಡವರು, ದರ್ಶನ ಮಾಡಿದವರು, ಬೋಧನೆ ಕೇಳಿದವರು ಅವನ ಸಂಘ ಮಾಡಿದವರು ಅವನ ಪ್ರೀತಿಗೆ ಅವನ ನೀತಿಗೆ ಕರಗಿ ಹೋಗುತ್ತಿದ್ದರು. ಬುದ್ಧನಲ್ಲಿ ಅವರು ಒಂದಾಗುತ್ತಿದ್ದರು ಅಥವಾ ಬುದ್ಧ ಅವರಲ್ಲಿ ಒಂದಾಗುತ್ತಿದ್ದ. ಈ ಅವಿನಾಭಾವ ಸಂಬಂಧ ಅವಿಭಾಜ್ಯವಾಗಿ ಬಿಡುತ್ತಿತ್ತು. ಬುದ್ಧನನ್ನ ಕಾಣದ ಕಣ್ಣುಗಳು ನೆನೆಯದ ಮನ ತಲ್ಲಣಗೊಳ್ಳುತ್ತಿತ್ತು. ಬುದ್ಧ ತಮ್ಮಿಂದ ದೂರ ಸರಿದು ಹೋಗುತ್ತಾರೆ ಎಂಬ ವಿಷಯ ತಿಳಿದರೆ ತಮ್ಮ ದೇಹದ ಯಾವುದೋ ಒಂದು ಅಂಗ ಊನವಾದಂತೆ ಅನ್ನಿಸಿ ಬಿಡುತ್ತಿತ್ತು. ಅದಕ್ಕೆ ನಿದರ್ಶನವಾಗಿ ಈ ಕಥೆಯನ್ನು ಗಮನಿಸಿ

ಸಿ. ಎಚ್. ರಾಜಶೇಖರ್

ಶಬರಿ ರಾಮ ಬರುವನೆಂದು ಕಾನನದಲ್ಲಿ ಕಾಯ್ದು ಕುಳಿತದ್ದು ಬಹು ಭಕ್ತಿರಸ ಪ್ರಧಾನವಾದ ಪ್ರಸಂಗ ಅದು ರಾಮಾಯಣ! ಸಭೆಯಲ್ಲಿ ದ್ರೌಪದಿಯ ಸೀರೆಯನ್ನು ಸೆಳೆವಾಗ ದ್ರೌಪದಿಯು ಕೃಷ್ಣನಿಗೆ ಮೊರೆ ಇಟ್ಟು ಕಾಯ್ದು ತಲ್ಲಣಿಸಿದ್ದು, ಮಹಾಭಾರತ! ಆದರೆ ಶ್ರಾವಸ್ತಿಯಲ್ಲಿ ಇಸಿದತ್ತ ಮತ್ತು ಪುರಾಣರೆಂಬ ಸಾಮಾನ್ಯರು ಬುದ್ಧನ ಬರುವಿಕೆಗಾಗಿ ಕಾಯ್ದು ತಲ್ಲಣಿಸಿ ದಿನಗಟ್ಟಲೆ ನಿಂತದ್ದು ಬುದ್ಧಾಯಣ!!'

ಆದರೆ ಇಲ್ಲಿನ ಬಹು ಮುಖ್ಯ ವ್ಯತ್ಯಾಸವನ್ನು ಗಮನಿಸಿ ರಾಮಾಯಣದ ರಾಮನಿಗೆ ಮಹಾಭಾರತದ ಪಾಂಡವರಿಗೆ ಸೃಷ್ಟಿಕರ್ತನ ಆಶೀರ್ವಾದವಿದೆ. ದಶಾವತಾರ ಕವಚವಿದೆ. ಪವಾಡ ಮತ್ತು ಅತಿಮಾನುಷದ ಶ್ರೀ ರಕ್ಷೆ ಇದೆ. ಆದರೆ ಗೌತಮ ಬುದಧ ಸಾಮಾನ್ಯ ವ್ಯಕ್ತಿ. ಪವಾಡಗಳಿಂದ ಅತೀತ. ದಶಾವತಾರದಿಂದ ಮುಕ್ತ. ಅವನ ಬದುಕಿನ ಮುನ್ನಡೆಗೆ ಯಾವುದೇ ಕಾಣದ ಕೈಯಿನ ಶ್ರೀರಕ್ಷೆ ಇಲ್ಲ. ಶುದ್ಧ ಸಾಮಾನ್ಯವಾದ ಬುದ್ಧ ತಾನು ಬದುಕಿದ್ದಾಗಲೇ ಪುರಾಣ ಪುಣ್ಯಕಥೆಗಳ ಹಿಂದಿರುವ ಅತೀಂದ್ರಿಯತೆಯನ್ನು ಖಂಡಿಸಿದವನು ಹಾಗಾಗಿ ಬುದ್ಧ ಸ್ವಶಕ್ತಿ, ಸ್ವಸಾಮರ್ಥ್ಯದ ಸಂಕೇತ! ಈ ಕಾರಣಕ್ಕಾಗಿಯೇ ಬುದ್ಧ 'ನಿನಗೆ ನೀನೇ ಎಂದದ್ದು!!'

ಬುದ್ಧನ ಬದುಕು ಮತ್ತು ಬೋಧನೆ ಪುರಾಣ ಪುಣ್ಯಕಥೆಗಳ ಒಂದು ಭಾಗವಲ್ಲ. ದಶಾವತಾರಗಳ ಆರೋಪ ಖಂಡಿತ ಅಲ್ಲ. ಬುದ್ಧ ದೈವತ್ವದಿಂದ ಬಿಡುಗಡೆಗೊಂಡ ಸಾಮಾನ್ಯ ಮನುಷ್ಯ. ಇತಿಹಾಸ ಪುರುಷ. ಅವನ ಬದುಕಿನಲ್ಲಿ ಏನೇನು ಸಂಭವಿಸಿತೋ ಅದೆಲ್ಲವೂ ಐತಿಹಾಸಿಕ ಘಟನೆಗಳು. ಅವೆಲ್ಲವೂ ಕಾರ್ಯಕಾರಣ ಸಂಬಂಧಕ್ಕೆ ಪುರಾವೆಗಳಾದವುಗಳು. ಅವನು ಬುದುಕಿದ್ದಾಗಲೇ ಜನಪ್ರಿಯತೆಯ ತುತ್ತ ತುದಿ ತಲುಪಿದ್ದ. ಆದರ್ಶದ ಸಾಕಾರ ಮೂರ್ತಿ ಆಗಿದ್ದ. ಅದಕ್ಕೆ ಕಾರಣ ಅವನು ಜನಗಳ ಮೇಲೆ ತಾನು ತೋರಿದ ಪ್ರೀತಿ ವಿಶ್ವಾಸ, ನಂಬಿಕೆ ಮತ್ತು ಮಾರ್ಗದರ್ಶಿತನವೇ ಆಗಿತ್ತು. ಅವನ ಕಣ್ಣುಗಳಲ್ಲಾಗಲಿ ಮುಖಭಾವದಲ್ಲಾಗಲಿ ಎಂದಿಗೂ ಎಲ್ಲಿಯೂ, ಯಾರೂ ಕಳಂಕವನ್ನು ಕಂಡವರಿಲ್ಲ. ಕಲ್ಮಷವನ್ನು ಕಂಡವರಿಲ್ಲ. ಕಾಮದ ಛಾಯೆಯನ್ನು ಗುರುತಿಸಿದವರಿಲ್ಲ. ಅವನ ಕಣ್ಣುಗಳು ಮತ್ತು ಮುಖಭಾವ ನಿಷ್ಕಲ್ಮಶ ನಿಷ್ಕಳಂಕ, ನಿರ್ಮಲ ಮತ್ತು ಮುಗ್ಧತೆಯಿಂದ ಕೂಡಿತ್ತು. ಆತನ ನಗುವಿನಲ್ಲಿ ಹಸುಕಂದನ ಮುಗ್ಧತೆ ಇತ್ತು!

ಒಮ್ಮೆ ಬುದ್ಧನನ್ನು ಕಂಡವರು, ದರ್ಶನ ಮಾಡಿದವರು, ಬೋಧನೆ ಕೇಳಿದವರು ಅವನ ಸಂಘ ಮಾಡಿದವರು ಅವನ ಪ್ರೀತಿಗೆ ಅವನ ನೀತಿಗೆ ಕರಗಿ ಹೋಗುತ್ತಿದ್ದರು. ಬುದ್ಧನಲ್ಲಿ ಅವರು ಒಂದಾಗುತ್ತಿದ್ದರು ಅಥವಾ ಬುದ್ಧ ಅವರಲ್ಲಿ ಒಂದಾಗುತ್ತಿದ್ದ. ಈ ಅವಿನಾ



ಬುದ್ಧನ ಬರುವಿಕೆಗಾಗಿ ಕಾಯ್ದು ನಿಂತರು ನಿಷ್ಠೆಯಲಿ

ಭಾವ ಸಂಬಂಧ ಅವಿಭಾಜ್ಯವಾಗಿ ಬಿಡುತ್ತಿತ್ತು. ಬುದ್ಧನನ್ನು ಕಾಣದ ಕಣ್ಣುಗಳು ನೆನೆಯದ ಮನ ತಲ್ಲಣಗೊಳ್ಳುತ್ತಿತ್ತು. ಬುದ್ಧ ತಮ್ಮಿಂದ ದೂರ ಸರಿದು ಹೋಗುತ್ತಾನೆ. ಎಂಬ ವಿಷಯ ತಿಳಿದರೆ ತಮ್ಮ ದೇಹದ ಯಾವುದೋ ಒಂದು ಅಂಗ ಊನವಾದಂತೆ ಅನ್ನಿಸಿ ಬಿಡು ತ್ತಿತ್ತು. ಅದಕ್ಕೆ ನಿದರ್ಶನವಾಗಿ ಈ ಕಥೆಯನ್ನು ಗಮನಿಸಿ;

'ಶ್ರಾವಸ್ತಿಯ ಇಸಿದತ್ತ ಮತ್ತು ಪುರಾಣರು ಎಂಬುವರು ಕೋಶಾಧಿಕಾರಿಗಳು ಈ ಇಬ್ಬರೂ ಬುದ್ಧನ ಪರಮ ಗೆಳೆಯರು ಮತ್ತು ಅಪಾರ ಅಭಿಮಾನಿಗಳು. ಬುದ್ಧ ಆ ಇಬ್ಬರ ಅವಿಭಾಜ್ಯ ಅಂಗವೇ ಆಗಿದ್ದ. ಮಳೆಗಾಲ ಕಳೆಯಲು ತಮ್ಮ ಊರಾದ ಶ್ರಾವಸ್ತಿ ಯನ್ನು ಬುದ್ಧ ಆಯ್ದುಕೊಂಡದ್ದು ಮತ್ತು ತಂಗಿದ್ದು ಅವರಲ್ಲಿ ಅಪಾರ ಸಂತೋಷ ಉಂಟು ಮಾಡಿತ್ತು. ಬುದ್ಧ ನಮ್ಮ ಊರಿನಲ್ಲಿ ನಮ್ಮ ಬಳಿಯಲ್ಲಿ ನಮ್ಮ ಎದೆಯಲ್ಲಿಯೇ ಇದ್ದಾನೆ' ಎಂದು ಹರ್ಷ ಚಿತ್ತರಾಗಿದ್ದರು.

ಆದರೆ ಮುಂದಿನ ಚಳಿಗಾಲದ ಪ್ರವಾಸಕ್ಕಾಗಿ ಬುದ್ಧನಿಗೆ ಅವನ ಶಿಷ್ಯರು ಉಣ್ಣೆಯ ಉಡುಪುಗಳನ್ನು ನೇಯ್ಯುತ್ತಿದ್ದಾರೆ. ಇಷ್ಟರಲ್ಲಿಯೇ ಬುದ್ಧ ಶ್ರಾವಸ್ತಿಯನ್ನು ತೊರೆದು ಸಂಚಾರಕ್ಕೆ ಸಿದ್ಧನಾಗುತ್ತಿ ದ್ದಾನೆ ಎಂಬ ವಿಷಯ ತಿಳಿದು ತಲ್ಲಣಿಸಿದರು. ಬುದ್ಧನ ಬರುವಿಕೆಗಾಗಿ ಕಾಯ್ದು ನಿಂತರು. ತಮ್ಮ ಪ್ರಣಾಮವನ್ನು ಸಲ್ಲಿಸಲು. ಆದರೆ ಬುದ್ಧ ಮೂರು ನಾಲ್ಕು ದಿನಗಳು ನಿರಂತರವಾಗಿ ಕಾಯ್ದರು ಬರಲಿಲ್ಲ. ಆಗ ಆ ಇಬ್ಬರು ಗೆಳೆಯರು ಹೆದ್ದಾರಿಯಲ್ಲಿ ಒಬ್ಬನನ್ನು ತಮ್ಮ ಪರವಾಗಿ ನಿಲ್ಲಿಸಿ ಆತನಿಗೆ ಹೀಗೆ ನುಡಿದರು;

'ಅಯ್ಯಾ. ಅರ್ಹಂತನಾದ ತಥಾಗತನು ಈ ಕಡೆಗೆ ಬರುವುದು ಕಂಡ ಕೂಡಲೇ ನೀನು ನಮಗೆ ಬಂದು ತಿಳಿಸು' ಎಂದು ಕೇಳಿಕೊಂಡರು. ನಾಲ್ಕು ದಿನಗಳ ನಂತರ ತಥಾಗತರು ತಮ್ಮ ಶಿಷ್ಯರೊಂದಿಗೆ ಇತ್ತ ಬರುತ್ತಿರುವ ಮೆರವಣಿಗೆ ಕಣ್ಣಿಗೆ ಬಿತ್ತು. ಆತ ತನ್ನ ಒಡೆಯರ ಬಳಿ ಬಂದು;

'ಒಡೆಯರೇ, ಅರ್ಹಂತನಾದ ತಥಾಗತನು ತಮ್ಮ ಗ್ರಾಮದ ಕಡೆ ಬರುತ್ತಿದ್ದಾನೆ. ಅವನನ್ನು ಕಾಣುವ ಬಹು ವರ್ಷಗಳ ಇಚ್ಛೆ ನಿಮ್ಮಿಂದ ನನಗೂ ಕೈಗೂಡಿತು. ಆ ಬಗ್ಗೆ ನಿಮಗೆ ಮೊದಲು ಪ್ರಣಾಮ ಸಲ್ಲಿಸುತ್ತೇನೆ. ತಾವಿನ್ನೂ ಬುದ್ಧನನ್ನು ಬರ ಮಾಡಿಕೊಂಡು ಆತನಿಗೆ ತಾವು ಸಲ್ಲಿಸ ಬಯಸುವ ಗೌರವಾಧಾರಗಳನ್ನು ಸಲ್ಲಿಸಿಸಬಹುದು' ಎಂದ.

ಇಸಿದತ್ತ ಮತ್ತು ಪುರಾಣರಿಬ್ಬರೂ ಬುದ್ಧನ ಬಳಿ ಧಾವಿಸಿದರು. ಅವನಿಗೆ ನಮಸ್ಕರಿಸಿ ಗೌರವ ಸೂಚಿಸಿದರು. ಪ್ರೀತಿಯ ದ್ಯೋತಕವಾಗಿ ಬಹುದೂರ ಅವನ ಹಿಂದೆಯೇ ಅವನನ್ನು ಹಿಂಬಾಲಿಸಿದರು. ಹೆದ್ದಾರಿಯಿಂದ ಕಾಡು ದಾರಿಗೆ ಸರಿದು ವಿಶ್ರಾಂತಿಗಾಗಿ ಒಂದು ಮರದಡಿ ಬುದ್ಧ ಕುಳಿತ. ಅವನಿಗೆ ಕೋಶಾಧಿಕಾರಿಗಳಾದ ಇಸಿದತ್ತ ಮತ್ತು ಪುರಾಣರು ವಂದಿಸಿ ಸಮೀಪ ಕುಳಿತು ಈ ರೀತಿ ತಮ್ಮ ಮನದ ಹಿಂಗಿತವನ್ನು ವ್ಯಕ್ತ ಪಡಿಸಿದರು.

'ಪ್ರಭುವೇ, ತಥಾಗತರು ಶ್ರಾವಸ್ತಿಯಿಂದ ಕೋಸಲ ನಾಡಿನತ್ತ ಸಂಚಾರ ಹೋಗುತ್ತಾರೆ. ಎಂದು ತಿಳಿದು ಅವರು ನಮ್ಮಿಂದ ದೂರ ಹೋಗುತ್ತಿದ್ದಾರಲ್ಲ ಎಂದು ದುಃಖ ಮತ್ತು ನಿರಾಸೆ ಆಯಿತು. ಈ ಹಿಂದೆ ಕೂಡ ವಲಸೆ ಹೊರಟ ತಾವುಗಳು ಕೋಸಲದಿಂದ ಮಲ್ಲರ ನಾಡಿನಲ್ಲಿ ಸಂಚಾರ ಪ್ರಾರಂಭಿಸುತ್ತಾರೆ. ಎಂಬ ಸುದ್ದಿ ತಿಳಿಯಿತು ಅದು ನಿಜ ಎಂದು ತಿಳಿದು ನಮಗೆ ತುಂಬಾ ನಿರಾಸೆ ಮತ್ತು ಬೇಸರವಾಯಿತು. ಮುಂದೆ ಮಲ್ಲರ ನಾಡಿನಿಂದ ತಾವುಗಳು ವಜ್ಜಿಯರ ನಡುವೆ ಸಂಚರ ಮಾಡುತ್ತಾರೆ ಎಂಬ ಸುದ್ದಿ ತಿಳಿಯಿತು. ಅದು ನಿಜ ಎಂಬುದನ್ನು ಖಚಿತ ಪಡಿಸಿಕೊಂಡೆವು. ನಂತರ ತಮ್ಮ ಪಯಣ ಕಾಶಿಯತ್ತ ತಿರುಗಿದೆ ಎಂದು ತಿಳಿದು ತಾವು ನಮ್ಮಿಂದ ಬಹು ದೂರ ಇದ್ದೀರಿ ಎಂದು ತಿಳಿದು ಬಹು ದುಃಖವಾಯಿತು. ಆ ನಂತರ ಕಾಶಿಯ ಪಯಣ ಮುಗಿಸಿ ಮತ್ತೆ ಮಗಧದ ಕಡೆ ಬಂದಿರೆಂಬ ವಿಷಯ ಖಚಿತವಾದ ನಂತರ ತಥಾಗತರು ನಮ್ಮ ಸಮೀಪ ಬರುತ್ತಿದ್ದಾರೆ ಎಂದು ಸಂತೋಷವಾಯಿತು. ಬಳಿಕ ಮಗಧದಿಂದ ಶ್ರಾವಸ್ತಿ ತಲುಪಿದಾಗ ತಥಾಗತರು ತಮ್ಮೊಳಗೆ ನೆಲೆಸಿದ್ದಾರೆಂದು ತಿಳಿದು ನೆಮ್ಮದಿಯಿಂದ ಇದ್ದೇವೆ.'

'ಪ್ರಭುವೇ, ತಾವು ಮತ್ತೆ ಇಂದು ಶ್ರಾವಸ್ತಿಯಿಂದ ಹೊರ ನಡೆಯುತ್ತಿರುವುದು ತಮ್ಮ ದೇಹದ ಯಾವುದೋ ಅಂಗ ಊನವಾಗುತ್ತಿದೆ ಎಂದು ಬಾಸವಾಗುತ್ತಿದೆ.' ಎನ್ನಲು. ಬುದ್ಧ ಶಾಂತವಾಗಿ ನಕ್ಕು;

'ಸಹೋದರರಾದ ಎಲೈ ಇಸಿದತ್ತ ಮತ್ತು ಪುರಾಣರೇ, ಇದೆಂತಹ ವಿಚಿತ್ರ ವ್ಯಾಮೋಹ ನಿಮ್ಮದು! ನಾನು ಯಾವುದು ಅಶಾಶ್ವತವೆಂದು, ಯಾವುದನ್ನು ತ್ಯಜಿಸಬೇಕೆಂದು ಹೇಳಿದ್ದನೋ ಅದನ್ನೆ ಮತ್ತೆ ಮತ್ತೆ ತೀವ್ರವಾಗಿ ತಬ್ಬುತ್ತಿದ್ದೀರಿ. ನಾನಾಗಲಿ ನನ್ನ ಯಶಸ್ಸು ಮತ್ತು ಕೀರ್ತಿಯಾಗಲಿ ಮುಖ್ಯವಲ್ಲ. ನಾನು ಜನಗಳ ಬಳಿ ಹೋಗಬೇಕು. ಅವರ ಕೇಡಿನ ಮೂಲವನ್ನು ತಿಳಿಸಬೇಕು. ದುಃಖದ ನಿವಾರಣೆಯನ್ನು ಮಾಡಬೇಕು. ಇದೇ ಕರ್ತವ್ಯ. ನನ್ನನ್ನು ಅರಿಯುವುದು ಮತ್ತು ಅಭಿನಂದಿಸುವುದು ಎಂದರೆ ನನ್ನ ಈ ಯಾತ್ರೆಯಲ್ಲಿ ಕೈ ಜೋಡಿಸುವುದೆ ಹೊರತು ಭಾವೋದ್ವೇಗದ ಬರೀ ಮಾತುಗಳಲ್ಲ' ಎನ್ನಲು ಆ ಇಬ್ಬರೂ;

'ಪ್ರಭುವೇ, ತಮ್ಮ ಮಾತಿನಲ್ಲಿ ಸತ್ಯವಿದೆ. ನಮ್ಮನ್ನು ಕ್ಷಮಿಸಿ, ಇದೋ ಈ ಕ್ಷಣದಿಂದಲೇ ನಾವಿಬ್ಬರೂ ತಮ್ಮ ಧರ್ಮಕ್ಕೆ ಶರಣು, ಸಂಘಕ್ಕೆ ಶರಣು ಸ್ವೀಕರಿಸಿ'

'ಎಲೈ ಗೆಳೆಯರಾದ ಇಸಿದತ್ತ ಮತ್ತು ಪುರಾಣರೇ, ನಿಮ್ಮ ಕೋರಿಕೆಯನ್ನು ಒಂದು ಷರತ್ತಿನ ಮೇಲೆ ಮಾತ್ರ ಮನ್ನಿಸಬಲ್ಲೆ!'

'ಗುರುದೇವಾ, ಅದ್ಯಾವುದು ಆ ಷರತ್ತು...?!'

'ಎಲೈ ಗೆಳೆಯರೇ, ಇನ್ನೂ ಮುಂದೆ ನನ್ನ ದೇಹ ಮತ್ತು ನೆನಪಷ್ಟೇ ನಿಮ್ಮ ದೇಹದ ಅವಿಭಾಜ್ಯ ಅಂಗವಾಗಬಾರದು. ಬಹು ಜನರ ಅಜ್ಞಾನ ಮತ್ತು ದುಃಖ ನಿವಾರಣೆಯೇ ದೇಹದ ಅವಿಭಾಜ್ಯ ಅಂಗವಾಗಬೇಕು. ಬಹು ಜನರ ಅಜ್ಞಾನ ಮತ್ತು ದುಃಖ ನಿವಾರಣೆಯೇ ನಿಮ್ಮ ಬದುಕಿನ ಉಸಿರು ಮತ್ತು ಅವಿಭಾಜ್ಯ ಅಂಗವಾಗಬೇಕು. ಒಪ್ಪಿಗೆಯೆ?' ಎನ್ನಲು ಈ ಗೆಳೆಯರು ತಮ್ಮ ಒಪ್ಪಿಗೆ ಸೂಚಿಸಿದ ನಂತರ ಬುದ್ಧ ಆ ಇಬ್ಬರಿಗೂ ದೀಕ್ಷೆ ಕೊಟ್ಟ ದೀಕ್ಷೆಯನ್ನು ಸ್ವೀಕರಿಸಿದ ಆ ಇಬ್ಬರೂ ಬುದ್ಧನಿಗೆ ಹೀಗೆ ವಂದಿಸಿದರು;

'ಹೌದು ಗುರುದೇವಾ, ನಮ್ಮ ಪ್ರೀತಿಯ ಹಿಂದಿನ ಸ್ವಾರ್ಥವನ್ನು ನೀಗಿಸಿದವನು ನೀನು...! ಅಭಿಮಾನಕ್ಕೆ ಹೊಸ ಅರ್ಥವನ್ನು ಹಚ್ಚಿದವನು ನೀನು...!! ಮಾತಿಗಿಂತ ಕೃತಿಯೇ ಲೇಸೆಂದವನು ನೀನು...!!!' ಎಂದು ಮತ್ತೊಮ್ಮೆ ವಂದಿಸಿ ಅವನ ಹಿಂದೆ ನಡೆದರು. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

'SAMVADA' Kannada Monthly, Nov 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕೇಂದ್ರ ಸಾಹಿತ್ಯ ಅಕಾದೆಮಿ,
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು:

* ಆ ದೀರ್ಘ ಮೌನ (ಇಂಗ್ಲೀಷ್ ಮೂಲ: ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್ 120.00
* ಆರು ಅಡಿ ಭೂಮಿ (ಉರ್ದೂ ಮೂಲ: ಅಬ್ದುಸ್ಸಮದ್; ಅನು: ಪಂಚಾಕ್ಷರಿ ಹಿರೇಮಠ 150.00
* ಅರ್ಧನಾರೀಶ್ವರ (ಹಿಂದಿ ಮೂಲ: ವಿಷ್ಣು ಪ್ರಭಾಕರ್; ಅನು: ಎಸ್.ಎಮ್. ರಾಮಚಂದ್ರಸ್ವಾಮಿ) 250.00
* ನೀಲಿಚಂದಿರ (ಹಿಂದಿ ಮೂಲ: ಶಿವಪ್ರಸಾದ ಸಿಂಹ; ಅನು: ಪಿ. ಶಶಿಕಲಾ) 350.00
* ಚಿಟ್ಟಾಲಹು (ಪಂಜಾಬೀ ಮೂಲ: ನಾನಕ್ ಸಿಂಗ್; ಅನು: ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
* ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00
* ಹಗ್ಗ- 3 ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರ ಪಿಳ್ಳೆ 325.00
ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) 250.00
250.00

ಕಥಾ ಸಂಕಲನ:

* ಸ್ವರ್ಣಕಮಲಗಳು (ತೆಲುಗು ಮೂಲ: ಇಲ್ಲಿಂದಲ ಸರಸ್ವತೀದೇವಿ; ಅನು-ಪಿ. ವೇಣು-ಗೋಪಾಲ್) 300.00
* ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು-ಅಶೋಕ್ ಕುಮಾರ್) 300.00
* ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೊಮನಾಥ್) 125.00
* ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
* ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ.ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) 150.00
* ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) 160.00

ಕಾವ್ಯ:

* ಕನ್ನಡ ಸಾನೆಟ್ ಸಂಗ್ರಹ (ಸಂ.ಹೆಚ್.ಎಸ್. ವೆಂಕಟೇಶಮೂರ್ತಿ) 85.00
* ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ: ಸೀತಾಕಾಂತ್ ಮಹಾಪಾತ್ರ: ಅನು: ಕಮಲಾ ಹೆಮ್ಮಿಗೆ) 90.00
* ಸಂಬಂಧ (ಇಂಗ್ಲಿಷ್: ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
* ತಮಿಳು ಕವಿತೆಗಳು (ಸಂಪಾದಕರು: ಚಂದ್ರಶೇಖರ ಕಂಬಾರ ಮತ್ತು ಓ. ಎಲ್ ನಾಗಭೂಷಣ ಸ್ವಾಮಿ) 40.00
* ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ;
ಅನು: ಅರ್ಕಸಾಲಿ ವೃಷಭೇಂದ್ರಾಚಾರ್) 200.00
* ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

ಇತರ

* ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
* ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು: ವಿ. ಗೋಪಾಲಕೃಷ್ಣ) 200.00
* ಭಾರತೀಯ ಇಂಗ್ಲೀಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
* ತೆಲುಗು-ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
* ಟೀಕಾ ಸ್ವಯಂವರ: ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
* ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00
* ಶಾಂಬ (ಬಂಗಾಳಿ ಮೂಲ: ಸಮರೇಶ್ ಬಸು ಅನು: ಜಿ. ಕುಮಾರಪ್ಪ) 100.00

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ. 25.00)

* ವ. ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
* ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್
* ಆಲೂರ ವೆಂಕಟರಾವ್ * ಬಸವರಾಜ ಕಟ್ಟೀಮನಿ